ಶುಕ್ರವಾರ, ಜನವರಿ 26, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಭ್ರಮ
ಗಣರಾಜ್ಯೋತ್ಸವದ ಅಂಗವಾಗಿ ಅಮೃತಸರದಲ್ಲಿ ಯುವತಿಯೊಬ್ಬರು ಗುರುವಾರ ಮುಖ ಹಾಗೂ ಕೈಗಳಿಗೆ ತ್ರಿವರ್ಣ ಧ್ವಜದ ಬಣ್ಣ ಹಚ್ಚಿಕೊಂಡು ಸಂಭ್ರಮಿಸಿದರು

₹80 ಸಾವಿರ ಲಂಚ: ಬೆಸ್ಕಾಂ ಎಇ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವಿದ್ಯುತ್ ಸಂಪರ್ಕ ನೀಡಲು ₹80 ಸಾವಿರ ಲಂಚ ಪಡೆಯುತ್ತಿದ್ದ ಬೆಸ್ಕಾಂ ಸಹಾಯಕ ಎಂಜಿನಿಯರ್ ನವೀನ್ ಕುಮಾರ್ ಅವರನ್ನು ಬುಧವಾರ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ನವೀನ್‌ಕುಮಾರ್, ನಾಗವಾರ ಬೆಸ್ಕಾಂನ 'ಇ9' ಉಪ ವಲಯದ ಕಾರ್ಯಾಚರಣೆ ಮತ್ತು ನಿರ್ವಹಣೆ ಘಟಕದ ಸಹಾಯಕ ಎಂಜಿನಿಯರ್ ಆಗಿದ್ದರು.

ಎಸ್‌ಆರ್‌ಕೆ ನಗರದ ಎನ್. ನಾಗೇನಹಳ್ಳಿಯ ಚಂದನ್ ಕುಮಾರ್ ಎಸ್. ಅವರು ನೀಡಿದ ದೂರು ಆಧರಿಸಿ, ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿದರು. ಲಂಚ ಪಡೆಯುವಾಗ ನವೀನ್‌ಕುಮಾರ್‌ರನ್ನು ಬಂಧಿಸಿದರು.

ಬಿಟ್ ಕಾಯಿನ್ ಅಕ್ರಮ ಪ್ರಕರಣ: 1ನೇ ಎಸಿಎಂಎಂ ನ್ಯಾಯಾಲಯ ಆದೇಶ

ಪ್ರಶಾಂತ್, ಸಂತೋಷ್ ಎಸ್‌ಐಟಿ ವಶಕ್ಕೆ

ಪ್ರಜಾವಾಣಿ ವಾರ್ತೆ



ಪ್ರಶಾಂತ್ ಬಾಬು

ಸಂತೋಷ್ ಕುಮಾರ್

ಬೆಂಗಳೂರು: ಬಿಟ್ ಕಾಯಿನ್ ಅಕ್ರಮ ಪ್ರಕರಣದಲ್ಲಿ ಡಿಜಿಟಲ್ ಸಾಕ್ಷ್ಯ ನಾಶಪಡಿಸಿದ್ದ ಆರೋಪದ ಮೇಲೆ ಬಂಧಿತರಾಗಿರುವ ಸಿಸಿಬಿ ಇನ್‌ಸ್ಪೆಕ್ಟರ್ ಪ್ರಶಾಂತ್ ಬಾಬು ಹಾಗೂ ಸೈಬರ್ ತಜ್ಞ ಸಂತೋಷ್ ಕುಮಾರ್ ಅವರನ್ನು ಜ. 31ರವರೆಗೆ ಎಸ್‌ಐಟಿ ಕಸ್ಟಡಿಗೆ ನೀಡಿ 1ನೇ ಎಸಿಎಂಎಂ ನ್ಯಾಯಾಲಯ ಆದೇಶ ನೀಡಿದೆ.

'ಸಾಕ್ಷ್ಯ ನಾಶಕ್ಕೆ ಯತ್ನಿಸಿದ್ದ ಸಿಸಿಬಿ'

'ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕಿ ಗಳಿಸಿದ್ದ ಬಿಟ್ ಕಾಯಿನ್‌ಗಳ ಬಗ್ಗೆ ಸಿಸಿಬಿ ಪೊಲೀಸರಿಗೆ ಹೆಚ್ಚು ಮಾಹಿತಿ ಇರಲಿಲ್ಲ. ಸೈಬರ್ ತಜ್ಞರಾದ ಸಂತೋಷ್ ಹಾಗೂ ಗಗನ್, ಬಿಟ್ ಕಾಯಿನ್ ಬಗ್ಗೆ ಮಾಹಿತಿ ನೀಡಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ. 'ಈ ಮಾಹಿತಿ ಬಳಸಿಕೊಂಡು ಶ್ರೀಕಿ ಕಡೆಯಿಂದ ಅಕ್ರಮವಾಗಿ ಬಿಟ್ ಕಾಯಿನ್ ವರ್ಗಾವಣೆ ಮಾಡಿಸಿಕೊಳ್ಳಲಾಗಿದೆ. ಈ ಬಗ್ಗೆ ಸುಳಿವು ಸಿಗಬಾರದೆಂದು, ಡಿಜಿಟಲ್ ಸಾಕ್ಷ್ಯ ನಾಶ ಮಾಡಿರುವ ಮಾಹಿತಿ ಇದೆ' ಎಂದು ಹೇಳಿವೆ.

'ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಬುಧವಾರ ಪ್ರಶಾಂತ್ ಬಾಬು ಹಾಗೂ ಸಂತೋಷ್ ಅವರನ್ನು ವಿಚಾರಣೆಗೆ ಕರೆಸಿದ್ದರು. ವಿಚಾರಣೆ ನಡೆಸಿದ್ದ ಅಧಿಕಾರಿಗಳು ಬುಧವಾರ ರಾತ್ರಿ ಬಂಧಿಸಿದ್ದರು. ಗುರುವಾರ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಪ್ರಮುಖ ಆರೋಪಿಯಾಗಿರುವ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ವಿರುದ್ಧ ಕೆಂಪೇಗೌಡ ನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ನಡೆಸಿದ್ದ ಅಂದಿನ ಸಿಸಿಬಿ ಪೊಲೀಸರು ಹಾಗೂ ಇತರರು, ಸಾಕ್ಷ್ಯ ನಾಶಪಡಿಸಿದ ಆರೋಪ ಹೊತ್ತಿದ್ದಾರೆ. ಇದನ್ನು ಪತ್ತೆ ಮಾಡಿದ್ದ ಎಸ್‌ಐಟಿ ಅಧಿಕಾರಿಗಳು, ಸಿಸಿಬಿ ಪೊಲೀಸರು ಹಾಗೂ ಇತರರ ವಿರುದ್ಧ ಕಾಟನ್‌ಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದರು.

'ಸಂತೋಷ್ ಕುಮಾರ್ ಅವರು ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಜಿಸಿಐಡಿ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ತೆರೆದಿದ್ದರು. ಅದೇ ಕಂಪನಿಯಲ್ಲಿ ಶ್ರೀಕಿ ಹಾಗೂ ರಾಬಿನ್ ಖಂಡೇವಾಲ್ ಅವರನ್ನು ಅಕ್ರಮ ಬಂಧನದಲ್ಲಿಟ್ಟು, ಅಕ್ರಮ ಚಟುವಟಿಕೆಗೆ ಪ್ರಚೋದಿಸಿದ್ದ ಸಿಸಿಬಿ ಇನ್‌ಸ್ಪೆಕ್ಟರ್ ಹಾಗೂ ಇತರರು, ಶ್ರೀಕಿಗೆ ಲ್ಯಾಪ್‌ಟಾಪ್ ಕೊಡಿಸಿ ರಾಬಿನ್ ಖಂಡೇಲ್‌ವಾಲ ಅವರ ಕ್ರಿಪ್ಟೊ ಖಾತೆಯನ್ನು ಅನಧಿಕೃತವಾಗಿ ತೆರೆದು ಸಂತೋಷ್ ಕುಮಾರ್ ಅವರ ಖಾತೆಗೆ 1.83 ಲಕ್ಷ ಮೌಲ್ಯದ ಬಿಟ್ ಕಾಯಿನ್‌ಗಳನ್ನು ವರ್ಗಾವಣೆ ಮಾಡಿಸಿಕೊಂಡಿದ್ದರು' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಈ ರೀತಿಯ ಅಕ್ರಮ ಎಸಗಲು 2020ರ ಡಿಸೆಂಬರ್ 8ರಂದು ಇನ್‌ಸ್ಪೆಕ್ಟರ್ ಪ್ರಶಾಂತ್ ಬಾಬು, ಎಂಎಸ್‌ಐ ಕಂಪನಿಯ ಲ್ಯಾಪ್‌ಟಾಪ್ ಅನ್ನು ತಾವೇ ₹60 ಸಾವಿರವನ್ನು ನಗದ ರೂಪದಲ್ಲಿ ನೀಡಿ ಖರೀದಿಸಿದ್ದರು. ಅದನ್ನೇ ಕೃತ್ಯಕ್ಕೆ ಬಳಸಲಾಗಿದೆ ಎಂದು ಎಫ್‌ಐಆರ್ ಹೇಳಿದೆ.

'ಸೈಬರ್ ತಜ್ಞ ಸಂತೋಷ್ ಕುಮಾರ್, ಸಿಸಿಬಿ ಇನ್‌ಸ್ಪೆಕ್ಟರ್ ಲಕ್ಷ್ಮಿಕಾಂತಯ್ಯ, ಚಂದ್ರಾಧರ್, ಡಿ.ಎಂ. ಪ್ರಶಾಂತ್ ಬಾಬು, ಶ್ರೀಧರ್ ಪೂಜಾರ್ ಹಾಗೂ ಇತರರು ಬಿಟ್ ಕಾಯಿನ್ ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ಸದ್ಯ ಪ್ರಶಾಂತ್ ಬಾಬು, ಸಂತೋಷ್ ಅವರನ್ನು ಬಂಧಿಸಲಾಗಿದ್ದು, ಇನ್‌ಸ್ಪೆಕ್ಟರ್ ಜೊತೆ ಕೆಲ ಹಿರಿಯ ಅಧಿಕಾರಿಗಳು ಅಕ್ರಮದಲ್ಲಿ ಭಾಗಿಯಾಗಿರುವ ಅನುಮಾನವಿದೆ. ಹಿರಿಯ ಅಧಿಕಾರಿಗಳು ಹಾಗೂ ಕೆಲ ರಾಜಕಾರಣಿಗಳಿಗೆ ನಡುಕ ಶುರುವಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ ನಡೆದ 'ಐಎಂಟಿಇಎಕ್ಸ್–2024' ವಸ್ತುಪ್ರದರ್ಶನದಲ್ಲಿ ಆಂಡ್ರ್ಯೂ ಆಡಿಟಿವ್ ಕಂಪನಿ ಅಭಿವೃದ್ಧಿಪಡಿಸಿದ ದೇಶದ ಮೊದಲ ಎಸ್‌ಎಲ್‌ಎಸ್ 3ಡಿ ಪ್ರಿಂಟರ್ ಬಿಡುಗಡೆ ಮಾಡಲಾಯಿತು. ಇಂಡಿಯನ್ ವುಮೆನ್ ಇನ್ 3ಡಿ ಪ್ರಿಂಟಿಂಗ್‌ನ ಸಂಸ್ಥಾಪನಾ ಅಧ್ಯಕ್ಷೆ ಕಾವ್ಯಶ್ರೀ ಕೆ., ಆಡಿಟಿವ್ ಮ್ಯಾನುಫ್ಯಾಕ್ಚರಿಂಗ್ ಸೊಸೈಟಿ ಆಫ್ ಇಂಡಿಯಾ ಅಧ್ಯಕ್ಷ ಜ್ಯೋತಿಶ್ ಕುಮಾರ್ ಹಾಗೂ ಆಂಡ್ರ್ಯೂ ಆಡಿಟಿವ್ ಕಂಪನಿಯ ಸಂಸ್ಥಾಪಕ ನಿಖಿಲ್ ಆಂಡ್ರ್ಯೂ ಭಾಗವಹಿಸಿದ್ದರು.

ಜೇಮಂಗಲಂ: ಪಟಾಕಿ ಗೋದಾಮಿಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಗಡಿ ಭಾಗ ಹೊಸೂರು ಬಳಿ ಇರುವ ಜೇಮಂಗಲಂನಲ್ಲಿ ಪಟಾಕಿ ದುರಂತ ಸಂಭವಿಸಿದ್ದು, ಕಾರ್ಮಿಕರ ಪ್ರಜ್ಞೆಯಿಂದ ಭಾರಿ ದುರಂತ ತಪ್ಪಿದೆ.

ಗೋದಾಮಿನಲ್ಲಿ ಗುರುವಾರ ಹಠಾತ್‌ನೆ ಬೆಂಕಿ ಹೊತ್ತುಕೊಂಡಿದ್ದರಿಂದ ಕಾರ್ಮಿಕರು ಹೊರ ಬಂದಿದ್ದಾರೆ. ಮಾಹಿತಿ ತಿಳಿದ ಕೂಡಲೇ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.

ದುರಂತದಲ್ಲಿ ಪಟಾಕಿಗಳು ಒಮ್ಮೆಲೆ ಸಿಡಿದಿದ್ದರಿಂದ ಸುತ್ತಮುತ್ತಲ ಗ್ರಾಮಗಳ ಜನರು ಆತಂಕಗೊಂಡರು. ಒಂದೆಡೆ ದಟ್ಟವಾದ ಹೊಗೆ ಮತ್ತೊಂದೆಡೆ ಪಟಾಕಿಗಳ ಶಬ್ದ ಸುತ್ತಮುತ್ತಲಿನ ನಿವಾಸಿಗಳನ್ನು ಘಾಸಿಗೊಳಿಸಿತು. ಅಗ್ನಿಶಾಮಕದಳದ ಸಿಬ್ಬಂದಿ ನಾಲ್ಕು ಗಂಟೆಗಳಿಗೂ ಹೆಚ್ಚು ಕಾಲ ಕಾರ್ಯಚರಣೆ ನಡೆಸಿದರು.

ಕಳೆದ ಅಕ್ಟೋಬರ್ 7ರಂದು ಅತ್ತಿಬೆಲೆಯಲ್ಲಿ ಸಂಭವಿಸಿದ ಪಟಾಕಿ ದುರಂತದಲ್ಲಿ 17ಮಂದಿ ಮೃತಪಟ್ಟಿದ್ದರು. ತಮಿಳುನಾಡಿನ ಹೊಸೂರು ಸಮೀಪದಲ್ಲಿಯೂ ಪಟಾಕಿ ದುರಂತ ಸಂಭವಿಸಿತ್ತು.

ತಮಿಳುನಾಡಿನ ಜೇಮಂಗಲಂ ಗ್ರಾಮದ ಪಟಾಕಿ ಗೋದಾಮಿಗೆ ಬೆಂಕಿ ತಗುಲಿದ್ದರಿಂದ ಹೊತ್ತಿಉರಿಯುತ್ತಿರುವುದು

ಸುದ್ದಿ 2 ನಿಮಿಷ

ಎಸ್‌ಎಸ್‌ಎಲ್‌ಸಿ: ಖಾಸಗಿ ವಿದ್ಯಾರ್ಥಿಗಳಿಗಿಲ್ಲ ಪ್ರತ್ಯೇಕ ಪ್ರಶ್ನೆಪತ್ರಿಕೆ

ಬೆಂಗಳೂರು: ಖಾಸಗಿಯಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಈ ಬಾರಿ ಪ್ರತ್ಯೇಕ ಪರೀಕ್ಷಾ ಕೇಂದ್ರಗಳು ಹಾಗೂ ಪ್ರತ್ಯೇಕ ಪ್ರಶ್ನೆ ಪತ್ರಿಕೆ ಇರುವುದಿಲ್ಲ.

ಪರೀಕ್ಷಾ ಅಕ್ರಮ ತಡೆಯಲು, ನಕಲು ಪ್ರಕರಣಗಳಿಗೆ ಸಂಪೂರ್ಣ ಕಡಿವಾಣ ಹಾಕಲು ಮುಂದಾಗಿರುವ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ (ಕೆಎಸ್‌ಇಎಬಿ), ಇತರೆ ವಿದ್ಯಾರ್ಥಿಗಳಿಗೆ ಸಿದ್ಧಪಡಿಸುವ ಪ್ರಶ್ನೆಪತ್ರಿಕೆಗಳನ್ನೇ ನೀಡಲು ನಿರ್ಧರಿಸಿದೆ.

ಹೊಸಬರು ಹಾಗೂ ಪುನರಾವರ್ತಿತರು ಸೇರಿ ಪ್ರತಿ ವರ್ಷ ಸುಮಾರು 40 ಸಾವಿರ ಖಾಸಗಿ ಅಭ್ಯರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ನೋಂದಾಯಿಸಿಕೊಳ್ಳುತ್ತಾರೆ. ನಿತ್ಯ ಶಾಲೆಗಳಿಗೆ ತೆರಳಿ ಇತರೆ ವಿದ್ಯಾರ್ಥಿಗಳಂತೆ ಶಿಕ್ಷಣ ಪಡೆಯದ ಅವರಿಗೆ ಒಂದಷ್ಟು ಸುಲಭ ಪ್ರಶ್ನೆಗಳಿರುವ ಪ್ರತ್ಯೇಕ ಪ್ರಶ್ನೆಪತ್ರಿಕೆ ಸಿದ್ಧಪಡಿಸಲಾಗುತ್ತಿತ್ತು. ಅವರ ಸಂಖ್ಯೆಗೆ ಅನುಗುಣವಾಗಿ ಪ್ರತ್ಯೇಕ ಪರೀಕ್ಷಾ ಕೇಂದ್ರಗಳನ್ನು ನೀಡಲಾಗುತ್ತಿತ್ತು. 2023ರ ಪರೀಕ್ಷೆಯಲ್ಲಿ ಖಾಸಗಿ ಅಭ್ಯರ್ಥಿಗಳಿಗೆ ಮೀಸಲಾಗಿದ್ದ ಪರೀಕ್ಷಾ ಕೇಂದ್ರಗಳಲ್ಲಿ ಹೆಚ್ಚಿನ ನಕಲು ನಡೆದಿದ್ದವು. ಹಾಗಾಗಿ, ಎಲ್ಲ ವಿದ್ಯಾರ್ಥಿಗಳಿಗೂ ಏಕ ರೀತಿಯ ವ್ಯವಸ್ಥೆ ಮಾಡಲು ಮಂಡಳಿ ತೀರ್ಮಾನ ತೆಗೆದುಕೊಂಡಿದೆ.

ಗೆಜೆಟೆಡ್ ಪ್ರೊಬೇಷನರಿ ವಯೋಮಿತಿ ಸಡಿಲಿಕೆ

ಬೆಂಗಳೂರು: 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗಳ ಭರ್ತಿಗೆ ಹೊರಡಿಸುವ ಅಧಿಸೂಚನೆಯಲ್ಲಿ ಅರ್ಹ ಎಲ್ಲ ಅಭ್ಯರ್ಥಿಗಳಿಗೆ ಮೂರು ವರ್ಷ ವಯೋಮಿತಿ ಸಡಿಲಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಕೋವಿಡ್ ಮತ್ತು ಇತರ ಕಾರಣಗಳಿಂದ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ 2021ನೇ ಸಾಲಿನಿಂದ ಪರೀಕ್ಷೆಗಳನ್ನು ನಡೆಸಿಲ್ಲ. ಹೀಗಾಗಿ, ನೇಮಕಾತಿಗೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿ ಮೀರಿ ಉದ್ಯೋಗ ವಂಚಿತರಾಗುವುದರಿಂದ, ವಯೋಮಿತಿ ಸಡಿಲಿಸಿ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು ಎಂದು ಹುದ್ದೆ ಆಕಾಂಕ್ಷಿಗಳು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

ಜ. 5ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದಂತೆ, ಎಲ್ಲ ವರ್ಗಗಳ ಅರ್ಹ ಅಭ್ಯರ್ಥಿಗಳಿಗೆ ಒಂದು ಬಾರಿ ಗರಿಷ್ಠ ವಯೋಮಿತಿಯನ್ನು 3 ವರ್ಷಗಳಿಗೆ ಹೆಚ್ಚಿಸಲಾಗಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು (**'ನಮ್ಮ ಕಕ್ಷಿದಾರರು'**) ಜಕ್ಕೂರು ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಸ್ಥಿತಗೊಂಡಿರುವ ಸ್ವತ್ತಿಗೆ ಸಂಬಂಧಿಸಿದಂತೆ ಸರ್ವೆ ನಂ. 18/6 (ಹೊಸ ನಂ. 18/6ಬಿ) ಶ್ರೀ. ಮುನಿಯಪ್ಪ ಬಿನ್ ಶ್ರೀ. ವೀರಾಂಗ ಇವರು ಶ್ರೀ. ಮುನಿದೇವಪ್ಪ ಬಿನ್ ಶ್ರೀ. ವೀರಾಂಗ ರವರಿಗೆ ದಿನಾಂಕ 01.06.1936ರ ಕ್ರಯಪತ್ರ (ಬೆಂಗಳೂರು ಉಪ ನೋಂದಣಾಧಿಕಾರಿ ಕಚೇರಿಯಲ್ಲಿ 02.06.1936 ರಂದು ಡಾಕ್ಯುಮೆಂಟ್ ನಂ. 3850/1935–36, ಬುಕ್–1, ವಾಲ್ಯೂಮ್ ನಂ. 356, ಪೇಜ್ ನಂ. 194 ರಿಂದ 196 ರಲ್ಲಿ ನೋಂದಾಯಿತ) ದಾಖಲಾತಿಯನ್ನು ಕಳೆದುಕೊಂಡಿರುತ್ತಾರೆ.

ಸದರಿ ದಾಖಲಾತಿಯನ್ನು ಹುಡುಕಾಡಲು ಸಾಕಷ್ಟು ಪ್ರಯತ್ನ ಮಾಡಿದರೂ ಕೂಡ ಅದು ಸಿಕ್ಕಿರುವುದಿಲ್ಲ, ಹೀಗಾಗಿ ನಮ್ಮ ಕಕ್ಷಿದಾರರು ಸದರಿ ಮೂಲ ಕ್ರಯಪತ್ರವನ್ನು ಕಳೆದುಕೊಂಡಿರುತ್ತಾರೆ ಎಂದು ಪರಿಗಣಿಸುತ್ತ, ಸದರಿ ಮೂಲ ಕ್ರಯಪತ್ರ ಕಳೆದಿರುತ್ತದೆ ಎಂದು ಬೆಂಗಳೂರು ಪೋಲೀಸ್ ಠಾಣೆಯಲ್ಲಿ ದಿನಾಂಕ 24.01.2024 ರಂದು ದೂರು ನೀಡಲಾಗಿದ್ದು ರಿಪೋರ್ಟ್ ನಂ. 0901630/2024 ಆಗಿರುತ್ತದೆ.

ಸಾರ್ವಜನಿಕರಲ್ಲಿ ಈ ಮೂಲಕ ಕೇಳಿಕೊಳ್ಳುವುದು ಏನೆಂದರೆ, ಉಲ್ಲೇಖಿತ ಮೂಲ ಕ್ರಯಪತ್ರವು ಯಾರಿಗಾದರೂ ಸಿಕ್ಕಿದ್ದಲ್ಲಿ/ಯಾರ ಬಳಿಯಾದರೂ ಇದ್ದಲ್ಲಿ / ಯಾರಾದರೂ ಆಕಸ್ಮಿಕವಾಗಿ ಪಡೆದುಕೊಂಡಿದ್ದಲ್ಲಿ, ಅಂತಹವರು ಉಲ್ಲೇಖಿತ ಅಸಲು ಕ್ರಯಪತ್ರವನ್ನು ಇಲ್ಲಿ ಕೆಳಗೆ ಸಹಿ ಹಾಕಿರುವವರಿಗೆ ಕೆಳಕಂಡ ವಿಳಾಸದಲ್ಲಿ ತಲುಪಿಸಬೇಕೆಂದು ಕೋರಲಾಗಿದೆ.

ಸಹಿ/–
ಶ್ರೀಮತಿ. ಬ್ರಿಜಿತಾ ಪ್ರಕಾಶ್, ಪಾಲುದಾರರು
ಡಿಎಸ್‌ಕೆ ಲೀಗಲ್,
ಪ್ರೆಸ್ಟೀಜ್ ಲೋಕ, ನಂ. 201,
2ನೇ ಮಹಡಿ, ನಂ. 7/1 & 7/7,
ಬ್ರಂಟನ್ ರೋಡ್, ಕ್ರೇಗ್ ಪಾರ್ಕ್ ಬಡಾವಣೆ, ಬೆಂಗಳೂರು–560025
ದೂರವಾಣಿ: 080–69548770
ದಿನಾಂಕ: 26–01–2024
ಸ್ಥಳ: ಬೆಂಗಳೂರು

PUBLIC NOTICE

This is to inform the general public that my client is about to deal with immovable property No. 14, Residency Road, Bengaluru belonging to Mr. Suhail Basha, son of Basha Sait. Mr. Suhail and his cousins claim to be the legal heirs of Late Abdul Shakoor salt of No. 21, M.G. Road.

The schedule properly came into possession of Late Abdul Shakoor Sait by way of a lapsed registered conditional mortgage deed executed by one Mr. Kenchappa under document No. 455, Dtd. 12-8-1909.

As he failed to redeem the mortgage, the property came into the possession of Abdul Shakoor and his family.

If any one has any claims on the property, they are to send their claims along with documents to the undersigned within 10 days from today.

SCHEDULE

All that piece and parcel of land approximately measuring 55,000 sq. ft. in Municipal No. 14, Residency Road, C&M Station, Bengaluru - 560 001 & bounded on the, **East by :** Building in occupation of Daily post belonging to the vendor; **West by :** Brigade Road; **North by :** Residency Road; **South by :** McGrath Road.

Sd/-
H.M. Prakash, Advocate
No. 14, 1st Cross, Devinagar,
RMV 3rd Stage, Bengaluru - 560 094

DH DECCAN HERALD ಪ್ರಜಾವಾಣಿ
Wishing all our Readers & Advertisers a very Happy Republic Day
Classifieds Booking Open Today
For Advertisement Bookings Contact:
080-4555 7160 / 162 / 163 / 164

AUTOMOTIVE

Four Wheelers Selling

Others

DAMAGED BY FLOODED WATER Audi A4 35`TDI`BS4 2016`KA-51 MJ-3737 for`sale`Quote for`with RC`&`RC cancelled within Seven`days contact for`inspection Kannan-9880357357 SampatSurveyor 9900182098

Maruti

DAMAGED BY ACCIDENT`KA-04 AC-3318 Maruti`TourS Diesel`2020`at Bimal-Auto Yelahanka`for sale Quote for with`RC &`RC cancelled`after inspection within`Seven days SampatSurveyor 9900182098

JOB OPPORTUNITIES

Multiple Vacancy

ಮೆ. ವಿಸ್ಡಂ ಸೆಕ್ಯೂರಿಟಿ ಸರ್ವೀಸಸ್
ನಂ. 106, 1ನೇ ಮಹಡಿ, 40 ಅಡಿ ರಸ್ತೆ, ಮಂಜುನಾಥನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು–560010.
ಹೊರಗುತ್ತಿಗೆ ಆಧಾರದ ಮೇಲೆ ಅರ್ಜಿ ಆಹ್ವಾನ
ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯಡಿಯಲ್ಲಿ ಖಾಲಿಯಿರುವ ಈ ಕೆಳಕಂಡ ಹುದ್ದೆಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು M/s. Wisdom Security Services ಸಂಸ್ಥೆಯಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:
State Programme Manager – (IT & Biometrics), State Programme Manager - (Finance & Proposal Examination), State Programme Manager (Pedagogy & Learning Management), State Programme Manager - (PIA Co-ordination and Development), SPM (Inspection, Quality Assurance & Branding), State Programme Manager (Co-ordination), DDU-GKY-Thematic Staff, MIS Expert /MIS Co-Ordinator, Multi Tasking Officer, HR & Admin Assistant, Data Entry Operator, Project Executive (Farm Livelihood), Project Executive (Finance), Project Executive (Human Resource), Value Addition-Processing and Agri Marketing Expert, Law and Accounts Expert, IT/MIS expert, FPO Co-ordinator.
ಮೇಲಿನ ಹುದ್ದೆಗಳಿಗೆ ಆಸಕ್ತಿಯಿರುವ ಅರ್ಹ ಅಭ್ಯರ್ಥಿಗಳು ದಿನಾಂಕ 04.02.2024 ರಂದು ಸಂಜೆ 5.00 ಘಂಟೆಯೊಳಗೆ ಸಂಸ್ಥೆಯ Google Link : **https://jobs.wisdomsecurity.in** ಮೂಲಕ ಎಲ್ಲಾ ವಿವರಗಳೊಂದಿಗೆ ವಿದ್ಯಾರ್ಹತೆ ಪ್ರಮಾಣ ಪತ್ರ, ಅನುಭವ ಪ್ರಮಾಣ, ಕಲ್ಯಾಣ ಕರ್ನಾಟಕ, ವರ್ಗ ಇತ್ಯಾದಿ ದಾಖಲೆಗಳೊಂದಿಗೆ ಸಲ್ಲಿಸಲು ತಿಳಿಸಿದೆ. ಅಪೂರ್ಣ ಮಾಹಿತಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ **Ph. : 9945230204, 9945230206, 9945230210** ರ ಮೂಲಕ ಸಂಪರ್ಕಿಸಲು ತಿಳಿಸಿದೆ.

General

REQUIRED Business Development Manager, Tele Caller & Office Executives. Minimum GraduationWith 2 Years Experience & Fluent In English. Salary 20 To 50. Send ResumeAt gocourierindia@Gmail.Com

REAL ESTATE SELLING

Commerical

Kempegowda Layout

COMMERCIAL SITE-FOR-SALE, KEMPEGOWDA LAYOUT 8TH BLOCK,SIZE:163X100, WEST FACE, BDA, NO. NNA, CONVERSIONLAND, LEGAL DOCUMENTS,PRICE:4500/-SQ.FT.,PH:9448793428

Sites

Nagarabhavi

EXCELLENT 12,500 Sft Site for Sale at Nagarbhavi 1st Stage Very Close to Ring Road Ganesh: 9845028607

Rajajinagar

EAST AND North Facing Commercial 4600 Sft Site for Sale at Rajajinagar, Industrial Town, 1st Main Road, (Opp National Public School) Clear Title Rate 25000 per Sft Ganesh: 9845028607

Chikkaballapura

JP DEVELOPERS Offers Fully Developed E Khata Plots for Sale, ready for construction. CUDA Approved off DC Office Road, Chickballapur. (M): 9845522622.

REAL ESTATE BUYING

General

General

WANTED LAND Residential/ Commercial Yelahanka, international airport, Devanahalli IVC Road, Nandihills surrounding, chikkaballapura, 1acre to 50acres, Immediate settlement. 9380586105.

PROPERTY CORNER

FOR SALE
MULTI STORIED COMMERCIAL BUILDING
Situated in **Tumkur Road, BANGALORE**
FETCHING VERY-GOOD RENTAL INCOME
Parties who can invest Rs. 70 Crores, may contact owner: **9880737490**

Sites

Nagarabhavi

WANTED SITE 20x30, 30x40, 40x60, 50x80, Nagarabhavi, Rajajinagar Housing Co-operative Society, Vishweswaraiah, ITI, MPM. 8105688602.

Vishweshwariah Layout

URGENTLY REQUIRED BDA 30x40 Site or 60x40 Site in Vishweswaraiah Layout (any block). Brokers Excuse. Contact: 9448018447.

RENTAL PROPERTIES

Accommodation Wanted

Flat

REQUIRE 3BR Flat or House in Jayanagar 4th, 4th 'T', 5th Block for RENT/ LEASE. Contact: 'NAGARAJU'- 9880202470/ 8884327849

Accommodation Available

Commercial

12000 SQFT +Terrace, Commercial space available for Rent/ Lease. Opp MEI Yeshwanthpur Industrial Area. Call: 9886881218.

House

POSH 3000SQFT duplex 4BHK JPNagarPh2, 4 bathrooms, interiors, garage, all amenities. Rent: 90K+utilities, WhatsApp: 9886797350

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

HEAT REFLECTION Coating. Stay cool this summer! Contact us for the solution. Roof & Walls- 9845987989.

CONNECT

ಕ್ಲಾಸಿಫೈಡ್ಸ್

BHAGAVAD GITA DECODED
CHAPTER 3
THE YOGA OF ACTION
Discourses in English by **SUNANDAJI**
Daughter-disciple of Swami A. Parthasarathy
28th Jan - 1st Feb 2024
6:45 - 8:00 PM
R V Teachers' College
Jayanagar 2nd Block
Near Lalbagh Metro Station, Bangalore
All are welcome
+91 90358 96665 | info@vedantainstitute.org
VEDANTA INSTITUTE BANGALORE

BUSINESS

Business to Business

Business

BEST-INVESTMENT FOR Returns`Invest 5`to`50Lacs For`Petrol Bank`and Restaurant. 1.33%`to`1.5% Per Month With TDS 100% Genuine Along With PDC Call:9845558882

Business Offers

Finance

NRI'S INVESTMENTS and Finance through Banking Available On-low interest against Properties,Land&Buildi ng,Sites,Flat also take over Loans NPA cases from Any Banks:7204995189

PERSONAL

Change of Name

CHANGE OF NAME
I, **ROBERT JOSEPH ASHLEY PINTO @ ASHLEY PINTO,** Residing at # 133/142, Chelekere Main Road, Kalyan Nagar Post, Bengaluru- 560043, declare that all the above name pertain to me and henceforth I shall be known as **ROBERT JOSEPH ASHLEY PINTO** vide affidavit dt:12-01-2024, before Notary Uday Kumar K Bengaluru.

I, PRADEEPA M B S/o BHASKARA RAO MOODABIDRI DODDAMANE Residing at SRI MAHALAKSHMI TEMPLE, DESAI GARDEN, VASANTHAPURA MAIN ROAD Bangalore- 560062, have changed my name to PRADEEP MOODABIDRI BHASKARA RAO vide affidavit dated: 24.01.2024 Sworn before Notary G.R. Rajanna, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru



DH DECCAN HERALD Classifieds More value, more impact
NAME CHANGE
ಪ್ರಜಾವಾಣಿ
Tell us your New Name!
Book your AD WITH US NOW!
www.dhclassifieds.com
BOOK NOW
For more details contact:
9886213331 | 9901641752
9845114560 | 9900428036
9731810277 | 080- 45557164/164

ಶುಕ್ರವಾರ, ಜನವರಿ 26, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ಗುರುವಾರ ತೆರೆಕಂಡ 'ಫೈಟರ್' ಸಿನಿಮಾವನ್ನು ಬಾಲಿವುಡ್ ನಟಿ ಸೋನಂ ಕಪೂರ್ ಅವರು ಮುಂಬೈನಲ್ಲಿ ನಡೆದ ವಿಶೇಷ ಪ್ರದರ್ಶನದಲ್ಲಿ ವೀಕ್ಷಿಸಿದರು

ಬಸವ, ಚೌಡಯ್ಯ, ಪಂಪ ಸೇರಿ 21 ಪ್ರಶಸ್ತಿಗಳನ್ನು ಘೋಷಿಸಿದ ಸಂಸ್ಕೃತಿ ಇಲಾಖೆ ● ಇದೇ 31ರಂದು ಪ್ರಶಸ್ತಿ ಪ್ರದಾನ

ಡಿಸೋಜ, ತೇಲ್ತುಂಬ್ಡೆ ಸೇರಿ 44 ಮಂದಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಬಸವ, ಚೌಡಯ್ಯ, ಪಂಪ ಸೇರಿ 21 ರಾಷ್ಟ್ರೀಯ ಮತ್ತು ರಾಜ್ಯ ಪ್ರಶಸ್ತಿಗಳನ್ನು ಘೋಷಿಸಿದ್ದು, ಈ ಪ್ರಶಸ್ತಿಗಳಿಗೆ ಲೇಖಕರಾದ ನಾ. ಡಿಸೋಜ, ಆನಂದ ತೇಲ್ತುಂಬ್ಡೆ ಸೇರಿ 44 ಗಣ್ಯರನ್ನು ಆಯ್ಕೆ ಮಾಡಲಾಗಿದೆ.

ರಾಷ್ಟ್ರೀಯ ವಿಭಾಗದಲ್ಲಿ ನಾಲ್ಕು ಪ್ರಶಸ್ತಿಗಳಿಗೆ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ನೇತೃತ್ವದ ಸಮಿತಿ 2022–23 ಹಾಗೂ 2023–24ನೇ ಸಾಲಿಗೆ ಆಯ್ಕೆ ಮಾಡಿದೆ. 'ಬಸವ ರಾಷ್ಟ್ರೀಯ ಪುರಸ್ಕಾರ'ಕ್ಕೆ ಮಹಾರಾಷ್ಟ್ರದ ಆನಂದ ತೇಲ್ತುಂಬ್ಡೆ, ಧಾರವಾಡದ ಎನ್‌.ಜಿ. ಮಹದೇವಪ್ಪ, 'ಶ್ರೀ ಭಗವಾನ್ ಮಹಾವೀರ ಶಾಂತಿ ಪ್ರಶಸ್ತಿ'ಗೆ ಧಾರವಾಡದ ಜಿನದತ್ತ ದೇಸಾಯಿ, ಗುಜರಾತಿನ ಗಾಂಧಿ ಸೇವಾಶ್ರಮ, 'ಟಿ. ಚೌಡಯ್ಯ ಪ್ರಶಸ್ತಿ'ಗೆ ಮುಂಬೈನ ಕೊಳಲುವಾದಕ ನಿತ್ಯಾನಂದ ಹಳದಿಪುರ, ಕೋಲಾರದ ನಾದಸ್ವರ ಕಲಾವಿದ ಶ್ರೀರಾಮುಲು ಹಾಗೂ 'ಗಾನಯೋಗಿ ಪಂಡಿತ್ ಪಂಚಾಕ್ಷರಿ ಗವಾಯಿ ಪ್ರಶಸ್ತಿ'ಗೆ ಧಾರವಾಡದ ಹಿಂದೂಸ್ತಾನಿ ಗಾಯಕ ಸೋಮನಾಥ್ ಮರಡೂರ ಮತ್ತು ಮೈಸೂರಿನ ಕರ್ನಾಟಕ ಸಂಗೀತ ಕಲಾವಿದೆ ನಾಗಮಣಿ ಶ್ರೀನಾಥ್ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಗಳು ತಲಾ ₹ 10 ಲಕ್ಷ ನಗದು ಒಳಗೊಂಡಿವೆ.

ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಶಸ್ತಿ ವಿಭಾಗದಲ್ಲಿ ನಾಲ್ಕು ವರ್ಷಗಳಿಗೆ ಬಿ.ಟಿ. ಲಲಿತಾ ನಾಯಕ್ ನೇತೃತ್ವದ ಸಮಿತಿ 10 ಮಂದಿಯನ್ನು ಆಯ್ಕೆ ಮಾಡಿದೆ. ಸಾಹಿತ್ಯ ಹಾಗೂ ನಾಟಕ ಪ್ರಶಸ್ತಿ ವಿಭಾಗದಲ್ಲಿ ಮೂರು ವರ್ಷಗಳಿಗೆ ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ 12 ಜನರನ್ನು, ಕಲಾ ಪ್ರಶಸ್ತಿ ವಿಭಾಗದಲ್ಲಿ 2ವರ್ಷಗಳಿಗೆ ವಿ.ಟಿ. ಕಾಳೆ ನೇತೃತ್ವದ ಸಮಿತಿ 6 ಮಂದಿಯನ್ನು ಹಾಗೂ ಸಂಗೀತ, ನೃತ್ಯ ಪ್ರಶಸ್ತಿ ವಿಭಾಗದಲ್ಲಿ ಎರಡು ವರ್ಷಗಳಿಗೆ ನರಸಿಂಹಲು ವಡವಾಟಿ ನೇತೃತ್ವದ ಸಮಿತಿ 8 ಮಂದಿಯನ್ನು ಆಯ್ಕೆ ಮಾಡಿದೆ. ಈ ಪ್ರಶಸ್ತಿಗಳು ತಲಾ ₹ 5 ಲಕ್ಷ ನಗದು ಒಳಗೊಂಡಿವೆ.

ಇದೇ 31ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಸಂಜೆ 6 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. 2018-19, 2020-21, 2021-22 ಹಾಗೂ 2022-23ನೇ ಸಾಲಿಗೆ ಈ ಹಿಂದೆ ಘೋಷಣೆ ಮಾಡಲಾಗಿದ್ದ ವಿವಿಧ ಪ್ರಶಸ್ತಿಗಳನ್ನೂ ಈ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು. ನಾನಾ ಕಾರಣಗಳಿಂದ ಈ ಪ್ರಶಸ್ತಿಗಳ ವಿತರಣೆ ಸಾಧ್ಯವಾಗಿರಲಿಲ್ಲ. ವಿತರಣೆ ಆಗದೇ ಇರುವ 31 ಪ್ರಶಸ್ತಿಗಳೂ ಸೇರಿ ಒಟ್ಟು 75 ಮಂದಿಗೆ ಆ ದಿನ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ.

ನಾ. ಡಿಸೋಜ | ಆನಂದ ತೇಲ್ತುಂಬ್ಡೆ | ಮಹದೇವಪ್ಪ | ಕಸ್ತೂರಿ ಶಂಕರ್ | ಶ್ರೀರಾಮುಲು | ನಿತ್ಯಾನಂದ ಹಳದಿಪುರ | ಜಿನದತ್ತ ದೇಸಾಯಿ | ಬಾನು ಮುಷ್ತಾಕ್

ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಶಸ್ತಿ ವಿಭಾಗ	
ಪ್ರಶಸ್ತಿ	ಆಯ್ಕೆಯಾದವರು
ಸಂಗೊಳ್ಳಿ ರಾಯಣ್ಣ ಪ್ರಶಸ್ತಿ	ಕೆ. ಮರುಳಸಿದ್ದಪ್ಪ (ಬೆಂಗಳೂರು), ಹಸನ್ ನಯೀಂ ಸುರಕೋಡ (ಬೆಳಗಾವಿ), ಕೆ. ರಾಮಯ್ಯ (ಕೋಲಾರ), ಜೆ.ಎಂ. ವೀರಸಂಗಯ್ಯ (ಬಳ್ಳಾರಿ)
ಅಕ್ಕಮಹಾದೇವಿ ಪ್ರಶಸ್ತಿ	ಜಗನ್ಮಾತೆ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್ (ಧಾರವಾಡ), ಆರ್‌. ಸುನಂದಮ್ಮ (ಮಂಡ್ಯ), ಮೀನಾಕ್ಷಿ ಬಾಳಿ (ಕಲಬುರಗಿ), ಡಾ. ವಸುಂಧರಾ ಭೂಪತಿ (ಬೆಂಗಳೂರು)
ಕನಕಶ್ರೀ ಪ್ರಶಸ್ತಿ	ಲಿಂಗದಹಳ್ಳಿ ಹಾಲಪ್ಪ (ಹಾವೇರಿ), ಬಿ.ಶಿವರಾಮ ಶೆಟ್ಟಿ (ಮಂಗಳೂರು)

ಸಾಹಿತ್ಯ ಹಾಗೂ ನಾಟಕ ಪ್ರಶಸ್ತಿ ವಿಭಾಗ	
ಪ್ರಶಸ್ತಿ	ಆಯ್ಕೆಯಾದವರು
ಪಂಪ ಪ್ರಶಸ್ತಿ	ನಾ. ಡಿಸೋಜ (ಶಿವಮೊಗ್ಗ)
ಪ್ರೊ.ಕೆ.ಜಿ. ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ	ಕೆ. ವಿಶ್ವನಾಥ ಕಾರ್ನಾಡ್ (ಮಹಾರಾಷ್ಟ್ರ), ಚಂದ್ರಕಾಂತ ಪೋಕಳೆ (ಬೆಳಗಾವಿ)
ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ	ಬಾನು ಮುಷ್ತಾಕ್ (ಹಾಸನ), ಎಚ್‌.ಎಸ್‌. ಮುಕ್ತಾಯಕ್ಕ (ರಾಯಚೂರು)
ಬಿ.ವಿ.ಕಾರಂತ ಪ್ರಶಸ್ತಿ	ಸಿ.ಬಸವಲಿಂಗಯ್ಯ (ಬೆಂಗಳೂರು), ಸದಾನಂದ ಸುವರ್ಣ (ಮಂಗಳೂರು)
ಡಾ. ಗುಬ್ಬಿ ವೀರಣ್ಣ ಪ್ರಶಸ್ತಿ	ಚನ್ನಬಸಯ್ಯ ಗುಬ್ಬಿ (ತುಮಕೂರು), ಎಲ್‌.ಬಿ.ಶೇಖ್ ಮಾಸ್ತರ (ವಿಜಯಪುರ)
ಡಾ. ಸಿದ್ದಲಿಂಗಯ್ಯ ಸಾಹಿತ್ಯ ಪ್ರಶಸ್ತಿ	ಮೊಗಳ್ಳಿ ಗಣೇಶ್ (ಹಂಪಿ), ಉತ್ತಮ ಕಾಂಬ್ಳೆ, ಬಿ.ಟಿ. ಜಾಹ್ನವಿ (ದಾವಣಗೆರೆ)

ಕಲಾ ಪ್ರಶಸ್ತಿ ವಿಭಾಗ	
ಪ್ರಶಸ್ತಿ	ಆಯ್ಕೆಯಾದವರು
ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ	ಜಿ.ಎಲ್‌.ಎನ್‌.ಸಿಂಹ (ಮೈಸೂರು), ಬಸವರಾಜ್ ಎಲ್‌. ಜಾನೆ (ಕಲಬುರಗಿ)
ಜಾನಪದಶ್ರೀ ಪ್ರಶಸ್ತಿ–ವಾದನ	ಅರುವ ಕೊರಗಪ್ಪ ಶೆಟ್ಟಿ (ದಕ್ಷಿಣ ಕನ್ನಡ), ಜೆ.ಪಿ. ಜಗದೀಶ್ (ಚಿಕ್ಕಮಗಳೂರು)
ಜಾನದಪಶ್ರೀ ಪ್ರಶಸ್ತಿ–ಗಾಯನ	ಕಲ್ಲಪ್ಪ ಮಿರ್ಜಾಪುರ (ಬೀದರ್), ಹಲಗೆ ದುರ್ಗಮ್ಮ (ಚಿತ್ರದುರ್ಗ)

ಸಂಗೀತ, ನೃತ್ಯ ಪ್ರಶಸ್ತಿ ವಿಭಾಗ	
ಪ್ರಶಸ್ತಿ	ಆಯ್ಕೆಯಾದವರು
ಶ್ರೀ ನಿಜಗುಣ-ಪುರಂದರ ಪ್ರಶಸ್ತಿ	ಎಂ.ಕೆ.ಸರಸ್ವತಿ (ಮೈಸೂರು), ಅಕ್ಕಮಹಾದೇವಿ ಮಠ (ಧಾರವಾಡ)
ಕುಮಾರವ್ಯಾಸ ಪ್ರಶಸ್ತಿ	ಸಿದ್ದೇಶ್ವರ ಶಾಸ್ತ್ರಿ (ಗದಗ), ಕೃಷ್ಣಗಿರಿ ರಾಮಚಂದ್ರ (ಮೈಸೂರು)
ಶಾಂತಲಾ ನಾಟ್ಯ ಪ್ರಶಸ್ತಿ	ಚಿತ್ರಾ ವೇಣುಗೋಪಾಲ್ (ಬೆಂಗಳೂರು), ರೇವತಿ ನರಸಿಂಹನ್ (ಬೆಂಗಳೂರು)
ಸಂತ ಶಿಶುನಾಳ ಷರೀಫ ಪ್ರಶಸ್ತಿ	ಕಸ್ತೂರಿ ಶಂಕರ್ (ಬೆಂಗಳೂರು), ಎನ್‌.ಬಿ. ಶಿವಲಿಂಗಪ್ಪ (ಶಿವಮೊಗ್ಗ)

ಸುದ್ದಿ 2 ನಿಮಿಷ

ಎಲ್ಲ ನೌಕರರಿಗೂ ಒಪಿಎಸ್ ಕುಮಾರಸ್ವಾಮಿ ಒತ್ತಾಯ

ಬೆಂಗಳೂರು: ಸುಪ್ರೀಂಕೋರ್ಟ್ ಆದೇಶದಂತೆ ಸುಮಾರು 13 ಸಾವಿರ ಸರ್ಕಾರಿ ನೌಕರರನ್ನು ಹಳೇ ಪಿಂಚಣಿ ವ್ಯಾಪ್ತಿಗೆ (ಒಪಿಎಸ್) ತರಲಾಗಿದೆ. ಇಚ್ಛಾಶಕ್ತಿ ಇದ್ದರೆ ಚುನಾವಣಾ ಸಮಯದಲ್ಲಿ ಕೊಟ್ಟಿದ್ದ ಭರವಸೆಯಂತೆ ಎಲ್ಲರಿಗೂ ಒಪಿಎಸ್ ನೀಡಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

2006 ಏ.1ಕ್ಕಿಂತ ಪೂರ್ವದಲ್ಲಿ ಹೊರಡಿಸಿದ್ದ ಅಧಿಸೂಚನೆಯಂತೆ ನೇಮಕಾತಿ ಹೊಂದಿದ್ದವರನ್ನು ಹಳೇ ಪಿಂಚಣಿ ವ್ಯವಸ್ಥೆಗೆ ಸೇರಿಸಬೇಕು ಎಂದು ವರ್ಷದ ಹಿಂದೆಯೇ ಕೇಂದ್ರ ಸರ್ಕಾರ ಆದೇಶ ಹೊರಡಿಸಿತ್ತು. ಆದರೂ, ಇಷ್ಟು ದಿನಗಳು ರಾಜ್ಯ ಸರ್ಕಾರ ಮೀನಮೇಷ ಮಾಡಿತ್ತು. ಈಗ ಚುನಾವಣೆ ವೇಳೆ ರಾಜಕೀಯ ಲಾಭ ಮಾಡಿಕೊಳ್ಳಲು ಆದೇಶ ಹೊರಡಿಸಿದೆಯೇ ಹೊರತು ನೌಕರರ ಮೇಲಿನ ಪ್ರೀತಿಗಲ್ಲ ಎಂದಿದ್ದಾರೆ.

ರಾಜ್ಯ ಸರ್ಕಾರ ಅಮೆಗತಿಯಲ್ಲಿ ಕೆಲಸ ಮಾಡುತ್ತಿದೆ. ಹೇಳಿದ ಯಾವುದನ್ನೂ ಜಾರಿ ಮಾಡುವುದಿಲ್ಲ. ಇನ್ನಾದರೂ ಕಾಂಗ್ರೆಸ್ ತನ್ನ ವರ್ತನೆ ಬದಲಿಸಿಕೊಳ್ಳಬೇಕು. ನೌಕರರ ಬದುಕನ್ನು ಚುನಾವಣಾ ಸರಕಾಗಿಸಿಕೊಳ್ಳಬಾರದು ಎಂದು ಹೇಳಿದ್ದಾರೆ.

ಶಾಲಾ ಚಾವಣಿ ಸಿಮೆಂಟ್ ಕಳಚಿ ಬಿದ್ದು ಬಾಲಕಿಗೆ ಗಾಯ

ರಾಯಚೂರು: ದೇವದುರ್ಗದ ಸರ್ಕಾರಿ ಬಾಲಕಿಯರ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಕಾರಿಡಾರ್‌ನ ಚಾವಣಿಯ ಸಿಮೆಂಟ್ ಪದರು ಕಳಚಿಬಿದ್ದು ವಿದ್ಯಾರ್ಥಿನಿಯೊಬ್ಬಳು ಗಂಭೀರವಾಗಿ ಗಾಯಗೊಂಡಿದ್ದಾಳೆ.

ಏಳನೇ ತರಗತಿ ವಿದ್ಯಾರ್ಥಿನಿ ಶ್ರೀದೇವಿ ನರಸಪ್ಪ ಬಲಗಾಲಿನ ಮೇಲೆ ಸಿಮೆಂಟ್ ಪದರು ಕಳಚಿಬಿದ್ದು ಗಾಯವಾಗಿದೆ. ವಿದ್ಯಾರ್ಥಿನಿಯನ್ನು ರಾಯಚೂರಿನ ಬ್ರಿಮ್ಸ್ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ.

'ನಾನು ಎರಡು ತಿಂಗಳ ಹಿಂದೆಯಷ್ಟೇ ಅಧಿಕಾರ ವಹಿಸಿಕೊಂಡಿರುವೆ. ಶಾಲೆ ಶಿಥಿಲಾವಸ್ಥೆಯಲ್ಲಿರುವ ಕುರಿತು ಬಿಇಒ ಅವರಿಗೆ ತಿಳಿಸಿದ್ದೆ. ಅವರು ಬೇಸಿಗೆ ರಜೆ ನಂತರ ಸ್ಥಳಾಂತರಿಸುವಂತೆ ಸೂಚಿಸಿದ್ದರು' ಎಂದು ಶಾಲೆಯ ಮುಖ್ಯ ಶಿಕ್ಷಕ ದೇವರಾಜ್ ಹೇಳಿದ್ದಾರೆ.

'ಶಿಥಿಲಾವಸ್ಥೆಯಲ್ಲಿರುವ ಶಾಲಾ ಕಟ್ಟಡದಿಂದ ಬೇರೆ ಶಾಲೆಗೆ ಸ್ಥಳಾಂತರಗೊಳ್ಳುವಂತೆ ಶಾಲೆಯ ಮುಖ್ಯ ಶಿಕ್ಷಕರಿಗೆ ಸೂಚನೆ ನೀಡಲಾಗಿತ್ತು. ಆದರೆ, ಅವರು ಯಾವ ಕಾರಣಕ್ಕೆ ಸ್ಥಳಾಂತರ ಮಾಡಿಲ್ಲ ಎನ್ನುವ ಕುರಿತು ವಿವರಣೆ ಪಡೆಯಲಾಗುವುದು' ಎಂದು ದೇವದುರ್ಗ ಬಿಇಒ ಎಚ್‌. ಸುಖದೇವ್ ತಿಳಿಸಿದ್ದಾರೆ.

ಗಣರಾಜ್ಯೋತ್ಸವ: 20 ಮಂದಿಗೆ ರಾಷ್ಟ್ರಪತಿ ಪದಕ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ರಾಜ್ಯದ ಎಡಿಜಿಪಿ ಸೌಮೇಂದು ಮುಖರ್ಜಿ ಸೇರಿದಂತೆ 20 ಅಧಿಕಾರಿಗಳು ಹಾಗೂ ಪೊಲೀಸರಿಗೆ 2024ನೇ ಸಾಲಿನ ರಾಷ್ಟ್ರಪತಿ ಪದಕ ಲಭಿಸಿದೆ. ಕರ್ನಾಟಕ ವೃಂದದ ಐಪಿಎಸ್ ಅಧಿಕಾರಿಗಳಾದ ಕೇಂದ್ರ ಗೃಹ ಇಲಾಖೆಯ ಜಂಟಿ ನಿರ್ದೇಶಕ ಪಂಕಜ್‌ಕುಮಾರ್ ಠಾಕೂರ್ ಅವರಿಗೆ ರಾಷ್ಟ್ರಪತಿ ವಿಶಿಷ್ಟ ಸೇವಾ ಪದಕ, ಸಿಬಿಐ ಜಂಟಿ ನಿರ್ದೇಶಕ ಪ್ರವೀಣ್ ಮಧುಕರ್ ಪವಾರ್ ಹಾಗೂ ಕೇಂದ್ರ ಗೃಹ ಇಲಾಖೆಯ ಉಪನಿರ್ದೇಶಕ ಕೌಶಲೇಂದ್ರ ಕುಮಾರ್ ಅವರಿಗೆ ರಾಷ್ಟ್ರಪತಿ ಶ್ಲಾಘನೀಯ ಸೇವಾ ಪದಕ ಲಭಿಸಿದೆ. ಗಣರಾಜ್ಯೋತ್ಸವ ದಿನದಂದು ಪದಕ ಪ್ರದಾನ ಕಾರ್ಯಕ್ರಮ ನಡೆಯಲಿದೆ. ಪದಕ ಪಡೆದವರ ವಿವರ ಇಲ್ಲಿದೆ.

2024ನೇ ಸಾಲಿನ ರಾಷ್ಟ್ರಪತಿ ವಿಶಿಷ್ಟ ಸೇವಾ ಪದಕ 1) **ಸೌಮೇಂದು ಮುಖರ್ಜಿ,** ಎಡಿಜಿಪಿ (ಆಡಳಿತ) 2) **ಸುಧೀರ್ ಎಂ. ಹೆಗ್ಡೆ,** ಡಿವೈಎಸ್‌ಪಿ (ಕೆಎಸ್‌ಎಚ್‌ಆರ್‌ಸಿ) **2024ನೇ ಸಾಲಿನ ರಾಷ್ಟ್ರಪತಿ ಶ್ಲಾಘನೀಯ ಸೇವಾ ಪದಕ** 1) **ರಮಣ್ ಗುಪ್ತ,** ಹೆಚ್ಚುವರಿ ಪೊಲೀಸ್ ಕಮಿಷನರ್, ಬೆಂಗಳೂರು ನಗರ. 2) **ಅನಿಲ್ ಕುಮಾರ್ ಎಸ್. ಭೂಮರಡ್ಡಿ,** ಹೆಚ್ಚುವರಿ ಎಸ್‌ಪಿ, ಶಿವಮೊಗ್ಗ. 3) **ನಾಗರಾಜ ಎ.,** ಕಮಾಂಡೆಂಟ್, 1ನೇ ಪಡೆ, ಕೆಎಸ್‌ಐಎಸ್‌ಎಫ್ ಬೆಂಗಳೂರು. 4) **ಎಸ್.ಪಿ. ಧರಣೇಶ,** ಹೆಚ್ಚುವರಿ ಎಸ್‌ಪಿ, ಯಾದಗಿರಿ

5) **ನಾರಾಯಣಸ್ವಾಮಿ ವಿ.,** ಸಹಾಯಕ ಪೊಲೀಸ್ ಕಮಿಷನರ್, ಜಯನಗರ ಉಪವಿಭಾಗ, ದಕ್ಷಿಣ ವಿಭಾಗ ಬೆಂಗಳೂರು ನಗರ. 6) **ವಿ. ರಘುಕುಮಾರ್,** ಸಹಾಯಕ ನಿರ್ದೇಶಕ, ರಾಜ್ಯ ಗುಪ್ತವಾರ್ತೆ, ಬೆಂಗಳೂರು. 7) **ಬಿ.ಎಸ್. ಶ್ರೀನಿವಾಸ ರಾಜ್,** ಡಿವೈಎಸ್‌ಪಿ, ಸಿಐಡಿ, ಬೆಂಗಳೂರು. 8) **ಎಸ್.ಆರ್. ವೀರೇಂದ್ರ ಪ್ರಸಾದ್,** ಪೊಲೀಸ್ ಇನ್‌ಸ್ಪೆಕ್ಟರ್, ಚನ್ನರಾಯನಪಟ್ಟಣ ಪೊಲೀಸ್ ಠಾಣೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ. 9) **ಎಂ.ಆರ್. ಹರೀಶ್,** ಪೊಲೀಸ್ ಇನ್‌ಸ್ಪೆಕ್ಟರ್, ದೊಡ್ಡಬೆಳವಂಗಲ ಪೊಲೀಸ್ ಠಾಣೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ. 10) **ಆರ್. ಪುಂಡಲೀಕ,** ವಿಶೇಷ ಆರ್‌ಎಸ್‌ಐ 6ನೇ ಪಡೆ, ಕೆಎಸ್‌ಆರ್‌ಪಿ ಕಲಬುರಗಿ

11) **ರಾಮ,** ಎಎಸ್‌ಐ, ಬಜ್ಪೆ ಪೊಲೀಸ್ ಠಾಣೆ, ಮಂಗಳೂರು ನಗರ. 12) **ಸುರೇಶ್ ಆರ್. ಪುಡಕಲಕಟ್ಟಿ,** ಎಎಸ್‌ಐ (ವೈರ್‌ಲೆಸ್) ಕೇಂದ್ರ ಕಚೇರಿ ಬೆಂಗಳೂರು. 13) **ದಾದಾಪೀರ್ ಎಚ್.,** ಎಆರ್‌ಎಸ್‌ಐ, ಜಿಲ್ಲಾ ಸಶಸ್ತ್ರ ಮೀಸಲು ಪಡೆ ದಾವಣಗೆರೆ. 14) **ವೆಂಕಟೇಶ ಸಿ.,** ಸಹಾಯಕ ಗುಪ್ತದಳ ಅಧಿಕಾರಿ, ರಾಜ್ಯ ಗುಪ್ತವಾರ್ತೆ, ಬೆಂಗಳೂರು. 15) **ಶಮಂತ್ ಯಶ್ ಜಿ.,** ಎಎಸ್‌ಐ, ಸಿಐಡಿ ಬೆಂಗಳೂರು. 16) **ಸಿ.ವಿ. ಗೋವಿಂದ ರಾಜು,** ಎಚ್‌ಸಿ 4ನೇ ಪಡೆ, ಕೆಎಸ್‌ಆರ್‌ಪಿ ಬೆಂಗಳೂರು. 17) **ಮಣಿಕಂಠ ಎಂ.,** ಸಿಎಚ್‌ಸಿ, ಸಹಾಯಕ ಪೊಲೀಸ್ ಕಮಿಶನರ್ ಕಚೇರಿ, ಸಂಚಾರ ಉಪವಿಭಾಗ, ಮಂಗಳೂರು ನಗರ. 18) **ಎಸ್.ಎನ್. ನರಸಿಂಹರಾಜು,** ಸಿಎಚ್‌ಸಿ, ಜಿಲ್ಲಾ ಪೊಲೀಸ್ ಕಚೇರಿ ತಾಂತ್ರಿಕ ವಿಭಾಗ, ತುಮಕೂರು

ನಾವೇನು ಹೈಕಮಾಂಡ್ ಗುಲಾಮರಾ?: ರಾಜಣ್ಣ

ಪ್ರಜಾವಾಣಿ ವಾರ್ತೆ

ತುಮಕೂರು: 'ನಾವೇನು ಹೈ ಕಮಾಂಡ್ ಗುಲಾಮರಾ? ಈ ರೀತಿ ಸವಾರಿ ಮಾಡುವುದನ್ನು ಸಹಿಸುವುದಿಲ್ಲ' ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹರಿಹಾಯ್ದಿದ್ದಾರೆ.

'ನಿಗಮ, ಮಂಡಳಿಗಳಿಗೆ ನೇಮಕದ ವೇಳೆ ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ದೆಹಲಿಯಲ್ಲಿ ಕುಳಿತು ಪಟ್ಟಿ ಮಾಡಿ ಲಾಟರಿ ಟಿಕೆಟ್ ಹಂಚಿದಂತೆ ಹಂಚಿದರೆ ಹೇಗೆ?' ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಮ್ಮ ಜತೆ ಮಾತುಕತೆ ನಡೆಸಿ, ವಿಶ್ವಾಸಕ್ಕೆ ತೆಗೆದುಕೊಂಡು ನಿಗಮ, ಮಂಡಳಿಗೆ ನೇಮಕ ಮಾಡಬೇಕು. ನಮ್ಮನ್ನು ಒಂದು ಮಾತು ಕೇಳಬೇಕಲ್ಲವೇ' ಎಂದು ಪ್ರಶ್ನಿಸಿದರು.

'ಈ ವಿಚಾರದಲ್ಲಿ ಹೈಕಮಾಂಡ್‌ನ ಯಾವ ನಾಯಕರ ಹೆಸರನ್ನೂ ಹೇಳಲು ಬಯಸುವುದಿಲ್ಲ. ಆದರೆ ಲೋಕಸಭೆ ಚುನಾವಣೆಗೆ ಅಭ್ಯರ್ಥಿ ಆಯ್ಕೆ ವಿಚಾರದಲ್ಲೂ ಇದೇ ರೀತಿ ನಡೆದುಕೊಂಡರೆ ಅವರೇ ಇಲ್ಲಿಗೆ ಬಂದು ಗೆಲ್ಲಿಸಬೇಕಾಗುತ್ತದೆ. ನಮ್ಮನ್ನು ಏನೂ ಕೇಳುವಂತಿಲ್ಲ. ಎಲ್ಲಾ ಅವರೇ ಮಾಡುವುದಾದರೆ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಲಿ' ಎಂದು ಸವಾಲು ಹಾಕಿದರು.

'ಸ್ಥಳೀಯವಾಗಿ ಯಾವ ಕಾರ್ಯಕರ್ತರು, ಮುಖಂಡರು ಪಕ್ಷಕ್ಕಾಗಿ ಕೆಲಸ ಮಾಡಿದ್ದಾರೆ ಎಂಬುದು ನಮಗೆ ಗೊತ್ತಿರುತ್ತದೆ. ನಾವು ಕೊಟ್ಟ ಹೆಸರನ್ನು ಸೇರಿಸಬೇಕು. ಅದು ಬಿಟ್ಟು, ದೆಹಲಿಯಲ್ಲಿ ಕುಳಿತು ತಮಗೆ ಬೇಕಾದವರ ಹೆಸರು ಸೇರಿಸುವುದನ್ನು ಸಹಿಸುವುದಿಲ್ಲ. ಹಿಂದೆ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರಿಗೆ ಜವಾಬ್ದಾರಿ ಕೊಟ್ಟು, ಸಲಹೆ ನೀಡುತ್ತಿದ್ದರು. ಈಗ ಅವರೇ ಪಟ್ಟಿ ಸಿದ್ಧಪಡಿಸಿ ಕಳುಹಿಸಿದ್ದಾರೆ. ಇದು ಹೊಸ ಹೈಕಮಾಂಡ್‌ನ, ಹೊಸ ವರಸೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೆಸರು ಹೇಳದೆ ವಾಗ್ದಾಳಿ ನಡೆಸಿದರು.

'ರಾಜೀನಾಮೆಗೆ ಸಿದ್ಧ'

'ತುಮಕೂರು ಲೋಕಸಭಾ ಕ್ಷೇತ್ರದಿಂದ ಎಸ್‌.ಪಿ.ಮುದ್ದಹನುಮೇಗೌಡ ಸ್ಪರ್ಧಿಸಲಿದ್ದಾರೆ. ಅಭ್ಯರ್ಥಿ ಆಗುವುದನ್ನು ಯಾರಿಂದಲೂ ಬದಲಿಸಲು ಸಾಧ್ಯವಿಲ್ಲ. ಲೋಕಸಭೆ ಚುನಾವಣೆಯಲ್ಲಿ ತಮ್ಮ ವ್ಯಾಪ್ತಿಯ ಅಭ್ಯರ್ಥಿಯನ್ನು ಗೆಲ್ಲಿಸದಿದ್ದರೆ ಸಚಿವರ ತಲೆದಂಡ ಮಾಡುವುದಾದರೆ ಮಾಡಲಿ. ಯಾರು ಗೆಲ್ಲಿಸುವುದಿಲ್ಲ ಅವರ ತಲೆದಂಡವಾಗುತ್ತದೆ. ಗೆಲ್ಲಿಸದೇ ಇದ್ದರೆ ನನ್ನ ತಲೆಯೂ ದಂಡವಾಗಲಿ. ನಾನು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ಧನಿದ್ದೇನೆ' ಎಂದು ರಾಜಣ್ಣ ಹೇಳಿದ್ದಾರೆ.

'ಮೋದಿ, ಶಾ ಹೇಳಿದರೆ ಕುಮಾರಸ್ವಾಮಿ ಸ್ಪರ್ಧೆ'

ಪ್ರಜಾವಾಣಿ ವಾರ್ತೆ

ಹಾಸನ: 'ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಹೇಳಿದರೆ, ಎಚ್‌.ಡಿ. ಕುಮಾರಸ್ವಾಮಿ ಅವರು ಮಂಡ್ಯ, ತುಮಕೂರು, ಚಿಕ್ಕಬಳ್ಳಾಪುರ ಎಲ್ಲಿ ಬೇಕಾದರೂ ಸ್ಪರ್ಧೆ ಮಾಡಬಹುದು. ಅವರಿಗೆ ಯಾವುದೇ ಸಮಸ್ಯೆ ಇಲ್ಲ. ಈ ಬಗ್ಗೆ ತೀರ್ಮಾನ ಕೈಗೊಳ್ಳುವುದು ಮೋದಿ ಹಾಗೂ ಶಾ ಅವರಿಗೆ ಸೇರಿದ್ದು' ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಹೇಳಿದರು.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಿಖಿಲ್ ಕುಮಾರಸ್ವಾಮಿ ಈ ಬಾರಿ ಸ್ಪರ್ಧೆ ಮಾಡುವುದು ಬೇಡ ಎನ್ನುವ ಅಭಿಪ್ರಾಯವನ್ನು ಕುಮಾರಸ್ವಾಮಿ ವ್ಯಕ್ತಪಡಿಸಿದ್ದಾರೆ. ಆದರೆ ನಿಖಿಲ್ ಅಥವಾ ಕುಮಾರಸ್ವಾಮಿ ನಿಲ್ಲಬೇಕೆಂದು ಮಂಡ್ಯದ ಜನ ಸರ್ವಾನುಮತದಿಂದ ತೀರ್ಮಾನ ಕೈಗೊಂಡು ತಿಳಿಸಿದ್ದಾರೆ' ಎಂದರು.

'ನಿಖಿಲ್ ಸಿನಿಮಾ ಕ್ಷೇತ್ರದಲ್ಲಿದ್ದು, ಎಲ್ಲ ಜಿಲ್ಲೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ದೆಹಲಿಯಲ್ಲಿ ನಿಖಿಲ್ ಇದ್ದದ್ದು ಸತ್ಯ. ಉತ್ತರ ಪ್ರದೇಶದ ಮುಖ್ಯಮಂತ್ರಿ ಜೊತೆ ಚರ್ಚೆ ಮಾಡಿರುವುದೂ ನಿಜ. ಆದರೆ, ಮಗ, ತಾವು ಇಬ್ಬರೂ ಚುನಾವಣೆಯಲ್ಲಿ ಸ್ಪರ್ಧಿಸುವುದು ಬೇಡ ಎನ್ನುವುದು ಕುಮಾರಸ್ವಾಮಿ ಅವರ ಮನಸ್ಸಿನಲ್ಲಿದೆ' ಎಂದು ತಿಳಿಸಿದರು.

'ಕುಮಾರಸ್ವಾಮಿ ಅವರು, ಯಡಿಯೂರಪ್ಪ, ವಿಜಯೇಂದ್ರ, ಬಸವರಾಜ ಬೊಮ್ಮಾಯಿ ಅವರ ಜೊತೆ ಚುನಾವಣೆ ಸಂಬಂಧ ಮೊದಲ ಸುತ್ತಿನ ಮಾತುಕತೆ ನಡೆಸಿದ್ದಾರೆ. ಸೀಟು ಹಂಚಿಕೆ ವಿಷಯದಲ್ಲಿ ಅವರು ತೀರ್ಮಾನಕ್ಕೆ ಬರುತ್ತಾರೆ. ನಾನು ಮಧ್ಯಪ್ರವೇಶ ಮಾಡುವುದಿಲ್ಲ. ನಮಗೆ ಎಷ್ಟು ಸೀಟು, ಎಲ್ಲೆಲ್ಲಿ ಕೊಡುತ್ತಾರೆ ಎಂಬುದನ್ನು ನಾನು ಚರ್ಚೆ ಮಾಡುವುದಿಲ್ಲ' ಎಂದು ಹೇಳಿದರು.

'ಮುಂದಿನ ವಾರ ದೆಹಲಿಯಲ್ಲಿ ಕುಮಾರಸ್ವಾಮಿ, ಮೋದಿ, ಅಮಿತ್ ಶಾ, ಜೆ.ಪಿ. ನಡ್ಡಾ ಕುಳಿತು ತೀರ್ಮಾನ ಮಾಡಬಹುದು. ಆ ಸಂದರ್ಭದಲ್ಲಿ ನಾನು ದೆಹಲಿಯಲ್ಲಿ ಇರುತ್ತೇನೆ' ಎಂದರು.

ಶೃಂಗೇರಿ ಶಾರದ ಪೀಠಕ್ಕೆ ನೂತನ ಆಡಳಿತಾಧಿಕಾರಿ

ಪ್ರಜಾವಾಣಿ ವಾರ್ತೆ

ಶೃಂಗೇರಿ: ಶೃಂಗೇರಿ ಶಾರದ ಪೀಠದ ನೂತನ ಆಡಳಿತಾಧಿಕಾರಿ ಮತ್ತು ಸಿಇಒ ಆಗಿ ಬೆಂಗಳೂರಿನ ಪಿ.ಎ ಮುರಳಿ ಅವರನ್ನು ನೇಮಕ ಮಾಡಲಾಗಿದ್ದು, ಅವರು ಗುರುವಾರ ಅಧಿಕಾರ ಸ್ವೀಕರಿಸಿದರು.

ಪಿ.ಎ ಮುರಳಿ

ಮಠದ ಉಭಯ ಗುರುಗಳಾದ ಭಾರತೀ ತೀರ್ಥ ಸ್ವಾಮೀಜಿ ಮತ್ತು ವಿಧುಶೇಖರ ಭಾರತೀ ಸ್ವಾಮೀಜಿ ಅವರು ಗುರುವಾರ ಈ ನೇಮಕಾತಿ ಆದೇಶ ಹೊರಡಿಸಿದರು.

ಮಠದ ಈ ಹಿಂದಿನ ಗುರು ಅಭಿನವ ವಿದ್ಯಾತೀರ್ಥ ಸ್ವಾಮೀಜಿ ಅವರ ನಿರ್ದೇಶನದಂತೆ 1989ರಲ್ಲಿ ವಿ.ಆರ್. ಗೌರೀಶಂಕರ್ ಅವರನ್ನು ಶೃಂಗೇರಿ ಮಠದ ಆಡಳಿತಾಧಿಕಾರಿ ಮತ್ತು ಸಿಇಒ ಆಗಿ ನೇಮಕ ಮಾಡಲಾಗಿತ್ತು. ಅವರು 35 ವರ್ಷಗಳ ಕಾಲ ಮಠದ ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಮುಂದಿನ ದಿನಗಳಲ್ಲಿ ಅವರು ನೂತನ ಆಡಳಿತಾಧಿಕಾರಿ ಮತ್ತು ಸಿಇಒ ಪಿ.ಎ ಮುರಳಿ ಅವರಿಗೆ ಮುಖ್ಯ ಸಲಹೆಗಾರರಾಗಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವಿಧುಶೇಖರ ಭಾರತೀ ಸ್ವಾಮೀಜಿ ಅವರು ಸನ್ಯಾಸ ಸ್ವೀಕರಿಸಿದ ದಿನವಾದ ಫೆ.12ರಂದು ವಿ.ಆರ್ ಗೌರೀಶಂಕರ್ ಅವರಿಗೆ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಠದ ಮೂಲಗಳು ತಿಳಿಸಿವೆ.

'ಮಂಡ್ಯದಿಂದ ಬಿಜೆಪಿಯಿಂದಲೇ ಸ್ಪರ್ಧೆ'

ಬೆಂಗಳೂರು: 'ಕಾಂಗ್ರೆಸ್‌ನ ಹಲವು ಕಾರ್ಯಕರ್ತರು ಪಕ್ಷಕ್ಕೆ ಬರುವಂತೆ ಆಹ್ವಾನ ನೀಡಿದ್ದಾರೆ. ಆದರೆ, ನಾನು ಬಿಜೆಪಿಯಿಂದಲೇ ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸುವ ನಿರ್ಧಾರ ಮಾಡಿದ್ದೇನೆ' ಎಂದು ಸಂಸದೆ ಸುಮಲತಾ ಅಂಬರೀಷ್ ಗುರುವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮಂಡ್ಯ ಬಿಟ್ಟು ಬೇರೆ ಕ್ಷೇತ್ರಗಳಿಗೆ ಟಿಕೆಟ್ ನೀಡುವುದಾದರೆ ರಾಜಕೀಯವೇ ಬೇಡ. ಅಂಬರೀಷ್‌ಗಾಗಿ ರಾಜಕೀಯಕ್ಕೆ ಬಂದಿರುವೆ. ಸ್ವತಂತ್ರ ಅಭ್ಯರ್ಥಿಯಾಗಿ ನನ್ನನ್ನು ಮಂಡ್ಯದ ಜನ ಗೆಲ್ಲಿಸಿದ್ದಾರೆ. ಅಂತಹ ಅಭಿಮಾನ ಬಿಟ್ಟು ಬೇರೆ ಕಡೆ ಹೋಗುವುದಿಲ್ಲ. ಒಂದು ವೇಳೆ ಮಂಡ್ಯ ಕ್ಷೇತ್ರವನ್ನು ಬಿಜೆಪಿ ಜೆಡಿಎಸ್‌ಗೆ ಬಿಟ್ಟುಕೊಟ್ಟರೆ ಮುಂದಿನ ನಡೆ ಕುರಿತು ನಿರ್ಧಾರ ತೆಗೆದುಕೊಳ್ಳುವೆ' ಎಂದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡುವಿರಾ ಎಂಬ ಪ್ರಶ್ನೆಗೆ ಉತ್ತರ ನೀಡಿದ ಅವರು, 'ಭೇಟಿಯಾಗಲು ಇಚ್ಛಿಸಿದರೆ ಮಂಡ್ಯ ಕ್ಷೇತ್ರ ಕುರಿತು ಮಾತ್ರ ಮಾತನಾಡುವೆ' ಎಂದು ತಿಳಿಸಿದರು.

ಸೇತುವೆಗೆ ಕಾರು ಡಿಕ್ಕಿ: ಮಕ್ಕಳು ಸೇರಿ ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಚಳ್ಳಕೆರೆ (ಚಿತ್ರದುರ್ಗ): ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು ಸೇತುವೆಗೆ ಡಿಕ್ಕಿ ಹೊಡೆದಿದ್ದರಿಂದ ಮೂವರು ಮಕ್ಕಳು ಸೇರಿ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ತಾಲ್ಲೂಕಿನ ಹೆಗ್ಗೆರೆ ಗೇಟ್ ಬಳಿಯ ರಾಷ್ಟ್ರೀಯ ಹೆದ್ದಾರಿ 150 'ಎ'ಯಲ್ಲಿ ಗುರುವಾರ ನಸುಕಿನಲ್ಲಿ ಅಪಘಾತ ಸಂಭವಿಸಿದೆ.

ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ದೊಂಡಮ್ಮಳ್ಳಿ ಗ್ರಾಮದ ಲಿಂಗಪ್ಪ (26), ಸಿಂಧುಶ್ರೀ (2), ಐದು ತಿಂಗಳ ಶಿಶು ಅಯ್ಯಳಪ್ಪ ಮತ್ತು ಮೂರು ತಿಂಗಳ ರಕ್ಷಾ ಸಾವಿಗೀಡಾದವರು. ನಾಗಪ್ಪ ಪೂಜಾರಿ (35), ಪತ್ನಿ ಯಲ್ಲಮ್ಮ (20), ಪುತ್ರಿ ಯಮುನಾ (3), ಸಿದ್ದಪ್ಪನ ಪತ್ನಿ ಮಲ್ಲಮ್ಮ (30) ಗಂಭೀರವಾಗಿ ಗಾಯಗೊಂಡಿದ್ದು, ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಟ್ಟಡ ಕಾರ್ಮಿಕರಾಗಿರುವ ನಾಗಪ್ಪ ಹಾಗೂ ಸಹೋದರರು ಬೆಂಗಳೂರಿನ ಶ್ರೀರಾಂಪುರದಲ್ಲಿ ನೆಲೆಸಿದ್ದಾರೆ. ದೇವದುರ್ಗದಿಂದ ಬೆಂಗಳೂರಿಗೆ ವಾಪಸಾಗುತ್ತಿದ್ದಾಗ ದುರ್ಘಟನೆ ಸಂಭವಿಸಿದೆ.

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಯಲ್ಲಮ್ಮನ ಗುಡ್ಡದಲ್ಲಿ ಗುರುವಾರ ಬನದ ಹುಣ್ಣಿಮೆ ಜಾತ್ರೆಗೆ ಅಪಾರ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು – ಪ್ರಜಾವಾಣಿ ಚಿತ್ರ/ ಇಮಾಮ್‌ಹುಸೇನ್ ಗೂಡುನವರ

ಬನದ ಹುಣ್ಣಿಮೆಗೆ ಭಕ್ತರ ಮಹಾಪೂರ

ಪ್ರಜಾವಾಣಿ ವಾರ್ತೆ

ಯಲ್ಲಮ್ಮನಗುಡ್ಡ (ಬೆಳಗಾವಿ ಜಿಲ್ಲೆ): ಸವದತ್ತಿ ತಾಲ್ಲೂಕಿನ ಯಲ್ಲಮ್ಮನ ಗುಡ್ಡದಲ್ಲಿ ಗುರುವಾರ, ಬನದ ಹುಣ್ಣಿಮೆ ಜಾತ್ರೆಗೆ ದೇಶದ ವಿವಿಧ ಭಾಗಗಳಿಂದ ಭಕ್ತರ ಮಹಾಪೂರವೇ ಹರಿದುಬಂತು. ಏಳು ಕೊಳ್ಳಗಳು, ಏಳು ಗುಡ್ಡಗಳು ಇರುವ ಈ ಪ್ರದೇಶದಲ್ಲಿ ಉಧೋ ಉಧೋ ಉಧೋ.. ಎಂಬ ಉದ್ಘೋಷ ನಿರಂತರ ಮೊಳಗಿತು.

ನಸುಕಿನ 3ರಿಂದಲೇ ದೇವಿ ದರ್ಶನಕ್ಕೆ ಭಕ್ತರು ಸರದಿ ಸಾಲಿನಲ್ಲಿ ನಿಂತರು. ಹಲವರು ಎರಡು ದಿನ ಮುಂಚಿತವಾಗಿಯೇ ಗುಡ್ಡಕ್ಕೆ ಬಂದು ಠಿಕಾಣಿ ಹೂಡಿದ್ದರು. ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ, ಆಂಧ್ರ ಪ್ರದೇಶ, ಗುಜರಾತ್ ಮುಂತಾದ ರಾಜ್ಯಗಳ ಭಕ್ತರು ಗುರುವಾರ ಬಂದು ಕ್ಷೇತ್ರದಲ್ಲಿ ನೆಲೆಯೂರಿದರು.

ಹುಣ್ಣಿಮೆ ಅಂಗವಾಗಿ ದೇವಿಗೆ ವಿಶೇಷ ಪೂಜೆ, ಅಲಂಕಾರ, ದೀಪಾರತಿ, ಉಡಿ ತುಂಬುವ ಕಾರ್ಯಕ್ರಮಗಳು ಸಾಂಗವಾಗಿ ನೆರವೇರಿದವು. ಹೂವು, ಹಣ್ಣು, ಕಾಯಿ, ಭಂಡಾರ, ಬಳೆ, ಮಡಿ ಮುಂತಾದ ಪೂಜಾ ಸಾಮಗ್ರಿಗಳನ್ನು ಅರ್ಪಿಸಿ ಹರಕೆ ತೀರಿಸಿದರು. ಗುಡ್ಡದಲ್ಲಿ ಎತ್ತ ನೋಡಿದರೂ ಭಂಡಾರ ಹಾರಾಡಿತು. ರೇಣುಕಾದೇವಿ ಸ್ತುತಿಗಳನ್ನು ಹಾಡುವ ಭಕ್ತರು, ತಮಟೆಗೆ ತಕ್ಕಂತೆ ಕುಣಿದ ಹೆಣ್ಣುಮಕ್ಕಳು, ಗುಡ್ಡದ ಮೂಲೆಮೂಲೆಯಲ್ಲಿ ಕಲ್ಲಿನ ಒಲೆಗಳನ್ನು ಹೂಡಿ ಅಡುಗೆ ಮಾಡುವ ವನಿತೆಯರ ದಂಡೇ ಇತ್ತು. ಬೆಳಗಾವಿ ಹಾಗೂ ನೆರೆ ಜಿಲ್ಲೆಗಳಿಂದ ರೈತರು ಎತ್ತು-ಚಕ್ಕಡಿಗಳನ್ನು ಕಟ್ಟಿಕೊಂಡು ಬಂದು ಸಂಭ್ರಮಿಸಿದರು.

ಫೆ.25ರವರೆಗೆ ರಾಜ್ಯದಾದ್ಯಂತ ಕಾರ್ಯಕ್ರಮ ● ₹ 18 ಕೋಟಿ ಬಿಡುಗಡೆ

ಸಂವಿಧಾನ ಜಾಗೃತಿ ಜಾಥಾ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮೈಸೂರು: '75ನೇ ಗಣರಾಜ್ಯೋತ್ಸವ ಅಂಗವಾಗಿ ಜ.26ರಿಂದ ಫೆ.25ರವರೆಗೆ ರಾಜ್ಯದಾದ್ಯಂತ ಸಂವಿಧಾನ ಜಾಗೃತಿ ಜಾಥಾ ನಡೆಸಲಾಗುವುದು. ಎಲ್ಲ ಜಿಲ್ಲೆಗಳಲ್ಲಿ ಆಯಾ ಜಿಲ್ಲಾ ಉಸ್ತುವಾರಿ ಸಚಿವರು ಚಾಲನೆ ನೀಡುವರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '27 ದಿನಗಳವರೆಗೆ 31 ಜಿಲ್ಲೆಗಳಲ್ಲೂ ಎಲ್‌ಇಡಿ ಪರದೆಯುಳ್ಳ ಸ್ತಬ್ಧಚಿತ್ರ ವಾಹನವು ಹಳ್ಳಿ-ಹಳ್ಳಿಗಳಿಗೆ ಸಂಚರಿಸಿ ಸಂವಿಧಾನ ಮಹತ್ವವನ್ನು ತಿಳಿಸಲಿದೆ. ದೊಡ್ಡ ಜಿಲ್ಲೆಯಾದರೆ 2 ವಾಹನ ಬಳಸಲಾಗುವುದು' ಎಂದರು.

'ಜಾಥಾದಲ್ಲಿ ಶಾಸಕರು ಭಾಗವಹಿಸಲಿದ್ದು, ಸರ್ಕಾರದ ಗ್ಯಾರಂಟಿ ಹಾಗೂ ಇತರ ಸೌಲಭ್ಯ ಸಿಗದ ಜನರ ಸಂಕಷ್ಟಗಳಿಗೆ ಸ್ಥಳದಲ್ಲೇ ಪರಿಹಾರ ನೀಡುವ ಕೆಲಸ ಮಾಡಲಿದ್ದಾರೆ. ವಿವಿಧ ಇಲಾಖೆಗಳು ಕಾರ್ಯಕ್ರಮದ ವೆಚ್ಚವನ್ನು ಭರಿಸಲಿದ್ದು, ಸರ್ಕಾರ ₹ 18 ಕೋಟಿ ಬಿಡುಗಡೆ ಮಾಡಿದೆ. ಪ್ರತಿ ಜಿಲ್ಲೆಗೆ ₹ 25 ಲಕ್ಷ ನೀಡಲಾಗಿದೆ' ಎಂದರು.

'ಫೆ.24, 25ರಂದು ವಿಚಾರಸಂಕಿರಣ ಹಾಗೂ ಸಂವಾದ ಕಾರ್ಯಕ್ರಮವನ್ನು ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾದ ಸಹಯೋಗದಲ್ಲಿ ಆಯೋಜಿಸಲಾಗಿದೆ. ಫೆ.25ರಂದು ಅರಮನೆ ಮೈದಾನದ ಕೃಷ್ಣವಿಹಾರದಲ್ಲಿ ಸಂವಿಧಾನ ಸಮಾವೇಶ ನಡೆಸಲಾಗುವುದು. ಸಂವಿಧಾನ ರಚನಾ ಸಭೆಯಲ್ಲಿ ನಡೆದ ಅರ್ಥಪೂರ್ಣ ಚರ್ಚೆಗಳ 10 ಸಂಪುಟದ ಪುಸ್ತಕ ಗಳನ್ನು ಬಿಡುಗಡೆ ಮಾಡಲಾಗುವುದು' ಎಂದು ಮಾಹಿತಿ ನೀಡಿದರು.

'ಸಂವಿಧಾನ ದುರ್ಬಲಗೊಳಿಸಲು ಪಟ್ಟಭದ್ರ ಹಿತಾಸಕ್ತಿಗಳು ಹವಣಿಸುತ್ತಿವೆ. ಅದಕ್ಕೆ ವಿರುದ್ಧವಾದ ಅಭಿಪ್ರಾಯ ವ್ಯಕ್ತಪಡಿಸುವುದಲ್ಲದೇ ಬದಲಾಯಿಸುವ ಮಾತುಗಳನ್ನೂ ಆಡುತ್ತಿದ್ದಾರೆ. ಮನುಸ್ಮೃತಿಗೆ ಅನುಗುಣವಾಗಿಲ್ಲ ಎಂದೆಲ್ಲಾ ಹೇಳುತ್ತಿದ್ದಾರೆ. ಅಂಥವರಿಗೆ ಜಾಥಾ ಉತ್ತರ ಕೊಡಲಿದೆ' ಎಂದು ಹೇಳಿದರು.

'ಸಂವಿಧಾನವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಅದಕ್ಕೆ ವಿರುದ್ಧವಾದ ಕೆಲಸ ಮಾಡದೇ ಅದರ ರಕ್ಷಣೆ ಮಾಡುವ ಕೆಲಸವನ್ನು ಯುವ ಸಮುದಾಯ ಮಾಡಬೇಕು' ಎಂದು ಕೋರಿದರು.

ಸಚಿವರಾದ ಡಾ.ಎಚ್‌.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಬೈರತಿ ಸುರೇಶ್, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ಡಿ.ರವಿಶಂಕರ್, ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಜಿಲ್ಲಾ ಪಂಚಾಯಿತಿ ಸಿಇಒ ಕೆ.ಎಂ.ಗಾಯತ್ರಿ ಪಾಲ್ಗೊಂಡಿದ್ದರು.

'ರಾಜ್ಯದ ತೆರಿಗೆಗೂ ಜಂಟಿ ಖಾತೆ ಮಾಡುವರೇ?'

ಕೇಂದ್ರದ ಅನುದಾನಕ್ಕಾಗಿ ರಾಜ್ಯ ಸರ್ಕಾರ ಜಂಟಿ ಖಾತೆ ಆರಂಭಿಸಬೇಕು ಎಂಬ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಕೇಂದ್ರ ಸರ್ಕಾರಕ್ಕೆ ರಾಜ್ಯದಿಂದ ಹೋಗುವ ತೆರಿಗೆಗೂ ಜಂಟಿ ಖಾತೆ ಮಾಡುವರೇ' ಎಂದು ವ್ಯಂಗ್ಯವಾಡಿದರು.

'ಜಯಪ್ರಕಾಶ್ ಹೆಗ್ಡೆ ಅವರು ಜಾತಿ ಗಣತಿ ವರದಿ ನೀಡಿದರೆ ಸ್ವೀಕರಿಸುತ್ತೇವೆ. ಕಾಂತರಾಜು ಅವರು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾಗಿದ್ದಾಗ ಪುಟ್ಟರಂಗಶೆಟ್ಟಿ ಅವರಿಗೆ ವರದಿ ಸಲ್ಲಿಸಲು ಬಂದಿದ್ದಾಗ, ಆಗಿನ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಸ್ವೀಕರಿಸದಂತೆ ತಡೆದಿದ್ದರು' ಎಂದು ಆರೋಪಿಸಿದರು.

'ಅಂದು ಮೊಟ್ಟೆ ಎಸೆತ, ಇಂದು ಹೂಮಳೆ'

ಕೊಡಗು ಜಿಲ್ಲೆಗೆ ಗುರುವಾರ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಕಾರ್ಯಕರ್ತರು ಹೂಮಳೆಗರೆದರು

ಮಡಿಕೇರಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿರಾಜಪೇಟೆಯ ಪಂಜರಪೇಟೆಗೆ ಭೇಟಿ ನೀಡುತ್ತಿದ್ದಂತೆಯೇ ಅವರ ಮೇಲೆ ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ಹೂಮಳೆಗರೆದರು.

ನೂರಾರು ಸಂಖ್ಯೆಯಲ್ಲಿ ಸೇರಿದ್ದ ಕಾರ್ಯಕರ್ತರು ಜೆಸಿಬಿ ವಾಹನದ ಮೇಲೆ ನಿಂತು ಹೂವಿನ ದಳಗಳನ್ನು ಹಾಕಿ ಸ್ವಾಗತಿಸಿದರು.

ಈ ಬಗ್ಗೆ 'ಎಕ್ಸ್' ಮಾಡಿರುವ ಸಿದ್ದರಾಮಯ್ಯ 'ವಿಧಾನಸಭೆಯ ವಿರೋಧ ಪಕ್ಷದ ನಾಯಕನಾಗಿ ಕೊಡಗಿಗೆ ಬಂದಿದ್ದಾಗ ಕೆಲವು ಕಿಡಿಗೇಡಿಗಳು ನನ್ನ ಮೇಲೆ ಮೊಟ್ಟೆ ಎಸೆದಿದ್ದರು. ಮುಖ್ಯಮಂತ್ರಿಯಾಗಿ ಇಂದು ಬಂದಾಗ ಕೊಡಗಿನ ಸಮಸ್ತ ಸಜ್ಜನ ಜನಸಮೂಹ ಪ್ರೀತಿಯ ಹೂಮಳೆಯಲ್ಲಿ ನನ್ನನ್ನು ಮುಳುಗಿಸಿದೆ. ಇದು ಕೊಡಗಿನ ಸಜ್ಜನರ ಗೆಲುವು, ಇದೇ ಪ್ರಜಾಪ್ರಭುತ್ವದ ಸೌಂದರ್ಯ' ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಸಿ.ಎಂಗೆ ಸಾರಥಿಯಾದ ಪೊನ್ನಣ್ಣ: ವಿರಾಜಪೇಟೆ ತಾಲ್ಲೂಕಿನ ಅಂಬಟ್ಟಿಯ ಕೂರ್ಗ್ ಗಾಲ್ಫ್ ಲಿಂಕ್ಸ್ ಹೆಲಿಪ್ಯಾಡ್‌ಗೆ ಗುರುವಾರ ಬಂದಿಳಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅವರ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರು ಸಾರಥಿಯಾಗಿ, ಮಧ್ಯಾಹ್ನದ ಊಟವನ್ನು ತಾವೇ ಬಡಿಸಿ ಗಮನಸೆಳೆದರು.

ಶುಕ್ರವಾರ, ಜನವರಿ 26, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 26 | ಪುಟ 26
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗಣರಾಜ್ಯೋತ್ಸವದ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
70,700	21,352	₹64,320 (ಬೆಂಗಳೂರು)	₹73,100 (ಬೆಂಗಳೂರು)	83.11

ಸಿನಿಮಾ ಪುರವಣಿ
'ಬ್ಯಾಚುಲರ್' ಹುಡುಗರ ಜೊತೆ ಪಾರ್ಟಿ ಮಾಡಲು ಹೊರಟ ನಟ ಯೋಗಿ


ಮೋದಿ ಸರ್ಕಾರದ ಗ್ಯಾರಂಟಿ
ಉಜ್ವಲ ಯೋಜನೆ ಮೂಲಕ ಮಹಿಳೆಯರಿಗೆ ಹೊಗೆ ರಹಿತ ಅಡುಗೆಮನೆ ಖಾತ್ರಿ
ರಾಷ್ಟ್ರವ್ಯಾಪಿ 10 ಕೋಟಿಗೂ ಉಚಿತ ಅಡುಗೆ ಅನಿಲ ಸಂಪರ್ಕ
ಹೆಚ್ಚಿನ ಮಾಹಿತಿಗೆ ಸ್ಕ್ಯಾನ್ ಮಾಡಿ
ನಮ್ಮ ಸಂಕಲ್ಪ ವಿಕಸಿತ ಭಾರತ
CBC 22201/13/0222/2324

ಉದ್ಯಮಿ ಸೀತಾರಾಂ ಜಿಂದಾಲ್, ವೈದ್ಯೆ ಪ್ರೇಮಾ, ಟೆನಿಸ್ ಆಟಗಾರ ರೋಹನ್ ಬೋಪಣ್ಣಗೆ ಗೌರವ

ರಾಜ್ಯದ 9 ಮಂದಿಗೆ ಪದ್ಮ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ಈ ಸಾಲಿನ ಅತ್ಯುನ್ನತ ನಾಗರಿಕ ಸೇವಾ ಪ್ರಶಸ್ತಿಗಳಾದ ಪದ್ಮವಿಭೂಷಣ, ಪದ್ಮಭೂಷಣ ಹಾಗೂ ಪದ್ಮಶ್ರೀ ಪುರಸ್ಕೃತರ ಹೆಸರುಗಳನ್ನು ಗುರುವಾರ ರಾತ್ರಿ ಪ್ರಕಟಿಸಿದೆ. ಉದ್ಯಮಿ ಸೀತಾರಾಮ್ ಜಿಂದಾಲ್ ಸೇರಿದಂತೆ ಕರ್ನಾಟಕದ ಒಂಬತ್ತು ಸಾಧಕರು ಪದ್ಮ ಪ್ರಶಸ್ತಿಗಳಿಗೆ ಆಯ್ಕೆಯಾಗಿದ್ದಾರೆ.

ಅನನ್ಯ ಸಾಧನೆ ಮಾಡಿದ ಐವರಿಗೆ ಪದ್ಮವಿಭೂಷಣ, 17 ಮಂದಿಗೆ ಪದ್ಮಭೂಷಣ ಮತ್ತು 110 ಮಂದಿಗೆ ಪದ್ಮಶ್ರೀ ಪ್ರಶಸ್ತಿ ಘೋಷಿಸಲಾಗಿದೆ. ಮಾರ್ಚ್ ಅಥವಾ ಏಪ್ರಿಲ್ ತಿಂಗಳಿನಲ್ಲಿ ರಾಷ್ಟ್ರಪತಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಟೆನಿಸ್ ಆಟಗಾರ ರೋಹನ್ ಬೋಪಣ್ಣ ಸೇರಿದಂತೆ ರಾಜ್ಯದ ಎಂಟು ಮಂದಿ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪ್ರೇಮಾ ಧನರಾಜ್

ಸತ್ಯನಾರಾಯಣ ಬೆಳೇರಿ

ರೋಹನ್ ಬೋಪಣ್ಣ

ಅನುಪಮಾ ಹೊಸಕೆರೆ

200 ದೇಸಿ ಭತ್ತದ ತಳಿಗಳನ್ನು ಬೆಳೆಸಿ ಅವುಗಳ ಬೀಜಗಳನ್ನು ಸಂರಕ್ಷಿಸಿದ ಕಾಸರಗೋಡಿನ ಕೃಷಿಕ ಬೆಳೇರಿ ಸತ್ಯನಾರಾಯಣ ಅವರೂ ಪದ್ಮಶ್ರೀ ಗೌರವಕ್ಕೆ ಪಾತ್ರರಾಗಿದ್ದಾರೆ.

ವೈದ್ಯಕೀಯ ಕ್ಷೇತ್ರದಲ್ಲಿನ ಸಾಧನೆಗಾಗಿ ಬೆಂಗಳೂರಿನ ಪ್ರೇಮಾ ಧನರಾಜ್ ಅವರು ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಅತ್ಯುನ್ನತ ನಾಗರಿಕ ಸೇವಾ ಪ್ರಶಸ್ತಿ ಪುರಸ್ಕೃತರಲ್ಲಿ ಮಾಜಿ ಉಪ ರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು, ನಟ ಚಿರಂಜೀವಿ, ವಿಜಯಕಾಂತ್ ಮತ್ತಿತರರು ಸೇರಿದ್ದಾರೆ.

ಪ್ರಶಸ್ತಿ ಪುರಸ್ಕೃತರಲ್ಲಿ ಹಲವಾರು ಬುಡಕಟ್ಟು ಜನಾಂಗದವರು, ಸಾಂಪ್ರದಾಯಿಕ ಔಷಧಿ ನೀಡುವವರು, ಕಲಾ ಸಾಧಕರು ಸೇರಿದ್ದಾರೆ. ಪ್ರಶಸ್ತಿ ಪುರಸ್ಕೃತರಲ್ಲಿ ಮೂವತ್ತು ಮಹಿಳೆಯರು ಮತ್ತು ಎಂಟು ಮಂದಿ ವಿದೇಶಿಗರು, ಅನಿವಾಸಿ ಭಾರತೀಯರು ಸೇರಿದ್ದಾರೆ. ಬಿಂದೇಶ್ವರ ಪಾಠಕ್ ಸೇರಿದಂತೆ ಒಂಬತ್ತು ಮಂದಿಗೆ ಮರಣೋತ್ತರವಾಗಿ ಪ್ರಶಸ್ತಿ ನೀಡಲಾಗಿದೆ.

ಇನ್ನಷ್ಟು ಸುದ್ದಿಗಳು 4B

ಕರ್ನಾಟಕದ ಸಾಧಕರು

ಪದ್ಮಭೂಷಣ: ಸೀತಾರಾಮ್ ಜಿಂದಾಲ್ (ವ್ಯಾಪಾರ ಮತ್ತು ಕೈಗಾರಿಕೆ ವಿಭಾಗ)

ಪದ್ಮಶ್ರೀ: • ರೋಹನ್ ಬೋಪಣ್ಣ (ಕ್ರೀಡೆ) • ಅನುಪಮಾ ಹೊಸಕೆರೆ (ಕಲೆ) • ಶ್ರೀಧರ್ ಮಾಕಂ ಕೃಷ್ಣಮೂರ್ತಿ (ಸಾಹಿತ್ಯ ಮತ್ತು ಶಿಕ್ಷಣ) • ಪ್ರೇಮಾ ಧನರಾಜ್ (ವೈದ್ಯಕೀಯ) • ಕೆ.ಎಸ್. ರಾಜಣ್ಣ (ಸಮಾಜ ಸೇವೆ) • ಚಂದ್ರಶೇಖರ್ ಚನ್ನಪಟ್ಟಣ ರಾಜಣ್ಣಾಚಾರ್ (ವೈದ್ಯಕೀಯ) • ಸೋಮಣ್ಣ (ಸಮಾಜಸೇವೆ) • ಶಶಿ ಸೋನಿ (ವ್ಯಾಪಾರ ಮತ್ತು ಕೈಗಾರಿಕೆ)

ಸೋಮಣ್ಣಗೆ ಒಲಿದ ಗೌರವ

ಮೈಸೂರು: ಬುಡಕಟ್ಟು ಜನರ ಶ್ರೇಯೋಭಿವೃದ್ಧಿಗೆ ನಾಲ್ಕು ದಶಕಗಳಿಂದ ಅವಿರತವಾಗಿ ಶ್ರಮಿಸುತ್ತಿರುವ ಜಿಲ್ಲೆಯ ಎಚ್.ಡಿ. ಕೋಟೆ ತಾಲ್ಲೂಕಿನ ಮೊತ್ತ ಹಾಡಿಯ ಸೋಮಣ್ಣ ಅವರಿಗೆ 'ಪದ್ಮಶ್ರೀ' ಗೌರವ ದೊರೆತಿದೆ.

ರಾಜ್ಯ ಸರ್ಕಾರ 2016ನೇ ಸಾಲಿನಲ್ಲಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರಕಟಿಸಿತ್ತು. ಮರು ದಿನ ಅವರ ಹೆಸರನ್ನು ಪಟ್ಟಿಯಿಂದ ತೆಗೆಯಲಾಗಿತ್ತು. ಇದನ್ನು ಖಂಡಿಸಿ ನಾಡಿನ ಪ್ರಗತಿಪರರು–ಚಿಂತಕರು ಸೇರಿಕೊಂಡು ಸಾಹಿತಿ ದೇವನೂರ ಮಹಾದೇವ ಅವರ ಸಮ್ಮುಖದಲ್ಲಿ ಅವರಿಗೆ ₹1 ಲಕ್ಷ ನಗದು ಒಳಗೊಂಡ 'ಜನ ರಾಜ್ಯೋತ್ಸವ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಗಿತ್ತು.

4B ಪುಟ ನೋಡಿ

ರಥೋತ್ಸವ ಬಾಗಲಕೋಟೆ ಜಿಲ್ಲೆಯ ಬಾದಾಮಿ ಸಮೀಪದ ಬನಶಂಕರಿಯಲ್ಲಿ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಬನಶಂಕರಿದೇವಿ ರಥೋತ್ಸವ ಗುರುವಾರ ವಿಜೃಂಭಣೆಯಿಂದ ಜರುಗಿತು

ಬಿಜೆಪಿಗೆ ಮರಳಿದ ಶೆಟ್ಟರ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ನಿರಾಕರಿಸಿದ ಕಾರಣಕ್ಕೆ ಮುನಿಸಿಕೊಂಡು ಬಿಜೆಪಿ ತೊರೆದಿದ್ದ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರು ಒಂಬತ್ತು ತಿಂಗಳಲ್ಲೇ ಬಿಜೆಪಿಗೆ ಮರಳಿದ್ದಾರೆ.

ಬಿಜೆಪಿ ಕೇಂದ್ರ ಕಚೇರಿಯಲ್ಲಿ ಗುರುವಾರ ಮಧ್ಯಾಹ್ನ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್

ಸಮ್ಮುಖದಲ್ಲಿ ಶೆಟ್ಟರ್ ಅವರು ಪಕ್ಷಕ್ಕೆ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ, ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ಕರ್ನಾಟಕ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಜರಿದ್ದರು.

ಶೆಟ್ಟರ್ ಅವರಿಗೆ ವಿಧಾನಸಭಾ ಚುನಾವಣೆಯಲ್ಲಿ ವಯಸ್ಸಿನ ಕಾರಣಕ್ಕೆ

> **ಹಿರಿಯರ ಆಸೆ ಮೇರೆಗೆ ಯಾವುದೇ ಅಪೇಕ್ಷೆ ಇಲ್ಲದೆ ಅವರು ಮನೆಗೆ ಮರಳಿದ್ದಾರೆ. ಇದರಿಂದ ಪಕ್ಷಕ್ಕೆ ದೊಡ್ಡ ಬಲ ಬಂದಂತಾಗಿದೆ**
> **ಬಿ.ವೈ.ವಿಜಯೇಂದ್ರ**
> ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಬಿಜೆಪಿ ಟಿಕೆಟ್ ನಿರಾಕರಿಸಿತ್ತು. ಟಿಕೆಟ್ ನೀಡಲೇಬೇಕು ಎಂದು ಶೆಟ್ಟರ್ ಪಟ್ಟು ಹಿಡಿದಿದ್ದರು.

5ನೇ ಪುಟ ನೋಡಿ

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ
ಚಿನ್ನದ ದರ: ₹5700/gm
ಬೆಳ್ಳಿ ದರ: ₹70/gm
ವೇಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಸಾಮಗ್ರಿಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
ನಿಯಮಗಳು ಮತ್ತು ಷರತ್ತುಗಳು ಅನ್ವಯ
Ph- 080-29909733/ 9513394070

ಮೋದಿ– ಮ್ಯಾಕ್ರನ್ ರೋಡ್ ಶೋ 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಎನ್‌ಡಿಎಯತ್ತ ಜೆಡಿಯು: ಊಹಾಪೋಹಗಳಿಗೆ ಪುಷ್ಟಿ

ಮತ್ತೆ ಬಿಜೆಪಿ ತೆಕ್ಕೆಗೆ ನಿತೀಶ್?

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ಪಟ್ನಾ: ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಜೆಡಿಯು, ಬಿಜೆಪಿ ಜೊತೆ ಸೇರಿ ಬಿಹಾರದಲ್ಲಿ ಮತ್ತೆ ಸರ್ಕಾರ ರಚಿಸಲಿದೆ ಎಂಬ ವದಂತಿ ದಟ್ಟವಾಗಿದೆ. ರಾಜ್ಯದಲ್ಲಿ ನಡೆದ ಕೆಲ ಕ್ಷಿಪ್ರ ಬೆಳವಣಿಗೆಗಳು ಇಂತಹ ಊಹಾಪೋಹಗಳಿಗೆ ಪುಷ್ಟಿ ನೀಡುವಂತಿವೆ.

ನಿತೀಶ್ ಕುಮಾರ್ ಅವರು ರಾಜ್ಯಪಾಲರನ್ನು ಭೇಟಿ ಮಾಡಿ, ಚರ್ಚೆ ನಡೆಸಿದ್ದಲ್ಲದೇ, ಆರ್‌ಜೆಡಿಯ ಮೂವರು ಸಚಿವರ ಖಾತೆಗಳನ್ನು ಬದಲಿಸಿದ್ದಾರೆ. ಇನ್ನೊಂದೆಡೆ, ಆರ್‌ಜೆಡಿ ವರಿಷ್ಠ ಲಾಲು ಪ್ರಸಾದ್ ಹಾಗೂ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರು ಮುಖ್ಯಮಂತ್ರಿ ನಿತೀಶ್ ಕುಮಾರ್ ಜೊತೆ ತುರ್ತು ಸಭೆಗಳನ್ನು ನಡೆಸಿದ್ದಾರೆ. ಈ ಬೆಳವಣಿಗೆಗಳು, ರಾಜ್ಯದಲ್ಲಿ 'ಮಹಾಘಟಬಂಧನ'ದ ಜೊತೆಗಿನ ಮೈತ್ರಿಯನ್ನು ಕಡಿದುಕೊಳ್ಳಲು ಜೆಡಿಯು ಮುಂದಾಗಿರುವುದರ ಸೂಚನೆ ಎಂದೇ ವಿಶ್ಲೇಷಿಸಲಾಗುತ್ತಿದೆ.

11ನೇ ಪುಟ ನೋಡಿ

ಲಾಲು ಪುತ್ರಿಯ ಹೇಳಿಕೆ ವಿವಾದ

ಪಟ್ನಾ (ಪಿಟಿಐ): 'ಆರ್‌ಜೆಡಿ ವರಿಷ್ಠ ಲಾಲು ಪ್ರಸಾದ್ ಪುತ್ರಿ ರೋಹಿಣಿ ಆಚಾರ್ಯ ಅವರು ಸಾಮಾಜಿಕ ಮಾಧ್ಯಮಗಳಲ್ಲಿ ಮಾಡಿದ್ದ ವಿವಾದಾತ್ಮಕ ಪೋಸ್ಟ್ ಪ್ರಧಾನಿ ನರೇಂದ್ರ ಮೋದಿ ಕುರಿತಾಗಿತ್ತೇ ಹೊರತು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಉದ್ದೇಶಿಸಿರಲಿಲ್ಲ' ಎಂದು ಪಕ್ಷದ ವಕ್ತಾರ ಶಕ್ತಿ ಯಾದವ್ ಗುರುವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬೇರೆಯೇ ಸಂದರ್ಭಕ್ಕಾಗಿ ಮಾಡಲಾಗಿದ್ದ ಪೋಸ್ಟ್ ಅನ್ನು ಕೆಲ ಪಟ್ಟಭದ್ರ ಹಿತಾಸಕ್ತಿಗಳು ಸದ್ಯದ ರಾಜಕೀಯ ಬೆಳವಣಿಗೆಗೆ ಬಳಸಿಕೊಂಡಿದ್ದಾರೆ' ಎಂದರು.

'ಸೈದ್ಧಾಂತಿಕವಾಗಿ ಗೊತ್ತುಗುರಿ ಇಲ್ಲದಿರುವವರು ಸಮಾಜವಾದಿ ನಾಯಕ ಎಂದು ಹೇಳಿಕೊಳ್ಳುತ್ತಾರೆ' ಎಂಬುದಾಗಿ ಹಿಂದಿಯಲ್ಲಿ ರೋಹಿಣಿ ಆಚಾರ್ಯ ಪೋಸ್ಟ್ ಮಾಡಿದ್ದರು. ಈ ವಿಷಯ ವಿವಾದದ ಸ್ವರೂಪ ಪಡೆಯುತ್ತಿದ್ದಂತೆಯೇ ಅದನ್ನು 'ಎಕ್ಸ್'ನಿಂದ ತೆಗೆದು ಹಾಕಿದ್ದರು.

ಕುಟುಂಬ ರಾಜಕಾರಣ ಟೀಕಿಸಿ ಮಾತನಾಡಿದ್ದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಗುರಿಯಾಗಿಸಿ ರೋಹಿಣಿ ಅವರು ಈ ಪೋಸ್ಟ್ ಮಾಡಿದ್ದರು ಎನ್ನಲಾಗುತ್ತಿದೆ.

ಆಗ್ರಹ: ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಅವಮಾನಿಸಿದ್ದಕ್ಕಾಗಿ ರೋಹಿಣಿ ಆಚಾರ್ಯ ಕ್ಷಮೆ ಕೇಳಬೇಕು ಎಂದು ಬಿಹಾರದ ಬಿಜೆಪಿ ನಾಯಕ ನಿಖಿಲ್ ಆನಂದ್ ಆಗ್ರಹಿಸಿದ್ದಾರೆ.

> **'ಇಂಡಿಯಾ' ಮೈತ್ರಿಕೂಟದಲ್ಲಿ ಎಲ್ಲವೂ ಸರಿ ಇದೆ. ಏನಾದರೂ ಸಮಸ್ಯೆ ಇದ್ದಲ್ಲಿ ಅದು ಪಂಜಾಬ್ ಮತ್ತು ಪಶ್ಚಿಮ ಬಂಗಾಳದಲ್ಲಿ ಮಾತ್ರ**
> **ಕೆ.ಸಿ.ತ್ಯಾಗಿ, ಜೆಡಿಯು ವಕ್ತಾರ**

ಒಳ ಪುಟ

'ಇಂಡಿಯಾ'ದಿಂದ ಒಗ್ಗಟ್ಟಿನ ಹೋರಾಟ 10

ಉನ್ನತ ಜನರು, ಉನ್ನತ ಅಭಿರುಚಿ®

ಗಣರಾಜ್ಯೋತ್ಸವದ ಶುಭಾಶಯಗಳು
ಶಾಸನೀಯ ಎಚ್ಚರಿಕೆ : ಪಾನ್ ಮಸಾಲಾ ಸೇವನೆ ಆರೋಗ್ಯಕ್ಕೆ ಹಾನಿಕರ. ಅಪ್ರಾಪ್ತ ವಯಸ್ಕರಿಗೆ ಪ್ರತಿಬಂಧಿತ
NO TOBACCO, NO NICOTINE
Tiger/KAN

LIC
ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಕ್ಷಣ ಕ್ಷಣವೂ ನಿಮ್ಮೊಂದಿಗೆ
ನಮ್ಮ ವೈಭವಯುತ REPUBLIC ನ ಭಾಗವಾಗಿರುವುದಕ್ಕೆ ಹೆಮ್ಮೆ ಪಡುತ್ತೇವೆ
ಪ್ರತಿಯೊಬ್ಬ ಭಾರತೀಯನಿಗೂ 75ನೇ ಗಣರಾಜ್ಯೋತ್ಸವದ ಶುಭಾಶಯಗಳು
ನಮ್ಮ ಉತ್ಪನ್ನಗಳ ಶ್ರೇಣಿಯಲ್ಲಿ ಸೇರಿವೆ:
• ಉಳಿತಾಯ ಯೋಜನೆಗಳು • ಟರ್ಮ್ ಇನ್ಶೂರನ್ಸ್ • ಮನೀ ಬ್ಯಾಕ್ • ಆಜೀವ ಯೋಜನೆಗಳು • ಆರೋಗ್ಯ ವಿಮೆ • ಪಿಂಚಣಿ ಯೋಜನೆಗಳು • ಯೂಲಿಪ್‌ಗಳು
LIC HFL LIC HOUSING FINANCE LTD | LIC MUTUAL FUND | LIC Pension Fund Ltd. | LIC CARDS SERVICE LIMITED
ಡೌನ್ ಲೋಡ್ ಮಾಡಿ ಎಲ್ಐಸಿ ಮೊಬೈಲ್ ಆಪ್ LIC digital | ಸಂದರ್ಶಿಸಿರಿ: licindia.in | ಕಾಲ್ ಸೆಂಟರ್ ಸರ್ವಿಸ್ (022) 6827 6827
ವಿವರಗಳಿಗಾಗಿ ನಿಮ್ಮ ಏಜೆಂಟರನ್ನು/ಸನಿಹದ ಎಲ್ಐಸಿ ಶಾಖೆಯನ್ನು ಸಂಪರ್ಕಿಸಿ ಅಥವಾ ನಿಮ್ಮ ನಗರದ ಹೆಸರನ್ನು SMS ಮಾಡಿ 56767474ಗೆ
ನಮ್ಮೊಂದಿಗೆ ಸೇರಿಕೊಳ್ಳಿ: LIC India Forever | IRDAI Regn No.: 512
ನಮ್ಮ ವಾಟ್ಸಾಪ್ ನಂ. 8976862090 ಹೇಳಿರಿ 'Hi'
ಮೋಸದ ದೂರವಾಣಿ ಕರೆಗಳು ಮತ್ತು ಕಾಲ್ಪನಿಕ/ಕೃತ್ರಿಮ ಆಫರ್‌ಗಳಿಂದ ಜಾಗರೂಕರಾಗಿರಿ! ಐಆರ್‌ಡಿಎಐ ಯಾವತ್ತೂ ವಿಮಾ ಪಾಲಿಸಿಗಳ ಮಾರಾಟ, ಬೋನಸ್‌ಗಳ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆ ಮುಂತಾದ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ. ಈ ಬಗೆಯ ಫೋನ್ ಕರೆಗಳನ್ನು ಪಡೆಯುವ ಸಾರ್ವಜನಿಕರು ಪೋಲೀಸರಲ್ಲಿ ದೂರು ಸಲ್ಲಿಸಬೇಕೆಂದು ಕೋರಿಕೊಳ್ಳುತ್ತೇವೆ. ಅಪಾಯ ಅಂಶಗಳು, ಷರತ್ತು ಮತ್ತು ನಿಬಂಧನೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ, ಮಾರಾಟವನ್ನು ಮುಕ್ತಾಯಗೊಳಿಸುವ ಮುನ್ನ ದಯವಿಟ್ಟು ಮಾರಾಟ ಪುಸ್ತಿಕೆಯನ್ನು ಜಾಗರೂಕತೆಯಿಂದ ಓದಿಕೊಳ್ಳಿರಿ.
LIC/M1/2023-24/18/Kan

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ)ರವರ ಕಛೇರಿ, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು-560002

ಸಂಖ್ಯೆ: ಮು.ಆ.ಅ(ಸಾ.ಆ)/ಪಿಆರ್/ಪಿ-253/2023-24 ದಿನಾಂಕ: 25.01.2024

ಸಾರ್ವಜನಿಕ ಪ್ರಕಟಣೆ

2024-25ನೇ ಸಾಲಿನ ಉದ್ದಿಮೆ ಪರವಾನಿಗೆಯ ನವೀಕರಣ ಕುರಿತು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ 2024-25ನೇ ಸಾಲಿನ ಉದ್ದಿಮೆ ಪರವಾನಿಗೆ ನವೀಕರಣ ಕಾರ್ಯವನ್ನು ಈ ಕೆಳಕಂಡಂತೆ ಹಮ್ಮಿಕೊಳ್ಳಲಾಗಿದೆ.

1. ಉದ್ದಿಮೆದಾರರ ಅನುಕೂಲಕ್ಕೆ ತಕ್ಕಂತೆ 1 ರಿಂದ 5 ಆರ್ಥಿಕ ವರ್ಷಗಳ ಅವಧಿಗೆ (ಏಪ್ರಿಲ್‌ನಿಂದ ಮಾರ್ಚ್) ನವೀಕರಣ ಮಾಡಲು ಅವಕಾಶಕಲ್ಪಿಸಿದೆ.
2. ನವೀಕರಣ ಶುಲ್ಕವನ್ನು ಉದ್ದಿಮೆದಾರರು ಕೋರುವ ಆರ್ಥಿಕ ವರ್ಷಕ್ಕೆ ಮಿತಿಗೊಳಿಸಿ ಪಾವತಿಸಿಕೊಳ್ಳುವುದು.
3. ಕಳೆದ ಸಾಲಿನಂತೆ ಉದ್ದಿಮೆ ಪರವಾನಿಗೆ ಶುಲ್ಕವನ್ನು ಆನ್‌ಲೈನ್ ಮುಖಾಂತರ ಹಾಗೂ ಬ್ಯಾಂಕ್ ಚಲನ್ ಮೂಲಕ ಕೆನರಾ ಬ್ಯಾಂಕಿನಲ್ಲಿ ಪಾವತಿಸುವುದು.
4. ದಿನಾಂಕ: 01.02.2024 ರಿಂದ 29.02.2024ರ ವರೆಗೆ ದಂಡವಿಲ್ಲದೇ ಪರವಾನಿಗೆ ಶುಲ್ಕವನ್ನು ಪಾವತಿಸಿಕೊಳ್ಳಲಾಗುತ್ತದೆ.
5. ದಿನಾಂಕ: 01.03.2024 ರಿಂದ 31.03.2024ರ ವರೆಗೆ ಪರವಾನಿಗೆ ನವೀಕರಣ ಶುಲ್ಕದ ಶೇಕಡಾ 25% ರಷ್ಟು ದಂಡ ಮೊತ್ತದೊಂದಿಗೆ ಪರವಾನಿಗೆ ಶುಲ್ಕವನ್ನು ಪಾವತಿಸಿಕೊಳ್ಳಲಾಗುತ್ತದೆ.
6. ದಿನಾಂಕ: 01.04.2024 ರಿಂದ ಪರವಾನಿಗೆ ಶುಲ್ಕದ ಶೇಕಡಾ 100% ರಷ್ಟು ದಂಡ ಮೊತ್ತದೊಂದಿಗೆ ಪರವಾನಿಗೆ ಶುಲ್ಕವನ್ನು ಪಾವತಿಸಿಕೊಳ್ಳಲಾಗುತ್ತದೆ.
7. ಪರವಾನಿಗೆ ನವೀಕರಣ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್ ಮುಖಾಂತರವೇ ಮಾಡಲು ಅವಕಾಶ ಕಲ್ಪಿಸಿದೆ.

ಹೆಚ್ಚಿನ ಮಾಹಿತಿಗಾಗಿ ಪಾಲಿಕೆ ವೆಬ್‌ಸೈಟ್ **www.bbmp.gov.in** ನಲ್ಲಿ ವಿವರ ಪಡೆಯಬಹುದಾಗಿದೆ.

ಸಹಿ/-
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನದ ಸಹಯೋಗದಲ್ಲಿ ಆಯೋಜಿಸಿರುವ 'ಫ್ಯೂಷನ್ ಸಂಗೀತ ಮತ್ತು ನೃತ್ಯೋತ್ಸವ'ದಲ್ಲಿ ಗುರುವಾರ ಸುನಾದ್ ಆನೂರ್(ತಾಳವಾದ್ಯ), ಕೆ.ಜೆ. ದಿಲೀಪ್ (ಪಿಟೀಲು), ಇಳಾ ಎಸ್ ದಿಲೀಪ್ (ಗಾಯನ, ಪಿಟೀಲು) ಹಾಗೂ ಅಮನ್ ಮಹಾಜನ್(ಪಿಯಾನೊ) ತಂಡದವರು 'ಲಕ್ಷ್ಯ ಕ್ವಾರ್ಟೆಟ್' ಸಂಗೀತ ಕಛೇರಿಯನ್ನು ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಸೀತಾರಾಮ ದೇವಾಲಯ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಮೈಲಪ್ಪನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಸೀತಾರಾಮ ದೇವಾಲಯದ ಉದ್ಘಾಟನೆ ಹಾಗೂ ಲಕ್ಷ್ಮಣ, ಆಂಜನೇಯಸ್ವಾಮಿ ಸಮೇತ ಸೀತಾರಾಮ ಮೂರ್ತಿಗಳ ಪ್ರಾಣಪ್ರತಿಷ್ಠಾಪನೆಯನ್ನು ಗುರುವಾರ ನೆರವೇರಿಸಲಾಯಿತು.

ಬೆಳಿಗ್ಗೆಯಿಂದಲೆ ಸ್ವಾಮಿಗೆ ಅಭಿಷೇಕ ಸೇರಿದಂತೆ ವಿವಿಧ ಪೂಜೆ, ಹೋಮ-ಹವನಗಳನ್ನು ನೆರವೇರಿಸಲಾಯಿತು. ಇದಕ್ಕೂ ಮುನ್ನ ಬ್ರಹ್ಮರಥವನ್ನು ಗ್ರಾಮದ ನೂರಾರು ಮಹಿಳೆಯರು ಪೂರ್ಣಕುಂಭ ಕಳಶದೊಂದಿಗೆ ಸ್ವಾಗತಿಸಿದರು.

ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, 'ಮೈಲಪ್ಪನಹಳ್ಳಿಯ ಕೆರೆಯ ಬಳಿಯ ಪ್ರಶಾಂತ ವಾತಾವರಣದಲ್ಲಿ ದೇವಸ್ಥಾನವನ್ನು ಪೂರ್ಣವಾಗಿ ವಿಶೇಷ ರೀತಿಯ ಕಲ್ಲುಗಳಿಂದ ನಿರ್ಮಿಸಲಾಗಿದೆ. ರಥವನ್ನು ಉಡುಪಿಯಲ್ಲಿ ನಿರ್ಮಿಸಲಾಗಿದೆ' ಎಂದರು.

ಮೈಸೂರು ಪರಕಾಲ ಮಠದ ಅಭಿನವ ವಾಗೀಶ ಬ್ರಹ್ಮತಂತ್ರ ಪರಕಾಲ ಸ್ವಾಮೀಜಿ, ವ್ಯವಸ್ಥಾಪಕ ಟ್ರಸ್ಟಿ ಶ್ರೀನಿವಾಸ ರಾಘವನ್, ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಬ್ಯಾಂಕಿನ ಅಧ್ಯಕ್ಷ ವಾಣಿಶ್ರೀ ವಿಶ್ವನಾಥ್, ಗ್ರಾಮ ಪಂಚಾಯಿತಿ ಸದಸ್ಯರಾದ ಎನ್.ಹರೀಶ್, ಎಸ್.ಜಿ.ಪ್ರಶಾಂತ್ ರೆಡ್ಡಿ, ಶೋಭಾ ಗೋಪಾಲ್, ಮಾಜಿ ಅಧ್ಯಕ್ಷರಾದ ಟಿ.ಮುನಿರೆಡ್ಡಿ, ಚಂದ್ರಣ್ಣ, ಮಾಜಿ ಸದಸ್ಯ ರಾಮಚಂದ್ರಪ್ಪ, ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಸ್.ಎನ್.ರಾಜಣ್ಣ, ಗ್ರಾಮದ ಮುಖಂಡರಾದ ಜಿ.ವಿ. ಪ್ರಸಾದ್, ಗಜೇಂದ್ರ ಉಪಸ್ಥಿತರಿದ್ದರು.

ಯಲಹಂಕ ಕ್ಷೇತ್ರದ ಮೈಲಪ್ಪನಹಳ್ಳಿ ಗ್ರಾಮದಲ್ಲಿ ಗುರುವಾರ ಉದ್ಘಾಟನೆಗೊಂಡ ಲಕ್ಷ್ಮಣ, ಆಂಜನೇಯಸ್ವಾಮಿ ಸಮೇತ ಸೀತಾರಾಮರ ದೇವಸ್ಥಾನ

ವ್ಹೀಲಿ: ಸವಾರ ಬಂಧನ

ಬೆಂಗಳೂರು: ಸದಾಶಿವನಗರ ಸಂಚಾರ ಠಾಣೆ ವ್ಯಾಪ್ತಿಯ ನ್ಯೂಬಿಇಎಲ್ ರಸ್ತೆಯಲ್ಲಿ ದ್ವಿಚಕ್ರವಾಹನವನ್ನು ವ್ಹೀಲಿ ಮಾಡುತ್ತಿದ್ದ ಆರೋಪದಡಿ ರಾಕೇಶ್ ಎಸ್ ಅಲಿಯಾಸ್ ಸೆಲ್ವರಾಜ್ ಎಸ್. (19) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಕುವೆಂಪುನಗರದ ವಿ.ಕೆ. ಗೋಕಾಕ್ ರಸ್ತೆಯ ನಿವಾಸಿ ರಾಕೇಶ್ ಎಸ್., ದ್ವಿಚಕ್ರ ವಾಹನದಲ್ಲಿ ವ್ಹೀಲಿ ಮಾಡುತ್ತಿದ್ದರು. ಹೆಲ್ಮೆಟ್ ಸಹ ಹಾಕಿರಲಿಲ್ಲ. ಈ ದೃಶ್ಯವನ್ನು ಸೆರೆಹಿಡಿದಿದ್ದ ಸ್ಥಳೀಯರೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದರು. ಅದೇ ವಿಡಿಯೊ ಆಧರಿಸಿ ಆರೋಪಿಯನ್ನು ಬೈಕ್ ಸಮೇತ ವಶಕ್ಕೆ ಪಡೆಯಲಾಗಿದೆ. ಸದಾಶಿವನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ಹೇಳಿದರು.

PARAM VISHISHT SEVA MEDAL
1. LT GEN BASANT KUMAR REPSWAL, AVSM, VSM, ARMY SERVICES CORPS
2. LT GEN UPENDRA DWIVEDI, AVSM, INFANTRY
3. LT GEN AJAI KUMAR SINGH, AVSM, YSM, SM, VSM, INFANTRY
4. LT GEN SURINDER SINGH MAHAL, AVSM, VSM, ARMOURED CORPS (RETD)
5. LT GEN MADHAVAN UNNIKRISHNAN NAIR, AVSM, SM, SIGNALS
6. LT GEN MV SUCHINDRA KUMAR, AVSM, YSM**, VSM, INFANTRY
7. LT GEN NS RAJA SUBRAMANI, AVSM, SM, VSM, INFANTRY
8. LT GEN KULBHUSHAN H GAWAS, VSM, SIGNALS
9. LT GEN ARUN ANANTHANARAYAN, YSM, SM, VSM, INFANTRY
10. LT GEN DEVENDRA PRATAP PANDEY, UYSM, AVSM, VSM, INFANTRY
11. LT GEN RAVIN KHOSLA, UYSM, AVSM, SM, VSM, INFANTRY (RETD)
12. LT GEN JOHNSON P MATHEW, UYSM, AVSM, VSM, INFANTRY
13. LT GEN P GOPALAKRISHNA MENON, UYSM, AVSM, INFANTRY
14. LT GEN JAGDISH BALIRAM CHAUDHARI, SM, VSM, MECHANISED INFANTRY
15. LT GEN TARUN KUMAR AICH, AVSM, INFANTRY
16. LT GEN SUBRAMANIAN MOHAN, AVSM, SM, VSM, ARMY AIR DEFENCE
17. LT GEN SAMIR GUPTA, VSM, ARTILLERY
18. LT GEN GURBIRPAL SINGH, AVSM, VSM, INFANTRY
19. LT GEN ASHOK KUMAR JINDAL, AVSM, YSM, ARMY MEDICAL CORPS (RETD)
20. LT GEN AJITH NILAKANTAN, ARMY MEDICAL CORPS
21. MAJ GEN HARIHARAN DHARMARAJAN, AVSM, SM**, VSM, ENGINEERS
22. MAJ GEN RAVI MURUGAN, AVSM, MECHANISED INFANTRY

KIRTI CHAKRA
1. MAJ DIGVIJAY SINGH RAWAT, INFANTRY
2. MAJ DEEPENDRA VIKRAM BASNET, INFANTRY
3. CAPT ANSHUMAN SINGH, ARMY MEDICAL CORPS (POSTHUMOUS)
4. HAV PAWAN KUMAR YADAV, INFANTRY
5. HAV ABDUL MAJID, INFANTRY (POSTHUMOUS)
6. SEP PAWAN KUMAR, INFANTRY, RASHTRIYA RIFLES (POSTHUMOUS)

UTTAM YUDH SEVA MEDAL
1. LT GEN VIRESH PRATAP SINGH KAUSHIK, YSM, SM, INFANTRY
2. LT GEN RASHIM BALI, AVSM, SM, VSM, INFANTRY
3. LT GEN MANISH MOHAN ERRY, AVSM, SM, INFANTRY
4. LT GEN HARJEET SINGH SAHI, AVSM, YSM, SM, INFANTRY

BAR TO ATI VISHISHT SEVA MEDAL
1. LT GEN S HARIMOHAN IYER, AVSM, ARTILLERY
2. MAJ GEN RAJESH KUMAR JHA, AVSM, ENGINEERS (RETD)

ATI VISHISHT SEVA MEDAL
1. LT GEN TUMUL VARMA, SM, VSM, ELECTRONICS AND MECHANICAL ENGINEERS
2. LT GEN ULHAS VEERAPPA TALUR, VSM, ARMY AIR DEFENCE
3. LT GEN AJAY KUMAR SURI, ARMY AVIATION
4. LT GEN JAGMOHAN SINGH SIDANA, ELECTRONICS AND MECHANICAL ENGINEERS
5. LT GEN K VINOD KUMAR, SIGNALS
6. LT GEN MANJIT KUMAR, SIGNALS
7. LT GEN MANJINDER SINGH, YSM, VSM, INFANTRY
8. LT GEN NAVNEET SINGH SARNA, SM, VSM, ARTILLERY
9. LT GEN RAKESH KAPOOR, VSM, ARMOURED CORPS
10. LT GEN SANJAY SETHI, VSM, ARMY ORDNANCE CORPS
11. LT GEN VIPUL SHINGHAL, SM, ARMOURED CORPS
12. LT GEN ARVIND WALIA, ENGINEERS
13. LT GEN SARAT CHANDRA DASH, YSM, VSM**, ARMY MEDICAL CORPS
14. LT GEN NARENDRA KOTWAL, SM, VSM, ARMY MEDICAL CORPS
15. MAJ GEN PATANJALI RAHUL, VSM, ARMY AIR DEFENCE (RETD)
16. MAJ GEN PARAMVIR SINGH SEHRAWAT, SM**, MECHANISED INFANTRY
17. MAJ GEN VAKAMULLA HARIHARAN, SM, INFANTRY
18. MAJ GEN ASHOK KUMAR, ENGINEERS
19. MAJ GEN VINOD T MATHEW, YSM, INFANTRY
20. MAJ GEN SANDEEP SINGH, ARMOURED CORPS
21. MAJ GEN ANOOP SHINGHAL, SM, ARTILLERY
22. MAJ GEN SANJIV SHARMA, SM, SIGNALS
23. MAJ GEN GURPREET SINGH, SM, VSM, ARTILLERY
24. MAJ GEN PANKAJ MALHOTRA, SM, MECHANISED INFANTRY
25. MAJ GEN PRIT PAL SINGH, ARMOURED CORPS
26. MAJ GEN RAJAN SHARAWAT, VSM, INFANTRY
27. MAJ GEN VIKAS LAKHERA, SM, INFANTRY
28. MAJ GEN CHARNJIT SINGH MANN, VSM, ARMOURED CORPS
29. MAJ GEN VIJAY KUMAR PUROHIT, YSM, SM, INFANTRY
30. MAJ GEN YASHPAL SINGH AHLAWAT, YSM, SM, INFANTRY
31. MAJ GEN AJAY KUMAR SINGH, SM, INFANTRY
32. MAJ GEN GIRISH KALIA, VSM, INFANTRY
33. MAJ GEN BHUPESH KUMAR GOYAL, VSM, ARMY MEDICAL CORPS
34. BRIG GAURAV SINGH KARKI, VSM, ENGINEERS
35. BRIG AMRESH GHAI, ARMY MEDICAL CORPS
36. SUB SABLE AVINASH MUKUND, VSM, INFANTRY

SHAURYA CHAKRA
1. MAJ MANEO FRANCIS PF, INFANTRY
2. MAJ AMANDEEP JAKHAR, INFANTRY
3. CAPT MV PRANJAL, SIGNALS, RASHTRIYA RIFLES (POSTHUMOUS)
4. CAPT AKSHAT UPADHYAY, INFANTRY
5. NB SUB BARIA SANJAY KUMAR BHAMAR SINH, INFANTRY
6. HAV SANJAY KUMAR, ASSAM RIFLES
7. RFN ALOK RAO, ASSAM RIFLES (POSTHUMOUS)
8. SHRI PARSHOTAM KUMAR, C/O RASHTRIYA RIFLES

YUDH SEVA MEDAL
1. BRIG TAPAS KUMAR MISRA, VSM, INFANTRY
2. BRIG BANIT SINGH NEGI, INFANTRY
3. BRIG MICHAEL D'SOUZA, INFANTRY, ASSAM RIFLES
4. COL MANISH RAMESH LANJEKAR, INFANTRY
5. COL ARUN TOM SEBASTIAN, SM, INFANTRY, RASHTRIYA RIFLES
6. COL WAKNIS HRISHIKESH AJIT, INFANTRY, RASHTRIYA RIFLES
7. COL JOHN DANIEL, INFANTRY

SENA MEDAL (GALLANTRY)
1. LT COL VARUN CHAUDHARY, ARMY AVIATION
2. LT COL G VIJAYA RAJAN, ARMY AVIATION
3. LT COL ABHISHEK JOSHI, ARMY AVIATION
4. LT COL ANUJ SHARMA, INFANTRY, RASHTRIYA RIFLES
5. MAJ JAIVEER SINGH, ARMY AVIATION
6. MAJ VIVEK KUMAR SINGH, INFANTRY
7. MAJ DEEPAK KUMAR KATARIA, MECHANISED INFANTRY, ASSAM RIFLES
8. MAJ ABHIMANYU SIROHI, ENGINEERS, ARMY AVIATION
9. MAJ DIXANT KUMAR GUPTA, ARTILLERY
10. MAJ TUFAIL AHMED, ARMY AVIATION
11. MAJ SUMUKH M S, INFANTRY
12. MAJ MOHIT SANGWAN, INFANTRY, ASSAM RIFLES
13. MAJ GOVIND SINGH, INFANTRY, RASHTRIYA RIFLES
14. MAJ NAVEEN JANU, INFANTRY
15. MAJ DHANANJAY KUMAR, INFANTRY, RASHTRIYA RIFLES
16. MAJ AVITOSH SINGH TOMAR, INFANTRY
17. MAJ SAURABH THAPA, ARTILLERY, ASSAM RIFLES
18. MAJ ROHIT JOSHI, ENGINEERS, RASHTRIYA RIFLES
19. MAJ MANIK SATI, INFANTRY
20. MAJ ABHIMANYU SHARMA, ARMOURED CORPS, ASSAM RIFLES
21. CAPT JAYDEEP SINGH RAWAT, INFANTRY, RASHTRIYA RIFLES
22. CAPT SOIBA MANINGBA RANGNAMEI, INFANTRY, ASSAM RIFLES
23. CAPT SHUBHAM GUPTA, INFANTRY (POSTHUMOUS)
24. CAPT VIMANYU TYAGI, INFANTRY
25. SUB HARVIR SINGH, INFANTRY, RASHTRIYA RIFLES
26. SUB NARESH KUMAR, INFANTRY, RASHTRIYA RIFLES
27. NB SUB KULDEEP SINGH, MECHANISED INFANTRY, RASHTRIYA RIFLES (POSTHUMOUS)
28. NB SUB SULTAN SINGH, INFANTRY, RASHTRIYA RIFLES
29. NB SUB PAWAN SAWANT, INFANTRY
30. HAV NARENDER KUMAR, INFANTRY
31. HAV NEELAM SINGH, INFANTRY (POSTHUMOUS)
32. HAV JITENDRA PAL SINGH , INFANTRY
33. HAV BALWINDER SINGH, INFANTRY
34. HAV PAWAN KUMAR, INFANTRY
35. HAV PHUP DORJEE BHUTIA, INFANTRY
36. HAV SHABEER AHMED SHEIKH, INFANTRY, RASHTRIYA RIFLES
37. HAV STANZIN TSAPAK, INFANTRY
38. NK PADMA RIGZEN, INFANTRY
39. NK HEM RAJ, ARMOURED CORPS, RASHTRIYA RIFLES
40. NK HARVINDAR SINGH, INFANTRY
41. NK JASAVEER SINGH, INFANTRY
42. NK LALHMANGAIHSANGA CHINZAH, INFANTRY
43. L/NK HARISH CHANDRA NAIN, SIGNALS, RASHTRIYA RIFLES
44. L/NK SANJAY BISHT, INFANTRY (POSTHUMOUS)
45. L/NK KULWANT SINGH, INFANTRY, RASHTRIYA RIFLES (POSTHUMOUS)
46. SEP MOHD MAQBOOL SOFI, TERRITORIAL ARMY
47. SEP ABDUL QUDUS, INFANTRY, RASHTRIYA RIFLES
48. SEP CHETAN KALLAPPA SARAPURE, INFANTRY, RASHTRIYA RIFLES
49. CFN PABBALLA ANIL, ELECTRONICS AND MECHANICAL ENGINEERS, ARMY AVIATION (POSTHUMOUS)
50. GDR GOVIND, INFANTRY, RASHTRIYA RIFLES
51. RFN CHUNI LAL, INFANTRY
52. RFN DHIRENDRA SINGH DHAMI, INFANTRY
53. PTR SACHIN LAUR, INFANTRY (POSTHUMOUS)

BAR TO SENA MEDAL (DISTINGUISHED)
1. MAJ GEN VIKAS ROHELLA, SM, ENGINEERS
2. MAJ GEN SUDHIR KUMAR SHARMA, SM, VSM, ARTILLERY
3. BRIG YASHDEEP SANGWAN, SM, INFANTRY
4. BRIG NAGARAJ MOHAN BENDIGERI, SM, INFANTRY
5. BRIG VEDPAL YADAV, SM, INFANTRY
6. BRIG SAUMYA BANERJEE, SM, INFANTRY
7. BRIG MANISH KUMAR, SM, INFANTRY
8. COL SHUBHANKAR GHOSHAL, SM, INFANTRY

SENA MEDAL (DISTINGUISHED)
1. LT GEN SUMER IVAN D'CUNHA, ARMY AIR DEFENCE
2. LT GEN VATTAPARAMBIL SABID SYED, ARMY MEDICAL CORPS
3. MAJ GEN BIKRAM DEEP SINGH, VSM, ELECTRONIC AND MECHANICAL ENGINEERS
4. MAJ GEN ASHISH SHAH, ARMOURED CORPS
5. MAJ GEN BIMAL MONGA, VSM, ARTILLERY
6. MAJ GEN JAI SINGH BAINSLA, INFANTRY
7. MAJ GEN SHAMSHER SINGH VIRK, INFANTRY
8. MAJ GEN RAJDEEP SINGH RAWAL, ENGINEERS
9. MAJ GEN ARVIND CHAUHAN, YSM, INFANTRY
10. MAJ GEN RK SURESH, SC**, INFANTRY
11. MAJ GEN VISHAL SINGH, VSM, ARMOURED CORPS
12. MAJ GEN KAVITA SAHAI, VSM, ARMY MEDICAL CORPS
13. MAJ GEN DESIRAJU VIVEKANAND, ARMY MEDICAL CORPS
14. BRIG AMAR PAL SINGH CHAHAL, ARTILLERY
15. BRIG MANISH GUPTA, VSM, INFANTRY
16. BRIG AKHILESH KUMAR, INFANTRY
17. BRIG VANGURU RAGHU, VSM, SIGNALS
18. BRIG SANJEEV LUTHRA, ARTILLERY
19. BRIG S GOPIKRISHNAN, ENGINEERS
20. BRIG BALJINDER SINGH MULTANI, ARTILLERY
21. BRIG SUKHVINDER SINGH DHALIWAL, SC, YSM, INFANTRY
22. BRIG KAPIL RANA, INFANTRY
23. BRIG SANJIV MEHROTRA, YSM, VSM, INFANTRY
24. BRIG RAJNEESH MOHAN, INFANTRY
25. BRIG RAMESH KRISHNAN, INFANTRY
26. BRIG SHAILENDRA BISHT, INFANTRY
27. BRIG SYED FAISAL AHMAD, MECHANISED INFANTRY
28. COL DAYANAND SHARMA, INFANTRY
29. COL GAURAV BATRA, INFANTRY
30. COL SATISH PATIL, INFANTRY
31. COL SHIVESH SINGH, INFANTRY
32. COL RAKESH MADHAV BIRAR, INFANTRY
33. COL ROHIT KUMAR SINGH, INFANTRY
34. COL JAYENDRASING KUMARSING PATIL, INFANTRY
35. LT COL YOGENDRA SINGH, SIGNALS
36. LT COL YUVRAJ MALIK, VSM, INFANTRY
37. MAJ ADITYA PRAKASH, INFANTRY
38. MAJ SURAJIT BANERJEE, ARTILLERY

BAR TO VISHISHT SEVA MEDAL
1. MAJ GEN RAJESH KUMAR, SM, VSM, INFANTRY
2. MAJ GEN DINESH SINGH BISHT, SM, VSM, INFANTRY
3. MAJ GEN MOHIT SETH, SM, VSM, INFANTRY
4. MAJ GEN SANDEEP THAREJA, SM, VSM, ARMY MEDICAL CORPS
5. BRIG AMANDEEP MALHI, VSM, INFANTRY

VISHISHT SEVA MEDAL
1. MAJ GEN M GNANA SEKARAN, SM, ARTILLERY
2. MAJ GEN SHARAD KAPUR, YSM, SM, INFANTRY (RETD)
3. MAJ GEN ANOOP SINGH JAKHAR, ARTILLERY
4. MAJ GEN RAJESH ARUN MOGHE, MECHANISED INFANTRY
5. MAJ GEN SANDEEP KUMAR, JUDGE ADVOCATE GENERAL DEPARTMENT
6. MAJ GEN VINAYAK SAINI, SM, ENGINEERS
7. MAJ GEN MANOJ NATARAJAN, SC, INFANTRY
8. MAJ GEN RAVINDRA SINGH, SM**, INFANTRY
9. MAJ GEN VIVEK VENKATRAMAN, ENGINEERS
10. MAJ GEN SUJEET SHIVAJI PATIL, INFANTRY
11. MAJ GEN ASHISH RAMESH SIRSIKAR, ARMY SERVICES CORPS
12. MAJ GEN YOGENDER SINGH PAUL, MECHANISED INFANTRY
13. MAJ GEN S MURUGESAN, INFANTRY
14. MAJ GEN PANKAJ PACHNANDA, ARMY ORDNANCE CORPS
15. MAJ GEN ADITYA VIKRAM SINGH RATHEE, SM, MECHANISED INFANTRY
16. MAJ GEN HARPAL SINGH, ENGINEERS
17. MAJ GEN SACHIN MALIK, YSM, INFANTRY
18. MAJ GEN CBK BANERJEE, ENGINEERS
19. MAJ GEN PRAMOD BATRA, REMOUNT AND V ETERINARY CORPS
20. BRIG LOKINDER CHANDEL, INFANTRY
21. BRIG ATUL BHADAURIA, ARTILLERY
22. BRIG KULESHWAR SINGH DHADWAL, SM, INFANTRY
23. BRIG VIKAS BHARDWAJ, INFANTRY
24. BRIG RAHUL OHRI, SM, ARTILLERY
25. BRIG ADARSHA VERMA, ARTILLERY
26. BRIG JANGSHER BAHADAR SINGH SIDHU, ARMY ORDNANCE CORPS
27. BRIG AJAY KUMAR SHARMA, INFANTRY
28. BRIG SAKET SINGH KUSHWAHA, ENGINEERS
29. BRIG SUDHANSHU SHARMA, SM, INFANTRY
30. BRIG SAURABH BHATNAGAR, ENGINEERS
31. BRIG AMIT DHIR, ARTILLERY
32. BRIG MANOJ RURIA, INFANTRY
33. BRIG NEELESH ANAND PAGULWAR, SC, SM, INFANTRY
34. BRIG ALOK DASH, SM, INFANTRY
35. BRIG ATUL RAJPUT, SM, INFANTRY
36. BRIG AMAN ANAND, INFANTRY
37. BRIG NAVEEN AHLAWAT, ENGINEERS
38. BRIG N KUMARA DHAS, INFANTRY
39. BRIG DINESH SINGH, INFANTRY
40. BRIG PRITHVI RAJ CHAUHAN, INFANTRY
41. BRIG E MAHESH GOWDA, ARMY DENTAL CORPS
42. BRIG MANAS CHATTERJEE, ARMY MEDICAL CORPS
43. BRIG KULDEEP KUMAR ASHTA, ARMY MEDICAL CORPS
44. BRIG PADMANABHAN BHARANI LAKSHMI, MILITARY NURSING SERVICE
45. BRIG ASHWANI SHARMA, GENERAL SERVICE
46. COL VIVEK GOYAL, ENGINEERS
47. COL SACHIN THAKUR, INFANTRY
48. COL SHAILENDER SINGH ARYA, ARTILLERY
49. COL K ARUN, INFANTRY
50. COL HARMANJEET LIDDER, SM, INFANTRY
51. COL SATYAKAM DABAS, INTELLIGENCE CORPS
52. COL JAIDEV SINGH ASWAL, INFANTRY
53. COL PRADEEP SEMWAL, INFANTRY
54. COL SHAILENDER SHARMA, INFANTRY
55. COL TPS HUNDAL, INFANTRY
56. COL SUMIT KAPUR, MECHANISED INFANTRY
57. COL CHIRAG SINGH BARAK, SC, MECHANISED INFANTRY
58. COL ANKUR SHARMA, SM, INFANTRY
59. COL NEERAJ PANDEY, YSM, INFANTRY
60. COL NITIN AGNIHOTRI, INTELLIGENCE CORPS
61. COL RAJENDER SINGH KARAKOTI, INFANTRY
62. COL NAWAZESH N PATEL, SM, INFANTRY
63. COL ABHISHEK SATISH POTDAR, INFANTRY
64. COL APURVA BHATNAGAR, SIGNALS
65. COL SURAJ SINGH CHILWAL, INFANTRY
66. COL SANDEEP SONI, INFANTRY
67. COL SUBHADEEP GHOSH, ARMY MEDICAL CORPS
68. COL PUJA DUDEJA, ARMY MEDICAL CORPS
69. COL HARMEET SINGH ARORA, ARMY MEDICAL CORPS
70. COL KARTHIK VENKATRAMAN, ARMY MEDICAL CORPS
71. COL RAHUL JAIN, ARMY MEDICAL CORPS
72. LT COL RICHA DATT, INTELLIGENCE CORPS
73. LT COL VIKAS AGNIHOTRI, ARMY AIR DEFENCE
74. LT COL SANJEEV MALIK, ARMY MEDICAL CORPS
75. SUB KSHETRA BAHADUR THAPA, INFANTRY
76. SUB SOMAN RANA, INFANTRY
77. NB SUB HARMEET SINGH, INFANTRY
78. HAV VARINDER SINGH, INFANTRY
79. HAV GOBIN TAMANG, INFANTRY
80. SEP SOLAIRAJ D, INFANTRY

MENTION-IN-DESPATCHES

OPERATION RAKSHAK
1. COL GAURAV SHARMA, INFANTRY, RASHTRIYA RIFLES
2. LT COL MANISH KUMAR KADIAN, SM, INFANTRY
3. MAJ MANISH CHHETRI, ARMY AVIATION
4. MAJ ABHINAV CHATURVEDI, INFANTRY
5. MAJ ABHISHEK SAPAHIA, INFANTRY
6. MAJ MAHENDER SINGH, INFANTRY
7. MAJ PIYUSH PARTH DHAKED, ARMY AVIATION
8. MAJ SHANKAR B, ARTILLERY, ARMY AVIATION
9. MAJ PANKAJ KUMAR, ARTILLERY, ARMY AVIATION
10. MAJ SHUBHANKAR DAS SHARMA, ARMY AVIATION
11. MAJ GAURAVA KUMAR, ARTILLERY, RASHTRIYA RIFLES
12. CAPT RAJAT, ARMY AVIATION
13. CAPT AJAY RAWAT, INFANTRY
14. LT MOHIT KUMAR JAKHAR, INFANTRY
15. SUB BALWINDER SINGH, INFANTRY
16. SUB LACHHUMAN RANA, INFANTRY
17. NB SUB S VENKATESAN, ENGINEERS
18. NB SUB L PONGCHAI KONYAK, SM, INFANTRY
19. HAV SUNIL KUMAR, INFANTRY, RASHTRIYA RIFLES
20. HAV MANDEEP SINGH, INFANTRY, RASHTRIYA RIFLES (POSTHUMOUS)
21. HAV RAMAN SINGH RANA ACHHAMI, INFANTRY
22. NK ARVIND KUMAR, INFANTRY (POSTHUMOUS)
23. NK DEEPAK SINGH, INFANTRY
24. NK SONKAMBLE VINOD SURESH, INFANTRY
25. L/NK TELU RAM, MECH INFANTRY, RASHTRIYA RIFLES (POSTHUMOUS)
26. L/NK DEBASHISH BISWAL, ARTILLERY, RASHTRIYA RIFLES (POSTHUMOUS)
27. L/NK RUCHIN SINGH RAWAT, INFANTRY (POSTHUMOUS)
28. SEP DEVENDRA, INFANTRY, RASHTRIYA RIFLES
29. SEP HARKRISHAN SINGH, INFANTRY, RASHTRIYA RIFLES (POSTHUMOUS)
30. SEP SEWAK SINGH, INFANTRY, RASHTRIYA RIFLES (POSTHUMOUS)
31. PTR NAVEEN KUMAR, INFANTRY, RASHTRIYA RIFLES
32. PTR PRAMOD NEGI, INFANTRY (POSTHUMOUS)
33. PTR SIDDHANT CHETTRI, INFANTRY (POSTHUMOUS)
34. PSI SHAJAD ALI, JAMMU & KASHMIR POLICE

OPERATION SNOW LEOPARD

35. COL JINU THANKAPPAN, INFANTRY, RASHTRIYA RIFLES
36. COL AMAN DATTA, MECHANISED INFANTRY
37. COL MONEET SINGH, ARTILLERY
38. COL SAVYASACHI BOSE, ARMOURED CORPS
39. COL HARPANAHALLI RAVI RAMAMURTHY, ARMY MEDICAL CORPS
40. MAJ RAHUL BHARGAVA, ARMY AVIATION
41. MAJ DEEPAK JOSHI, INFANTRY
42. MAJ SUNIL RANA, ARMOURED CORPS
43. CAPT PEMA DORJEE BHUTIA, INFANTRY
44. CAPT AJIT KUMAR SINGH, SIGNALS, RASHTRIYA RIFLES
45. DY COMDT MINGMA KHAMPA, SPECIAL FRONTIER FORCE
46. COY LDR KUNCHOK TENPA, SPECIAL FRONTIER FORCE
47. NB SUB VIJENDER SINGH, INFANTRY
48. NB SUB DEVENDRA SINGH, INFANTRY
49. HAV UPENDRA KUMAR, INFANTRY
50. NK ASLAM KHAN, ARMY SERVICES CORPS (POSTHUMOUS)

OPERATION MEGHDOOT

51. COL VIVEK KUMAR, INFANTRY
52. COL KAMAL SAJGOTRA, INFANTRY
53. MAJ GAGANDEEP RANDHAWA, ARMY AVIATION
54. MAJ VINESH YADAV, ARTILLERY, ARMY AVIATION
55. MAJ PARMINDER SINGH VIRK, ARTILLERY, ARMY AVIATION
56. MAJ NITIN RAWAT, INFANTRY, ARMY AVIATION
57. MAJ RAVIPREET SINGH SANDHU, INFANTRY

OP SAHAYATA

58. LT COL MADHU MANISH, ARTILLERY, ASSAM RIFLES
59. CAPT SAHIL FAGERIA, INFANTRY
60. RFN ALAGARSAMY R, ASSAM RIFLES

OP SIDHRA

61. MAJ MAHAK MEHTA, INFANTRY
62. NB SUB SURINDER SINGH, INFANTRY

CAS EVACUATION

63. LT COL VAIBHAV JINDAL, ARMY AVIATION
64. MAJ S NISHANT REDDY, ARTILLERY, ARMY AVIATION
65. CAPT PARINAV PATHAK, ARMY AVIATION

MISC OPERATION

66. COL UMESH CHANDRA SATI, INFANTRY, ASSAM RIFLES
67. COL OINAM AKASH SINGH, SM, INFANTRY, ASSAM RIFLES
68. HAV AJAY KUMAR, ENGINEERS

Visit us at www.indianarmy.nic.in | www.facebook.com/Indianarmy.adgpi | www.twitter.com/adgpi | adgpi-Indianarmy | @Indianarmy.adgpi

CBC 10127/13/0004/2324

ನಂಬಲಾಗದ
ಆಫರ್‌ಗಳು
@ VISHAL MEGA MART®
26ನೇ ರಿಂದ 28ನೇ ಜನವರಿ
ಫುಡ್ & ಗ್ರೋಸರಿ
₹638 ₹339 ಬಾದಾಮಿ 1kg/ ಗೋಡಂಬಿ 500g
₹97/ℓ ₹98/ℓ ರೈಸ್ ಬ್ರಾನ್ ಆಯಿಲ್ ಸನ್‌ಫ್ಲವರ್ ಆಯಿಲ್
₹479/ℓ ₹505/ℓ ದೇಸೀ ತುಪ್ಪ/ ದೇಸಿ ತುಪ್ಪ
₹375 ಫರ್ಸ್ಟ್ ಕ್ರಾಪ್ ಬಾಸ್ಮತಿ ಅಕ್ಕಿ 5kg ರೋಜಾನಾ MRP ₹675 ಉಳಿಸಿ ₹300
₹345 ದುಬಾರ್ MRP ₹599 ಉಳಿಸಿ ₹254
ಖರೀದಿಸಿ ಯಾವುದೇ 1 ಪಡೆಯಿರಿ 1 ಉಚಿತ
ಬ್ರಿಟಾನಿಯಾ/ ಪಾರ್ಲೆ/ ಸನ್‌ಫೀಸ್ಟ್/ ಫರ್ಸ್ಟ್ ಕ್ರಾಪ್ ಬಿಸ್ಕತ್ತುಗಳು/ ಓರಿಯನ್ ಚಾಕೊಪೈ (ಆಯ್ದ ಶ್ರೇಣಿ) 120g+
₹99 ಬಟರ್ ಕುಕೀಸ್ 1kg
₹100 ಆಫ್ ₹149 BIKANO/ FIRST CROP NAMKEEN 1kg MRP ₹272+
₹171 ಆಫ್ ಟಾಟಾ ಟೀ ಪ್ರೀಮಿಯಂ 1kg MRP ₹510+
7kg ಸಕ್ಕರೆ ಉಚಿತ ಫುಲ್ ಬ್ಲೂಮ್ ಚಹಾ 1kg MRP ₹460+
2 ಖರೀದಿಸಿ 1 ಉಚಿತ ಪಡೆಯಿರಿ ಟಾಪ್ ರಾಮನ್ ಕಪ್ 50g/ ಯಿಪ್ಪೀ ಮಸಾಲ 480g ನೂಡಲ್ಸ್ MRP ₹375+
34% ಆಫ್ ಹಾರ್ಲಿಕ್ಸ್ ಹೆಲ್ತ್ ಡ್ರಿಂಕ್ ಚಾಕೊಲೇಟ್ 750g MRP ₹375+
1 ಖರೀದಿಸಿ 1 ಉಚಿತ ಪಡೆಯಿರಿ ಬೇಸನ್/ ಮೈದಾ/ ಸೂಜಿ/ ನೂಡಲ್/ ಕಾರ್ನ್‌ಫ್ಲೇಕ್/ ಓಟ್/ ಸಾಸ್/ ಜೇನು/ ಜ್ಯೂಸ್/ಪಾಸ್ತಾ/ ವರ್ಮಿಸೆಲ್ಲಿ
40% ಆಫ್ ಹೆಡ್ & ಶೋಲ್ಡರ್ಸ್/ ಪ್ಯಾಂಟೀನ್ ಶಾಂಪೂ 340ml
1 ಖರೀದಿಸಿ 1 ಉಚಿತ ಪಡೆಯಿರಿ ಲಕ್ಸ್ 3 x 150g ಸೋಪ್ MRP ₹198
ಖರೀದಿಸಿ ಯಾವುದೇ 2 ಪಡೆಯಿರಿ 1 ಉಚಿತ ಡವ್/ ಪಿಯರ್ಸ್/ ಫಿಯಾಮಾ/ ಗೋದ್ರೆಜ್ ನಂ 1/ ಸಿಂಥಾಲ್ ಸೋಪ್ MRP ₹175+
34% ಆಫ್ ಟೈಡ್ 4kg+1kg/ ಸರ್ಫ್ 5kg ಡಿಟರ್ಜೆಂಟ್ ಪೌಡರ್ MRP ₹635+ ಏರಿಯಲ್ 2ℓ, 3.2ℓ/ ಟೈಡ್ 2.2ℓ ಡಿಟರ್ಜೆಂಟ್ ಲಿಕ್ವಿಡ್ MRP ₹430+
2 ಖರೀದಿಸಿ 1 ಉಚಿತ ಪಡೆಯಿರಿ ಕೋಲ್ಗೇಟ್ ಡೆಂಟಲ್ ಕ್ರೀಮ್/ ಮ್ಯಾಕ್ಸ್ ಫ್ರೆಶ್ ರೆಡ್ & ಬ್ಲೂ 500g/ 300g MRP ₹176+
₹350 ಆಫ್ ಪ್ಯಾಂಪರ್ಸ್ ಬೇಬಿ ಡೈಪರ್ ಜಂಬೋ ಪ್ಯಾಕ್ MRP ₹899
1 ಖರೀದಿಸಿ 1 ಉಚಿತ ಪಡೆಯಿರಿ ಡಿಟರ್ಜೆಂಟ್ ಪೌಡರ್/ಸ್ಯಾನಿಟರಿ ಪ್ಯಾಡ್‌ಗಳು ಬಾದಾಮಿ ಆಯಿಲ್/ ಕೊಕೊನಟ್ ಆಯಿಲ್/ ಅಮಲಾ ಆಯಿಲ್ ಡೈಪರ್/ ಕ್ಲೀನರ್ಸ್/ಹ್ಯಾಂಡ್‌ವಾಶ್/ ಡಿಶ್‌ವಾಶ್
ಮನೆ ಅಗತ್ಯಗಳು & ಅಪ್ಲಯೆನ್ಸಸ್
ಖರೀದಿಸಿ ಯಾವುದೇ 3 ಪಡೆಯಿರಿ 1 ಉಚಿತ ಡೋರ್ ಮ್ಯಾಟ್ MRP ₹99/₹169/₹199
2 ಖರೀದಿಸಿ 1 ಉಚಿತ ಪಡೆಯಿರಿ 100% ಕಾಟನ್ ಬಾತ್ ಟವಲ್ MRP ₹349/ ₹449
100% ಕಾಟನ್ 2 ಖರೀದಿಸಿ 1 ಉಚಿತ ಪಡೆಯಿರಿ ಕಿಂಗ್ ಸೈಜ್ ಡಬಲ್ ಬೆಡ್ ಶೀಟ್ MRP ₹649/₹749/₹999
ಪ್ರತಿಯೊಂದಕ್ಕೆ ₹459 ರಂತೆ 2 ಖರೀದಿಸಿ ಮೆಮೊರಿ ಫೋಮ್ ದಿಂಬು MRP ₹699 ₹499
ಪ್ರತಿಯೊಂದಕ್ಕೆ ₹79 ರಂತೆ 3 ಖರೀದಿಸಿ ಕಾಫಿ ಮಗ್ 6 ಯುನಿಟ್ ಸೆಟ್ MRP ₹198
ಪ್ರತಿಯೊಂದಕ್ಕೆ ₹179 ರಂತೆ 2 ಖರೀದಿಸಿ ಸ್ಟೀಲ್ ವಾಟರ್ ಬಾಟಲ್ 750ml MRP ₹199
₹399 ಮೆಲಮೈನ್ ಡಿನ್ನರ್ ಸೆಟ್ 28 ಯುನಿಟ್ ಸೆಟ್ MRP ₹999 ಉಳಿಸಿ ₹600
tandem ₹179 ವೆಜಿಟೇಬಲ್ ಚಾಪರ್ MRP ₹599 ಉಳಿಸಿ ₹420
tandem ₹1599 2+1 ವರ್ಷಗಳ ವಾರಂಟಿ ಗಾರ್ಮೆಂಟ್ ಸ್ಟೀಮರ್ MRP ₹3199 ಉಳಿಸಿ ₹1600
₹579 tandem ಪ್ರೆಶರ್ ಕುಕ್ಕರ್ 3ℓ MRP ₹1199 ಉಳಿಸಿ ₹620
₹1499 Prestige ಪ್ರೆಶರ್ ಕುಕ್ಕರ್ 3ℓ ಔಟರ್ ಲಿಡ್ MRP ₹1880 ಉಳಿಸಿ ₹381
₹1099 2+1 ವರ್ಷಗಳ ವಾರಂಟಿ ₹2099 2 ವರ್ಷಗಳ ವಾರಂಟಿ
tandem ಮಿಕ್ಸರ್ ಗ್ರೈಂಡರ್ 2 ಜಾರ್ MRP ₹2499 ಉಳಿಸಿ ₹1400
BAJAJ ಮಿಕ್ಸರ್ ಗ್ರೈಂಡರ್ 3 ಜಾರ್ MRP ₹4150 ಉಳಿಸಿ ₹2051
₹1699 BAJAJ 2 ಬರ್ನರ್ ಗ್ಲಾಸ್ ಸ್ಟೌವ್ ಸ್ಟೇನ್‌ಲೆಸ್ ಸ್ಟೀಲ್ MRP ₹2959+ ಉಳಿಸಿ ₹1260
₹1599 2+1 ವರ್ಷಗಳ ವಾರಂಟಿ tandem 2 ಬರ್ನರ್ ಗ್ಲಾಸ್ ಟಾಪ್ ಗ್ಯಾಸ್ ಸ್ಟೌವ್ MRP ₹3599 ಉಳಿಸಿ ₹2000
tandem ₹2999 2+1 ವರ್ಷಗಳ ವಾರಂಟಿ ಡಿಜಿಟಲ್ ಏರ್ ಫ್ರೈಯರ್ 4.1ℓ MRP ₹7999 ಉಳಿಸಿ ₹5000
₹329 ₹579 2+1 ವರ್ಷಗಳ ವಾರಂಟಿ tandem ಡ್ರೈ ಐರನ್ 1000W MRP ₹599 ಉಳಿಸಿ ₹270
USHA ಡ್ರೈ ಐರನ್ 1000W MRP ₹900+ ಉಳಿಸಿ ₹321
₹499 ₹649 1+1 ವರ್ಷಗಳ ವಾರಂಟಿ tandem ಎಲೆಕ್ಟ್ರಿಕ್ ಕೆಟಲ್ 1.5ℓ MRP ₹1299 ಉಳಿಸಿ ₹800
Prestige ಎಲೆಕ್ಟ್ರಿಕ್ ಕೆಟಲ್ 1.5ℓ MRP ₹1445 ಉಳಿಸಿ ₹796
₹2599 tandem 2+1 Years Warranty INFRARED COOKTOP MRP ₹4799 SAVE ₹2200
₹1679 Prestige ಇಂಡಕ್ಷನ್ ಕುಕ್‌ವೇರ್ ಸೆಟ್ 3 ಯೂನಿಟ್ ಲಿಡ್ ಜೊತೆಗೆ MRP ₹3600 ಉಳಿಸಿ ₹1921
₹5299 tandem ಗ್ಯಾಸ್ ಸ್ಟವ್ 3 ಬರ್ನರ್+ಮಿಕ್ಸರ್ ಗ್ರೈಂಡರ್ 3 ಜಾರ್+ಪ್ರೆಶರ್ ಕುಕ್ಕರ್ 3ℓ+ ಕುಕ್‌ವೇರ್ ಸೆಟ್ MRP ₹11646+ ಉಳಿಸಿ ₹6347
ಇತ್ತೀಚಿನ ಫ್ಯಾಷನ್
ಸ್ವೆಟ್‌ಶರ್ಟ್ ₹299+ 1 ಖರೀದಿಸಿ ಎರಡನೆಯದರ ಮೇಲೆ 60% ರಿಯಾಯಿತಿ ಪಡೆಯಿರಿ
ಜೀನ್ಸ್ ₹499 2 ಖರೀದಿಸಿ ₹150 ರಿಯಾಯಿತಿ ಪಡೆಯಿರಿ
ಕುರ್ತಾ ₹699 1 ಖರೀದಿಸಿ 1 ಉಚಿತ ಪಡೆಯಿರಿ
ಸ್ವೆಟ್‌ಶರ್ಟ್ ₹299+ 1 ಖರೀದಿಸಿ ಎರಡನೆಯದರ ಮೇಲೆ 70% ರಿಯಾಯಿತಿ ಪಡೆಯಿರಿ
ಜೀನ್ಸ್ ₹799 1 ಖರೀದಿಸಿ 1 ಉಚಿತ ಪಡೆಯಿರಿ
VIP SAFARI ₹5799 ಅಪ್‌ರೈಟ್ ಟ್ರಾಲಿ ಬ್ಯಾಗ್ 3 ರ ಸೆಟ್ (ಕ್ಯಾಬಿನ್+ಮೀಡಿಯಂ+ದೊಡ್ಡ ಸೈಜ್) MRP ₹18010+ ಉಳಿಸಿ ₹12211
VIP SAFARI ₹2199 ಮಧ್ಯಮ ಟ್ರಾಲಿ ಬ್ಯಾಗ್ MRP ₹7200+ ಉಳಿಸಿ ₹5001
VIP SAFARI ₹1899 ಸ್ಮಾಲ್ ಟ್ರಾಲಿ ಬ್ಯಾಗ್ MRP ₹4898+ ಉಳಿಸಿ ₹2999
₹899 VIP SAFARI ಡಫಲ್ ಟ್ರಾಲಿ ಬ್ಯಾಗ್ MRP ₹2200+ ಉಳಿಸಿ ₹1301
VISHAL MEGA MART®

ಸುಧಾ, ಮಯೂರ ಓದಿರಿ

ಶಾಸಕ ಎನ್‌.ಎ. ಹ್ಯಾರಿಸ್ ವಿರುದ್ಧದ ಚುನಾವಣಾ ತಕರಾರು ಅರ್ಜಿ

ನಿರರ್ಥಕ ದಾವೆ ತಿರಸ್ಕರಿಸಿ: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಸಮರ್ಪಕ ನಾಮಪತ್ರ ಸ್ವೀಕರಿಸಿದ ಕಾರಣ ಅದು ಪ್ರತಿಸ್ಪರ್ಧಿಯ ಗೆಲುವಿಗೆ ಅಡ್ಡಿ ಉಂಟು ಮಾಡಿತು ಎಂಬ ಆರೋಪವನ್ನು ಸಾಬೀತುಪಡಿಸಬೇಕು ಮತ್ತು ಅಂತಹ ಕ್ರಮ ಸೋಲಿಗೆ ಹೇಗೆ ಕಾರಣವಾಯಿತು ಎಂಬ ನಿಖರ ಅಂಶವನ್ನು ಅರ್ಜಿದಾರರು ತಮ್ಮ ದಾವೆಯಲ್ಲಿ ಕಾಣಿಸಬೇಕಿತ್ತು. ಆದರೆ ಕೆ.ಶಿವಕುಮಾರ್ ಸಲ್ಲಿಸಿರುವ ಈ ಚುನಾವಣಾ ತಕರಾರು ಅರ್ಜಿಯಲ್ಲಿ ಇಂತಹ ಯಾವುದೇ ಅಂಶಗಳು ಇಲ್ಲದ ಕಾರಣ ಈ ನಿರರ್ಥಕ ಅರ್ಜಿಯನ್ನು ತಿರಸ್ಕರಿಸಬೇಕು' ಎಂದು ಶಾಸಕ ಎನ್‌.ಎ.ಹ್ಯಾರಿಸ್ ಪರ ವಕೀಲರು ಹೈಕೋರ್ಟ್‌ಗೆ ಮನವಿ ಮಾಡಿದರು.

'ಚುನಾವಣೆ ವೇಳೆ ಸಲ್ಲಿಸಲಾದ ಫಾರಂ ನಂ. 26ರಲ್ಲಿ ಶಾಂತಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಹ್ಯಾರಿಸ್ ತಮ್ಮ ಆಸ್ತಿ ವಿವರಗಳನ್ನು ಸರಿಯಾಗಿ ಘೋಷಿಸಿಲ್ಲ. ಹೀಗಾಗಿ, ಅವರನ್ನು ಅನರ್ಹಗೊಳಿಸಿ ನನ್ನನ್ನೇ ವಿಜಯಶಾಲಿ ಎಂದು ಘೋಷಿಸಬೇಕು' ಎಂದು ಕೋರಿ ಪರಾಜಿತ ಬಿಜೆಪಿ ಅಭ್ಯರ್ಥಿ ಕೆ.ಶಿವಕುಮಾರ್ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹ್ಯಾರಿಸ್ ಪರ ವಾದ ಮಂಡಿಸಿದ ಹಿರಿಯ ವಕೀಲ ಉದಯ ಹೊಳ್ಳ ಅವರು, 'ಅರ್ಜಿದಾರರು ಹ್ಯಾರಿಸ್ ಅವರಿಗೆ ಕಿರುಕುಳ ನೀಡುವ ಉದ್ದೇಶದಿಂದ ಮತ್ತು ಮಾನಸಿಕ ಯಾತನೆ ಉಂಟು ಮಾಡುವ ದೃಷ್ಟಿಯಿಂದ ಈ ತಕರಾರು ಅರ್ಜಿ ಸಲ್ಲಿಸಿದ್ದಾರೆ' ಎಂದು ಆಕ್ಷೇಪಿಸಿದರು.

'ಅರ್ಜಿದಾರರು ದಾವೆಯಲ್ಲಿ ವಿವರಿಸಿರುವ ಅಂಶಗಳ ಆಧಾರದಡಿ ಹ್ಯಾರಿಸ್ ಅವರ ವಿರುದ್ಧದ ಆರೋಪಗಳ ವಿಚಾರಣೆಗಾಗಿ ಪ್ರತಿವಾದಿಗಳನ್ನು ಅರೆ ಅಪರಾಧಿಕ ನ್ಯಾಯಿಕ ಪ್ರಕ್ರಿಯೆಗೆ ಒಳಪಡಿಸಬಾರದು. ಈ ಹಂತದಲ್ಲಿಯೇ ಈ ಅರ್ಜಿಯನ್ನು ತಿರಸ್ಕರಿಸಬೇಕು' ಎಂದು ಕೋರಿ ಸುಪ್ರೀಂ ಕೋರ್ಟ್‌ನ ಪೂರ್ವ ನಿದರ್ಶನದ ತೀರ್ಪೊಂದನ್ನು ನೀಡಿದರು.

ಇದೇ ವೇಳೆ ಪ್ರತಿವಾದಿ ಪರ ಹಾಜರಿದ್ದ ಹಿರಿಯ ವಕೀಲ ವಿವೇಕ ರೆಡ್ಡಿ ಅವರೂ ಇದಕ್ಕೆ ಪ್ರತಿಯಾಗಿ ತಮ್ಮ ವಾದವನ್ನು ಸಮರ್ಥಿಸಿಕೊಳ್ಳುವ ಸುಪ್ರೀಂ ಕೋರ್ಟ್‌ನ ಮತ್ತೊಂದು ಪೂರ್ವ ನಿದರ್ಶನದ ತೀರ್ಪನ್ನು ನೀಡುತ್ತಿರುವುದಾಗಿ ತಿಳಿಸಿದರು. ಉಭಯತ್ರರ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಸುಪ್ರೀಂ ಕೋರ್ಟ್‌ನ ಎರಡೂ ತೀರ್ಪುಗಳ ಪರಾಮರ್ಶೆ ನಡೆಸುವುದಾಗಿ ತಿಳಿಸಿ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು. ಹ್ಯಾರಿಸ್ ಪರ ಹೈಕೋರ್ಟ್ ವಕೀಲ ಪಿ.ಉಸ್ಮಾನ್ ವಕಾಲತ್ತು ವಹಿಸಿದ್ದರು.

ಅರ್ಜಿಯಲ್ಲಿ ಏನಿದೆ?: '2023ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಶಾಂತಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಎನ್‌.ಎ.ಹ್ಯಾರಿಸ್ ತಮ್ಮ ಚರ ಮತ್ತು ಸ್ಥಿರಾಸ್ತಿಗಳ ಮಾಹಿತಿಯನ್ನು ಆಯೋಗಕ್ಕೆ ಸಮರ್ಪಕವಾಗಿ ಒದಗಿಸಿಲ್ಲ. ಅವರ ಚುನಾವಣಾಧಿಕಾರಿಗೆ ಸುಳ್ಳು ಘೋಷಣೆಯ ಪ್ರಮಾಣ ಪತ್ರ ಸಲ್ಲಿಸಿದ್ದಾರೆ. ಚರ ಮತ್ತು ಸ್ಥಿರಾಸ್ತಿಗಳನ್ನು ವಾಸ್ತವಕ್ಕಿಂತಲೂ ಕಡಿಮೆ ಅಂದಾಜಿನಲ್ಲಿ ದಾಖಲಿಸಿದ್ದಾರೆ. ಹೀಗಾಗಿ, ಈ ಅಸಮರ್ಪಕ ನಾಮಪತ್ರ ಸ್ವೀಕಾರದ ಕಾರಣದಿಂದಾಗಿ ಅದು ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಿ ನನ್ನ ಸೋಲಿಗೆ ಕಾರಣವಾಗಿದೆ. ಹೀಗಾಗಿ, ಅವರನ್ನು ಅನರ್ಹಗೊಳಿಸಿ ನನ್ನನ್ನೇ ವಿಜೇತ ಅಭ್ಯರ್ಥಿ ಎಂದು ಘೋಷಿಸಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ದತ್ತು: ಹೇಗ್ ಒಪ್ಪಂದ ನಿಯಮ ಪಾಲನೆ

ಬೆಂಗಳೂರು: 'ದತ್ತು ಪಡೆದ ದಂಪತಿಯಲ್ಲಿ ತಂದೆ ಯಾವ ದೇಶದಲ್ಲಿ ನೆಲೆಸಿರುತ್ತಾರೋ ಆ ದೇಶದ ಅಧಿಕಾರಿಗಳ ಮೂಲಕ ಪ್ರಮಾಣ ಪತ್ರ ಪಡೆಯುವ ನಿಟ್ಟಿನಲ್ಲಿನ ಮನವಿಯನ್ನು ಭಾರತಕ್ಕೆ ಕಳುಹಿಸಬೇಕು. ಈ ಕುರಿತಂತೆ ಭಾರತದಲ್ಲಿರುವ ಅಧಿಕಾರಿಗಳು ದೃಢೀಕರಣಗೊಳಿಸಿ ಪ್ರಮಾಣ ಪತ್ರ ನೀಡಬೇಕು' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಈ ಸಂಬಂಧ ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ನೆಲೆಸಿರುವ ಭಾರತೀಯರೊಬ್ಬರು(ಪತಿ) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಲೇವಾರಿ ಮಾಡಿದ್ದು, 'ದತ್ತು ಸ್ವೀಕಾರ ಪ್ರಕ್ರಿಯೆಗೆ ಭಾರತ ಮತ್ತು ಜರ್ಮನಿ ದೇಶದ ಉಭಯ ಅಧಿಕಾರಿಗಳ ಒಪ್ಪಿಗೆ ಅತ್ಯಗತ್ಯ. ಈ ವಿಷಯದಲ್ಲಿ ಪರಸ್ಪರ ಎರಡೂ ರಾಷ್ಟ್ರಗಳ ಅನುಮೋದನೆ ಪಡೆಯುವುದು ಕಡ್ಡಾಯ' ಎಂದು ತಿಳಿಸಿದೆ.

'ಹೇಗ್ ಸಮಾವೇಶದ ಒಪ್ಪಂದದಂತೆ ಬಾಲ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ–2015ರ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸಲು ಕೇಂದ್ರ ಸರ್ಕಾರ ನಿಯಮಗಳನ್ನು ಹೊರಡಿಸಿದೆ. ಅದರಂತೆ ಮಗುವನ್ನು ವಿದೇಶೀಯ, ಸಾಗರೋತ್ತರ ಭಾರತೀಯ ಇಲ್ಲವೇ ಅನಿವಾಸಿ ಭಾರತೀಯ ಪೋಷಕರು ದತ್ತು ಪಡೆಯಲು ಸಕ್ಷಮ ಪ್ರಾಧಿಕಾರದಿಂದ ಅಗತ್ಯ ಪ್ರಮಾಣ ಪತ್ರ ಪಡೆದುಕೊಳ್ಳಬೇಕು' ಎಂದು ಪೀಠ ಆದೇಶದಲ್ಲಿ ತಿಳಿಸಿದೆ.

ನಗರದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆಯಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಹೊಸ ಮತದಾರರಿಗೆ ಗುರುತಿನ ಚೀಟಿಯನ್ನು ವಿತರಿಸಿದರು –ಪ್ರಜಾವಾಣಿ ಚಿತ್ರ

ರಾಷ್ಟ್ರೀಯ ಮತದಾರರ ದಿನಾಚರಣೆಯಲ್ಲಿ ರಾಜ್ಯಪಾಲ

'ಮತ ಚಲಾಯಿಸಲು ಪ್ರೇರೇಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವುದಕ್ಕಾಗಿ ನೀವು ಮತದಾನ ಮಾಡಬೇಕು. ಜೊತೆಗೆ ನಿಮ್ಮ ಸುತ್ತಮುತ್ತ ಇರುವ ಮತದಾರರನ್ನೂ ಮತ ಹಾಕುವಂತೆ ಪ್ರೇರಣೆ ನೀಡಬೇಕು ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ತಿಳಿಸಿದರು.

ನಗರದಲ್ಲಿ ಗುರುವಾರ ಬಿಬಿಎಂಪಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ವತಂತ್ರ, ನಿಷ್ಪಕ್ಷಪಾತ ಮತ್ತು ಬಲಿಷ್ಠ ಚುನಾವಣಾ ಆಯೋಗವನ್ನು ಜನವರಿ 25, 1950 ರಂದು ರಚಿಸಲಾಯಿತು. ಇದು ಭಾರತೀಯ ಪ್ರಜಾಪ್ರಭುತ್ವಕ್ಕೆ ಮಹತ್ವದ ದಿನ. ಮತದಾರರನ್ನು ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಲು ಮತ್ತು ಮತದಾನಕ್ಕೆ ಪ್ರೇರೇಪಿಸಲು ಮೀಸಲಾಗಿರುವ ದಿನ ಎಂದು ವಿವರಿಸಿದರು.

ಜಗತ್ತಿನಲ್ಲಿ ಹಲವು ಆಡಳಿತ ವ್ಯವಸ್ಥೆಗಳಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾತ್ರ ಆಡಳಿತ ಅಧಿಕಾರ ಸಂಪೂರ್ಣ ಜನರ ಮೇಲಿರುತ್ತದೆ. ಮತದಾನ ಕಡ್ಡಾಯಗೊಳಿಸಬೇಕು ಎಂಬ ಚರ್ಚೆಗಳು ನಡೆದಿದ್ದವು. ಕಡ್ಡಾಯಗೊಳಿಸುವ ಬದಲು ಮತದಾರರನ್ನು ಮತದಾನಕ್ಕೆ ಪ್ರೇರೇಪಿಸುವ ಮೂಲಕ ಪ್ರಜಾತಂತ್ರವನ್ನು ಯಶಸ್ವಿಗೊಳಿಸಬೇಕು ಎಂದು ನಿರ್ಧರಿಸಲಾಗಿತ್ತು. ಜಾಗೃತ ಮತದಾರರು ಮಾತ್ರ ಈ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸಲು ಸಾಧ್ಯ ಎಂದು ತಿಳಿಸಿದರು.

ಎಲ್ಲರೂ ಜಾಗೃತ ಮತದಾರರಾಗಬೇಕು. ಮುಂದಿನ ಚುನಾವಣೆಯಲ್ಲಿ ಶೇ 100 ಮತದಾನವಾಗಬೇಕು ಎಂದು ಹೇಳಿದರು.

ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಮಾತನಾಡಿ, 'ಯುವ ಮತದಾರರು, ಅಂಗವಿಕಲರು, ಲಿಂಗತ್ವ ಅಲ್ಪಸಂಖ್ಯಾತರು, ಬುಡಕಟ್ಟು ಸಮುದಾಯದವರು ಸೇರಿದಂತೆ ಎಲ್ಲರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗುತ್ತಿದೆ. ಎಲ್ಲ ಯುವ ಮತದಾರರು ಸ್ವಯಂಪ್ರೇರಿತವಾಗಿ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಬೇಕು' ಎಂದು ಮನವಿ ಮಾಡಿದರು.

ಜಿಲ್ಲಾ ಚುನಾವಣಾಧಿಕಾರಿ ಹಾಗೂ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾತನಾಡಿ, 'ರಾಷ್ಟ್ರೀಯ ಮತದಾರರ ದಿನದ ಅಂಗವಾಗಿ ಮತದಾರರ ಪಟ್ಟಿ ಪರಿಷ್ಕರಣೆ, ಹೊಸದಾಗಿ ಮತದಾರರ ಪಟ್ಟಿಗೆ ಸೇರ್ಪಡೆ ಮಾಡುವುದು ಸೇರಿದಂತೆ ಇನ್ನಿತರೆ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಅಧಿಕಾರಿಗಳಿಗೆ ರಾಜ್ಯಮಟ್ಟದ ಪ್ರಶಸ್ತಿಯನ್ನು ನೀಡಿ ಪ್ರಶಂಸಿಸಲಾಗುವುದು' ಎಂದು ಹೇಳಿದರು.

ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ ಕೂರ್ಮರಾವ್, ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್. ವಸ್ತ್ರದ್, ಚುನಾವಣಾ ವಿಭಾಗದ ವಿಶೇಷ ಆಯುಕ್ತ ರಾಮಚಂದ್ರನ್ ಭಾಗವಹಿಸಿದ್ದರು.

ಮತದಾನದ ಬಗ್ಗೆ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ನಡೆಸಲಾಗಿದ್ದು, ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಬೆಂಗಳೂರು ಮತ್ತು ತುಮಕೂರಿನ ಕಲಾ ಶಿಕ್ಷಕರು, ವಿದ್ಯಾರ್ಥಿಗಳು ಮತದಾನ ಜಾಗೃತಿಯ ಕಲಾಕೃತಿಗಳನ್ನು ರಚಿಸಿದರು.

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. CAO/CN/BNC/99/2024
ದಿನಾಂಕ: 22.01.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಧಾರವಾಡ–ಕೊಲ್ಹಾಪುರ ಹೊಸ ಬಿಜಿ ಲೈನ್ ಯೋಜನೆಯ ಬೆಳಗಾವಿ (ಕಿ.ಮೀ.79.70) – ಕೊಲ್ಹಾಪುರ (ಕಿ.ಮೀ.220.60) ನಡುವೆ ಪಿಇಟಿ ಸಮೀಕ್ಷೆ. (ಟೆಂಡರ್ ಉಲ್ಲೇಖ ಸಂಖ್ಯೆ: KOP-DWR-PET-01)	ರೂ. 55,02,735/-
	ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12–02–2024, 15:00 ಗಂಟೆಯವರೆಗೆ	
2	ಕಳಸಾದಲ್ಲಿ ಎಫ್‌ಒಬಿ, ಪಿಎಫ್ ಶೆಲ್ಟರ್ ನಿರ್ಮಾಣ, ಪ್ಲಾಟಫಾರ್ಮ್ ಅನ್ನು ಮಧ್ಯಮ ಮಟ್ಟದಿಂದ ಉನ್ನತ ಮಟ್ಟಕ್ಕೆ ಏರಿಸುವುದು ಮತ್ತು ಇತರ ವಿವಿಧ ಕೆಲಸಗಳು, ಕುಂದಗೋಳದಲ್ಲಿ ಮುಕ್ತಿಧಾಮ ಮತ್ತು ಸರ್ವಿಸ್ ರಸ್ತೆಗೆ ಇಳಿಜಾರು ಒದಗಿಸುವುದು ಮತ್ತು ಸವಣೂರಿನಿಂದ ಹುಬ್ಬಳ್ಳಿ ನಡುವಿನ ಇತರ ಕಾಮಗಾರಿಗಳು. (ಟೆಂಡರ್ ಉಲ್ಲೇಖ ಸಂಖ್ಯೆ: UBL-JRU-65)	ರೂ. 4,24,50,625.76/-
	ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13–02–2024, 15:00 ಗಂಟೆಯವರೆಗೆ	

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿಗಳು
ಬೆಂಗಳೂರು ಕಂಟೋನ್ಮೆಂಟ್

PUB/648/AAV/PRB/SWR/2023-24

South Western Railway-SWR SWRRLY SWRRLY

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. BLUR_KANIVE_BISALE
ದಿನಾಂಕ: 19-01-2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಹಾದಿಹಳ್ಳಿ–ಬೇಲೂರು ವಿಭಾಗದ ನಡುವೆ ಟೆಲಿಕಾಂ ವ್ಯವಸ್ಥೆಯೊಂದಿಗೆ ಸಂಪೂರ್ಣ ಬ್ಲಾಕ್ ಕಾರ್ಯ ವ್ಯವಸ್ಥೆಯೊಂದಿಗೆ ಮೈಸೂರು ವಿಭಾಗದ ಕಡೂರು – ಚಿಕ್ಕಮಗಳೂರು – ಬೇಲೂರು ವಿಭಾಗದ ನಡುವಿನ ಬೇಲೂರು, ಕಣಿವೆಹಳ್ಳಿ ಮತ್ತು ಬಿಸಲೇಹಳ್ಳಿ ನಿಲ್ದಾಣಗಳಲ್ಲಿ ಹೊರಾಂಗಣ ಸಿಗ್ನಲಿಂಗ್ ವ್ಯವಸ್ಥೆಗಳೊಂದಿಗೆ ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ಅನ್ನು ಒದಗಿಸುವುದು.	ರೂ. 16,42,60,324.71

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10–02–2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನಿಯರ್
ನಿರ್ಮಾಣ / ಬೆಂಗಳೂರು ಕಂಟೋನ್ಮೆಂಟ್

PUB/647/AAV/PRB/SWR/2023-24

South Western Railway-SWR SWRRLY SWRRLY

ಸುಶ್ರುತ ವಿಶ್ರಾಂತಿ ಧಾಮ ಲಿಮಿಟೆಡ್

ಸುಶ್ರುತ ವಿಶ್ರಾಂತಿ ಧಾಮ ಲಿಮಿಟೆಡ್ ತನ್ನ ಸದಸ್ಯರ ವಿಶೇಷ ಸಭೆಯನ್ನು 18/02/2024 ರಂದು 10:30 AM IST ಕ್ಕೆ ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ನಡೆಸುತ್ತಿದೆ. ಸದಸ್ಯರು ಇ–ವೋಟಿಂಗ್ ಮೂಲಕ ತಮ್ಮ ಮತ ಚಲಾಯಿಸಬಹುದು. ಇ–ವೋಟಿಂಗ್ 14/02/2024 ರಂದು 09:00 AM IST ಕ್ಕೆ ಪ್ರಾರಂಭವಾಗುತ್ತದೆ ಮತ್ತು 17/02/2024 ರಂದು 05:00 PM IST ಕ್ಕೆ ಕೊನೆಗೊಳ್ಳುತ್ತದೆ. ಮತ್ತು ಸದಸ್ಯರ ವಿಶೇಷ ಸಭೆ ಕೊನೆಗೊಳ್ಳುವವರೆಗೂ ಇ–ವೋಟಿಂಗ್ ಚಾಲ್ತಿಯಲ್ಲಿರುತ್ತದೆ.

ಮಂಡಳಿಯ ಸದಸ್ಯರ ಪರವಾಗಿ,
–ನಿರ್ದೇಶಕರು–

Government of India

ದೇಶದ ಸಮಸ್ತ ಜನತೆಗೆ
75ನೇ
ಗಣರಾಜ್ಯ ದಿನದ
ಶುಭಾಶಯಗಳು

"ಇದು ಭಾರತದ ಅಭಿವೃದ್ಧಿಯ 'ಅಮೃತ ಕಾಲ'ವಾಗಿದೆ. ಇಂದು ಭಾರತವು ಅಪಾರ ಯುವಶಕ್ತಿ, ಚೈತನ್ಯದಿಂದ ತುಂಬಿದೆ. ಇಂದು ನಾವು ಒಂದು ಮಹತ್ವದ ಘಟ್ಟದಲ್ಲಿದ್ದೇವೆ. ನಮ್ಮ ಪ್ರತಿಯೊಂದು ಪ್ರಯತ್ನವು ಮುಂದಿನ ಸಾವಿರ ವರ್ಷಗಳವರೆಗೆ ಭಾರತದ ಬುನಾದಿಯನ್ನು ಬಲಪಡಿಸುತ್ತದೆ."

– ನರೇಂದ್ರ ಮೋದಿ

ದೂರದರ್ಶನ ನೆಟ್‌ವರ್ಕ್‌ನಲ್ಲಿ ಬೆಳಿಗ್ಗೆ 9.00 ರಿಂದ ಕರ್ತವ್ಯ ಪಥದಿಂದ ಗಣರಾಜ್ಯೋತ್ಸವದ ನೇರ ಪ್ರಸಾರ

CBC22201/13/0231/2324

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ನಿರ್ಮಾಣ ಮತ್ತು ನಿರ್ವಹಣೆ ಸಮೂಹ, ಎಲ್‌ಪಿಎಸ್‌ಸಿ ಕ್ಯಾಂಪಸ್,
80 ಅಡಿ ರಸ್ತೆ, ಹೆಚ್‌ಎಎಲ್ 2 ನೇಹಂತ, ಬೆಂಗಳೂರು.
ದೂ.ಸಂ: 080–25037–131/174/214

ದಿನಾಂಕ: 25.01.2024

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗೆ ಐಟಂದರದ ಟೆಂಡರ್ ಆಹ್ವಾನಿಸಲಾಗಿದೆ.

ಕೆಲಸದ ಹೆಸರು	ಎನ್‌ಹೆಚ್ 48 (ಹಳೆಯ ಎನ್‌ಹೆಚ್4) ತುಮಕೂರು, ಕರ್ನಾಟಕ ಇಲ್ಲಿ ಹೆಚ್‌ಡಿಡಿ ಮೂಲಕ 69+650 ಕಿ.ಮೀ.ರಲ್ಲಿ ಕ್ರಾಸಿಂಗ್ ಗೊಳಿಸುವುದು ಮತ್ತು ಆರ್‌ಹೆಚ್‌ಎಸ್ ಮೂಲಕ 66+3000 ಕಿ.ಮೀ.ನಿಂದ 69+700 ಕಿ.ಮೀ.ವರೆಗೆ 11ಕೆವಿ, ಯುಜಿ ಎಲೆಕ್ಟ್ರಿಕಲ್ ಕೇಬಲ್‌ನ ಪುನರ್ ಅಳವಡಿಕೆ.
ಟೆಂಡರ್ ಪ್ರಕಟಣೆ ಸಂಖ್ಯೆ	ಸಿಎಂಡಿ/ಎಲ್‌ಪಿಎಸ್‌ಸಿ(ಬಿ)/ಇ/ಎಂಜೆ/34/2023–24 ದಿನಾಂಕ: 23.01.2024
ಅಂದಾಜು ಮೊತ್ತ	₹ 198.99 ಲಕ್ಷಗಳು
ಪೂರ್ಣಗೊಳಿಸುವ ಅವಧಿ	02 ತಿಂಗಳು
ಮಾರಾಟದ ಅವಧಿ	25.01.2024 ರಿಂದ 02.02.2024 ರವರೆಗೆ
ಇಎಂಡಿ	₹ 3,97,980/–

ಆಸಕ್ತಿಯುಳ್ಳ ಟೆಂಡರ್‌ದಾರರು ದಯವಿಟ್ಟು www.tenderwizard.com/ISRO ಪರಿವೀಕ್ಷಿಸಿ. ಅಲ್ಲದೇ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳನ್ನೊಳಗೊಂಡ ವಿವರವಾದ ಟೆಂಡರ್ ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ www.isro.gov.in, www.lpsc.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/– ಮುಖ್ಯಸ್ಥರು ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಶ್ರೀ ದೇವರಾಜ ಅರಸ್ ಬಡಾವಣೆ, ಟಮಕ, ಕೋಲಾರ–563 103
ದೂರವಾಣಿ:+9181522 43152/53
Email:bnuregistrar@karnataka.gov.in, web:www.bnu.karnataka.gov.in

ದಿನಾಂಕ: 25.01.2024

ಇ–ಟೆಂಡರ್ ಅಧಿಸೂಚನೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ, ಇಲ್ಲಿಗೆ ಪ.ಜಾ/ಪ.ಪಂ ಪುರುಷ ಮತ್ತು ಮಹಿಳಾ ವಸತಿ ನಿಲಯಕ್ಕೆ ಆಹಾರದ ಸಾಮಾಗ್ರಿಗಳನ್ನು ಒದಗಿಸಲು ಟೆಂಡರ್‌ನ್ನು ಆಹ್ವಾನಿಸುವ ಕುರಿತು ಪ್ರಕಟಣೆ. **ಟೆಂಡರ್ ನಂ: BNU/2023-24/IND0012** ಕರ್ನಾಟಕ ಪಾರದರ್ಶಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಕಾಯ್ದೆಯಡಿಯಲ್ಲಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೋಂದಾಯಿತ ಹೆಸರಾಂತ ಸಂಸ್ಥೆಗಳಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು **ದಿನಾಂಕ: 24.01.2024** ರಿಂದ ಕರ್ನಾಟಕ **(http://kppp.karnataka.gov.in)** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/– ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ,ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:327/ಕೆಎಸ್‌ಎಂ.ಸಿ.ಎ/2023–24

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ
A Government of India Undertaking
ಸಿಂಡಿಕೇಟ್ Syndicate

ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310038

ಗುತ್ತಿಗೆಯ ಮೇಲೆ ಸ್ಥಳಾವಕಾಶ ಬೇಕಾಗಿದೆ

ಕೆಳಕಂಡ ಸ್ಥಳಗಳಲ್ಲಿ ಹಾಲಿ ಇರುವ ಶಾಖೆಗಳನ್ನು ಸ್ಥಳಾಂತರಿಸುವುದಕ್ಕಾಗಿ, **ಮುಖ್ಯ ರಸ್ತೆಯಲ್ಲಿ** ಆದ್ಯತೆಯಾಗಿ **ನೆಲಮಹಡಿಯಲ್ಲಿ** ಸ್ವತಂತ್ರ ಪ್ರವೇಶ, ಉತ್ತಮ ಮುಂಭಾಗ, ಪಾರ್ಕಿಂಗ್ ಸ್ಥಳವಿರುವ, ಆರ್‌ಬಿಐ ನಿರ್ದಿಷ್ಟತೆಗೆ ಅನುಸಾರವಾಗಿ ಸ್ಟ್ರಾಂಗ್ ರೂಮ್‌ನ್ನು ನಿರ್ಮಿಸಲು ಸಿದ್ಧವಿರುವ ಮತ್ತು ಅಗತ್ಯವಾದ ವಿದ್ಯುತ್ ಲೋಡ್‌ನೊಂದಿಗೆ ಬಳಕೆಗೆ ಸಿದ್ಧವಿರುವ ವಾಣಿಜ್ಯ ಸ್ಥಳವನ್ನು ಹೊಂದಿದ ಮಾಲೀಕರಿಂದ **ಎರಡು–ಬಿಡ್ ವ್ಯವಸ್ಥೆಯ ಅಡಿಯಲ್ಲಿ** ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಜಿಲ್ಲೆಯ ಹೆಸರು	ಜನ ಸಮುದಾಯ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ನೆರಳೂರು	ಆನೇಕಲ್ ತಾಲ್ಲೂಕು, ಬೆಂಗಳೂರು	ಗ್ರಾಮೀಣ	1950
ಕತ್ರಿಗುಪ್ಪೆ	ಬೆಂಗಳೂರು	ಮಹಾ ನಗರ	2500
ದೊಡ್ಡಬಳ್ಳಾಪುರ	ಬೆಂಗಳೂರು ಗ್ರಾಮೀಣ	ಅರೆ ನಗರ	2200
ಪಾಲನಜೋಗಿಹಳ್ಳಿ	ಬೆಂಗಳೂರು ಗ್ರಾಮೀಣ	ಗ್ರಾಮೀಣ	1500

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ **http://www.canarabank.com** ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ **Announcement → Tenders** ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : **26–01–2024 ರಿಂದ 09–02–2024 ರವರೆಗೆ ಸಂಜೆ 3.00 ಗಂಟೆಯವರೆಗೆ.** ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"

ಸ್ಥಳ : ಬೆಂಗಳೂರು
ದಿನಾಂಕ : 25–01–2024

ಸಹಿ/–
ಸಹಾಯಕ ಮಹಾ ಪ್ರಬಂಧಕರು

ಉನ್ನತ ಅಧಿಕಾರಿಗಳ ನೇತೃತ್ವದ ಎಂಟು ವಿಭಾಗಗಳಿಂದ ಇನ್ನೂ ಅಂತಿಮವಾಗದ ವರದಿ

'ಬ್ರ್ಯಾಂಡ್': ಘೋಷಣೆಗಳ ಬ್ರ್ಯಾಂಡ್

ಭಾಷಣವೇ ಭೂಷಣ ಅಭಿವೃದ್ಧಿ ಗೌಣ

• ಆರ್. ಮಂಜುನಾಥ್

ಟೆಕ್ ಬೆಂಗಳೂರು
- ಜವಾಬ್ದಾರಿಯುತ ಉಪಕ್ರಮಗಳ ಪಾರದರ್ಶಕ ಯೋಜನೆಗಳು
- ಆಡಳಿತದ ಪ್ರತಿನಿಧಿಗಳೊಂದಿಗೆ ಪಾಲ್ಗೊಂಡು, 'ಹೆಚ್ಚುರುತಿನ ಅಭಿವೃದ್ಧಿಗಳು'
- ನಾಗರಿಕರಿಗೆ ಎಲ್ಲ ರೀತಿಯ ಸೇವೆಗಳನ್ನು ಆನ್‌ಲೈನ್‌ನಲ್ಲಿ ನೀಡುವುದು
- ಮೂಲಸೌಕರ್ಯ ಹಾಗೂ ಅಭಿವೃದ್ಧಿಗೆ ತಂತ್ರಜ್ಞಾನ

ಶೈಕ್ಷಣಿಕ ಬೆಂಗಳೂರು
- ಡಿಜಿಟಲ್/ ಕೃತಕ ಬುದ್ಧಿಮತ್ತೆ (ಎಐ) ಆಗಿ ಬದಲಾವಣೆ ಶಿಕ್ಷಣ ನೀತಿಯನ್ನು ಕಾಲಕಾಲಕ್ಕೆ ಉನ್ನತೀಕರಿಸಬೇಕು
- ಕ್ಲಸ್ಟರ್ ವ್ಯವಸ್ಥೆ ಶಿಕ್ಷಣ, ಕೌಶಲ ವೃದ್ಧಿ ಕೇಂದ್ರಗಳ ಪ್ರಾರಂಭ
- ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಬಳಸಿ ಉತ್ತಮ ಶಿಕ್ಷಣ
- ಮಧ್ಯಾಹ್ನದ ಶಿಕ್ಷಣಕ್ಕೆ ಆದ್ಯತೆ, ಬಡ ವರ್ಗದ ಮಕ್ಕಳಿಗೆ ಸಂಪೂರ್ಣ ಉಚಿತ ಶಿಕ್ಷಣ, ಮಾತೃ ಭಾಷೆಗೆ ಪ್ರಾಧಾನ್ಯ

ಆರೋಗ್ಯಕರ ಬೆಂಗಳೂರು
- 'ಬೆಂಗಳೂರು ಆರೋಗ್ಯ ವ್ಯವಸ್ಥೆ' ಜಾರಿಗೊಳಿಸುವುದು.
- 'ಒಂದು ಆರೋಗ್ಯ ವಿಧಾನ', ವಾರ್ ರೂಮ್, ಕಣ್ಗಾವಲು ವ್ಯವಸ್ಥೆ
- ಆರೋಗ್ಯ ಸೇವೆಯಲ್ಲಿ ಹೂಡಿಕೆ ಹೆಚ್ಚಿಸುವುದು.
- ತುರ್ತು ಆರೋಗ್ಯ ಸೇವೆ, ಸಿಎಸ್‌ಆರ್ ಪಾಲುದಾರಿಕೆ
- ನಾಗರಿಕರಿಗೆ ಮನೆಯಲ್ಲಿಯೇ ಚಿಕಿತ್ಸೆ

ಸುಗಮ ಸಂಚಾರ ಬೆಂಗಳೂರು
- ರಸ್ತೆ ಗುಂಡಿಗಳನ್ನು ದುರಸ್ತಿಗೊಳಿಸಿ, ಗುಂಡಿಮುಕ್ತ ರಸ್ತೆಗಳ ನಿರ್ವಹಣೆ
- ಆಸ್ಪತ್ರೆ / ಸ್ವತ್ತುಗಳನ್ನು ಆಯಾ ರಸ್ತೆಯಲ್ಲಿ ಗುರುತಿಸಲು ರಸ್ತೆ ನಾಮಫಲಕದಲ್ಲಿ ಕ್ಯೂ ಆರ್ ಕೋಡ್ ಅಳವಡಿಕೆ
- ಪಾದಚಾರಿ ಮಾರ್ಗ ಒತ್ತುವರಿ ತೆರವು, ರಸ್ತೆ ಮೇಲೆ ನೀರು ನಿಲ್ಲದಂತೆ ಕಾಮಗಾರಿ
- ಬಸ್ ತಂಗುದಾಣಗಳನ್ನು ಹೊಸದಾಗಿ ನಿರ್ಮಾಣ, ಎಲ್‌.ಇ.ಡಿ ದೀಪ ಅಳವಡಿಕೆ, ಪ್ರತ್ಯೇಕ ಬಸ್ ಪಥ
- ವೃತ್ತಗಳಲ್ಲಿ ಎಡ ತಿರುವು ಮುಕ್ತ, ಸಂಚಾರ ನಿಯಂತ್ರಣಕ್ಕೆ ಸ್ಮಾರ್ಟ್ ಸಿಗ್ನಲ್

ಜಲಸುರಕ್ಷಾ ಬೆಂಗಳೂರು
- ಕೊಳಚೆ ನೀರನ್ನು ಶುದ್ಧೀಕರಿಸಿಯೇ ರಾಜಕಾಲುವೆ ಹಾಗೂ ಕೆರೆಗಳಿಗೆ ಹರಿಯಲು ಬಿಡಬೇಕು.
- ಅಂತರ್ಜಲಮಟ್ಟ ವೃದ್ಧಿಗೆ ಚರಂಡಿ, ಉದ್ಯಾನ, ಸಾರ್ವಜನಿಕ ಸ್ಥಳಗಳಲ್ಲಿ ಇಂಗು ಗುಂಡಿ
- ಅಪಾರ್ಟ್‌ಮೆಂಟ್‌ಗಳಲ್ಲಿ ಎಸ್‌ಟಿಪಿ ನಿರ್ಮಾಣ ಕಡ್ಡಾಯ
- ನೀರು ಪೂರೈಕೆ ಸೋರಿಕೆ ತಡೆ, ಸಂಸ್ಕರಿಸಿದ ನೀರು ಬಳಕೆಗೆ ಉತ್ತೇಜನ
- ಅನಧಿಕೃತ ಕೊಳವೆಬಾವಿ ಕೊರೆಯುವುದಕ್ಕೆ ನಿರ್ಬಂಧ ಹಾಗೂ ದುಪ್ಪಟ್ಟು ದಂಡ

ಸ್ವಚ್ಛ ಬೆಂಗಳೂರು
- ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆ, 'ವೇಸ್ಟ್ ಟು ಎನರ್ಜಿ' ಕೇಂದ್ರ ಸ್ಥಾಪನೆ
- ಆಟೊ ಟಿಪ್ಪರ್‌ಗಳ ನಿರ್ವಹಣೆ, ಮೇಲ್ವಿಚಾರಣೆಗೆ ಜಿಪಿಎಸ್ ಅಳವಡಿಕೆ, ಪ್ರತಿ ವಲಯದಲ್ಲೂ ಕಂಟ್ರೋಲ್ ಕಮಾಂಡ್ ಸೆಂಟರ್
- 'ಓಲಾ' ರೀತಿಯಲ್ಲಿ ತಂತ್ರಾಂಶವನ್ನು ಸಿದ್ದಪಡಿಸಿಕೊಂಡು, ಮನೆಯಿಂದ ಕಟ್ಟಡ ತ್ಯಾಜ್ಯ ತೆರವಿನ ವ್ಯವಸ್ಥೆ
- ಪ್ರತಿ ವಾರ್ಡ್‌ನಲ್ಲೂ ಒಣ ತ್ಯಾಜ್ಯ ಸಂಗ್ರಹಣಾ ಘಟಕಗಳು, ನಿರ್ವಹಣೆ ಬಗ್ಗೆ ಯುವಕರು ಮತ್ತು ಮಕ್ಕಳಲ್ಲಿ ಅರಿವು
- ಪ್ಲಾಸ್ಟಿಕ್ ಉತ್ಪನ್ನಗಳನ್ನು ಸಂಪೂರ್ಣ, ಸಂಸ್ಕರಣಾ ಘಟಕಗಳಲ್ಲಿ ವೈಜ್ಞಾನಿಕ ನಿರ್ವಹಣೆ

ಆಕರ್ಷಕ ಬೆಂಗಳೂರು
- ಬೆಂಗಳೂರಿಗೆ 'ಸಾಂಸ್ಕೃತಿಕ ಕ್ಯಾಲೆಂಡರ್'. ಕೆರೆ ಹಬ್ಬ, ಹೂವಿನ ಹಬ್ಬ, ಕರಗ, ಥಿಯೇಟರ್ ಫೆಸ್ಟಿವಲ್, ನಾಡ ಹಬ್ಬ- ಬೆಂಗಳೂರು ಹಬ್ಬ, ಊರ ಹಬ್ಬ - ಗ್ರಾಮ ದೇವತೆ ಉತ್ಸವ ಆಯೋಜನೆ
- ಜೆಸಿ ರಸ್ತೆಯಲ್ಲಿ ಥಿಯೇಟರ್ ಕಾಂಪ್ಲೆಕ್ಸ್, ನಗರದ 4 ದಿಕ್ಕುಗಳಲ್ಲಿ ಆಡಿಟೋರಿಯಂ
- ಸಾರ್ವಜನಿಕ ಸ್ಥಳಗಳನ್ನು ರಚಿಸಲು ಕನಿಷ್ಠ 25 ಜಂಕ್ಷನ್‌ಗಳನ್ನು ವಿನ್ಯಾಸಗೊಳಿಸುವುದು, ಡಿಜಿಟಲ್ ಸೈನೇಜ್‌ಗಳು/ ಗಾಳಿಯ ಗುಣಮಟ್ಟ ಸೂಚಕ ಅಳವಡಿಕೆ
- ಪಾರಂಪರಿಕ ಕಾರಿಡಾರ್‌ಗಳು.. ಸಾರ್ವಜನಿಕ ಕಲೆಗಳ ಪ್ರದರ್ಶನಕ್ಕೆ ಸ್ಥಳಾವಕಾಶ. ಸ್ಟೋನ್ ಆರ್ಟ್, ಮೆಟಲ್ ಆರ್ಟ್ ಇತ್ಯಾದಿಗಳಿಗೆ ಮೇಲ್ಸೇತುವೆ ಕೆಳಗಿನ ಜಾಗಗಳ ಬಳಕೆ

ಹಸಿರು ಬೆಂಗಳೂರು
- ನಗರದ ಸಾರ್ವಜನಿಕ ಹಾಗೂ ಖಾಸಗಿ ಸ್ಥಳಗಳಲ್ಲಿ ಸಸಿ ನೆಡುವಂತಹ ಸಸಿಗಳ ಉಳಿವು, ಅಳಿವಿನ ನಿಖರ ಮಾಹಿತಿಗೆ ವ್ಯವಸ್ಥೆ
- ಎಲ್ಲ ಕೆರೆಗಳನ್ನು ರಕ್ಷಿಸುವುದು, ಅರಣ್ಯ ಸಂಪತ್ತನ್ನು ಬೆಳೆಸುವುದು
- ಮಕ್ಕಳಿಗೆ ಪರಿಸರ ಉಳಿಸುವ ಶಿಕ್ಷಣ, ಸಸಿಗಳನ್ನು ಪೋಷಿಸಿ, ಬೆಳಸಲು ಜಾಗೃತಿ
- ಬಿಬಿಎಂಪಿ, ಜಲಮಂಡಳಿ, ಬಿಡಿಎ ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡಿ ಪರಿಸರವನ್ನು ವೃದ್ಧಿಸಬೇಕು

ಬೆಂಗಳೂರು: ಮುಂದಿನ 25 ವರ್ಷದ ದೂರದೃಷ್ಟಿಯಿಟ್ಟುಕೊಂಡು ರಾಜಧಾನಿಯನ್ನು ಮರುಕಟ್ಟಿ, ವಿಶ್ವಮಟ್ಟದ ಸೌಲಭ್ಯ ಇರುವ ನಗರವಾಗಿ ಪರಿವರ್ತಿಸಲು 'ಬ್ರ್ಯಾಂಡ್ ಬೆಂಗಳೂರು' ಎಂಬ ಆಕರ್ಷಕ ಘೋಷಣೆ ಹಾಗೂ ಯೋಜನೆಗೆ ಸರ್ಕಾರ ಅಡಿ ಇಟ್ಟಿದೆ. ಆದರೆ ಅದಿನ್ನೂ ಈ ಪರಿಕಲ್ಪನೆ, ಯೋಜನೆಯ ಹಂತಕ್ಕೆ ತಲುಪಿಯೇ ಇಲ್ಲ.

'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯಲ್ಲಿ ಯೋಜನೆ ರೂಪಿಸಲು ಎಂಟು ವಿಭಾಗಗಳನ್ನು ಗುರುತಿಸಿ, ಅದಕ್ಕಾಗಿ ವಿಶೇಷ ಆಯುಕ್ತರ ನೇತೃತ್ವದಲ್ಲಿ ತಂಡಗಳನ್ನು ರಚಿಸಲಾಗಿದೆ. 2023 ಜೂನ್‌ನಿಂದ ಈ ತಂಡಗಳು ಯೋಜನೆ ರೂಪಿಸುತ್ತಿದ್ದರೂ, ಅಂತಿಮ ವರದಿ ತಯಾರಾಗಿಲ್ಲ. 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯ ಅಂತಿಮ ಹಂತ ಎಂದು ಪ್ರತಿಬಿಂಬಿಸಿ, ಅಕ್ಟೋಬರ್ 9ರಂದು 'ಬ್ರ್ಯಾಂಡ್ ಬೆಂಗಳೂರು ಸಮ್ಮೇಳನ' ನಡೆಯಿತು. ಆನಂತರವೂ ಅಂತಿಮ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿಲ್ಲ.

ವಿಶೇಷ ಆಯುಕ್ತರ ನೇತೃತ್ವದ ಪ್ರತಿ ತಂಡವೂ ನೂರಾರು ಸಲಹೆಗಳನ್ನು ನೀಡಿದೆ. ಹಿಂದಿನ ಯೋಜನೆಗಳನ್ನು ಒಟ್ಟುಗೂಡಿಸಿಕೊಂಡು ಅದರೊಂದಿಗೆ 'ಬ್ರ್ಯಾಂಡ್' ಶೀರ್ಷಿಕೆ ನೀಡುವುದಕ್ಕಾಗಿ ಸಾಕಷ್ಟು ಸಭೆಗಳು ನಡೆದಿವೆ. ಸಂಘ-ಸಂಸ್ಥೆ ಪ್ರತಿನಿಧಿಗಳ ಜೊತೆಗೆ ಅಧಿಕಾರಿಗಳು ಹಲವಾರು ಸಭೆಗಳನ್ನು ನಡೆಸಿದ್ದಾರೆ, ಕೆಲವು ವಿಭಾಗಗಳು ಅವರ ಸಲಹೆಗಳನ್ನು ಪುಸ್ತಕದ ರೂಪದಲ್ಲಿಯೂ ಪ್ರಕಟಿಸಿವೆ. ಇವ್ಯಾವುದಕ್ಕೂ ಮುಖ್ಯ ಆಯುಕ್ತರಿಂದ ಅಂತಿಮ ಮುದ್ರೆ ಬಿದ್ದಿಲ್ಲ.

'ನಗರದ ನಾಗರಿಕರು ತಮ್ಮ ನಗರ ಬೆಳೆಯಲು ಏನು, ಹೇಗೆ ಬಯಸುತ್ತಾರೆ ಅದನ್ನೇ 'ಬ್ರ್ಯಾಂಡ್ ಬೆಂಗಳೂರು'ನಡಿ ಅಭಿವೃದ್ಧಿ ಮಾಡಲಾಗುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದರು. ಇದಕ್ಕೆ ಪ್ರತಿಸ್ಪಂದನೆಯಾಗಿ '70 ಸಾವಿರಕ್ಕೂ ಹೆಚ್ಚು ಸಲಹೆಗಳು ಬಂದಿವೆ' ಎಂದು ಅವರೇ ಹೇಳಿದ್ದರು. ಆದರೆ ಎಂಟು ವಿಭಾಗಗಳ ನೇತೃತ್ವ ವಹಿಸಿರುವ ಹಿರಿಯ ಅಧಿಕಾರಿಗಳ ತಂಡ ರಚಿಸಿರುವ ಕರಡು ವರದಿಯಲ್ಲಿ ನಾಗರಿಕರ ಸಲಹೆಗಳಿಗೆ ಆದ್ಯತೆ ಸಿಕ್ಕಿಲ್ಲ ಎಂಬ ದೂರು ವ್ಯಕ್ತವಾಗುತ್ತಲೇ ಇದೆ. ಇದನ್ನು ಸರಿಪಡಿಸುವತ್ತ ಅಧಿಕಾರಿಗಳು ಇನ್ನೂ ಚಿತ್ತ ಹರಿಸಿಲ್ಲ.

ನಾಗರಿಕರು ಹಾಗೂ ತಜ್ಞರೊಂದಿಗೂ ವಿಶೇಷ ಸಭೆಗಳನ್ನು ನಡೆಸಲಾಗಿತ್ತು. ಅವರಿಂದಲೂ ಸಲಹೆಗಳು ಬಂದಿವೆ. ಅಲ್ಲದೆ, ಹಲವು ಸಂಸ್ಥೆಗಳು ಸಮಾರಂಭಗಳನ್ನು ನಡೆಸಿ 'ಬೆಂಗಳೂರು ಹೀಗೆ ಅಭಿವೃದ್ಧಿಯಾಗಬೇಕು' ಎಂದು ರಸ್ತೆ ಗುಂಡಿ, ವಾಹನ ಸಂಚಾರ, ಆಂಬುಲೆನ್ಸ್ ಮೇಲೆ ಜಿಪಿಎಸ್, ಪಾದಚಾರಿ ಮಾರ್ಗ ದುರಸ್ತಿಯಂತಹ ಸಮಸ್ಯೆಗಳ ಪರಿಹಾರಕ್ಕೆ ವರದಿ ನೀಡಿವೆ.

ಎಂಟು ವಿಭಾಗಗಳ ವರದಿಯನ್ನು ಒಟ್ಟುಗೂಡಿಸಿ, 'ಬ್ರ್ಯಾಂಡ್ ಬೆಂಗಳೂರು' ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಅಂತಿಮ ವರದಿ ಸಲ್ಲಿಕೆಯಾಗ ಬೇಕು. ಅನುಷ್ಠಾನಕ್ಕೆ ಉಪ ಮುಖ್ಯಮಂತ್ರಿ, ಮುಖ್ಯಕಾರ್ಯದರ್ಶಿ ನೇತೃತ್ವದಲ್ಲಿ 'ಸಮನ್ವಯ ಸಮಿತಿ' ರಚಿಸುವ ಯೋಚನೆಯಿದೆ. ಆದರೆ, ಪ್ರತಿ ದಿನವೂ 'ಬ್ರ್ಯಾಂಡ್ ಬೆಂಗಳೂರು' ಕರಡು ವರದಿಯಲ್ಲಿರುವ ವಿಷಯಗಳನ್ನೇ ಹೇಳಲಾಗುತ್ತಿದೆ. ಕೆಲವು ಬಾರಿ ಹಿಂದಿನ ವಿಷಯಗಳಿಗೇ ಒಂದಂಶ ಹೊಸದಾಗಿ ಸೇರಿಸಿ ಹೇಳುವ ಪ್ರಕಟಣೆ, ಹೇಳಿಕೆಗಳು ಕೇಳಿಬರುತ್ತಿವೆ. ಎಂಟು ತಿಂಗಳಿಂದ ನೂರಾರು ಸಭೆಗಳನ್ನು ಮಾಡಿದ್ದರೂ 'ಬ್ರ್ಯಾಂಡ್ ಬೆಂಗಳೂರು' ಜಾರಿಗೆ ಯೋಜನೆ ಇನ್ನೂ ಸಿದ್ಧವಾಗಿಲ್ಲ.

'ಸೈಬರ್ ವಂಚನೆ ಪ್ರಕರಣ ಭೇದಿಸಲು ಪೊಲೀಸರಿಗೆ ತರಬೇತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ ನಾಲ್ಕು ವರ್ಷಗಳಿಂದ ರಾಜ್ಯದಲ್ಲಿ ಸೈಬರ್ ವಂಚನೆಯ ಪ್ರಕರಣಗಳು ಹೆಚ್ಚಾಗುತ್ತಿವೆ. ಸೈಬರ್ ಅಪರಾಧ ಪ್ರಕರಣಗಳನ್ನು ಪತ್ತೆಹಚ್ಚಲು ರಾಜ್ಯದ ಎಲ್ಲ ಪೊಲೀಸರಿಗೆ ವಿಶೇಷ ತರಬೇತಿ ನೀಡಲಾಗುವುದು' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಹೇಳಿದರು.

ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಗುರುವಾರ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಸೈಬರ್ ವಂಚನೆಗೆ ಸಂಬಂಧಿಸಿದಂತೆ ನಗರದ ಪ್ರತಿ ಠಾಣೆಗಳಲ್ಲಿ ವಾರ್ಷಿಕ 4 ರಿಂದ 5 ಸಾವಿರ ಪ್ರಕರಣಗಳು ದಾಖಲಾಗುತ್ತಿದ್ದು, ಠಾಣೆಯ ಸಿಬ್ಬಂದಿ ಈ ಪ್ರಕರಣಗಳನ್ನು ಭೇದಿಸುವುದು ಕಷ್ಟ. ಆದ್ದರಿಂದ, ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ. ಸೈಬರ್ ವಂಚನೆಯ ಪ್ರಕರಣಗಳನ್ನು ನಿಯಂತ್ರಿಸಲು ಪೊಲೀಸ್ ಇಲಾಖೆ ಪ್ರಯತ್ನಿಸುತ್ತಿದೆ' ಎಂದು ಮಾಹಿತಿ ನೀಡಿದರು.

ಪೊಲೀಸ್ ಬೀಟ್ ಬಲಪಡಿಸಲು ಸೂಚನೆ: 'ಬೆಂಗಳೂರಿನಲ್ಲಿ 20 ಸಾವಿರ ಪೊಲೀಸರು ಕಾರ್ಯನಿರ್ವಹಿಸುತ್ತಿದ್ದಾರೆ. ಪೊಲೀಸ್ ಬೀಟ್ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಾಗುವುದು' ಎಂದು ಹೇಳಿದರು.

ಬರ ಪರಿಹಾರವಾಗಿ ಸರ್ಕಾರ 2 ಸಾವಿರ ಪರಿಹಾರ ನೀಡಿದ್ದಕ್ಕೆ ತಿರುಗೇಟು ನೀಡಿರುವ ಹಾವೇರಿ ಜಿಲ್ಲೆಯ ರೈತರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರಿಗೆ ₹2,100 ಮೊತ್ತದ 70ಕ್ಕೂ ಹೆಚ್ಚು ಚೆಕ್‌ಗಳನ್ನು ಬರೆದು ಗುರುವಾರ ಪೋಸ್ಟ್ ಮಾಡಿದರು

ಸಿ.ಎಂಗೆ ರೈತರಿಂದ ₹2,100 ಚೆಕ್

ಪ್ರಜಾವಾಣಿ ವಾರ್ತೆ

ಹಾವೇರಿ: ಬರ ಪರಿಹಾರವಾಗಿ ಸರ್ಕಾರ ₹2 ಸಾವಿರ ಪರಿಹಾರ ನೀಡಿದ್ದಕ್ಕೆ ತಿರುಗೇಟು ನೀಡಿರುವ ಜಿಲ್ಲೆಯ ರೈತರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರಿಗೆ ₹2,100 ಮೊತ್ತದ 70ಕ್ಕೂ ಹೆಚ್ಚು ಚೆಕ್‌ಗಳನ್ನು ಬರೆದು ಗುರುವಾರ ಪೋಸ್ಟ್ ಮಾಡಿದ್ದಾರೆ.

ಇಲ್ಲಿಯ ಜಿಲ್ಲಾಡಳಿತ ಭವನದ ಎದುರು ರೈತ ಸಂಘ ಮತ್ತು ಹಸಿರು ಸೇನೆ ನೇತೃತ್ವದಲ್ಲಿ ಜ.23ರಿಂದ ಅಹೋರಾತ್ರಿ ಧರಣಿ ನಡೆಸುತ್ತಿರುವ ನೂರಾರು ರೈತರು, ಎಕರೆಗೆ ₹25 ಸಾವಿರ ಬರ ಪರಿಹಾರ ನೀಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿದ್ದಾರೆ.

ಬೆಳೆನಷ್ಟ ಪರಿಹಾರ ನೀಡದಿದ್ದರೆ ಜ.26ರಂದು ಜಿಲ್ಲಾ ಉಸ್ತುವಾರಿ ಸಚಿವರಿಂದ ಧ್ವಜಾರೋಹಣಕ್ಕೆ ಅವಕಾಶ ಕೊಡುವುದಿಲ್ಲ, ರೈತರೇ ಧ್ವಜಾರೋಹಣ ನೆರವೇರಿಸಲಿದ್ದಾರೆ ಎಂದು ಸವಾಲು ಹಾಕಿದರು.

ರೈತರೊಂದಿಗೆ ಸಂಧಾನ: ಇದರಿಂದ ಎಚ್ಚೆತ್ತ ಜಿಲ್ಲೆಯ ಶಾಸಕರು ರೈತರೊಂದಿಗೆ ಸಂಧಾನ ಸಭೆ ನಡೆಸಿದರು. ಶಾಸಕರಾದ ಬಸವರಾಜ ಶಿವಣ್ಣನವರ, ಶ್ರೀನಿವಾಸ ಮಾನೆ, ಯು.ಬಿ.ಬಣಕಾರ ಅವರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ರೈತರೊಂದಿಗೆ ಮಾತುಕತೆ ನಡೆಸಿದರು. ಆದರೆ, ರೈತರು ಸಂಧಾನಕ್ಕೆ ಮಣಿಯಲಿಲ್ಲ.

ಫಲಪುಷ್ಪ ಪ್ರದರ್ಶನ: ವಾಹನ ನಿಲುಗಡೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟಗಾರಿಕೆ ಇಲಾಖೆ ವತಿಯಿಂದ ಗಣರಾಜ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನಲ್ಲಿ ಜ.28ರವರೆಗೆ ಫಲಪುಷ್ಪ ಪ್ರದರ್ಶನ ಆಯೋಜಿಸಲಾಗಿದ್ದು, ಉದ್ಯಾನದ ಸುತ್ತಮುತ್ತ ಸಂಚಾರ ದಟ್ಟಣೆ ನಿಯಂತ್ರಿಸಲು ಹಲವು ರಸ್ತೆಗಳಲ್ಲಿ ವಾಹನ ನಿಲುಗಡೆಯನ್ನು ನಿರ್ಬಂಧಿಸಲಾಗಿದೆ.

'ಗಣ್ಯರು, ಪ್ರವಾಸಿಗರು, ವಿದೇಶಿಗರು, ಶಾಲಾ ಮಕ್ಕಳು ಸೇರಿದಂತೆ ಸುಮಾರು 10 ಲಕ್ಷ ಜನ ಪ್ರದರ್ಶನ ವೀಕ್ಷಿಸಲು ಬರುವ ನಿರೀಕ್ಷೆ ಇದೆ. ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲು ಸಂಚಾರದಲ್ಲಿ ಬದಲಾವಣೆ ಮಾಡಲಾಗಿದೆ. ಹಲವು ರಸ್ತೆಗಳಲ್ಲಿ ವಾಹನ ನಿಲುಗಡೆ ನಿರ್ಬಂಧಿಸಲಾಗಿದೆ. ಕೆಲವು ಕಡೆ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ನಿಲುಗಡೆ ನಿರ್ಬಂಧಿತ ರಸ್ತೆಗಳು
- ಲಾಲ್‌ಬಾಗ್ ಮುಖ್ಯ ದ್ವಾರದಿಂದ ನಿಮ್ಹಾನ್ಸ್‌ವರೆಗಿನ ಡಾ. ಮರಿಗೌಡ ರಸ್ತೆ
- ಕೆ.ಎಚ್. ವೃತ್ತದಿಂದ ಶಾಂತಿನಗರ ಜಂಕ್ಷನ್
- ಸುಬ್ಬಯ್ಯ ವೃತ್ತದಿಂದ ಲಾಲ್‌ಬಾಗ್ ಮುಖ್ಯದ್ವಾರದವರೆಗೆ
- ಊರ್ವಶಿ ಚಿತ್ರಮಂದಿರದಿಂದ ವಿಲ್ಸನ್ ಗಾರ್ಡನ್ 12ನೇ ಅಡ್ಡರಸ್ತೆವರೆಗೆ
- ಬಿಎಂಟಿಸಿ ಜಂಕ್ಷನ್‌ನಿಂದ ಅಂಚೆ ಕಚೇರಿವರೆಗೆ
- ಲಾಲ್‌ಬಾಗ್ ಪಶ್ಚಿಮ ದ್ವಾರದಿಂದ ಆರ್.ವಿ. ಟೀಚರ್ಸ್ ಕಾಲೇಜ್‌ವರೆಗೆ
- ಆರ್.ವಿ. ಟೀಚರ್ಸ್ ಕಾಲೇಜ್‌ನಿಂದ ಅಶೋಕ ಪಿಲ್ಲರ್‌ವರೆಗೆ
- ಅಶೋಕ ಪಿಲ್ಲರ್‌ನಿಂದ ಸಿದ್ದಾಪುರ ಜಂಕ್ಷನ್‌ವರೆಗೆ

ನಿಲುಗಡೆಗೆ ಅವಕಾಶ ಕಲ್ಪಿಸಿರುವ ರಸ್ತೆಗಳು
- ಡಾ. ಮರಿಗೌಡ ರಸ್ತೆಯ ಅಲ್ ಅಮೀನ್ ಕಾಲೇಜು, ಹಾಪ್‌ಕಾಮ್ಸ್ ಆವರಣ
- ಶಾಂತಿನಗರ ಬಸ್ ನಿಲ್ದಾಣದ ಬಹುಮಹಡಿ ಕಟ್ಟಡ
- ಜೆ.ಸಿ. ರಸ್ತೆಯ ಕಾರ್ಪೋರೇಷನ್ ಪಾರ್ಕಿಂಗ್ ಸ್ಥಳ

ಹೋಮಿಯೋಪಥಿ ಆಯೋಗದ ಅಧ್ಯಕ್ಷ: ಅಧಿಸೂಚನೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಹೋಮಿಯೋಪಥಿ ಆಯೋಗದ ಅಧ್ಯಕ್ಷರನ್ನಾಗಿ ಡಾ.ಅನಿಲ್ ಖುರಾನಾ ಅವರನ್ನು ನೇಮಿಸಿ ಕೇಂದ್ರ ಸರ್ಕಾರ ಹೊರಡಿಸಿದ್ದ ಅಧಿಸೂಚನೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

ನೇಮಕಾತಿ ಪ್ರಶ್ನಿಸಿ ರಾಜ್ಯ ಆಯುಷ್ ಇಲಾಖೆಯ ನಿವೃತ್ತ ನಿರ್ದೇಶಕ ಡಾ.ಅಮರಗೌಡ ಎಲ್. ಪಾಟೀಲ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್.ಎಸ್. ಸಂಜಯಗೌಡ ಅವರಿದ್ದ ಏಕಸದಸ್ಯ ಪೀಠ ಈ ಕುರಿತಂತೆ ಆದೇಶಿಸಿದ್ದು, ನೇಮಕಾತಿ ಹೊಸದಾಗಿ ನಡೆಸಲು ಕೇಂದ್ರಕ್ಕೆ ನಿರ್ದೇಶಿಸಿದೆ.

'ಆಯೋಗದ ಅಧ್ಯಕ್ಷರಾಗಲು ಹೋಮಿಯೋಪಥಿ ಕ್ಷೇತ್ರದಲ್ಲಿ ಕನಿಷ್ಠ 20 ವರ್ಷಗಳ ಸೇವಾನುಭವ ಹೊಂದಿರಬೇಕು. ಅಂತೆಯೇ, ಕನಿಷ್ಠ 10 ವರ್ಷಗಳ ಕಾಲ ಹೋಮಿಯೋಪಥಿ ಮತ್ತು ಹೋಮಿಯೋಪಥಿ ಶಿಕ್ಷಣಕ್ಕೆ ಸಂಬಂಧಿಸಿದ ಅಭಿವೃದ್ಧಿ, ಬೆಳವಣಿಗೆ, ಆರೋಗ್ಯ ಸೇವೆ ಒದಗಿಸುವ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿರಬೇಕು ಎಂದು ರಾಷ್ಟ್ರೀಯ ಹೋಮಿಯೋಪಥಿ ಆಯೋಗ ಕಾಯ್ದೆ-2020ರ ಕಲಂ 4(2) ಹೇಳುತ್ತದೆ. ಆದರೆ, ಡಾ.ಖುರಾನಾ ಇಂತಹ ಸೇವಾನುಭವ ಹೊಂದಿಲ್ಲ. ಹೀಗಾಗಿ, ಅವರ ನೇಮಕಾತಿ ಕಾಯ್ದೆಗೆ ವಿರುದ್ಧವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಇದೇ ವೇಳೆ ರಾಷ್ಟ್ರೀಯ ಹೋಮಿಯೋಪಥಿ ಆಯೋಗದ ಮೆಡಿಕಲ್ ಅಸೆಸ್‌ಮೆಂಟ್ ಆ್ಯಂಡ್ ರೇಟಿಂಗ್ ಬೋರ್ಡ್‌ನ ಅಧ್ಯಕ್ಷರನ್ನಾಗಿ ಡಾ. ಕೆ.ಆರ್.ಜನಾರ್ದನ ನಾಯರ್ ಅವರ ನೇಮಕ ಪ್ರಶ್ನಿಸಿ ಡಾ. ಅಮರಗೌಡ ಎಲ್.ಪಾಟೀಲ ಸಲ್ಲಿಸಿದ್ದ ಮತ್ತೊಂದು ಪ್ರತ್ಯೇಕ ಅರ್ಜಿಯನ್ನು ವಜಾಗೊಳಿಸಿರುವ ಪೀಠ, 'ಡಾ.ಜನಾರ್ದನ ನಾಯರ್ ನೇಮಕಾತಿ ಕ್ರಮಬದ್ಧವಾಗಿದೆ' ಎಂದು ಹೇಳಿದೆ.

ಒಡೆಯರ್ ಪ್ರತಿಮೆ ಅನಾವರಣ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆಯಲ್ಲಿರುವ ದಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್ ತನ್ನ ಆವರಣದಲ್ಲಿ 30 ಅಡಿ ಎತ್ತರದ ಜಲಪಾತ ಮಾದರಿ ಸಹಿತ ಆರು ಅಡಿ ಎತ್ತರದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆ ನಿರ್ಮಿಸಿದ್ದು, ಇದೇ 26ರಂದು ಸಂಜೆ 6.30ಕ್ಕೆ ಪ್ರತಿಮೆ ಅನಾವರಣಗೊಳ್ಳಲಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಇನ್‌ಸ್ಟಿಟ್ಯೂಟ್ ಅಧ್ಯಕ್ಷ ಕೆ. ಸುಕುಮಾರ್, 'ಮೈಸೂರು ಸಂಸ್ಥಾನದ ದೊರೆಯಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್, 1902ರಲ್ಲಿ ನಮ್ಮ ಸಂಸ್ಥೆಗೆ ಎರಡೂವರೆ ಎಕರೆ ಭೂಮಿಯನ್ನು ದಾನವಾಗಿ ನೀಡಿದ್ದರು. ದೂರದೃಷ್ಟಿ ಹೊಂದಿದ್ದ ಅವರು ಕೈಗಾರಿಕೆ, ನೀರಾವರಿ, ಶಿಕ್ಷಣ ಸೇರಿ ವಿವಿಧ ಕ್ಷೇತ್ರಗಳಿಗೆ ಅದ್ವಿತೀಯ ಕೊಡುಗೆ ನೀಡಿದ್ದಾರೆ. ಅವರ ಪ್ರತಿಮೆಯನ್ನು ಸುಮಾರು ₹ 15 ಲಕ್ಷ ವೆಚ್ಚದಲ್ಲಿ ಫೈಬರ್‌ನಲ್ಲಿ (ಪಿಆರ್‌ಪಿ) ನಿರ್ಮಿಸಲಾಗಿದೆ. ಈ ಪ್ರತಿಮೆ ಹಿಂಭಾಗ ಜಲಪಾತದ ಮಾದರಿ ಇರಲಿದ್ದು, ಸದಾ ನೀರು ಬೀಳುತ್ತಿರುತ್ತದೆ' ಎಂದು ಹೇಳಿದರು.

'ಮೈಸೂರಿನ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಗಣರಾಜ್ಯೋತ್ಸವ ದಿನವಾದ ಶುಕ್ರವಾರ ಪ್ರತಿಮೆಯನ್ನು ಅನಾವರಣ ಮಾಡುತ್ತಾರೆ. ಇದೇ ವೇಳೆ ಪ್ರಮೋದಾದೇವಿ ಒಡೆಯರ್ ಹಾಗೂ ಸಂಗೀತ ನಿರ್ದೇಶಕ ಹಂಸಲೇಖ ಅವರಿಗೆ ನಮ್ಮ ಇನ್‌ಸ್ಟಿಟ್ಯೂಟ್‌ನ ಗೌರವ ಸದಸ್ಯತ್ವ ನೀಡಲಾಗುತ್ತದೆ. ಸಂಜೆ 7.30ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ' ಎಂದು ತಿಳಿಸಿದರು.

'ಇದೇ ವೇಳೆ ಹಂಸಲೇಖ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತಾಗಿ ನಿರ್ದೇಶಿಸಿರುವ ಕಿರುಚಿತ್ರ 'ಜಯಹೇ' ಪ್ರದರ್ಶನಗೊಳ್ಳಲಿದೆ. ಈ ಕಿರುಚಿತ್ರವು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಧನೆಗಳನ್ನು ಪ್ರಸ್ತುತಪಡಿಸಲಿದೆ' ಎಂದರು.

ದಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್ ಉಪಾಧ್ಯಕ್ಷ ಎಸ್.ಸಿ. ಚಂದ್ರಶೇಖರ್, ಗೌರವ ಕಾರ್ಯದರ್ಶಿ ಲಕ್ಷ್ಮೀಶ ಚಂದ್ರ, ಗೌರವ ಖಜಾಂಚಿ ವಿರೂಪಾಕ್ಷ ಬಿ.ಪಿ. ಪಾಲ್ಗೊಂಡಿದ್ದರು.

ಸಮ್ಮೇಳನ: ₹ 25 ಕೋಟಿಗೆ ಕಸಾಪ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮುಂಬರುವ ಬಜೆಟ್‌ನಲ್ಲಿ ₹ 25 ಕೋಟಿ ಅನುದಾನ ಮೀಸಲಿಡುವಂತೆ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದೆ.

ಈ ಬಗ್ಗೆ ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. 'ಹಾವೇರಿಯಲ್ಲಿ ನಡೆದ 86ನೇ ಸಾಹಿತ್ಯ ಸಮ್ಮೇಳನಕ್ಕೆ ಬಜೆಟ್‌ನಲ್ಲಿಯೇ ₹ 20 ಕೋಟಿ ಅನುದಾನ ನೀಡಿ, ಬಳಿಕ ₹ 5 ಕೋಟಿ ಅನುದಾನವನ್ನು ಹೆಚ್ಚುವರಿಯಾಗಿ ಸರ್ಕಾರ ನೀಡಿತ್ತು. ಅದೇ ರೀತಿ, ಈ ಬಾರಿಯ ಬಜೆಟ್‌ನಲ್ಲಿ ಸಾಹಿತ್ಯ ಸಮ್ಮೇಳನಕ್ಕೆ ಅನುದಾನ ಮೀಸಲಿಡಬೇಕು. ಪರಿಷತ್ತಿನ ನಿರ್ವಹಣೆಗೆ ವಾರ್ಷಿಕ ₹ 20 ಕೋಟಿ ಅನುದಾನವನ್ನು ಒದಗಿಸಬೇಕು' ಎಂದು ತಿಳಿಸಿದ್ದಾರೆ.

'ಈಗ ಪರಿಷತ್ತಿನ ಚಟುವಟಿಕೆಗಳ ಗಾತ್ರ ಹಿಗ್ಗಿದೆ. 31 ಜಿಲ್ಲಾ ಮತ್ತು 6 ಗಡಿನಾಡು ಘಟಕವನ್ನು ಪರಿಷತ್ತು ಹೊಂದಿದೆ. ತಾಲ್ಲೂಕು ಸಮ್ಮೇಳನಗಳ ಜತೆಗೆ ಜಿಲ್ಲಾ, ತಾಲ್ಲೂಕು, ಗಡಿನಾಡು ಘಟಕಗಳ ನಿರ್ವಹಣೆ, ಸಿಬ್ಬಂದಿ ವೇತನ, ಕಚೇರಿ ನಿರ್ವಹಣೆ ಸೇರಿ ವಿವಿಧ ವೆಚ್ಚಗಳನ್ನು ಭರಿಸಬೇಕಿದೆ. ನಿಘಂಟು ಯೋಜನೆಗೆ ಮರು ಚಾಲನೆ, ಯುವ ಸಂಪುಟ, ಸುವರ್ಣ ಮಹೋತ್ಸವದ ಸಂಪುಟಗಳೂ ಸೇರಿ ಹಲವು ಮಹತ್ವದ ಯೋಜನೆಗಳನ್ನು ಪರಿಷತ್ತು ಹೊಮ್ಮಿಕೊಂಡಿದೆ. ಹಳೆಯ ಅಮೂಲ್ಯವಾದ ಕೃತಿಗಳೂ ಮರು ಮುದ್ರಣ ಆಗಬೇಕಿದೆ. ಹೀಗಾಗಿ, ಪರಿಷತ್ತಿನ ನಿರ್ವಹಣೆಗೆ ಹೆಚ್ಚಿನ ಅನುದಾನ ಒದಗಿಸಬೇಕು' ಎಂದು ಪತ್ರದಲ್ಲಿ ಕೋರಿಕೊಂಡಿದ್ದಾರೆ.

ಇಳಯರಾಜಾ ಪುತ್ರಿ ಗಾಯಕಿ ಭವತಾರಿಣಿ ನಿಧನ

ಪ್ರಜಾವಾಣಿ ವಾರ್ತೆ

ಚೆನ್ನೈ: ರಾಷ್ಟ್ರಪ್ರಶಸ್ತಿ ವಿಜೇತ ಹಿನ್ನೆಲೆ ಗಾಯಕಿ ಭವತಾರಿಣಿ (47) ಅನಾರೋಗ್ಯದಿಂದ ಶ್ರೀಲಂಕಾದಲ್ಲಿ ಗುರುವಾರ ನಿಧನರಾದರು. ಭವತಾರಿಣಿ, ಸಂಗೀತ ಮಾಂತ್ರಿಕ ಇಳಯರಾಜಾ ಅವರ ಪುತ್ರಿ.

ಅವರಿಗೆ ಪತಿ, ಉದ್ಯಮಿ ಆರ್. ಶಬರಿರಾಜಾ ಇದ್ದಾರೆ. ಸಂಗೀತ ನಿರ್ದೇಶಕರಾದ ಯುವನ್ ಶಂಕರ್ ರಾಜಾ ಮತ್ತು ಕಾರ್ತಿಕ್ ರಾಜಾ ಅವರು ಭವತಾರಿಣಿಯ ಸಹೋದರರು.

ಅವರು ತಮಿಳು, ತೆಲುಗು, ಕನ್ನಡ, ಮಲಯಾಳ, ಹಿಂದಿಯಲ್ಲೂ ಹಲವು ಗೀತೆಗಳನ್ನು ಹಾಡಿದ್ದಾರೆ. ಕ್ಯಾನ್ಸರ್‌ಗೆ ತುತ್ತಾಗಿದ್ದ ಭವತಾರಿಣಿ, ಕಳೆದ ಕೆಲವು ತಿಂಗಳುಗಳಿಂದ ಶ್ರೀಲಂಕಾದಲ್ಲಿ ಆಯುರ್ವೇದ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಮೂಲಗಳು ಹೇಳಿವೆ.

'ತಮಿಳು ರಾಷ್ಟ್ರಕವಿ ಸುಬ್ರಹ್ಮಣ್ಯ ಭಾರತಿ ಅವರ ಜೀವನ ಆಧರಿಸಿದ 'ಭಾರತಿ' ಚಿತ್ರದಲ್ಲಿನ ಗಾಯನಕ್ಕಾಗಿ ಭವತಾರಿಣಿ ರಾಷ್ಟ್ರಪ್ರಶಸ್ತಿ ಪಡೆದಿದ್ದರು. ಅವರ ಸಾವು ತುಂಬಲಾರದ ನಷ್ಟ' ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹೇಳಿದ್ದಾರೆ.

ನಿಧನವಾರ್ತೆ

ಕೃಷ್ಣಕುಮಾರ್

ಬೆಂಗಳೂರು: ನಗರದ ಗಾಂಧಿ ಬಜಾರ್‌ನ ಪತ್ರಿಕಾ ವಿತರಕ ಕೃಷ್ಣಕುಮಾರ್ (53) ಅವರು ಮಂಗಳವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ. ಕೃಷ್ಣಕುಮಾರ್ ಅವರು 40 ವರ್ಷಗಳಿಂದ ಪತ್ರಿಕಾ ವಿತರಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಬುಧವಾರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಗಣರಾಜ್ಯೋತ್ಸವ ವಿಶೇಷ ಪ್ರಶಸ್ತಿ ಪ್ರದಾನ, ಗಣರಾಜ್ಯೋತ್ಸವ, ಕ್ಯಾಲೆಂಡರ್ ಬಿಡುಗಡೆ, ಗುರುತಿನ ಚೀಟಿ ವಿತರಣೆ: ಸಾನ್ನಿಧ್ಯ: ಬ್ರಹ್ಮಾನಂದ ಗುರೂಜಿ, ಅಧ್ಯಕ್ಷತೆ: ಲಕ್ಷ್ಮೀಪತಯ್ಯ, ಅತಿಥಿಗಳು ಪಿ. ಕೃಷ್ಣಭಟ್, ಜಾಣಗೆರೆ ವೆಂಕಟರಾಮಯ್ಯ, ಸಿ.ಎಂ. ಗಣೇಶ್‌ಗೌಡ, ಡಿ.ಎಸ್. ವೀರಯ್ಯ, ಬೈರಮಂಗಲ ರಾಮೇಗೌಡ, ನಾರಾಯಣ ಘಟ್ಟ, ಆಯೋಜನೆ: ಕರ್ನಾಟಕ ಮಾನವ ಹಕ್ಕುಗಳ ಸಂರಕ್ಷಣಾ ಸಂಸ್ಥೆ, ಶಿವಕುಮಾರ ಸ್ವಾಮೀಜಿ ಭಕ್ತರ ಬಳಗ ಸೇವಾ ಟ್ರಸ್ಟ್, ಜಮುನಾಲಯ ವೃದ್ಧಾಶ್ರಮ ಟ್ರಸ್ಟ್, ಸ್ಥಳ: ಬಸವೇಶ್ವರ ಕಲ್ಯಾಣ ಮಂಟಪ, ಕೆಂಪೇಗೌಡ ನಗರ ಬಸ್ ನಿಲ್ದಾಣ, ಲಗ್ಗೆರೆ ಮುಖ್ಯರಸ್ತೆ, ಬೆಳಿಗ್ಗೆ 7

ಧ್ವಜಾರೋಹಣ: ಎನ್.ಆರ್. ರಮೇಶ್, ಅಧ್ಯಕ್ಷತೆ: ಜಗದೀಶ ರೆಡ್ಡಿ, ಅತಿಥಿ: ಮಧು ಕುಮಾರ್, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘ, ಎಚ್. ಸಿದ್ದಯ್ಯ ರಸ್ತೆ, ಹೊಂಬೇಗೌಡ ನಗರ, ಬೆಳಿಗ್ಗೆ 7.30

ಧ್ವಜಾರೋಹಣ: ಸುಭಾಷ್ ಬಿ. ಅಡಿ, ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಅತಿಥಿಳ ವ್ರೂಡೇ ಪಿ. ಕೃಷ್ಣ, ಆಯೋಜನೆ: ಶೇಷಾದ್ರಿಪುರಂ ಸಂಜೆ ಕಾಲೇಜು, ಸ್ಥಳ: ಕಾಲೇಜಿನ ಶಿಕ್ಷಣ ದತ್ತಿ ಆವರಣ, ಬೆಳಿಗ್ಗೆ 7.30

ಉದ್ಘಾಟನೆ: ಎಸ್.ಜಾಫೆಟ್, ಅಧ್ಯಕ್ಷತೆ: ಸಿ.ಕೆ. ರವಿಚಂದ್ರ, ಅತಿಥಿಗಳು: ನಾಗರಾಜು, ಪ್ರೇಮನಾಥ್, ಆಯೋಜನೆ: ರಾಜ್ಯ ನಡಿಗೆದಾರರ ಒಕ್ಕೂಟ, ಸ್ಥಳ: ಲಾಲ್‌ಭಾಗ್ ಪಶ್ಚಿಮ ದ್ವಾರದ ಬಳಿ, ಬೆಳಿಗ್ಗೆ 7.30

ಧ್ವಜಾರೋಹಣ ಮತ್ತು ಸಂಗೊಳ್ಳಿ ರಾಯಣ್ಣ ಸ್ಮರಣೆ: ಅತಿಥಿಗಳು ವಿ. ಸೋಮಣ್ಣ, ಅರುಣ್ ಸೋಮಣ್ಣ, ಆಯೋಜನೆ: ಬಿಜೆಪಿ ಗೋವಿಂದರಾಜನಗರ ಮಂಡಲ, ಸ್ಥಳ: ಗೋವಿಂದರಾಜನಗರ ಬಿಜೆಪಿ ಕಚೇರಿ, ಬೆಳಿಗ್ಗೆ 8.30

ಗಣರಾಜ್ಯೋತ್ಸವ ಅರಿವು ಕಾರ್ಯಕ್ರಮ, ಜನಪದ ಗೀತೆ ಗಾಯನ, ಮಕ್ಕಳ ನಾಟಕ 'ಅನುಕರಣೆ' ಪ್ರದರ್ಶನ: ಆಯೋಜನೆ: ಗೌರಿಶಂಕರ ಅಕಾಡೆಮಿ ಫಾರ್ ಕಲ್ಚರ್ ಆ್ಯಂಡ್ ಸ್ಪೋರ್ಟ್ಸ್ ಟ್ರಸ್ಟ್, ಸ್ಥಳ: ಸರ್ಕಾರಿ ಪ್ರಾಥಮಿಕ ಶಾಲೆ, ಕರಿಯಪ್ಪನಪಾಳ್ಯ, ಉತ್ತರಹಳ್ಳಿ, ಬೆಳಿಗ್ಗೆ 9

ಧ್ವಜಾರೋಹಣ: ಲಿಂಗರಾಜ ಗಾಂಧಿ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಸೆಂಟ್ರಲ್ ಕಾಲೇಜು ಆವರಣ, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 9

ಧ್ವಜ ಅನಾವರಣ, ಸಾಂಸ್ಕೃತಿಕ ಕಾರ್ಯಕ್ರಮ, 'ಶಕ್ತಿಮಿತ್ರ' ಏಕವ್ಯಕ್ತಿ ರಂಗಪ್ರಯೋಗ: ಅತಿಥಿಗಳು: ಆರ್. ಪಿ. ಮೋಹನ್, ನರಸಿಂಹ ನಾಯ್ಕ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್, ಜಾಲಹಳ್ಳಿ, ಬೆಳಿಗ್ಗೆ 9

ಧ್ವಜಾರೋಹಣ: ಕೊಂಡಜ್ಜಿ ಬಿ. ಷಣ್ಮುಖಪ್ಪ, ಅತಿಥಿಗಳು: ಎಂ.ಎ. ಖಾಲಿದ್, ಗೀತಾ ನಟರಾಜ್, ಚಿನ್ನಸ್ವಾಮಿ ರೆಡ್ಡಿ, ಬಿ.ವಿ. ರಾಮಲತಾ, ಟಿ. ಪ್ರಭಾಕರ್, ಬಿ.ಕೆ. ಬಸವರಾಜ, ಸಿ.ವಿ. ಕೃಪಾ ವಿಜಯ್, ಕೆ.ಗಂಗಪ್ಪ, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಥಳ: ಶಾಂತಿಗೃಹ, ಅರಮನೆ ರಸ್ತೆ, ಬೆಳಿಗ್ಗೆ 9

ಧ್ವಜಾರೋಹಣ: ಸಿದ್ದರಾಮಯ್ಯ, ಆಯೋಜನೆ: ಕರ್ನಾಟಕ ಸರ್ಕಾರ, ಸ್ಥಳ: ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಮೈದಾನ, ಎಂ.ಜಿ. ರೋಡ್, ಬೆಳಿಗ್ಗೆ 9

ಕಾಲ್ನಡಿಗೆ ಜಾಥಾ: ಧ್ವಜಾರೋಹಣ: ಎನ್. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಸಿಸ್ಟರ್ ಲಿಲ್ಲಿ ಫರ್ನಾಂಡಿಸ್, ಅತಿಥಿಗಳು: ರೂಪಾ ವಿನಯ್, ಜೆಸಿಂತ ಪಿರೇರಾ, ಆಯೋಜನೆ ಮತ್ತು ಸ್ಥಳ: ಜ್ಞಾನಬೋಧಿನಿ ಪ್ರೌಢಶಾಲೆ, ದುಬಾಸಿಪಾಳ್ಯ, ಬೆಳಿಗ್ಗೆ 9.30

ಧ್ವಜಾರೋಹಣ: ಎಂ.ಎನ್. ಹೊನ್ನೇಗೌಡ, ಅಧ್ಯಕ್ಷತೆ: ಎಚ್. ಶರಶ್ಚಂದ್ರ, ಅತಿಥಿ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆ, ಬೆಳಿಗ್ಗೆ 9.30

ಧ್ವಜಾರೋಹಣ: ಎಂ.ಜಿ. ರಾಜಗೋಪಾಲ್, ಅಧ್ಯಕ್ಷತೆ: ಎಂ.ಎಸ್. ಮೃತ್ಯುಂಜಯ್, ಅತಿಥಿಗಳು: ಬಿ.ಎಸ್. ರಾಜು, ಬಿ.ಬಿ. ಪರಮಶಿವಯ್ಯ, ಆರ್. ರಾಜು, ಆಯೋಜನೆ: ರಾಜಾಜಿನಗರ ಪೇರೆಂಟ್ಸ್ ಎಜುಕೇಶನಲ್ ಸೊಸೈಟಿ, ಸ್ಥಳ: ಒನಕೆ ಓಬವ್ವ ಆಟದ ಮೈದಾನ, ರಾಜಾಜಿನಗರ, 69ನೇ ಅಡ್ಡರಸ್ತೆ, 5ನೇ ವಿಭಾಗ, ಬೆಳಿಗ್ಗೆ 9.30

ಧ್ವಜಾರೋಹಣ: ಎಂ.ವೆಂಕಟಸ್ವಾಮಿ, ಅಧ್ಯಕ್ಷತೆ: ಎನ್.ಎಸ್. ಸುಬ್ಬರಾಮಯ್ಯ, ಅತಿಥಿಗಳು: ಬಿ.ಟಿ. ಲಲಿತಾ ನಾಯಕ್, ಪಿ.ಎಂ. ಪರಶಿವಮೂರ್ತಿ, ಎಸ್. ವಿಜಯಕುಮಾರ್, ಆಯೋಜನೆ: ಸಮತಾ ಸೈನಿಕ ದಳ, ಸ್ಥಳ: ನಾಗಸೇನಾ ವಿದ್ಯಾಲಯ, ಸದಾಶಿವ ನಗರ, ಬೆಳಿಗ್ಗೆ 9.30

ಧ್ವಜಾರೋಹಣ: ವಿ. ಗೋಪಾಲ ಗೌಡ, ಅಧ್ಯಕ್ಷತೆ: ವಿಷ್ಣು ಭರತ್ ಅಲಂಪಳ್ಳಿ, ಆಯೋಜನೆ: ಆಚಾರ್ಯ ಪಾಠಶಾಲಾ, ಎಜುಕೇಶನ್ ಟ್ರಸ್ಟ್, ಎಪಿಎಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಸ್ಥಳ: ಎಪಿಎಸ್ ಆಟದ ಮೈದಾನ, ನರಸಿಂಹರಾಜ ಕಾಲೊನಿ, ಬೆಳಿಗ್ಗೆ 9.30

ಗಣರಾಜ್ಯೋತ್ಸವ ಆಯೋಜನೆ: ಮೈಸೂರು ಪೌರ ಮತ್ತು ಸಾಮಾಜಿಕ ಪ್ರಗತಿ ಸಂಘ, ಲೋಕಮಾನ್ಯ ಸಂಘ, ವಾಸವಿ ಕ್ಲಬ್, ಕರ್ನಾಟಕ ಲೇಖಕರ ಸಂಘ, ಸಮರ್ಪಣ ಸಂಘಟನೆ, ಕನ್ನಡ ಪಕ್ಷ, ರಾಮಯ್ಯಂಗಾರ್ ರಸ್ತೆ ನಿವಾಸಿಗಳ ಸಂಘ, ನಾಗರಿಕ ಸೇವಾ ಸಮಿತಿಗಳು, ಬಸವನಗುಡಿ-ಮಾವಳ್ಳಿ-ವಿಶ್ವೇಶ್ವರಪುರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಚಾರುಕೀರ್ತಿ ಭಟ್ಟಾರಕ ವೇದಿಕೆ, ಭಾರತ ಸ್ವಾತಂತ್ರ್ಯ ಹೋರಾಟಗಾರರ ಸಮಿತಿ, ಸ್ಥಳ: ಸಜ್ಜನರಾವ್ ವೃತ್ತ, ವಿಶ್ವೇಶ್ವರಪುರ, ಬೆಳಿಗ್ಗೆ 10

ಧ್ವಜಾರೋಹಣ: ಕೆ. ದೇವರಾಜ್, ಅತಿಥಿಗಳು: ಶಿಲ್ಪಾ ರೇಣುಕಪ್ಪ, ಕುಮಾರ್ ಕೆ.ಎಚ್., ಆಯೋಜನೆ: ಸ್ಕಂದನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಸಂಘದ ಕಚೇರಿ, ಸ್ಕಂದನಗರ, ಎಲೆಕೊಡಿಗೆಹಳ್ಳಿ, ಬೆಳಿಗ್ಗೆ 10.30

ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ನಡಿಗೆ- ಪ್ರಬುದ್ಧ ಭಾರತದೆಡೆಗೆ: ಉದ್ಘಾಟನೆ: ಬಿ.ಟಿ. ಲಲಿತಾ ನಾಯಕ್, ಅತಿಥಿಗಳು: ವಡ್ಡಗೆರೆ ನಾಗರಾಜಯ್ಯ, ಬಸವರಾಜ ಕೌತಾಳ್, ಎಂ.ಸಿ. ನಾರಾಯಣ್, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ), ಸ್ಥಳ: ಯುವಿಸಿಇ ಅಲುಮ್ನಿ ಭವನ, ಕೆ.ಆರ್. ವೃತ್ತ, ಬೆಳಿಗ್ಗೆ 11.30

ಸಾಂಸ್ಕೃತಿಕ ಕಾರ್ಯಕ್ರಮ: ಉದ್ಘಾಟನೆ: ಜಮೀರ್ ಅಹ್ಮದ್ ಖಾನ್, ಮುಖ್ಯ ಅತಿಥಿಗಳು: ಸುಜಾತ ಡಿ.ಸಿ. ರಮೇಶ್, ಗೋಪಾಲಣ್ಣ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ರಾಜ್ಯ ಸಾಹಿತಿ, ಕಲಾವಿದರ, ಸಾಂಸ್ಕೃತಿಕ ಚಿಂತಕರ ಸಂಘ-ಸಂಸ್ಥೆಗಳ ಒಕ್ಕೂಟ, ಸ್ಥಳ: ಕಸ್ತೂರಿ ಬಾ ನಗರ ಮುಖ್ಯರಸ್ತೆ, ಸಾಯಿ ದೇವಸ್ಥಾನ ಮುಂಭಾಗ, ಸಂಜೆ 6

ಗಣರಾಜ್ಯೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ: ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಇತರೆ ಕಾರ್ಯಕ್ರಮ

20ನೇ ವಾರ್ಷಿಕ ಸಂಗೀತ ಮತ್ತು ನೃತ್ಯ ಉತ್ಸವ ಹಾಗೂ ಪುರಂದರ ಪ್ರಶಸ್ತಿ ಪ್ರದಾನ ಸಮಾರಂಭ: ಸಾನ್ನಿಧ್ಯ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಗೌರವ ಅತಿಥಿ: ಜಗದೀಶ್, 'ಪುರಂದರ ಪ್ರಶಸ್ತಿ': ನೆಯ್ವೇಲಿ ಸಂತಗೋಪಾಲನ್, 'ಪುರಂದರ ಆಚಾರ್ಯ ಪ್ರಶಸ್ತಿ': ಪ್ರಿನ್ಸ್ ರಾಮ ವರ್ಮ, ನಿರೂಪಮಾ, ನಿರಂಜನ್, 'ಯುವ ಪುರಂದರ ಪ್ರಶಸ್ತಿ': ವಿವೇಕ್ ಸದಾಶಿವಮ್, ಶ್ರೇಯಾ, ರಾಜಲಕ್ಷ್ಮಿ, ಆಯೋಜನೆ: ಇಂದಿರಾನಗರ ಸಂಗೀತ ಸಭಾ, ಸ್ಥಳ: ಪುರಂದರ ಭವನ, 8ನೇ ಮುಖ್ಯರಸ್ತೆ, ಎಚ್‌ಎಎಲ್ 2ನೇ ಹಂತ, ಬೆಳಿಗ್ಗೆ 9.30

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ 193ನೇ ಸ್ಮರಣೋತ್ಸವ ಅಂಗವಾಗಿ ರಾಯಣ್ಣನವರ ಪುತ್ಥಳಿಗೆ ಮಾಲಾರ್ಪಣೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಮಾಲಾರ್ಪಣೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಉಪಸ್ಥಿತಿ: ರಾಕೇಶ್ ಸಿಂಗ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಆಯೋಜನೆ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನ, ಸ್ಥಳ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿ ಆವರಣ, ದೇವರಾಜ ಅರಸು ವೃತ್ತ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದ ಎದುರು, ಬೆಳಿಗ್ಗೆ 10

ನಿರ್ಮಲಾನಂದನಾಥ ಸ್ವಾಮೀಜಿ

ಪುಸ್ತಕ ಸುಗ್ಗಿ: ಕನ್ನಡ ಮತ್ತು ಇಂಗ್ಲಿಷ್ ಪುಸ್ತಕಗಳ ಜಾತ್ರೆ, 'ಅಕ್ಷರ ಸುಗ್ಗಿ ಮಾತಿನ ಹುಗ್ಗಿ' ಮಾತುಕತೆ, ಭಾಗವಹಿಸುವವರು: ಆರ್. ಶೇಷಶಾಸ್ತ್ರಿ, ಗಿರೀಶ್ ರಾವ್ ಹತ್ವಾರ್ (ಜೋಗಿ), ರಾ.ನಂ. ಚಂದ್ರಶೇಖರ, ವಿದ್ಯಾರಶ್ಮಿ ಪೆಲತ್ತಡ್ಕ, ಗಾಣಧಾಳು ಶ್ರೀಕಂಠ, ಶಶಿಧರ ಹಾಲಾಡಿ, ಆಯೋಜನೆ ಹಾಗೂ ಸ್ಥಳ: ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಳಿಗ್ಗೆ 11

'ಸಂವಿಧಾನ ಉಳಿಸಿ-ದೇಶ ಉಳಿಸಿ' ರಾಜ್ಯಮಟ್ಟದ ಜಾಗೃತಿ ಸಮಾವೇಶ: ಉದ್ಘಾಟನೆ: ಮೂಡ್ನಾಕೂಡು ಚಿನ್ನಸ್ವಾಮಿ, ಅಧ್ಯಕ್ಷತೆ: ಆರ್. ಮೋಹನ್‌ರಾಜ್, ಸಂವಿಧಾನ ಬೋಧನೆ: ಚೇತನ್ ಅಹಿಂಸಾ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 11

ಮೂಡ್ನಾಕೂಡು ಚಿನ್ನಸ್ವಾಮಿ

ವಿಶ್ವ ಲೂಯಿ ಬ್ರೈಲ್ ಡೇ ಕಾರ್ಯಕ್ರಮ: ಮುಖ್ಯ ಅತಿಥಿಗಳು: ರಾಜೇಶ್ ಕುಮಾರ್, ಹರೀಶ್ ಬಾಬು ಎಂ., ಆಯೋಜನೆ: ಲೂಯಿಸ್ ಟ್ರಸ್ಟ್ ಫಾರ್ ದಿ ವಿಷ್ಯೂವಲಿ ಚಾಲೆಂಜ್ಡ್, ಸ್ಥಳ: ಗಾಂಧಿ ಭವನ, ಶಿವಾನಂದ ವೃತ್ತ, ಬೆಳಿಗ್ಗೆ 11

ಟಿ.ಕೆ. ಮೂರ್ತಿ ಶತಮಾನೋತ್ಸವ ಸಂಭ್ರಮ: ಮುಖ್ಯ ಅತಿಥಿ: ಆರ್. ಕೆ. ಪದ್ಮನಾಭ, ಗೌರವ ಅತಿಥಿಗಳು: ಸುಮಾ ಸುಧೀಂದ್ರ, ಮೈಸೂರು ನಾಗರಾಜ್, ಸಂಗೀತ ಕಛೇರಿ: ಮೈಸೂರು ಎಂ. ನಾಗರಾಜ್, ಮೈಸೂರು ಎಂ. ಮಂಜುನಾಥ್, ಅರ್ಜುನ್ ಕುಮಾರ್, ಗುರು ಪ್ರಸನ್ನ, ಗಿರಿಧರ್ ಉಡುಪ, ಆಯೋಜನೆ: ಶ್ರೀ ಮೂಕಾಂಬಿಕಾ ತಾಳವಾದ್ಯ ಸಂಗೀತ ಕಲಾಶಾಲೆ, ಸ್ಥಳ: ಪತ್ತಿ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 4.45

177ನೇ ಸದ್ಗುರು ತ್ಯಾಗಬ್ರಹ್ಮ ವೈದಿಕ ಆರಾಧನಾ ಕೈಂಕರ್ಯಂ, ಸಂಗೀತೋತ್ಸವ: ಶಾಸ್ತ್ರೀಯ ಸಂಗೀತ ಗಾರರಿಂದ ಸಂಗಿತ ಕಛೇರಿ, ಆಯೋಜನೆ: ಸದ್ಗುರು ಶ್ರೀ ತ್ಯಾಗ ಬ್ರಹ್ಮ ಕೈಂಕರ್ಯ ಟ್ರಸ್ಟ್, ಸ್ಥಳ: ಶೃಂಗೇರಿ ಶಂಕರ ಮಠದ ಆವರಣ, ಚಾಮರಾಜಪೇಟೆ, ಸಂಜೆ 5

'ಮೈಸೂರು ಮಲ್ಲಿಗೆ' ನಾಟಕ ಪ್ರದರ್ಶನ: ಆಯೋಜನೆ: ಕಲಾಗಂಗೋತ್ರಿ, ಸ್ಥಳ: ಸಿದ್ಧಗಂಗಾ ಪಬ್ಲಿಕ್ ಶಾಲೆ, ಚಂದ್ರಾ ಲೇಔಟ್, ಸಂಜೆ 5.30

ಫ್ಯೂಷನ್ ಸಂಗೀತ ಮತ್ತು ನೃತ್ಯೋತ್ಸವ ಸಮಾರೋಪ ಸಮಾರಂಭ: ಫ್ಯೂಷನ್ ಸಂಗೀತ ಕುರಿತು ಉಪನ್ಯಾಸ: ಪ್ರವೀಣ್ ಡಿ. ರಾವ್, ಮುಖ್ಯ ಅತಿಥಿ: ಚಿರಂಜೀವಿ ಸಂಘ್, 'ರಾಗ್ ರಂಗ್' ಫ್ಯೂಷನ್ ಕೊಳಲು ವಾದನ: ಪ್ರವೀಣ್ ಗೋಡ್ಖಿಂಡಿ, ಕೀಬೋರ್ಡ್: ವಿ. ಉಮೇಶ್, ತಬಲಾ: ಕಿರಣ್ ಗೋಡ್ಖಿಂಡಿ, ಡ್ರಮ್: ಪ್ರಕಾಶ್ ಆಂಥೊನಿ, ಆಯೋಜನೆ: ಇನ್ಫೊಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6



ಪ್ರವೀಣ್ ಗೋಡ್ಖಿಂಡಿ

'ಶಿಕ್ಷಕ ಶಿಷ್ಯ' ಭರತನಾಟ್ಯ: ಚಿತ್ರಾ ಅರವಿಂದ್ ಮತ್ತು ಅವರ ಶಿಷ್ಯರು, ಮುಖ್ಯ ಅತಿಥಿ: ಲಲಿತಾ ಶ್ರೀನಿವಾಸನ್, ಆಯೋಜನೆ: ಕಲಾ ಪ್ರೇಮಿ ಫೌಂಡೇಶನ್, ಸ್ಥಳ: ಸೇವಾ ಸದನ, ಎಂಎಲ್‌ಎ ಕಾಲೇಜು ಎದುರು, ಸಂಜೆ 6.30

ಹರಿದಾಸ ಮಂಜರಿ: ಗಾಯನ: ಎಸ್. ವಿ. ಚಂದನ, ಆಯೋಜನೆ ಹಾಗೂ ಸ್ಥಳ: ಅಭಯಗಿರಿ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, 6ನೇ ಮುಖ್ಯರಸ್ತೆ, ತ್ಯಾಗರಾಜನಗರ, ಸಂಜೆ 6.30

ಹರಿನಾಮ ಸಂಕೀರ್ತನೆ: ಮನಸ್ವಿ ಕಶ್ಯಪ್, ವಾದ್ಯ ಸಹಕಾರ: ಅಮಿತ್ ಶರ್ಮಾ, ಸರ್ವೋತ್ತಮ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಕೆಂಗೇರಿ ಉಪನಗರ, ಸಂಜೆ 6.30

'ಬಿ ಗೂಡ್ ಡೂ ಗೂಡ್' ಉಪನ್ಯಾಸ ಸರಣಿ ಸಮಾರೋಪ: ಮುಖ್ಯ ಅತಿಥಿ: ಎನ್. ತಿಪ್ಪೇಸ್ವಾಮಿ, ಆಯೋಜನೆ: ಸಮರ್ಥ ಭಾರತ, ಸ್ಥಳ: ರಾಷ್ಟ್ರೋತ್ಥಾನ ಯೋಗ ಆ್ಯಂಡ್ ಫಿಟ್‌ನೆಸ್ ಸೆಂಟರ್, ಜಯನಗರ 4ನೇ ಬ್ಲಾಕ್, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

96 ಕೋಟಿ ದಾಟಿದ ಮತದಾರರ ಸಂಖ್ಯೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಲು 96 ಕೋಟಿ ಮತದಾರರು ಅರ್ಹರಾಗಿದ್ದು, ಕಳೆದ ಚುನಾವಣೆಗೆ ಹೋಲಿಸಿದರೆ ಮತದಾರರ ಸಂಖ್ಯೆಯು ಐದು ಕೋಟಿಯಷ್ಟು ಹೆಚ್ಚಳ ಆಗಿದೆ.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ನಡೆಯಲಿರುವ ಚುನಾವಣೆಗೆ ಕೇಂದ್ರ ಚುನಾವಣಾ ಆಯೋಗ (ಇಸಿ) ದೇಶದಾದ್ಯಂತ ಸುಮಾರು 12 ಲಕ್ಷ ಮತದಾನ ಕೇಂದ್ರಗಳನ್ನು ಸ್ಥಾಪಿಸಲಿದೆ.

2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ದೇಶದಲ್ಲಿ ಮತದಾರರ ಸಂಖ್ಯೆ 91 ಕೋಟಿಯಷ್ಟಿತ್ತು.

ಅಂಕಿ ಅಂಶಗಳು

81 ಲಕ್ಷ ಅಂಗವಿಕಲ ಮತದಾರರ ಸಂಖ್ಯೆ

1.8 ಕೋಟಿ 80 ವರ್ಷ ದಾಟಿದ ಮತದಾರರು

2.5 ಲಕ್ಷ ಶತಾಯುಷಿಗಳು

ಚುನಾವಣಾ ಆಯೋಗವು ಕಳೆದ ಬಾರಿ 10 ಲಕ್ಷದಷ್ಟು ಮತದಾನ ಕೇಂದ್ರಗಳನ್ನು ಸ್ಥಾಪಿಸಿತ್ತು.

ಚುನಾವಣಾ ಅಯೋಗ ಗುರುವಾರ ನವದೆಹಲಿಯಲ್ಲಿ '14ನೇ ರಾಷ್ಟ್ರೀಯ ಮತದಾರರ ದಿನ' ಆಚರಿಸಿತು. ಕಾರ್ಯಕ್ರಮದಲ್ಲಿ ಪಾಲ್ಗೊಂಡ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, 'ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ವಿಸ್ತಾರ ಮತ್ತು ವೈವಿಧ್ಯತೆಯು ಹೆಮ್ಮೆಯ ವಿಷಯವಾಗಿದೆ' ಎಂದು ಹೇಳಿದರು.

ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾ ಅಯೋಗವು, 'ಚುನಾವ್ ಕಾ ಪರ್ವ್, ದೇಶ್ ಕಾ ಗರ್ವ್' (ಚುನಾವಣೆಯ ಹಬ್ಬ, ದೇಶದ ಹೆಮ್ಮೆ) ಎಂಬ ಘೋಷವಾಕ್ಯದಡಿ ಮತದಾನ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿತು.

ಮುಂಬರುವ ಲೋಕಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟಿಸಲು ಆಯೋಗವು ಸಿದ್ಧತೆ ನಡೆಸುತ್ತಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020

ಬೆಂಅಪ್ರಾ/ನಯೋಸ/CLU–53/2289/2023–24 ದಿನಾಂಕ: 19.01.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ವಲಯದಿಂದ **ವಾಣಿಜ್ಯ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾಯೋಜನೆ–2015 ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಆರ್.ಕೃಷ್ಣರೆಡ್ಡಿ	ಆನೇಕಲ್	ಸರ್ಜಾಪುರ	ದೊಮ್ಮಸಂದ್ರ	230/6	0–05	ವ್ಯವಸಾಯ ವಲಯ	ವಸತಿ
					230/7	0–2.50		
					230/8	0–2.50		
					ಒಟ್ಟು	0–10		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡಿ, ವಾಣಿಜ್ಯ ಉಪಯೋಗ ಕಟ್ಟಡ ಅಭಿವೃದ್ಧಿಪಡಿಸಿರುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ಅಂಗಡಿ/ಮಳಿಗೆಗಳು ಲಭ್ಯವಾಗುತ್ತದೆ ಹಾಗೂ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧ ಅಭಿವೃದ್ಧಿಯಿಂದ ಉತ್ತಮ ರಸ್ತೆಗಳು, ಯೋಗ್ಯವಾದ ಮೂಲಭೂತ ಸೌಕರ್ಯಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ)

E-Mail:pdchikkaballapur@gmail.com, Ph:08156-277005

ಸಂಖ್ಯೆ:ಜಿನಕೋ/ತಾಶಾ/ಸಿಆರ್/120/2023–24 ದಿನಾಂಕ: 22.01.2024

ಟೆಂಡರ್ ಅಧಿಸೂಚನೆ

ಚಿಕ್ಕಬಳ್ಳಾಪುರ ಜಿಲ್ಲೆಯ ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿರುವುದರಿಂದ ನಗರ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಟ್ಯಾಂಕರ್‌ಗಳ ಮೂಲಕ ಸರಬರಾಜು ಮಾಡಲು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಂದ ಅರ್ಹ ಗುತ್ತಿಗೆದಾರರು/ ಸರಬರಾಜುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ವಿವರ:** (1) ಚಿಕ್ಕಬಳ್ಳಾಪುರ ನಗರಸಭೆ ವ್ಯಾಪ್ತಿಯಲ್ಲಿ ಖಾಸಗಿ ನೀರಿನ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು. **(RD/2023-24/SE0133) ಇ.ಎಂ.ಡಿ ಮೊತ್ತ: ರೂ. 90,000/– ಲಕ್ಷಗಳು.** (2) ಚಿಂತಾಮಣಿ ನಗರಸಭೆ ವ್ಯಾಪ್ತಿಯಲ್ಲಿ ಖಾಸಗಿ ನೀರಿನ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು. **(RD/2023-24/SE0134) ಇ.ಎಂ.ಡಿ ಮೊತ್ತ: ರೂ. 84,000/–ಲಕ್ಷಗಳು.** (3) ಗೌರಿಬಿದನೂರು ನಗರಸಭೆ ವ್ಯಾಪ್ತಿಯಲ್ಲಿ ಖಾಸಗಿ ನೀರಿನ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು. **(RD/2023-24/SE0140) ಇ.ಎಂ.ಡಿ ಮೊತ್ತ: ರೂ. 45,000/– ಲಕ್ಷಗಳು.** (4) ಶಿಡ್ಲಘಟ್ಟ ನಗರಸಭೆ ವ್ಯಾಪ್ತಿಯಲ್ಲಿ ಖಾಸಗಿ ನೀರಿನ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು. **(RD/2023-24/SE0141) ಇ.ಎಂ.ಡಿ ಮೊತ್ತ: ರೂ. 90,000/– ಲಕ್ಷಗಳು.** (5) ಬಾಗೇಪಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ಖಾಸಗಿ ನೀರಿನ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು. **(RD/2023-24/SE0142) ಇ.ಎಂ.ಡಿ ಮೊತ್ತ: ರೂ. 39,375/– ಲಕ್ಷಗಳು.** (6) ಗುಡಿಬಂಡೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಸಗಿ ನೀರಿನ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು. **(RD/2023-24/SE0144) ಇ.ಎಂ.ಡಿ ಮೊತ್ತ: ರೂ. 24,000/– ಲಕ್ಷಗಳು.** ಆಸಕ್ತಿಯುಳ್ಳ ಅರ್ಹ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ **www.kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **www.kppp.karnataka.gov.in** ನಲ್ಲಿ ಸಲ್ಲಿಸುವುದು. ಟೆಂಡರ್ ಸಂಸ್ಕರಣಾ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು. (1) ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ **ಪ್ರಾರಂಭಿಕ ದಿನಾಂಕ: 23.01.2024.** (2) ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 06.02.2024 ರ ಸಂಜೆ 05.30 ಗಂಟೆಗೆ.** (3) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 08.02.2024 ರ ಸಂಜೆ 5.00 ಗಂಟೆಗೆ.** (4) ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 09.02.2024 ರ ಸಂಜೆ 5.00 ಗಂಟೆಗೆ ಅಥವಾ ಮುಂದೆ ಸೂಚಿಸಿದ ದಿನದಂದು.** ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/–ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:238/ಕೆಎಸ್‌ಎಂ.ಸಿ.ಎ/2023–24

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

(ಕರ್ನಾಟಕ ಸರ್ಕಾರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಂಟಿ ಸಂಸ್ಥೆ)
#30/1, 1ನೇ ಹಾಗೂ 2ನೇ ಮಹಡಿ, ಯುಎನ್‌ಐಕಟ್ಟಡ, ತಿಮ್ಮಯ್ಯರಸ್ತೆ, ಮಿಲ್ಲರ್ಸ್‌ಟ್ಯಾಂಕ್ ಬಂಡ್‌ರೋಡ್, ವಸಂತ್ ನಗರ, ಬೆಂಗಳೂರು – 560052. CIN: U37100KA2021SGC147734, TAN:BLRB21071B, PAN:AAJCB8656M
Email-Id: nodalofficerswm@gmail.com

ಸಂಖ್ಯೆ:ಮು.ಪ್ರ.ವ್ಯ/ಬಿಎಸ್.ಡಬ್ಲ್ಯೂ.ಎಮ್.ಎಲ್/ಪಿಆರ್/245/2023–24 ದಿನಾಂಕ:24.01.2024

ಪ್ರಕಟಣೆ

ಘನತ್ಯಾಜ್ಯ ನಿರ್ವಹಣೆಯು ಪಾಲಿಕೆಯ ಪ್ರಾಥಮಿಕ ಜವಾಬ್ದಾರಿಯಾಗಿದ್ದು, ಪರಿಸರ(ಸಂರಕ್ಷಣೆ) ಕಾಯ್ದೆ 1986ರ ಕಲಂ 3,6 ಮತ್ತು 25ಗಳಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಾನ್ಯ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಗೆಜೆಟ್ ಅಧಿಸೂಚನೆ ಸಂಖ್ಯೆ: ಜಿ.ಎಸ್.ಆರ್ 451(ಇ), ಭಾಗ–2, ಸೆಕ್ಷನ್–3, ಸಬ್–ಸೆಕ್ಷನ್–1, ದಿನಾಂಕ: 03.06.2015. ಘನತ್ಯಾಜ್ಯ ನಿರ್ವಹಣಾ ನಿಯಮಗಳು–2016ಗಳನ್ನು ಅಧಿಸೂಚಿಸಿ, ದಿನಾಂಕ:08.04.2016ರಿಂದ ಜಾರಿಗೆ ತಂದಿರುತ್ತದೆ.

ಘನತ್ಯಾಜ್ಯ ನಿರ್ವಹಣಾ ನಿಯಮಗಳು–2016ರ ನಿಯಮ–15(ಝೆಡ್.ಎಫ್)ರನ್ವಯ ನಗರ ಸ್ಥಳೀಯ ಸಂಸ್ಥೆಗಳು ಘನತ್ಯಾಜ್ಯ ನಿರ್ವಹಣಾ ಬೈ–ಲಾಗಳನ್ನು ಅಧಿಸೂಚಿಸಬೇಕಾಗಿದ್ದು, ಅದರಂತೆ ಪಾಲಿಕೆಯು ಗೆಜೆಟ್ ಅಧಿಸೂಚನೆ ಸಂಖ್ಯೆ: ಅಪರ ಆಯುಕ್ತರು/ಘನಿ/ಪಿಆರ್/ಜಿ/9266/2019–20, ದಿನಾಂಕ:20.04.2020ರನ್ವಯ ಘನತ್ಯಾಜ್ಯ ನಿರ್ವಹಣಾ ಬೈ–ಲಾಗಳನ್ನು ಅಧಿಸೂಚಿಸಿರುತ್ತದೆ.

ಘನತ್ಯಾಜ್ಯ ನಿರ್ವಹಣಾ ನಿಯಮಗಳು–2016ರ ನಿಯಮ–4(3)ವು ಘನತ್ಯಾಜ್ಯ ನಿರ್ವಹಣಾ ಬೈ–ಲಾಗಳಲ್ಲಿ ಸೂಚಿಸಿರುವ ಬಳಕೆದಾರರ ಶುಲ್ಕ(ಸೇವಾ ಶುಲ್ಕ)ವನ್ನು ತ್ಯಾಜ್ಯ ಉತ್ಪಾದಕರು ಪಾವತಿಸುವ ಕುರಿತು ಉಲ್ಲೇಖಿಸುತ್ತದೆ ಹಾಗೂ ನಿಯಮ–15(ಎಫ್)ವು ನಗರ ಸ್ಥಳೀಯ ಸಂಸ್ಥೆಗಳು ತ್ಯಾಜ್ಯ ಉತ್ಪಾದಕರಿಂದ ಬಳಕೆದಾರರ ಶುಲ್ಕ(ಸೇವಾ ಶುಲ್ಕ)ವನ್ನು ಸಂಗ್ರಹಿಸುವ ಕುರಿತು ಉಲ್ಲೇಖಿಸುತ್ತದೆ.

ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ, ಪ್ರಧಾನ ಪೀಠ, ನವದೆಹಲಿಯು ಸಹ ಪ್ರಕರಣ ಸಂಖ್ಯೆ:606/2018ರಲ್ಲಿ ಹಲವಾರು ಆದೇಶಗಳನ್ನು ಹೊರಡಿಸಿ, "ತ್ಯಾಜ್ಯ ಉತ್ಪಾದಕರೇ ಶುಲ್ಕ ಪಾವತಿಸುವ ಸಿದ್ಧಾಂತ (Polluter Pays Principle)" ದ ಕುರಿತು ಹಲವಾರು ಬಾರಿ ಉಲ್ಲೇಖಿಸಿದ್ದು, ಅನುಷ್ಠಾನಕ್ಕಾಗಿ ನಿರ್ದೇಶನಗಳನ್ನು ನೀಡಿರುತ್ತದೆ.

ಬೆಂಗಳೂರು ಮಹಾನಗರ ವ್ಯಾಪ್ತಿಯು ಸೇರಿದಂತೆ ಸಂಪೂರ್ಣ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಎಲ್ಲಾ ಪ್ರಕಾರದ ಘನತ್ಯಾಜ್ಯದ ಸಮರ್ಪಕ ಸಂಗ್ರಹಣೆ, ಸಾಗಾಣೆ ಮತ್ತು ವಿಲೇವಾರಿಗಾಗಿ ಸರ್ಕಾರದ ಆದೇಶ ಸಂಖ್ಯೆ: ನಅಇ 256 ಎಂಎನ್‌ವೈ 2020, ದಿನಾಂಕ:05.03.2021ರಂತೆ ಕಂಪನಿ ಕಾಯ್ದೆ 2013ರಡಿ ಸರ್ಕಾರಿ ಸ್ವಾಮ್ಯದ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ ಎಂಬ ಕಂಪನಿಯನ್ನು ಸ್ಥಾಪಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ 2020ರ ಕಲಂ 285, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಘನತ್ಯಾಜ್ಯ ನಿರ್ವಹಣಾ ಬೈ–ಲಾ 2020 ಮತ್ತು ಘನತ್ಯಾಜ್ಯ ನಿರ್ವಹಣಾ ನಿಯಮಗಳು–2016ರ ನಿಯಮ–15(ಎಫ್)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತವು ತ್ಯಾಜ್ಯ ಉತ್ಪಾದಕರಿಂದ ಬಳಕೆದಾರರ ಶುಲ್ಕ(ಸೇವಾ ಶುಲ್ಕ)ವನ್ನು ಆಸ್ತಿ ತೆರಿಗೆಯೊಂದಿಗೆ ಸಂಗ್ರಹಿಸುವ ಕುರಿತು ನಿರ್ಣಯಿಸಿರುತ್ತದೆ.

ಈ ಹಿನ್ನೆಲೆಯಲ್ಲಿ, ಪಾಲಿಕೆಯ ವ್ಯಾಪ್ತಿಯಲ್ಲಿನ ತ್ಯಾಜ್ಯ ಉತ್ಪಾದಕರು{ಕೇವಲ ವಾಣಿಜ್ಯ (Commercial Waste Generators)/ಸಾಂಸ್ಥಿಕ(Institutional Waste Generators)/ಬೃಹತ್ ತ್ಯಾಜ್ಯ ಉತ್ಪಾದಕರು(Bulk Waste Generators)} ಈ ಕೆಳಗಿನ ಲಿಂಕ್‌ನ್ನು ಸ್ಕಾಐನ ಮಾಡಿ ಅಥವಾ ಪಾಲಿಕೆಯ ವೆಬ್‌ಸೈಟ್ (www.bbmp.gov.in) ನಿಂದ ನಿರ್ದಿಷ್ಟ ನಮೂನೆಯನ್ನು (ರೂ.100/–ರ ಇ–ಮುದ್ರಾಂಕ ಪೇಪರ್) ಡೌನ್‌ಲೋಡ್ ಮಾಡಿಕೊಂಡು ಎಲ್ಲಾ ಮಾಹಿತಿಯನ್ನು ಭರ್ತಿ ಮಾಡಿ, **ನೋಟರಾಯಜ್ಡ್ ಪ್ರಮಾಣ ಪತ್ರ/ಅಫೀಡವಿಟ್‌ನ್ನು ಈ ಪ್ರಕಟಣೆ ಹೊರಡಿಸಿದ 30 ದಿನಗಳೊಳಗಾಗಿ ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ) ಮತ್ತು ಮುಖ್ಯ ಅಭಿಯಂತರರು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ, #30/1, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ರಸ್ತೆ, ವಸಂತ್ ನಗರ, ಬೆಂಗಳೂರು–560052ರವರ** ಕಛೇರಿಗೆ ಸಲ್ಲಿಸುವಂತೆ ಕೋರಿದೆ. ಇಲ್ಲವಾದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ಬೈ–ಲಾ 2020ರನ್ವಯ ದಂಡವನ್ನು ವಿಧಿಸಲಾಗುವುದೆಂದು ಈ ಮೂಲಕ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದೆ.

ನಮೂನೆ ಡೌನ್‌ಲೋಡ್‌ಗಾಗಿ ಲಿಂಕ್:

https://docs.google.com/document/d/1vn4UmHNbOBPcDf BsgSBO9o0Wy_qH-4Ba/edit#heading=h.gjdgxs

ಡೌನ್‌ಲೋಡ್‌ಗಾಗಿ ಇಲ್ಲಿ ಸ್ಕ್ಯಾನ್ ಮಾಡಿ

ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ಹಾಗೂ ವ್ಯವಸ್ಥಾಪಕ ನಿರ್ದೇಶಕರು, / ಬಿಎಸ್.ಡಬ್ಲ್ಯೂ.ಎಮ್.ಎಲ್ ರವರ ಅನುಮೋದನೆಯ ಮೇರೆಗೆ

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)
ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ

ವಾಸಾಸಂಇ/ವಾಪ್ರ/ಜಿಎ/3258/2023–24

ನಾಗಸಂದ್ರ–ಮಾದಾವರ ಮಾರ್ಗ: ಜುಲೈಯಲ್ಲಿ ಆರಂಭಗೊಳ್ಳಲಿರುವ ಮೆಟ್ರೊ ರೈಲು ಸಂಚಾರ

ಸಿವಿಲ್ ಕಾಮಗಾರಿ ಶೇ 99 ಪೂರ್ಣ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಮೆಟ್ರೊ ನಾಗಸಂದ್ರ–ಮಾದಾವರ ವಿಸ್ತರಿತ ಮಾರ್ಗದಲ್ಲಿ ಸಿವಿಲ್ ಮತ್ತು ಡಿಪೊ ಕಾಮಗಾರಿ ಶೇ 99ರಷ್ಟು ಪೂರ್ಣಗೊಂಡಿದೆ. ಜುಲೈನಲ್ಲಿ ರೈಲು ಸಂಚಾರ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿದೆ.

ಹಸಿರು ಮಾರ್ಗದ ರೀಚ್–3 ಕಾಮಗಾರಿ ಇದಾಗಿದ್ದು, ಮಂಜುನಾಥ ನಗರ, ಚಿಕ್ಕಬಿದರಕಲ್ಲು (ಜಿಂದಾಲ್), ಮಾದಾವರ ಮೆಟ್ರೊ ನಿಲ್ದಾಣಗಳ ಕಾಮಗಾರಿ ಮುಕ್ತಾಯಗೊಂಡಿವೆ. 3.7 ಕಿಲೋಮೀಟರ್ ದೂರದ ಈ ಮಾರ್ಗದಲ್ಲಿ ಗರ್ಡರ್ ಅಳವಡಿಕೆ ಸಹಿತ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿವೆ.

ಈ ಕಾಮಗಾರಿಗೆ 2027ರ ಮೇ ತಿಂಗಳಲ್ಲಿ ಚಾಲನೆ ನೀಡಲಾಗಿತ್ತು. ಆದರೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ತೊಡಕು ಉಂಟಾಗಿತ್ತು. ಕೆಲವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಇದೆಲ್ಲ ಇತ್ಯರ್ಥವಾಗಲು ನಾಲ್ಕು ವರ್ಷ ಹಿಡಿದಿತ್ತು. ಆನಂತರ ಕಾಮಗಾರಿ ಆರಂಭವಾಗಿತ್ತು.

3.7 ಕಿ.ಮೀ. ನಾಗಸಂದ್ರ–ಮಾದಾವರ ಮಾರ್ಗದ ಉದ್ದ

3 ಮೆಟ್ರೊ ನಿಲ್ದಾಣಗಳು

₹964 ಕೋಟಿ ಕಾಮಗಾರಿಯ ಒಟ್ಟು ವೆಚ್ಚ

ಮಂಜುನಾಥನಗರದಲ್ಲಿ ನಿರ್ಮಾಣಗೊಂಡಿರುವ ಮೆಟ್ರೊ ನಿಲ್ದಾಣ

'ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದ್ದು, ತಾಂತ್ರಿಕ ಕೆಲಸಗಳು ಆರಂಭವಾಗಿವೆ. ಹಳಿ ಅಳವಡಿಕೆ ಶೇ 44ರಷ್ಟು ಆಗಿದೆ. ಸಿಗ್ನಲಿಂಗ್ ಸಹಿತ ಎಲೆಕ್ಟ್ರಿಕಲ್ ಕೆಲಸಗಳು ನಡೆಯುತ್ತಿವೆ. ಮೇ ಒಳಗೆ ಕಾಮಗಾರಿಗಳು ಪೂರ್ಣಗೊಳ್ಳಲಿವೆ. ಬಳಿಕ ಸಿಗ್ನಲ್ ಪರೀಕ್ಷೆ, ಹಳಿಗಳ ಸಾಮರ್ಥ್ಯ ಪರೀಕ್ಷೆ, ಓಪನ್ ವೆಬ್ ಗರ್ಡರ್ ಪರೀಕ್ಷೆ ಸಹಿತ ವಿವಿಧ ತಾಂತ್ರಿಕ ಪರೀಕ್ಷೆಗಳು ನಡೆಯಲಿವೆ. ಜುಲೈ ತಿಂಗಳಲ್ಲಿ ರೈಲು ಸಂಚರಿಸಲಿವೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹಸಿರು ಮಾರ್ಗ ಯೋಜನೆಯ ಕಾಮಗಾರಿಗಳು ಹಂತಹಂತವಾಗಿ ನಡೆದಿದ್ದವು. ಇದರ ಕೊನೆಯ ಹಂತವಾದ ನಾಗಸಂದ್ರ–ಮಾದಾವರ ಮಾರ್ಗ ಮಾತ್ರ ವಿಪರೀತ ವಿಳಂಬವಾಗಿದೆ. ಈ ಕಾಮಗಾರಿ ಮುಕ್ತಾಯಗೊಂಡರೆ ಹಸಿರು ಮಾರ್ಗ ಶೇ 100ರಷ್ಟು ಪೂರ್ಣಗೊಂಡಂತಾಗುತ್ತದೆ ಎಂದು ತಿಳಿಸಿದ್ದಾರೆ.

ಬೆಂಗಳೂರು–ತುಮಕೂರು ರಸ್ತೆಯಲ್ಲಿ ಪ್ರತಿದಿನ ವಿಪರೀತ ವಾಹನ ದಟ್ಟಣೆ ಉಂಟಾಗುತ್ತಿದೆ. ನೆಲಮಂಗಲ ಕಡೆಯಿಂದ ಬೆಂಗಳೂರಿಗೆ ಬರುತ್ತಿರುವ ಕಾರ್ಮಿಕರು, ಉದ್ಯೋಗಿಗಳು ನಾಗಸಂದ್ರದವರೆಗೆ ಬೇರೆ ಬೇರೆ ವಾಹನಗಳಲ್ಲಿ ಬಂದು. ಅಲ್ಲಿ ವಾಹನಗಳನ್ನು ನಿಲ್ಲಿಸಿ ಮೆಟ್ರೊ ರೈಲು ಹಿಡಿಯುತ್ತಿದ್ದಾರೆ. ಮಾದಾವರವರೆಗೆ ಮೆಟ್ರೊ ಮಾರ್ಗ ಪೂರ್ಣಗೊಂಡ ನಂತರ, ಅಲ್ಲಿಂದಲೇ ಮೆಟ್ರೊ ಹತ್ತಬಹುದು. ಆಗ ವಾಹನ ದಟ್ಟಣೆ ಕಡಿಮೆಯಾಗಲಿದೆ ಎಂದರು.

ಪೀಣ್ಯ ಇಂಡಸ್ಟ್ರಿ–ನಾಗಸಂದ್ರ ನಡುವೆ ಇಂದಿನಿಂದ ಮೆಟ್ರೊ ಸ್ಥಗಿತ

ಹಸಿರು ಮಾರ್ಗದಲ್ಲಿ ನಾಗಸಂದ್ರದಿಂದ ಮಾದಾವರವರೆಗಿನ ವಿಸ್ತರಣೆ ಮಾರ್ಗದ ಪೂರ್ವ ನಿಯೋಜಿತ ಕಾಮಗಾರಿಗಳನ್ನು ಹಮ್ಮಿಕೊಳ್ಳಲು ಜ.26ರಿಂದ ಜ.28ರವರೆಗೆ ಮೂರು ದಿನ ಪೀಣ್ಯ ಇಂಡಸ್ಟ್ರಿ ಮತ್ತು ನಾಗಸಂದ್ರ ನಿಲ್ದಾಣಗಳ ನಡುವೆ ಮೆಟ್ರೊ ರೈಲು ಸೇವೆ ಸ್ಥಗಿತಗೊಳ್ಳಲಿದೆ.

ಪೀಣ್ಯ ಇಂಡಸ್ಟ್ರಿ ಮತ್ತು ರೇಷ್ಮೆ ಸಂಸ್ಥೆ ನಿಲ್ದಾಣಗಳ ನಡುವೆ ಎಂದಿನಂತೆ ಮೆಟ್ರೊ ರೈಲು ಸಂಚಾರ ಇರಲಿದೆ. ಇದರಿಂದ ಪೀಣ್ಯ ಇಂಡಸ್ಟ್ರಿ ಮತ್ತು ಗೊರಗುಂಟೆಪಾಳ್ಯ ಮೆಟ್ರೊ ನಿಲ್ದಾಣಗಳಲ್ಲಿ ಜನಸಂದಣಿ ಹೆಚ್ಚುವ ನಿರೀಕ್ಷೆ ಇದೆ. ಪ್ರಯಾಣಿಕರು ಟಿಕೆಟ್ ಖರೀದಿಸುವ ಬದಲು ವಾಟ್ಸ್‌ಆ್ಯಪ್ ಅಥವಾ ನಮ್ಮ ಮೆಟ್ರೊ ಮತ್ತು ಇತರ ಅಪ್ಲಿಕೇಶನ್‌ಗಳ ಮೂಲಕ ಕ್ಯೂಆರ್ ಟಿಕೆಟ್‌ಗಳನ್ನು ಖರೀದಿಸಲು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಪದ್ಮಶ್ರೀ ಪುರಸ್ಕೃತರು

ಹೆಸರು	ರಾಜ್ಯ, ಕ್ಷೇತ್ರ
ಪಾರ್ವತಿ ಬರೂವಾ	ಅಸ್ಸಾಂ (ಸಮಾಜ ಸೇವೆ, ಪ್ರಾಣಿ ಕಲ್ಯಾಣ)
ಜಗೇಶ್ವರ್ ಯಾದವ್	ಛತ್ತೀಸಗಢ (ಸಮಾಜ ಸೇವೆ, ಬುಡಕಟ್ಟು ಅಭಿವೃದ್ಧಿ)
ಚಾಮಿ ಮುರ್ಮು	ಜಾರ್ಖಂಡ್ (ಸಮಾಜ ಸೇವೆ, ಪರಿಸರ ಸಂರಕ್ಷಣೆ)
ಗುರ್ವಿಂದರ್ ಸಿಂಗ್	ಹರಿಯಾಣ (ಸಮಾಜ ಸೇವೆ, ಅಂಗವಿಕಲರ ಅಭಿವೃದ್ಧಿ)
ದುಖು ಮಾಂಝಿ	ಪಶ್ಚಿಮ ಬಂಗಾಳ (ಸಮಾಜ ಸೇವೆ, ಪರಿಸರ ಸಂರಕ್ಷಣೆ)
ಕೆ.ಚೆಲ್ಲಮ್ಮಾಳ್	ಅಂಡಮಾನ್ ಮತ್ತು ನಿಕೋಬಾರ್ (ಇತರ, ಕೃಷಿ, ಜೈವಿಕ)
ಸಂಗತಂಕಿಮ	ಮಿಜೋರಾಂ (ಸಮಾಜ ಸೇವೆ)
ಹೇಮಚಂದ್ ಮಾಂಝಿ	ಛತ್ತೀಸಗಢ (ಆಯುಷ್– ಪರಂಪರಾಗತ ವೈದ್ಯ)
ಯಾನುಂಗ್ ಜಮೋಹ್ ಲೆಗೊ	ಅರುಣಾಚಲ ಪ್ರದೇಶ (ಕೃಷಿ, ಔಷಧ ಸಸ್ಯ)
ಸರ್ಬೇಶ್ವರ ಬಾಸುಮತರಿ	ಅಸ್ಸಾಂ (ಕೃಷಿ)
ಉದಯ ವಿಶ್ವನಾಥ ದೇಶಪಾಂಡೆ	ಮಹಾರಾಷ್ಟ್ರ (ಕ್ರೀಡೆ, ಮಲ್ಲಕಂಬ ಕೋಚ್)
ಯಾಜ್ದಿ ಮಾನೇಕ್ಷಾ ಇಟಾಲಿಯಾ	ಗುಜರಾತ್ (ವೈದ್ಯಕೀಯ)
ಶಾಂತಿ ದೇವಿ ಪಾಸ್ವಾನ್ ಹಾಗೂ ಶಿವನ್ ಪಾಸ್ವಾನ್	ಬಿಹಾರ (ಕಲೆ, ಮಧುಬನಿ)
ರತನ್ ಕಹಾರ್	ಪಶ್ಚಿಮ ಬಂಗಾಳ (ಕಲೆ, ಜನಪದ)
ಅಶೋಕ್ ಕುಮಾರ್ ಬಿಶ್ವಾಸ್	ಬಿಹಾರ (ಕಲೆ, ಜನಪದ)
ಬಾಲಕೃಷ್ಣನ್ ಸದನಂ ಪುದಿಯ ವೀಟಿಲ್	ಕೇರಳ (ಕಲೆ, ಕಥಕ್ಕಳಿ)
ಉಮಾಮಹೇಶ್ವರಿ ಡಿ.,	ಆಂಧ್ರ ಪ್ರದೇಶ (ಕಲೆ, ಹರಿಕಥೆ)
ಗೋಪಿನಾಥ ಸ್ವೈನ್	ಒಡಿಶಾ (ಕಲೆ, ಭಜನೆ)
ಸ್ಮೃತಿ ರೇಖಾ ಚಕ್ಮಾ	ತ್ರಿಪುರ (ಕಲೆ, ಕಸೂತಿ)
ಓಂಪ್ರಕಾಶ್ ಶರ್ಮಾ	ಮಧ್ಯಪ್ರದೇಶ (ಕಲೆ, ಜನಪದ)
ನಾರಾಯಣನ್ ಇ.ಪಿ.,	ಕೇರಳ (ಕಲೆ, ತೆಯ್ಯಂ ನೃತ್ಯ)
ಭಗಬತ್ ಪದಾನ್	ಒಡಿಶಾ (ಕಲೆ, ಜನಪದ ನೃತ್ಯ)
ಸನಾತನ ರುದ್ರಪಾಲ್	ಪಶ್ಚಿಮ ಬಂಗಾಳ (ಕೆಲ, ಶಿಲ್ಪ)
ಭದ್ರಪ್ಪನ್ ಎಂ.,	ತಮಿಳುನಾಡು (ಕಲೆ, ಜನಪದ ನೃತ್ಯ)
ಜೋರ್ಡಾನ್ ಲೆಪ್ಚಾ	ಸಿಕ್ಕಿಂ (ಕಲೆ)
ಮಚಿಹಾನ್ ಸಾಸಾ	ಮಣಿಪುರ (ಕಲೆ)
ಗದ್ದಂ ಸಮ್ಮಯ್ಯ	ತೆಲಂಗಾಣ (ಕಲೆ, ಜನಪದ)
ಜಾನಕಿಲಾಲ್	ರಾಜಸ್ಥಾನ (ಕಲೆ, ಜನಪದ)
ದಾಸರಿ ಕೊಂಡಪ್ಪ	ತೆಲಂಗಾಣ (ಕಲೆ, ಸಂಗೀತ)
ಬಾಬುರಾಮ್ ಯಾದವ್	ಉತ್ತರ ಪ್ರದೇಶ (ಕಲೆ)
ನೇಪಾಳ್‌ಚಂದ್ರ ಸೂತ್ರಧಾರ್	ಪಶ್ಚಿಮ ಬಂಗಾಳ (ಕಲೆ ಮುಖವಾಡ ತಯಾರಿ)
ಖಲೀಲ್ ಅಹಮದ್	ಉತ್ತರ ಪ್ರದೇಶ (ಕಲೆ)
ಕಾಲೂರಮ್ ಬಮಾನಿಯಾ	ಮಧ್ಯಪ್ರದೇಶ (ಕಲೆ)
ರೆಜ್ವಾನಾ ಚೌಧರಿ ಬನ್ಯಾ	ಬಾಂಗ್ಲಾದೇಶ (ಕಲೆ)
ನಸೀಮ್ ಬಾನೋ	ಉತ್ತರ ಪ್ರದೇಶ (ಕಲೆ)
ರಾಮಲಾಲ್ ಬರೆತ್	ಛತ್ತೀಸ್‌ಗಢ (ಕಲೆ)
ಗೀತಾ ರಾಯ್ ಬರ್ಮನ್	ಪಶ್ಚಿಮ ಬಂಗಾಳ (ಕಲೆ)
ಸೋಮ್ ದತ್ ಬಟ್ಟು	ಹಿಮಾಚಲ ಪ್ರದೇಶ (ಕಲೆ)
ತಕ್ದಿರಾ ಬೇಗಂ	ಪಶ್ಚಿಮ ಬಂಗಾಳ (ಕಲೆ)
ದ್ರೋಣ ಭೂಯಾನ್	ಅಸ್ಸಾಂ (ಕಲೆ)
ನಾರಾಯಣ ಚಕ್ರವರ್ತಿ	ಪಶ್ಚಿಮ ಬಂಗಾಳ (ವಿಜ್ಞಾನ ಮತ್ತು ಎಂಜಿನಿಯರಿಂಗ್)
ರಾಮ್ ಚೇತ್ ಚೌಧರಿ	ಉತ್ತರ ಪ್ರದೇಶ (ವಿಜ್ಞಾನ)
ಜೋಷ್ನಾ ಚಿನ್ನಪ್ಪ	ತಮಿಳುನಾಡು (ಕ್ರೀಡೆ)
ಷಾರ್ಲೆಟ್ ಚಾಪಿನ್	ಫ್ರಾನ್ಸ್ (ಯೋಗ)
ರಘುವೀರ್ ಚೌಧರಿ	ಗುಜರಾತ್ (ಸಾಹಿತ್ಯ ಮತ್ತು ಶಿಕ್ಷಣ)
ಜೋ ಡಿ ಕ್ರೂಜ್	ತಮಿಳುನಾಡು (ಸಾಹಿತ್ಯ ಮತ್ತು ಶಿಕ್ಷಣ)
ಗುಲಾಂ ನಬಿ ದಾರ್	ಜಮ್ಮು ಮತ್ತು ಕಾಶ್ಮೀರ (ಕಲೆ)
ಚಿತ್ತರಂಜನ್ ದೇವ್‌ವರ್ಮಾ	ತ್ರಿಪುರ (ಆಧ್ಯಾತ್ಮಿಕ)
ರಾಧಾ ಕಿಶನ್ ಧಿಮಾನ್	ಉತ್ತರ ಪ್ರದೇಶ (ವೈದ್ಯಕೀಯ)
ಮನೋಹರ್ ಕೃಷ್ಣ ಡೋಲ್	ಮಹಾರಾಷ್ಟ್ರ (ವೈದ್ಯಕೀಯ)
ಪಿಯರೆ ಸಿಲ್ವೈನ್ ಫಿಲಿಯೋಜಾಟ್	ಫ್ರಾನ್ಸ್ (ಸಾಹಿತ್ಯ ಮತ್ತು ಶಿಕ್ಷಣ)
ಮಹಾಬೀರ್ ಸಿಂಗ್ ಗುಡ್ಡು	ಹರಿಯಾಣ (ಕಲೆ)
ರಾಜಾರಾಂ ಜೈನ್	ಉತ್ತರ ಪ್ರದೇಶ (ಸಾಹಿತ್ಯ ಮತ್ತು ಶಿಕ್ಷಣ)
ಯಶವಂತ್ ಸಿಂಗ್ ಕಟೋಚ್	ಉತ್ತರಾಖಂಡ (ಸಾಹಿತ್ಯ ಮತ್ತು ಶಿಕ್ಷಣ)

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

(ಕಾರ್ಮಿಕ ಇಲಾಖೆ)
ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029. ದೂ.: 080–29753350
ಇ–ಮೇಲ್: karbuildworkerswelfare@gmail.com

ಸಂಖ್ಯೆ: KBOCWWB/A&AS/VDRCW/CR-01/2023-24-call-2 ದಿನಾಂಕ: 25.01.2024

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ, ರಾಜ್ಯಾದ್ಯಂತ ಕ್ಷೇತ್ರ ಕಛೇರಿಗಳ ವ್ಯಾಪ್ತಿಯಲ್ಲಿ ನೋಂದಾಯಿಸಲಾಗಿರುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ನೋಂದಾಣಿಯ ವಿವರಗಳನ್ನು ಪರಿಶೀಲಿಸುವ ಕೆಲಸವನ್ನು 04 ತಿಂಗಳ ಅವಧಿಯಲ್ಲಿ ಕೈಗೊಳ್ಳುವ ಸಲುವಾಗಿ ಟೆಂಡರಿನ ನಿಬಂಧನೆಗೊಳಪಟ್ಟು, ಪ್ರತಿಷ್ಠಿತ ಮತ್ತು ನೋಂದಾಯಿತ ಸಂಸ್ಥೆಗಳಿಂದ ಎಂಪನೆಲ್ಮೆಂಟ್‌ಗಾಗಿ Pre-qualification ಟೆಂಡರ್ ಅನ್ನು (ಒಂದು ಬಿಡ್ ವ್ಯವಸ್ಥೆಯಲ್ಲಿ ಅಂದರೆ **Pre-qualification** ಬಿಡ್) ಆಹ್ವಾನಿಸಲಾಗಿದೆ. ಟೆಂಡರಿನ ನಿಬಂಧನೆಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ವೀಕ್ಷಿಸಬಹುದಾಗಿದೆ.

ಸದರಿ ಟೆಂಡರ್ ಅನ್ನು ವಿದ್ಯುನ್ಮಾನ ಮೂಲಕವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ **(https://kppp.karnataka.gov.in/)** ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರದ ಶೀರ್ಷಿಕೆ ಅಡಿಯಲ್ಲಿ ಇ–ಟೆಂಡರ್ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: **07.02.2024 ಸಂಜೆ 5.00 ಗಂಟೆಯವರೆಗೆ** ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ಜಂಟಿ ಕಾರ್ಯದರ್ಶಿಯವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/–
ಜಂಟಿ ಕಾರ್ಯದರ್ಶಿ
ಕ.ಕ.&ಇ.ನಿ.ಕಾ.ಕ.ಮಂಡಳಿ

ವಾಸಾಸಂಇ/ವಾಪ್ರ/ಎಲ್‌ಸಿ/3267/2023–24

ಸೋಮಣ್ಣಗೆ ಒಲಿದ ಗೌರವ

ಪ್ರಜಾವಾಣಿ ವಾರ್ತೆ

ಒಂದನೇ ಪುಟದಿಂದ

ಈಚೆಗೆ ರಾಜ್ಯ ಸರ್ಕಾರದಿಂದ ನೀಡಲಾಗುವ ವಾಲ್ಮೀಕಿ ಪ್ರಶಸ್ತಿಗೆ ಅವರು ಭಾಜನವಾಗಿದ್ದರು. ₹5 ಲಕ್ಷ, 20 ಗ್ರಾಂ. ಚಿನ್ನದ ಪದಕ ಒಳಗೊಂಡ ಪ್ರಶಸ್ತಿ ಅವರನ್ನು ಅರಸಿ ಬಂದಿತ್ತು. ಪ್ರಶಸ್ತಿ ಪ್ರದಾನ ಮಾಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಆಗ ರಾಜ್ಯೋತ್ಸವ ಮಿಸ್ ಆಗಿತ್ತು ಕಣಯ್ಯ, ಈಗ ವಾಲ್ಮೀಕಿ ಪ್ರಶಸ್ತಿ ಕೊಟ್ಟಿದ್ದೇವೆ' ಎಂದು ತಬ್ಬಿಕೊಂಡು ಖುಷಿ ವ್ಯಕ್ತಪಡಿಸಿದ್ದರು. ಈಗ, ದೇಶದ 4ನೇ ಅತ್ಯುನ್ನತ ನಾಗರಿಕ ಗೌರವವಾದ 'ಪದ್ಮಶ್ರೀ'ಯೂ ಸೋಮಣ್ಣ ಅವರನ್ನು ಹುಡುಕಿಕೊಂಡು ಬಂದಿದೆ.

ಆಲತ್ತಾಳ ಹುಂಡಿಯ ಜೇನುಕುರುಬರಾದ ಅವರು ತಳ ಸಮುದಾಯದವರ ಅದರಲ್ಲೂ ಬುಡಕಟ್ಟು ಜನರ ಸಾಕ್ಷಿಪ್ರಜ್ಞೆ. ಮೈಸೂರು, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳಲ್ಲಿ ಆದಿವಾಸಿಗಳನ್ನು ಮುಖ್ಯವಾಹಿನಿಗೆ ತರಲು ಹೋರಾಡುತ್ತಿದ್ದಾರೆ. ನಾಗರಹೊಳೆ, ಕಾಕನಕೋಟೆ ಅಭಯಾರಣ್ಯದಿಂದ ಮೂಲನಿವಾಸಿಗಳನ್ನು ಒಕ್ಕಲೆಬ್ಬಿಸಿದಾಗ ಬುಡಕಟ್ಟು ಹಾಡಿಗಳಿಗೆ ಕಾಲ್ನಡಿಗೆಯಲ್ಲಿ ಸಂಚರಿಸಿ ಅವರ ಕಷ್ಟ–ಸುಖದಲ್ಲಿ ಭಾಗಿಯಾದವರು. ಆದಿವಾಸಿಗಳಿಗೆ ಹಕ್ಕು ಕಲ್ಪಿಸಲು ನ್ಯಾಯಾಲಯದ ಮೆಟ್ಟಲೇರಿ ಹೋರಾಟವನ್ನೂ ನಡೆಸಿದವರು.

ಬಡತನದ ಕಾರಣದಿಂದ ಅವರು ಶಾಲೆಗೆ ಹೋದವರಲ್ಲ. ಆದರೆ, ಲೋಕಜ್ಞಾನ ಪಡೆದು ಸಣ್ಣ ಭೂರಹಿತ ಆದಿವಾಸಿಗಳನ್ನು ಸಂಘಟಿಸಿದ್ದಾರೆ. ಪ್ರಗತಿಪರ ಹೋರಾಟಗಾರರ ಜೊತೆಗೂಡಿ ಕಟ್ಟಿದ 'ರಾಜ್ಯ ಮೂಲ ನಿವಾಸಿ ವೇದಿಕೆ'ಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಸಂಘಟಿತ ಪ್ರಯತ್ನದಿಂದ ಆದಿವಾಸಿಗಳಿಗೆ ಅರಣ್ಯ ಪ್ರದೇಶದಿಂದ ಆರು ಸಾವಿರ ಎಕರೆ ಕೃಷಿ ಭೂಮಿ ದೊರಕಿಸಿಕೊಟ್ಟು ಗಮನಸೆಳೆದಿದ್ದಾರೆ.

ಆರಂಭದಲ್ಲಿ ಜೀತದಾಳಾಗಿದ್ದ ಅವರು ಅದರಿಂದ ಹೊರಬಂದು, ತನ್ನವರಾದ ಜೇನುಕುರುಬ, ಬೆಟ್ಟಕುರುಬ, ಎರವ ಮತ್ತು ಸೋಲಿಗರನ್ನು ಸಂಘಟಿಸಿ ಪುನರ್ವಸತಿಗಾಗಿ ಹೋರಾಡುತ್ತಲೇ ಬಂದಿದ್ದಾರೆ.

ಕಾಡಂಚಿನಲ್ಲಿ ಹೋಟೆಲ್ ನಿರ್ಮಾಣಕ್ಕೆ ಮುಂದಾದ ಬಂಡವಾಳಶಾಹಿಗಳ ವಿರುದ್ಧವೂ ಹೋರಾಟ ನಡೆಸಿದ್ದರು. ಅದರಲ್ಲಿ ಯಶಸ್ಸನ್ನೂ ಕಂಡಿದ್ದರು. 'ನರ್ಮದಾ ಬಚಾವೋ' ಹೋರಾಟದಲ್ಲಿ ಮೇಧಾ ಪಾಟ್ಕರ್ ಜೊತೆ ಪಾಲ್ಗೊಂಡಿದ್ದರು. 2008ರಿಂದ ಜಾರಿಗೆ ಬಂದ ಅರಣ್ಯವಾಸಿಗಳ ಪಾರಂಪರಿಕ ಹಕ್ಕುಗಳ ಸಮಿತಿಯಲ್ಲಿ ಸಕ್ರಿಯರಾಗಿದ್ದಾರೆ. 1991ರಲ್ಲಿ ಫಿಲಿಪ್ಪೀನ್ಸ್ ದೇಶದಲ್ಲಿ ನಡೆದ ಆದಿವಾಸಿಗಳ ಮೇಳದಲ್ಲಿ ಕರ್ನಾಟಕದ ಬುಡಕಟ್ಟು ಪ್ರತಿನಿಧಿಯಾಗಿ ಭಾಗವಹಿಸಿದ್ದರು.

66 ವರ್ಷದ ಸೋಮಣ್ಣ ಪುತ್ರ ಕಾಳಸ್ವಾಮಿ ಜೊತೆ ಮೊತ್ತ ಹಾಡಿಯಲ್ಲಿ ವಾಸವಾಗಿದ್ದಾರೆ. ಈಚೆಗೆ 'ಕನ್ವೇರಿ' ಸಿನಿಮಾದಲ್ಲಿ ಅಭಿನಯಿಸಿದ್ದಾರೆ.

'ಪತ್ನಿ (ರಾಜಮ್ಮ) ಜ.7ರಂದು ನಿಧನರಾದರು. ಆ ನೋವಿನಲ್ಲಿದ್ದ ನನಗೆ ಪದ್ಮಶ್ರೀ ಸಿಕ್ಕಿದ್ದು ಚೈತನ್ಯ ತುಂಬಿದಂತಾಗಿದೆ' ಎಂದರು.

'ದೊಡ್ಡ ಪ್ರಶಸ್ತಿ ನಿರೀಕ್ಷಿಸಿರಲಿಲ್ಲ'

'ಈ ರೀತಿಯ ದೊಡ್ಡ ಪ್ರಶಸ್ತಿ ಬರುತ್ತದೆ ಎನ್ನುವುದು ಗೊತ್ತಿರಲಿಲ್ಲ. ಖುಷಿಯಾಗಿದೆ. ಸರ್ಕಾರಕ್ಕೆ ಧನ್ಯವಾದ ಸಲ್ಲಿಸುತ್ತೇನೆ. 1978ರಿಂದ ನನ್ನ ಜನರ ಪರವಾಗಿ ಹೋರಾಡುತ್ತಿದ್ದೇನೆ. ಒಂದು ಸಮುದಾಯಕ್ಕೆ ಸೀಮಿತವಾಗಲಿಲ್ಲ. ಎಲ್ಲರ ಪರವಾಗಿ ಹೋರಾಟ ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ದೇವನೂರ ಮಹಾದೇವ, ಸಿದ್ದಲಿಂಗಯ್ಯ, ಕೋಟಿಗಾನಹಳ್ಳಿ ರಾಮಯ್ಯ, ಲಿಂಗದೇವರು ಹಳೆಮನೆ ಮೊದಲಾದವರನ್ನು ನೆನಪಿಸಿಕೊಳ್ಳುತ್ತೇನೆ' ಎಂದು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಪದ್ಮವಿಭೂಷಣ

ಹೆಸರು	ರಾಜ್ಯ, ಕ್ಷೇತ್ರ
ವೈಜಯಂತಿಮಾಲಾ ಬಾಲಿ	ತಮಿಳುನಾಡು, ಕಲೆ
ಕೆ ಚಿರಂಜೀವಿ	ಆಂಧ್ರಪ್ರದೇಶ, ಕಲೆ
ಎಂ. ವೆಂಕಯ್ಯನಾಯ್ಡು	ಆಂಧ್ರಪ್ರದೇಶ, ಸಾರ್ವಜನಿಕ ವ್ಯವಹಾರ
ಬಿಂದೇಶ್ವರ ಪಾಠಕ್(ಮರಣೋತ್ತರ)	ಬಿಹಾರ, ಸಮಾಜ ಸೇವೆ
ಪದ್ಮಾ ಸುಬ್ರಮಣ್ಯಂ	ತಮಿಳುನಾಡು, ಕಲೆ

ಪದ್ಮಭೂಷಣ

ಹೆಸರು	ರಾಜ್ಯ, ಕ್ಷೇತ್ರ
ಎಂ.ಫಾಹಿಮಾ ಬಿ.ವಿ (ಮರಣೋತ್ತರ)	ಕೇರಳ, ಸಾರ್ವಜನಿಕ ವ್ಯವಹಾರ
ಹಾರ್ಮುಸ್ಜಿ ಎನ್ ಕಾಮಾ	ಮಹಾರಾಷ್ಟ್ರ, ಸಾಹಿತ್ಯ, ಶಿಕ್ಷಣ
ಮಿಥುನ್ ಚಕ್ರವರ್ತಿ	ಪಶ್ಚಿಮ ಬಂಗಾಳ, ಕಲೆ
ಯಂಗ್ ಲಿಯು	ತೈವಾನ್, ಉದ್ಯಮ
ಅಶ್ವಿನ್ ಬಾಲಚಂದ್ ಮೆಹ್ತಾ	ಮಹಾರಾಷ್ಟ್ರ ವೈದ್ಯಕೀಯ
ಸತ್ಯಬ್ರತ ಮುಖರ್ಜಿ(ಮರಣೋತ್ತರ)	ಪಶ್ಚಿಮ ಬಂಗಾಳ, ಸಾರ್ವಜನಿಕ ವ್ಯವಹಾರ
ರಾಮ್ ನಾಯಕ್	ಮಹಾರಾಷ್ಟ್ರ, ಸಾರ್ವಜನಿಕ ವ್ಯವಹಾರ
ತೇಜಸ್ ಮಧುಸೂದನ್ ಪಟೇಲ್	ಗುಜರಾತ್, ವೈದ್ಯಕೀಯ
ಓ. ರಾಜಗೋಪಾಲ್	ಕೇರಳ, ಸಾರ್ವಜನಿಕ ವ್ಯವಹಾರ
ದತ್ತಾತ್ರೇಯ ಅಂಬಾದಾಸ್ ಮೇಲೂ ಅಲಿಯಾಸ್ ರಾಜ್ದತ್	ಮಹಾರಾಷ್ಟ್ರ, ಕಲೆ
ತೊಗ್ದಾನ್ ರಿಂಪೋಚೆ (ಮರಣೋತ್ತರ)	ಲಡಾಕ್, ಇತರೆ - ಆಧ್ಯಾತ್ಮಿಕತೆ
ಪ್ಯಾರೇಲಾಲ್ ಶರ್ಮಾ	ಮಹಾರಾಷ್ಟ್ರ, ಕಲೆ
ಚಂದ್ರೇಶ್ವರ ಪ್ರಸಾದ್ ಠಾಕೂರ್	ಬಿಹಾರ, ವೈದ್ಯಕೀಯ
ಉಷಾ ಉತ್ತುಪ್	ಪಶ್ಚಿಮ ಬಂಗಾಳ, ಕಲೆ
ವಿಜಯಕಾಂತ್(ಮರಣೋತ್ತರ)	ತಮಿಳುನಾಡು, ಕಲೆ
ಕುಂದನ್ ವ್ಯಾಸ್	ಮಹಾರಾಷ್ಟ್ರ, ಸಾಹಿತ್ಯ ಮತ್ತು ಶಿಕ್ಷಣ-ಪತ್ರಿಕೋದ್ಯಮ

ಕೃಷಿಖುಷಿ ಸತ್ಯನಾರಾಯಣ

ಮಂಗಳೂರು: ಗಡಿ ಪ್ರದೇಶ ಕಾಸರಗೋಡಿನ ನಾಟೆಕಲ್ಲು ಸಮೀಪದ ಬೆಳೇರಿಯಲ್ಲಿ ಭತ್ತದ ತಳಿಗಳ ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವ ಕನ್ನಡಿಗ ಸತ್ಯನಾರಾಯಣ ಅವರು ಕೃಷಿ ಖುಷಿ. ಕೃಷಿಭೂಮಿ ಇಲ್ಲದೇ ಇದ್ದರೂ 25 ಸೆಂಟ್ ಗುಡ್ಡ ಪ್ರದೇಶದಲ್ಲಿ ಇವರು ಅಭಿವೃದ್ಧಿಪಡಿಸಿದ ತಳಿಗಳ ಬೀಜಗಳು ದೇಶದ ವಿವಿಧ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಪ್ರಯೋಗವಾಗಿವೆ.

ನೂರಾರು ತಳಿಗಳನ್ನು ಉಳಿಸಲು ಪ್ರಯತ್ನಿಸಿರುವ ಅವರ 'ರಾಜಕಯಮೆ' ತಳಿ ಕರ್ನಾಟಕ, ತಮಿಳುನಾಡು ಮತ್ತು ಕೇರಳದಲ್ಲಿ ರೈತರಿಗೆ ಅದ್ಭುತ ಇಳುವರಿ ನೀಡಿ ಪ್ರಸಿದ್ಧಿ ಪಡೆದಿದೆ. 15 ವರ್ಷಗಳಿಂದ ಸಂಶೋಧನೆಯಲ್ಲಿ ತೊಡಗಿರುವ ಅವರ 'ಪಾಲಿಬ್ಯಾಗ್' ಮಾದರಿಯೂ ಗಮನ ಸೆಳೆದಿದೆ. ಭತ್ತ ಮಾತ್ರವಲ್ಲದೆ ಅಡಿಕೆ, ಜಾಯಿಕಾಯಿ ಮತ್ತು ಕರಿಮೆಣಸು ತಳಿಗಳನ್ನು ಕೂಡ ಕಾಣಿಕೆ ನೀಡಿದ್ದಾರೆ. ಅಭಿವೃದ್ಧಿಪಡಿಸಿದ ತಳಿಗಳ ಬೀಜಗಳನ್ನು ಉಚಿತವಾಗಿ ಹಂಚಿದ್ದಾರೆ.

'ಇಷ್ಟು ದೊಡ್ಡ ಪುರಸ್ಕಾರಕ್ಕೆ ಭಾಜನನಾಗುವ ನಿರೀಕ್ಷೆ ಇರಲಿಲ್ಲ. ಅದೆಷ್ಟೋ ತಳಿಗಳು ಈಗ ಅವಸಾನದ ಅಂಚಿನಲ್ಲಿವೆ. ಆ ತಳಿಗಳನ್ನು ಉಳಿಸುವ ಕೆಲಸ ಮಾಡಿದ್ದೇನೆ. ಹೀಗಾಗಿ ಈ ಪುರಸ್ಕಾರ ನೀಡುವ ಮೂಲಕ ಸರ್ಕಾರ ತಳಿಗಳನ್ನು ಉಳಿಸುವ ಕಾರ್ಯಕ್ಕೆ ಪರೋಕ್ಷವಾಗಿ ಪ್ರೋತ್ಸಾಹ ನೀಡಿದೆ' ಎಂದು 'ಪ್ರಜಾವಾಣಿ' ಜೊತೆ ಮಾತನಾಡಿದ ಸತ್ಯನಾರಾಯಣ ಅಭಿಪ್ರಾಯಪಟ್ಟರು.

ಸಂಕಟ ಮೆಟ್ಟಿ ನಿಂತ ಪ್ರೇಮಾ

ನವದೆಹಲಿ: ಸುಟ್ಟ ಗಾಯಗಳಿಂದಾಗಿ ಜರ್ಝರಿತರಾಗಿದ್ದ ಪ್ರೇಮಾ ಧನರಾಜ್ ಅವರು, ವೈಯಕ್ತಿಕ ನೋವನ್ನು ಮೀರಿ ನಿಂತರು. ಸುಟ್ಟ ಗಾಯಗಳಿಂದ ತೊಂದರೆಗೆ ಒಳಗಾದವರಿಗಾಗಿ ತಮ್ಮ ಜೀವನ ಮೀಸಲಿಟ್ಟರು. ಬೆಂಗಳೂರು ಮೂಲದ ಪ್ರೇಮಾ ಅವರು ಪ್ಲಾಸ್ಟಿಕ್ ಸರ್ಜನ್, ಸಾಮಾಜಿಕ ಕಾರ್ಯಕರ್ತೆಯಾಗಿ ಗುರುತಿಸಿಕೊಂಡಿದ್ದಾರೆ. ನೀತಿ ನಿರೂಪಣೆಗಳಲ್ಲಿ ಸುಧಾರಣೆಗಳನ್ನು ತರುವ ವಿಚಾರವಾಗಿಯೂ ಅವರು ಕೆಲಸ ಮಾಡಿದ್ದಾರೆ.

'ಅಗ್ನಿ ರಕ್ಷಾ' ಎನ್‌ಜಿಒ ಸ್ಥಾಪಿಸಿದ ಪ್ರೇಮಾ, ಸುಟ್ಟ ಗಾಯಗಳಿಂದ ತೊಂದರೆಗೆ ಒಳಗಾದ 25 ಸಾವಿರಕ್ಕೂ ಹೆಚ್ಚಿನ ಜನರಿಗೆ ಉಚಿತ ಶಸ್ತ್ರಚಿಕಿತ್ಸೆಯ ಸೇವೆ ಒದಗಿಸಿದ್ದಾರೆ. ಪ್ಲಾಸ್ಟಿಕ್ ಸರ್ಜರಿ ಬಗ್ಗೆ ಮೂರು ಪುಸ್ತಕಗಳನ್ನು ಬರೆದಿದ್ದಾರೆ. ಕೆನ್ಯಾ, ತಾಂಜಾನಿಯಾ, ನಾರ್ವೆ ಮತ್ತು ಇಥಿಯೋಪಿಯಾ ದೇಶಗಳ ವೈದ್ಯರಿಗೆ ಮಾಹಿತಿ ನೀಡುವ ಕೆಲಸ ಮಾಡಿದ್ದಾರೆ.

ಎಂಟನೆಯ ವಯಸ್ಸಿನಲ್ಲಿ ಅಡುಗೆ ಮನೆಯಲ್ಲಿ ಸ್ಟೌ ಸ್ಫೋಟಗೊಂಡ ಪರಿಣಾಮವಾಗಿ ಸುಟ್ಟ ಗಾಯಗಳಿಗೆ ತುತ್ತಾದ ಪ್ರೇಮಾ, ನಂತರದಲ್ಲಿ ತಮಗಾದ ನೋವನ್ನು ಮೆಟ್ಟಿನಿಂತರು. ಬದಲಾವಣೆಯ ಚಾಲಕಶಕ್ತಿಯಾಗಿ ಬೆಳೆದರು. ವೆಲ್ಲೋರ್‌ನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿನಲ್ಲಿ 14 ಬಾರಿ ಶಸ್ತ್ರಚಿಕಿತ್ಸೆಗೆ ಒಳಗಾದ ಅವರು ನಂತರ ಅಲ್ಲಿಯೇ ಸರ್ಜನ್ ಆಗಿ, ವಿಭಾಗದ ಮುಖ್ಯಸ್ಥೆಯಾಗಿ ಕರ್ತವ್ಯ ನಿರ್ವಹಿಸಿದರು.

ಸೌಹಾರ್ದ ಕರ್ನಾಟಕದಿಂದ 30ಕ್ಕೆ ಮಾನವ ಸರಪಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌಹಾರ್ದ ಪರಂಪರೆ ಉಳಿಸುವ, ಬೆಳೆಸುವ ಅಭಿಯಾನವನ್ನು 'ಸೌಹಾರ್ದ ಕರ್ನಾಟಕ' ನಡೆಸುತ್ತಿದೆ. ಇದರ ಭಾಗವಾಗಿ ಜ.30ರಂದು ಮಾನವ ಸರಪಳಿ ಮತ್ತು ಸಭೆ ನಡೆಸಲು ನಿರ್ಧರಿಸಿದೆ.

'ಸೌಹಾರ್ದ ಕರ್ನಾಟಕ'ದ ಕೆ. ಮರುಳಸಿದ್ದಪ್ಪ, ಎಸ್.ಜಿ. ಸಿದ್ದರಾಮಯ್ಯ ಅವರು ಅಭಿಯಾನ ಕುರಿತು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕರ್ನಾಟಕವು ಸರ್ವ ಜನಾಂಗದ ಶಾಂತಿಯ ತೋಟವಾಗಿತ್ತು. ಅದಕ್ಕೆ ಈಗ ಧಕ್ಕೆ ಬಂದಿದೆ. ಜಾತಿ, ಧರ್ಮಗಳ ಹೆಸರಿನಲ್ಲಿ ವಿಭಜಿಸುವ ಶಕ್ತಿಗಳಿಂದ ಸಾಮಾಜಿಕ ಸೌಹಾರ್ದಕ್ಕೆ ಹಾನಿಯಾಗಿದೆ. ಇಂಥ ಸಮಯದಲ್ಲಿ ಸೌಹಾರ್ದ ಪರಂಪರೆಯನ್ನು, ಜನಸಂಸ್ಕೃತಿಯನ್ನು ಗುರುತಿಸಿ ಮುನ್ನೆಲೆಗೆ ತರುವುದು ಅನಿವಾರ್ಯ ಎಂದು ತಿಳಿಸಿದರು.

'ಜ.30ರಂದು ರಾಜ್ಯದ ವಿವಿಧ ಕಡೆಗಳಲ್ಲಿ ಬೃಹತ್ ಮಾನವ ಸರಪಳಿ, ಸೌಹಾರ್ದ ಸಭೆ, ವೈವಿಧ್ಯಮಯ ಕಾರ್ಯಕ್ರಮಗಳು ನಡೆಯಲಿವೆ. ಬೆಂಗಳೂರಿನ ಸ್ವಾತಂತ್ರ್ಯಉದ್ಯಾನದಲ್ಲಿ ಸಂಜೆ 4ಕ್ಕೆ ಸಭೆ ಸೇರಲಾಗುವುದು. ಸಂಜೆ 5.15ರಿಂದ ಮಾನವ ಸರಪಳಿ ನಿರ್ಮಿಸಲಾಗುವುದು. ಎಂದು ವಿವರಿಸಿದರು.

ಲಿಂಗಾಯತ ವಿರೋಧಿ ಕಿಡಿ ಶಮನಕ್ಕೆ ಯತ್ನ; ಕಾಂಗ್ರೆಸ್ ವಾತಾವರಣವೂ ಅವರಿಗೆ ಹಿಡಿಸಲಿಲ್ಲ...

ಶೆಟ್ಟರ್ ಮತ್ತೆ ಬಿಜೆಪಿ ಸೇರಿದ್ದು ಯಾಕೆ?

• ಶ್ರೀಕಾಂತ ಕಲ್ಲಮ್ಮನವರ

ಹುಬ್ಬಳ್ಳಿ: ಲೋಕಸಭಾ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿರುವ ಬಿಜೆಪಿಯು, ರಾಜ್ಯದಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ಯೋಜನೆ ಹಾಕಿಕೊಂಡಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಹೊತ್ತಿದ್ದ 'ಲಿಂಗಾಯತ ವಿರೋಧಿ' ಕಿಡಿಯನ್ನು ಶಮನಗೊಳಿಸಲು ಪ್ರಯತ್ನ ನಡೆಸಿದೆ. ಆ ಕಿಡಿ ಹೊತ್ತಿಸಿದ್ದ ಜಗದೀಶ ಶೆಟ್ಟರ್ ಅವರನ್ನೇ ಪಕ್ಷಕ್ಕೆ ಮರುಸೇರ್ಪಡೆ ಮಾಡಿಕೊಂಡಿದೆ ಎಂಬ ವಿಶ್ಲೇಷಣೆ ರಾಜಕೀಯ ವಲಯದಲ್ಲಿ ವ್ಯಕ್ತವಾಗಿದೆ.

ವಿಧಾನಸಭೆ ಚುನಾವಣೆಯಲ್ಲಿ ಹುಬ್ಬಳ್ಳಿ- ಧಾರವಾಡ ಸೆಂಟ್ರಲ್ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಶೆಟ್ಟರ್ ಅವರಿಗೆ ಬಿಜೆಪಿ ಟಿಕೆಟ್ ನಿರಾಕರಿಸಿತು. ಇದರಿಂದ ಸಿಟ್ಟಿಗೆದ್ದ ಅವರು, 'ಬಿಜೆಪಿಯಲ್ಲಿ ಲಿಂಗಾಯತರ ಕಡೆಗಣನೆ ಆಗುತ್ತಿದೆ' ಎಂದು ಕಿಡಿಕಾರಿದ್ದರು. ಪಕ್ಷ ತೊರೆದು, ಕಾಂಗ್ರೆಸ್‌ನಿಂದ ಚುನಾವಣಾ ಕಣಕ್ಕಿಳಿದರು. ಪರಾಭವಗೊಂಡರೂ ವಿಧಾನ ಪರಿಷತ್ ಸದಸ್ಯರಾಗುವಲ್ಲಿ ಸಫಲರಾದರು.

ತಮಗೆ ಟಿಕೆಟ್ ತಪ್ಪಿಸಿದ್ದನ್ನೇ ಗುರಿಯಾಗಿಸಿಕೊಂಡು ಶೆಟ್ಟರ್ ಸಭೆ, ಸಮಾರಂಭಗಳಲ್ಲಿ ಬಿಜೆಪಿ ವಿರುದ್ಧ 'ಲಿಂಗಾಯತ ವಿರೋಧಿ ಪಕ್ಷ' ಎಂದು ಬಿಂಬಿಸಲು ಪ್ರಯತ್ನಿಸಿದರು. ಇದಕ್ಕೆ ಕೆಲ ಲಿಂಗಾಯತ ಮುಖಂಡರು, ಮಠಾಧೀಶರು ಧ್ವನಿಗೂಡಿಸಿದರು. ವಿಧಾನಸಭೆ ಚುನಾವಣೆಯಲ್ಲಿ ಉತ್ತರ ಕರ್ನಾಟಕದ ಭಾಗದಲ್ಲಿ ಇದು ಪರಿಣಾಮ ಬೀರಿತು. ಬಿಜೆಪಿ ಹಲವೆಡೆ ಪರಾಭವಗೊಂಡಿತು.

'ವಿಧಾನಸಭೆಯಲ್ಲಿ ಉಂಟಾದ ಪರಿಸ್ಥಿತಿ ಲೋಕಸಭೆಯಲ್ಲಿ ಪುನರಾವರ್ತನೆ ಆಗದಿರಲಿ ಎಂಬ ಉದ್ದೇಶದಿಂದ ಶೆಟ್ಟರ್ ಅವರನ್ನು ಮತ್ತೆ ಪಕ್ಷಕ್ಕೆ ಸೇರಿಸಿಕೊಂಡಿದೆ. ಲೋಕಸಭೆ ಚುನಾವಣೆಯಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚು ಸ್ಥಾನ ಗೆಲ್ಲಲು ಸಹಕಾರಿಯಾಗಲಿದೆ' ಎಂದು ಪಕ್ಷದ ಮುಖಂಡರೊಬ್ಬರು ತಿಳಿಸಿದರು.

ಒಗ್ಗದ ಕಾಂಗ್ರೆಸ್ ವಾತಾವರಣ: ಜನಸಂಘದ ಶಿಸ್ತನ್ನು ಮೈಗೂಡಿಸಿಕೊಂಡಿದ್ದ ಶೆಟ್ಟರ್ ಅವರಿಗೆ ಕಾಂಗ್ರೆಸ್ ವಾತಾವರಣ ಹಿಡಿಸಲಿಲ್ಲ. ಸಮಯ ಪಾಲನೆ, ಶಿಸ್ತುಬದ್ಧ ಕಾರ್ಯ ನಿರ್ವಹಣೆ ಹೇಗಿರಬೇಕೆಂದು ಅವರು ಸಭೆಯೊಂದರಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಚಾಟಿ ಬೀಸಿದ್ದರು. ಇದಕ್ಕೆ ಕಾರ್ಯಕರ್ತರು ಆಕ್ಷೇಪಿಸಿದ್ದರು. 'ಶೆಟ್ಟರ್ ಜೊತೆ ಬಂದಿದ್ದ ಮುಖಂಡರಾದ ನಾಗೇಶ ಕಲಬುರ್ಗಿ ಹಾಗೂ ಮಲ್ಲಿಕಾರ್ಜುನ ಸಾಹುಕಾರ್ ಅವರನ್ನು ಕೂಡ ಕಾರ್ಯಕರ್ತರು ಕಡೆಗಣಿಸುತ್ತಿದ್ದರು' ಎಂಬ ಮಾತುಗಳೂ ಇವೆ.

ಬೆಳಗಾವಿ ಟಿಕೆಟ್: ಬೆಳಗಾವಿ ಬಿಜೆಪಿ ಸಂಸದೆ ಮಂಗಲಾ ಅಂಗಡಿ ಈ ಸಲ ಸ್ಪರ್ಧೆಯಿಂದ ಹಿಂದಕ್ಕೆ ಸರಿಯುವ ಸಾಧ್ಯತೆ ಹೆಚ್ಚಿದೆ. ಈ ಕ್ಷೇತ್ರದಿಂದ ಸ್ಪರ್ಧಿಸಲು ಜಗದೀಶ ಶೆಟ್ಟರ್ ಅಥವಾ ಅವರ ಸೊಸೆ (ಮಂಗಲಾ ಅಂಗಡಿ ಅವರ ಪುತ್ರಿ) ಅವರಿಗೆ ಟಿಕೆಟ್ ನೀಡುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

'ಸಚಿವ ಸ್ಥಾನದ ಒತ್ತಾಯಕ್ಕೆ ಸಿಗಲಿಲ್ಲ ಸ್ಪಂದನ'

ಜಗದೀಶ ಶೆಟ್ಟರ್ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಅಲ್ಲಲ್ಲಿ ಕೆಲ ಮುಖಂಡರು ಒತ್ತಾಯಿಸಿದರೂ ಸ್ಪಂದನ ಸಿಕ್ಕಿರಲಿಲ್ಲ. ಶೆಟ್ಟರ್ ಬಿಜೆಪಿ ತೊರೆದಾಗ, ಅವರಿಗೆ ಪ್ರಮುಖ ಮುಖಂಡರು ಅಥವಾ ಮಹಾನಗರ ಪಾಲಿಕೆಯ ಸದಸ್ಯರು ಜೊತೆಯಾಗಲಿಲ್ಲ. ಇದರಿಂದ ಅವರಿಗೆ ಭ್ರಮನಿರಸನವಾಯಿತು. ಕಾಂಗ್ರೆಸ್ ತೊರೆಯಲು ಅವರಿಗೆ ಇವೆಲ್ಲ ಕಾರಣ ಆಗಿರಬಹುದು ಎನ್ನಲಾಗುತ್ತಿದೆ.

ಕಾಂಗ್ರೆಸ್‌ನಲ್ಲಿದ್ದಾಗ ಶೆಟ್ಟರ್ ಉವಾಚ

- ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಯಾಗಬೇಕು ಎಂಬುದು ನನ್ನನ್ನು ಸೇರಿ ಕೋಟ್ಯಂತರ ಜನರ ಅಭಿಲಾಷೆ. ಆದರೆ, ಬಿಜೆಪಿ ಧರ್ಮದಲ್ಲಿ ರಾಜಕೀಯ ಬೆರೆಸಿ ಸಮಾಜಕ್ಕೆ ತಪ್ಪು ಸಂದೇಶ ರವಾನಿಸುತ್ತಿದೆ
- ರಾಮಮಂದಿರ ಉದ್ಘಾಟನೆ ಮುಖ್ಯವೋ, ಕಾಂಗ್ರೆಸ್ ಪಕ್ಷ ಟೀಕಿಸುವುದು ಮುಖ್ಯವೋ? ಮಂದಿರ ಉದ್ಘಾಟನೆಗೆ ಕಾಂಗ್ರೆಸ್ ಹೋಗದಿದ್ದರೆ ಹಿಂದೂ ವಿರೋಧಿ ಎಂಬ ಪಟ್ಟ ಕಟ್ಟಿ, ಲೋಕಸಭಾ ಚುನಾವಣೆಗೆ ಉಪಯೋಗಿಸಿಕೊಳ್ಳುವುದು ಬಿಜೆಪಿಯ ಷಡ್ಯಂತ್ರ
- ಕಾಂಗ್ರೆಸ್ ಹಿಂದೂ ವಿರೋಧಿಯಾಗಿದ್ದರೆ, ಹಿಂದೂಗಳು ಮತ ಹಾಕದಿದ್ದರೆ ರಾಜ್ಯದಲ್ಲಿ 136 ಸ್ಥಾನ ಬರಲು ಸಾಧ್ಯವಿತ್ತೆ? ಧಾರ್ಮಿಕ ವಿಷಯಗಳು ಭಾವನಾತ್ಮಕ ಹಾಗೂ ತಾತ್ಕಾಲಿಕವಾಗಿದ್ದು, ಬಿಜೆಪಿ ಇದನ್ನೇ ಮುಂದಿಟ್ಟುಕೊಂಡು ಮಾತನಾಡುತ್ತಿದ್ದರೆ ಜಾಸ್ತಿ ದಿನ ಇರುವುದಿಲ್ಲ
- ಶ್ರೀಕಾಂತ ಪೂಜಾರಿಗೆ ಸಂಬಂಧಿಸಿದ ಬೆಳವಣಿಗೆಗಳು ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ನಡೆದಿವೆ. ಇದರ ಹಿಂದೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಕೈವಾಡವಿದೆ. ಲೋಕಸಭಾ ಚುನಾವಣೆಯಲ್ಲಿ ಗೆಲ್ಲಲು ಅವರು ಹಿಂದೂ-ಮುಸ್ಲಿಮರ ನಡುವೆ ವೈಮನಸ್ಸು ಮೂಡಿಸುತ್ತಿದ್ದಾರೆ
- ನಾನು ಮತ್ತೆ ಬಿಜೆಪಿ ಸೇರುತ್ತೇನೆ ಎಂದು ಸುಳ್ಳು ಸುದ್ದಿ ಹಬ್ಬಿಸಿ, ಆ ಪಕ್ಷದಿಂದ ಹೊರ ಹೋಗುವವರನ್ನು ತಡೆಯುವ ಕೆಲಸವಾಗುತ್ತಿದೆ. ನಾನು ಮತ್ತೆ ಬಿಜೆಪಿಗೆ ಹೋಗುವ ಪ್ರಶ್ನೆಯೇ ಇಲ್ಲ. ಸಾರ್ವಜನಿಕರಲ್ಲಿ ಗೊಂದಲ ಮೂಡಿಸುವ ಕೆಲಸ ಬಿಜೆಪಿ ಮಾಡುತ್ತಿದೆ. ಈವರೆಗೂ ನನ್ನನ್ನು ಯಾರೂ ಭೇಟಿಯಾಗಿಲ್ಲ. ಭೇಟಿಯಾಗುವ ಅಗತ್ಯವೂ ಇಲ್ಲ.
- ಯಾರದ್ದೋ ವೈಯಕ್ತಿಕ ಹಿತಾಸಕ್ತಿಗಾಗಿ ನನಗೆ ಟಿಕೆಟ್ ತಪ್ಪಿಸಿ ಅಪಮಾನ ಮಾಡಲಾಯಿತು. ಅದನ್ನು ಸಹಿಸಲು ಸಾಧ್ಯವಾಗದೆ ಅಲ್ಲಿಂದ ಹೊರಬಂದಿರುವೆ. ಪಕ್ಷಕ್ಕಾಗಿ ದುಡಿದ ವ್ಯಕ್ತಿಗೆ ಟಿಕೆಟ್ ನೀಡಿಲ್ಲ ಎಂದಾದರೆ, ತತ್ವ, ಸಿದ್ಧಾಂತ ಏಕೆ ಬೇಕು? ಕೆ.ಎಸ್.ಈಶ್ವರಪ್ಪ ಅವರಿಗೂ ನನ್ನಂತೆ ಆಗಿದ್ದರೆ ಅವರಿಗೆ ಗೊತ್ತಾಗುತ್ತಿತ್ತು
- ಚಿತ್ತಾಪುರದಲ್ಲಿ ಪ್ರಿಯಾಂಕ್ ಖರ್ಗೆ ವಿರುದ್ಧ 80 ಕ್ರಿಮಿನಲ್ ಪ್ರಕರಣ ಇದ್ದ ವ್ಯಕ್ತಿಗೆ ಟಿಕೆಟ್ ನೀಡಲಾಯಿತು. ಬೇರೆ ಪಕ್ಷದಿಂದ ಬಂದವರಿಗೆ ಮಣೆ ಹಾಕಲಾಯಿತು. ಅಷ್ಟಾಗಿ, ವಾಜಪೇಯಿ ಅವರ ಕಾಲದಲ್ಲಿದ್ದ ಭ್ರಷ್ಟಾಚಾರ ರಹಿತ ವ್ಯವಸ್ಥೆ ಈಗಿನ ಬಿಜೆಪಿಯಲ್ಲಿಲ್ಲ
- ಬಿಜೆಪಿಯವರು ಚುನಾವಣೆ ಸಂದರ್ಭ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಾರೆ. ಅದು ಎಲ್ಲಿಂದ ಬರುತ್ತದೆ? ಅವರೇನು ಸತ್ಯ ಹರಿಶ್ಚಂದ್ರರಾ? ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಅವರಿಗೆ ಯಾವುದೇ ನೈತಿಕತೆ ಇಲ್ಲ
- ಶಕ್ತಿ ಯೋಜನೆ ಜಾರಿಯಾದ ನಂತರ ಮಹಿಳೆಯರು ಸರ್ಕಾರಿ ಬಸ್‌ಗಳಲ್ಲಿ ಖುಷಿಯಿಂದ ಪ್ರಯಾಣಿಸುತ್ತಿದ್ದಾರೆ. ಈಗ ಬಂದ 'ಗ್ಯಾರಂಟಿ' ಅನುಷ್ಠಾನದಿಂದ ವಿರೋಧ ಪಕ್ಷಗಳಲ್ಲಿ ನಡುಕ ಶುರುವಾಗಿದೆ
- ಪಂಚರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯು 75 ರಿಂದ 80 ವಯಸ್ಸಿನ ನಾಯಕರಿಗೆ ಟಿಕೆಟ್ ನೀಡಿದೆ. ನನಗೆ ಟಿಕೆಟ್ ನೀಡದ ಪರಿಣಾಮ ರಾಜ್ಯದಲ್ಲಿ ಅಧಿಕಾರ ಕಳೆದುಕೊಂಡ ಬಿಜೆಪಿ ಎಚ್ಚೆತ್ತುಕೊಂಡಿದೆ
- ನನಗೆ ಟಿಕೆಟ್ ಕೈ ತಪ್ಪಲು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಕಾರಣ. ತಮ್ಮ ಮಾನಸ ಪುತ್ರ ಮಹೇಶ ಟೆಂಗಿನಕಾಯಿಗೆ ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ಕ್ಷೇತ್ರದಿಂದ ಟಿಕೆಟ್ ಕೊಡಿಸಲು ನನಗೆ ತಪ್ಪಿಸಿದರು

ಬಿಜೆಪಿಗೆ ಮರಳಿದ ಶೆಟ್ಟರ್

ನವದೆಹಲಿಯಲ್ಲಿ ಗುರುವಾರ ಬಿಜೆಪಿಗೆ ಮರಳಿ ಸೇರ್ಪಡೆಯಾದ ಜಗದೀಶ ಶೆಟ್ಟರ್ ಅವರನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹೂಗುಚ್ಛ ನೀಡಿ ಸ್ವಾಗತಿಸಿದರು. ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಇದ್ದರು

ಪಿಟಿಐ ಚಿತ್ರ

ಕಾರ್ಯಕರ್ತರ ಅಪೇಕ್ಷೆಯಂತೆ ಶೆಟ್ಟರ್ ಬಿಜೆಪಿಗೆ ಮರುಸೇರ್ಪಡೆ ಆಗಿದ್ದು, ಪಕ್ಷಕ್ಕೆ ಹೆಚ್ಚಿನ ಬಲ ಬಂದಿದೆ. ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಪಕ್ಷ 25 ಸ್ಥಾನಗಳನ್ನು ಗೆಲ್ಲಲಿದೆ

ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಂಸದೀಯ ಮಂಡಳಿ ಸದಸ್ಯ

ಒಂದನೇ ಪುಟದಿಂದ

ಪಕ್ಷದ ರಾಷ್ಟ್ರೀಯ ನಾಯಕರು ಮನವೊಲಿಸಲು ಪ್ರಯತ್ನಿಸಿದ್ದರು. ಟಿಕೆಟ್ ಸಿಗದಿದ್ದಾಗ ಅವರು 2023ರ ಏಪ್ರಿಲ್ 17ರಂದು ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು.

ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದಿಂದ ಅವರನ್ನು ಪಕ್ಷ ಕಣಕ್ಕೆ ಇಳಿಸಿತ್ತು. ಅವರು 35 ಸಾವಿರ ಮತಗಳ ಅಂತರದಿಂದ ಸೋತಿದ್ದರು. ಬಳಿಕ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಲಾಗಿತ್ತು.

ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ಹಾಗೂ ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ಶೆಟ್ಟರ್ ಗುರುವಾರ ತಿಳಿಸಿದರು.

'ಮೋದಿ ಮತ್ತೆ ಪ್ರಧಾನಿಯಾಗಬೇಕು'

ಕಾಂಗ್ರೆಸ್‌ನವರು ನನಗೆ ಒಳ್ಳೆಯ ಗೌರವ ನೀಡಿ ಸ್ಥಾನಮಾನ ನೀಡಿದ್ದಾರೆ. ಅದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಧನ್ಯವಾದಗಳು. ಪ್ರಧಾನಿ ನರೇಂದ್ರ ಮೋದಿ ಅವರು 10 ವರ್ಷಗಳಿಂದ ದೇಶದ ಪ್ರಗತಿಗೆ ಹೆಚ್ಚಿನ ಕೆಲಸ ಮಾಡಿದ್ದಾರೆ. ಅವರು ಮತ್ತೆ ಪ್ರಧಾನಿ ಆಗಬೇಕು. ಅವರ ನಾಯಕತ್ವದಲ್ಲಿ ದೇಶಕ್ಕೆ ಹಾಗೂ ಪಕ್ಷಕ್ಕೆ ಹೆಚ್ಚು ಶಕ್ತಿ ಬರಬೇಕು ಎಂಬ ಉದ್ದೇಶದಿಂದ ಪಕ್ಷಕ್ಕೆ ಸೇರ್ಪಡೆಯಾಗಿದ್ದೇನೆ.

–ಜಗದೀಶ ಶೆಟ್ಟರ್

'ಕಾಂಗ್ರೆಸ್‌ನಿಂದ ಅನ್ಯಾಯವಾಗಿಲ್ಲ'

ಪ್ರಜಾವಾಣಿ ವಾರ್ತೆ

ಮಡಿಕೇರಿ: 'ಜಗದೀಶ ಶೆಟ್ಟರ್ ಅವರಿಗೆ ಕಾಂಗ್ರೆಸ್‌ನಿಂದ ಯಾವುದೇ ಅನ್ಯಾಯ ಆಗಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿರಾಜಪೇಟೆ ತಾಲ್ಲೂಕಿನ ಅಂಬಟ್ಟಿಯ ಗಾಲ್ಫ್ ಮೈದಾನದಲ್ಲಿ ಪತ್ರಕರ್ತರೊಂದಿಗೆ ಬುಧವಾರ ಮಾತನಾಡಿದ ಅವರು, 'ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ನೀಡದೆ ಬಿಜೆಪಿ ವಂಚಿಸಿದೆ ಎಂದು ಹೇಳಿ ಅವರು ಕಾಂಗ್ರೆಸ್‌ಗೆ ಬಂದಿದ್ದರು. ಪಕ್ಷವು ಅವರಿಗೆ ಟಿಕೆಟ್ ನೀಡಿತು. ಸ್ವ ಕ್ಷೇತ್ರದಲ್ಲೇ ಅವರು ಸೋತರು. ಆದರೂ ವಿಧಾನಪರಿಷತ್ ಸದಸ್ಯ ಸ್ಥಾನ ನೀಡಲಾಯಿತು' ಎಂದು ತಿಳಿಸಿದರು.

'ಬಿಜೆಪಿ ನನಗೆ ಅನ್ಯಾಯ ಮಾಡಿದೆ. ಆ ಪಕ್ಷಕ್ಕೆ ವಾಪಸ್ ಹೋಗುವುದಿಲ್ಲ ಎಂದು ಈಚೆಗೆ ನನ್ನೊಂದಿಗೆ ಮಾತನಾಡಿದ್ದಾಗಲೂ ಹೇಳಿದ್ದರು' ಎಂದರು.

ಕಾಂಗ್ರೆಸ್ ನೆಲಕಚ್ಚುತ್ತಿದೆ': 'ಸಮರ್ಥ ನಾಯಕತ್ವ ಹೊಂದಿದ್ದ ಜಗದೀಶ್ ಶೆಟ್ಟರ ಅವರನ್ನು, ಕಾಂಗ್ರೆಸ್‌ಗೆ ಸೇರಿಸಿಕೊಂಡು, ಕನಿಷ್ಠ ಒಂದು ಮಂತ್ರಿ ಸ್ಥಾನ ಕೊಡದೆ ಅವಮಾನ ಮಾಡಲಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಹಂತ ಹಂತವಾಗಿ ನೆಲ ಕಚ್ಚುತ್ತಿದೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಹಾಸನದಲ್ಲಿ ಪ್ರತಿಕ್ರಿಯಿಸಿದರು.

'ಯಾವ ಒತ್ತಡ ಇತ್ತೊ'

ಬೆಂಗಳೂರು: 'ಬಿಜೆಪಿಗೆ ಹೋಗುವುದಿಲ್ಲ ಎಂದಿದ್ದ ಜಗದೀಶ ಶೆಟ್ಟರ್, ಯಾಕೆ ಬಿಜೆಪಿ ಸೇರಿದ್ದಾರೊ? ಅವರಿಗೆ ಯಾವ ಒತ್ತಡ ಇತ್ತೊ? ಗೊತ್ತಿಲ್ಲ. ಇದು ಅವರ ಆತ್ಮಸಾಕ್ಷಿಗೆ ಬಿಟ್ಟ ವಿಚಾರ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ಬಿಜೆಪಿಗೆ ವಾಪಸ್ ಬರುವಂತೆ ಕ್ಷೇತ್ರದ ನಾಯಕರು, ಕಾರ್ಯಕರ್ತರ ಮೂಲಕ ಆಹ್ವಾನಿಸಲಾಗುತ್ತಿದೆ. ಆದರೆ, ಕಾಂಗ್ರೆಸ್ ನನಗೆ ರಾಜಕೀಯವಾಗಿ ಮರು ಜೀವ ಕೊಟ್ಟಿದೆ. ಬಿಜೆಪಿಗೆ ಹೋಗುವುದಿಲ್ಲ' ಎಂದು ಶೆಟ್ಟರ್ ಹೇಳಿದ್ದರು. ಅವರ ಮಾತಿನ ಮೇಲೆ ವಿಶ್ವಾಸ ಇಟ್ಟು, ಅವರು ಮತ್ತೆ ಬಿಜೆಪಿಗೆ ಹೋಗುವುದಿಲ್ಲ ಎಂದು ನಾನು ಹೇಳಿದ್ದೆ' ಎಂದರು.

'ಕಾಂಗ್ರೆಸ್ ಇಬ್ಭಾಗವಾಗುವ ಸಾಧ್ಯತೆ'

ಬೆಂಗಳೂರು: ಕಾಂಗ್ರೆಸ್‌ನ ಪ್ರಮುಖ ನಾಯಕರು ಬಿಜೆಪಿಗೆ ಬರಲಿದ್ದು, ಲೋಕಸಭಾ ಚುನಾವಣೆ ಬಳಿಕ ಕಾಂಗ್ರೆಸ್ ಇಬ್ಭಾಗವಾಗುವ ಸಾಧ್ಯತೆ ಇದೆ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಜಗದೀಶ ಶೆಟ್ಟರ್ ಅವರ ಘರ್ ವಾಪಸಿ ಆರಂಭವಷ್ಟೇ. ಬಿಜೆಪಿ ಬಿಟ್ಟು ಹೋದವರು ಘರ್ ವಾಪಸಿ ಆಗುವುದರ ಜತೆಗೆ ಕಾಂಗ್ರೆಸ್‌ನ ಪ್ರಮುಖ ನಾಯಕರೂ ಬರುತ್ತಾರೆ. ಲೋಕಸಭಾ ಚುನಾವಣೆಗೂ ಮೊದಲೇ ಭಾರಿ ಪ್ರಮಾಣದ ಬದಲಾವಣೆ ಆಗಲಿದೆ ಎಂದರು.

ಕಾಂಗ್ರೆಸ್ ಪಕ್ಷದೊಳಗಿನ ಉಸಿರುಗಟ್ಟುವ ವಾತಾವರಣ ತಡೆದು ಕೊಳ್ಳಲಾಗದೇ ಜಗದೀಶ ಶೆಟ್ಟರ್ ಮರಳಿ ತಮ್ಮ ಗೂಡು ಸೇರಿದ್ದಾರೆ. ಆಪರೇಷನ್ ಕಮಲದಿಂದ ಬಂದಿಲ್ಲ. ಶೆಟ್ಟರ್ ಅವರು ಸಂಘಪರಿವಾರದ ಹಿನ್ನೆಲೆಯವರು. ಅವರು ಮುಸ್ಲಿಮರನ್ನು ಓಲೈಸುವ ಪಕ್ಷಕ್ಕೆ ಏಕಾಏಕಿ ಸೇರಿ ಬಿಟ್ಟಿದ್ದರು. ಅವರ ಸ್ಥಿತಿ ರಾಮನವಮಿಗೂ ಇಮಾಮ್ ಸಾಬಿಗೂ ಏನು ಸಂಬಂಧ ಎನ್ನುವಂತೆ ಆಗಿತ್ತು

ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಶೆಟ್ಟರ್ ಕ್ಷಿಪ್ರ ಆಪರೇಷನ್

- ಶೆಟ್ಟರ್ ಅವರನ್ನು ಬಿಜೆಪಿ ಶಾಸಕ ರಮೇಶ ಜಾರಕಿಹೋಳಿ ಭೇಟಿ ಮಾಡಿ ಚರ್ಚಿಸುವ ಮೂಲಕ ಪಕ್ಷಕ್ಕೆ ಸೆಳೆಯುವ ಪ್ರಯತ್ನಕ್ಕೆ ಚಾಲನೆ
- ಶೆಟ್ಟರ್ ಅವರೊಂದಿಗೆ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಪಡಣವೀಸ್ ಚರ್ಚೆ. ಎರಡು ದಿನಗಳ ಹಿಂದೆ ಶೆಟ್ಟರ್ ಜತೆಗೆ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಮಾತುಕತೆ
- ಆಪ್ತ ಶಂಕರ ಪಾಟೀಲ ಮುನೇನಕೊಪ್ಪ ಅವರೊಂದಿಗೆ ಮಂಗಳವಾರ ರಾತ್ರಿ ನವದೆಹಲಿಗೆ ಬಂದ ಶೆಟ್ಟರ್
- ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಗುರುವಾರ ಬೆಳಿಗ್ಗೆ ಚರ್ಚಿಸಿದ ಬಿ.ಎಸ್.ಯಡಿಯೂರಪ್ಪ ಹಾಗೂ ಬಿ.ವೈ. ವಿಜಯೇಂದ್ರ
- ಅಮಿತ್ ಶಾ ಅವರನ್ನು ಶೆಟ್ಟರ್ ಗುರುವಾರ ಮಧ್ಯಾಹ್ನ ಭೇಟಿ ಮಾಡಿ ಸಮಾಲೋಚನೆ
- ಬಿಜೆಪಿ ಕೇಂದ್ರ ಕಚೇರಿಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿ ಚರ್ಚೆ
- ಬಳಿಕ ಪಕ್ಷದ ಕಚೇರಿಯಲ್ಲಿ ಬಿಜೆಪಿ ಸೇರ್ಪಡೆ

ದೆಹಲಿಯಲ್ಲಿದ್ದರೂ ಜೋಶಿ ದೂರ

ಹುಬ್ಬಳ್ಳಿ–ಧಾರವಾಡ ಲೋಕಸಭಾ ಕ್ಷೇತ್ರದ ಸದಸ್ಯರೂ ಆಗಿರುವ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ಶೆಟ್ಟರ್ ಅವರ ಸೇರ್ಪಡೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿಲ್ಲ.

ಜೋಶಿ ಅವರು ಗುರುವಾರ ಬೆಳಿಗ್ಗೆ ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ ಹೆದ್ದಾರಿ ಯೋಜನೆಗಳ ಕುರಿತು ಮನವಿ ಸಲ್ಲಿಸಿದರು. ಬಳಿಕ ಕಲ್ಲಿದ್ದಲು ಇಲಾಖೆಯ ಅಧಿಕಾರಿಗಳ ಜತೆಗೆ ಸಭೆ ನಡೆಸಿದರು. ಆದರೆ, ಶೆಟ್ಟರ್ ಅವರು ಪಕ್ಷದ ಕೇಂದ್ರದ ನಾಯಕರನ್ನು ಭೇಟಿಯಾಗುವ ಸಂದರ್ಭದಲ್ಲಿ ಜೋಶಿ ಇರಲಿಲ್ಲ.

ತಾನು ಬಿಜೆಪಿ ಬಿಡಲು ಪ್ರಲ್ಹಾದ ಜೋಶಿ ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪರೋಕ್ಷ ಕಾರಣ ಎಂದು ಶೆಟ್ಟರ್ ಅವರು ಅಮಿತ್ ಶಾ ಅವರಿಗೆ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಶೆಟ್ಟರ್ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಮುನ್ನ ವರಿಷ್ಠರು ಜೋಶಿ ಅವರೊಂದಿಗೆ ಸಮಾಲೋಚಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಸವದಿ, ಜನಾರ್ದನ ರೆಡ್ಡಿಗೂ 'ಆಪರೇಷನ್ ಕಮಲ'?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗದೀಶ ಶೆಟ್ಟರ್ ಅವರು ಬಿಜೆಪಿಗೆ ಮರಳಿದ ಬೆನ್ನಲ್ಲೇ ಕಾಂಗ್ರೆಸ್ ಶಾಸಕ ಲಕ್ಷ್ಮಣ ಸವದಿ ಮತ್ತು ಕಲ್ಯಾಣರಾಜ್ಯ ಪ್ರಗತಿ ಪಕ್ಷದ ಅಧ್ಯಕ್ಷ ಹಾಗೂ ಶಾಸಕ ಜನಾರ್ದನ ರೆಡ್ಡಿ ಅವರೂ ಸದ್ಯದಲ್ಲೇ ಬಿಜೆಪಿಗೆ ವಾಪಸಾಗಲಿದ್ದಾರೆ ಎಂಬ ಚರ್ಚೆ ಆರಂಭವಾಗಿದೆ.

ಈ ಮಧ್ಯೆ, ಲಕ್ಷ್ಮಣ ಸವದಿಯವರು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಗುರುವಾರ ಭೇಟಿ ಮಾಡಿ ಮಾತುಕತೆ ನಡೆಸಿದರು. ಆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸವದಿ, 'ಬಿಜೆಪಿ ಸೇರುವ ಪ್ರಶ್ನೆಯೇ ಇಲ್ಲ. ಬಿಜೆಪಿ ಸೇರುತ್ತೇನೆ ಎನ್ನುವುದು ಕೇವಲ ಊಹಾಪೋಹ' ಎಂದು ಹೇಳಿದರು.

ಜಗದೀಶ ಶೆಟ್ಟರ್ ಅವರು ಬಿಜೆಪಿ ಸೇರುತ್ತಾರೆ ಎಂದು ವಾರದ ಹಿಂದೆ ಮಾಧ್ಯಮಗಳಲ್ಲಿ ಪ್ರಕಟವಾದಾಗ, 'ಇದು ಸುಳ್ಳು, ಬಿಜೆಪಿಯವರು ಸುಖಾಸುಮ್ಮನೆ ಅಪಪ್ರಚಾರ ಮಾಡುತ್ತಿದ್ದಾರೆ' ಎಂದು ಶೆಟ್ಟರ್ ಹೇಳಿದ್ದರು.

ರಹಸ್ಯ ಕಾರ್ಯಾಚರಣೆ: ಬಿ.ವೈ. ವಿಜಯೇಂದ್ರ ಅಧ್ಯಕ್ಷರಾದ ಬೆನ್ನಲ್ಲೇ ಪಕ್ಷ ಬಿಟ್ಟು ಹೋದವರನ್ನು ಮರಳಿ ಕರೆತರುವ ವಿಚಾರಕ್ಕೆ ಚಾಲನೆ ಸಿಕ್ಕಿತ್ತು. ವರಿಷ್ಠರ ಅನುಮತಿ ಪಡೆದುಕೊಂಡೇ ಇದಕ್ಕೆ ಪೂರಕವಾಗಿ 'ಆಪರೇಷನ್' ಆರಂಭಿಸಲಾಯಿತು. ಶೆಟ್ಟರ್ ಅವರನ್ನು ಕರೆತರುವುದಕ್ಕೆ ಮೊದಲ ಆದ್ಯತೆ ನೀಡಲಾಯಿತು. ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಶೆಟ್ಟರ್ ಜತೆ ಮಾತುಕತೆ ನಡೆಸಿ, ಮನವೊಲಿಸಿದರು. ಇಬ್ಬರೂ ನಾಯಕರು ಮುಂಬೈನಲ್ಲಿ ಎರಡು ಬಾರಿ ಭೇಟಿ ಮಾಡಿದ್ದರು ಎಂದು ಮೂಲಗಳು ಹೇಳಿವೆ.

ಬಿ.ಎಸ್.ಯಡಿಯೂರಪ್ಪ, ಬಿ.ವೈ. ವಿಜಯೇಂದ್ರ ಅವರನ್ನು ವರಿಷ್ಠರು ದೆಹಲಿಗೆ ಕರೆಸಿಕೊಂಡರು. ಶೆಟ್ಟರ್ ಅವರೂ ಬುಧವಾರವೇ ದೆಹಲಿಗೆ ತೆರಳಿದರು. ಅಮಿತ್ ಶಾ ಬುಧವಾರ ದೆಹಲಿಯಲ್ಲಿ ಇಲ್ಲದ ಕಾರಣ ಗುರುವಾರ ಶಾ ಮತ್ತು ಶೆಟ್ಟರ್ ಭೇಟಿ ನಡೆಯಿತು. ಶೆಟ್ಟರ್ ಅವರ ಈ ನಡೆ ಕಾಂಗ್ರೆಸ್‌ನಲ್ಲೂ ಅಚ್ಚರಿ ಮೂಡಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಶೆಟ್ಟರ್ ಸೇರ್ಪಡೆಯ ಸುಳಿವಿರಲಿಲ್ಲ. ಮುಂದಿನ ಸರದಿ ಲಕ್ಷ್ಮಣ ಸವದಿ ಮತ್ತು ಜನಾರ್ದನ ರೆಡ್ಡಿ ಅವರದು ಎಂಬ ಚರ್ಚೆ ಬಿಜೆಪಿಯಲ್ಲಿ ನಡೆದಿದೆ.

ಬಿಜೆಪಿ ಸಭೆಗೆ 'ಡಿಜಿಟಲ್ ಸ್ಪರ್ಶ'!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 27ರಂದು ನಡೆಯಲಿರುವ ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿ ಶಾಸಕರು, ಸಂಸದರು, ಮಾಜಿ ಶಾಸಕರು, ಪರಾಜಿತ ಅಭ್ಯರ್ಥಿಗಳೂ ಸೇರಿ 900 ಕ್ಕೂ ಹೆಚ್ಚು ಅಪೇಕ್ಷಿತರು ಭಾಗವಹಿಸಲಿದ್ದು, ಸಭೆಗೆ ಡಿಜಿಟಲ್ ಸ್ಪರ್ಶ ನೀಡಲಾಗಿದೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ಪ್ರೀತಂಗೌಡ ಹೇಳಿದರು.

ಬಿ.ವೈ.ವಿಜಯೇಂದ್ರ ಅವರು ಅಧ್ಯಕ್ಷರಾದ ಬಳಿಕ ಇದೇ ಮೊದಲ ಬಾರಿಗೆ ರಾಜ್ಯ ಕಾರ್ಯಕಾರಿಣಿ ನಡೆಯುತ್ತಿದೆ. ಲೋಕಸಭಾ ಚುನಾವಣೆ ತಯಾರಿ ದೃಷ್ಟಿಯಲ್ಲಿ ಇದು ಅತ್ಯಂತ ಮಹತ್ವದ ಸಭೆ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡಿಜಿಟಲ್ ಎಂಟ್ರಿ ಮೂಲಕ ಪ್ರತಿಯೊಬ್ಬ ಅಪೇಕ್ಷಿತರ ನೋಂದಣಿ ನಡೆಯಲಿದೆ. ಅಪೇಕ್ಷಿತರಿಗೆ ಹೊಸ ಅನುಭವ ನೀಡಲಿದೆ ಎಂದು ಹೇಳಿದರು.

Kempegowda INTERNATIONAL AIRPORT BENGALURU

ಪ್ರಸ್ತಾವನೆ ಬಯಸುವ ಘಟಕದ ಹೆಸರು ಮತ್ತು ವಿಳಾಸ:
ಬೆಂಗಳೂರು ಅಂತರಾಷ್ಟ್ರೀಯ ವಿಮಾನನಿಲ್ದಾಣ ನಿಯಮಿತ
ಆಲ್ಫಾ 3ಎ, ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನನಿಲ್ದಾಣ,
ಬೆಂಗಳೂರು–560 300. ವೆಬ್: www.bengaluruairport.com

ಆಸಕ್ತಿ ವ್ಯಕ್ತಪಡಿಸುವಿಕೆಗೆ ಅಧಿಸೂಚನೆ (ಇಒಐ)

ಕ್ರ.ಸಂ.	ಟೆಂಡರ್ ಶೀರ್ಷಿಕೆ	ಕೆಲಸದ ವ್ಯಾಪ್ತಿಯ ಸಂಕ್ಷಿಪ್ತ ವಿವರಣೆ
1	ಮೂಲಸೌಕರ್ಯ ಕಾರ್ಯಗಳನ್ನು ಸಕ್ರಿಯಗೊಳಿಸುವುದು	ನಾರ್ತ್ ರನ್‌ವೇಗೆ ಸಂಬಂಧಿಸಿದ ಇನ್‌ಸ್ಟ್ರುಮೆಂಟ್ ಲ್ಯಾಂಡಿಂಗ್ ಸಿಸ್ಟಮ್‌ನ (ಐಎಲ್‌ಎಸ್) ಬದಲಾವಣೆಗಾಗಿ ಕಾರ್ಯಗಳನ್ನು ಸಕ್ರಿಯಗೊಳಿಸುವುದು

ಪೂರ್ವ ಅರ್ಹತಾ ಮಾನದಂಡ ಮತ್ತು ಇತರೆ ಮಾಹಿತಿ ಬಿಐಎಎಲ್ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. (bengaluruairport.com ವಿಭಾಗ ಟೆಂಡರ್ಸ್). ಉಲ್ಲೇಖ ಸಂಖ್ಯೆ ಇಒಐ–21
ಮೇಲಿನ ಎಲ್ಲಾ ಮಾಹಿತಿಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 9ನೇ ಫೆಬ್ರವರಿ 2024ರ 20:00 (ಐಎಸ್‌ಟಿ) ಗಂಟೆಗೆ.
ಗಮನಿಸಿ: ಈ ಇಒಐಗೆ ಸಂಬಂಧಿಸಿದ ಯಾವುದೇ ಹೆಚ್ಚುವರಿ ಸೇರ್ಪಡೆಗಳು ಬಿಐಎಎಲ್ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ.
ಇಚ್ಛೆಯುಳ್ಳ ಅರ್ಜಿದಾರರು ತಮ್ಮ ಆಸಕ್ತಿಯನ್ನು ಇ–ಮೇಲ್:ramesh.hegde@bialairport.com ಮೂಲಕ ವ್ಯಕ್ತಪಡಿಸಬೇಕು ಅಥವಾ ಬಿಐಎಎಲ್ ಇ–ಟೆಂಡರಿಂಗ್ ವೆಬ್‌ಸೈಟ್ (https://www.bialtenders.com) ನಲ್ಲಿ ನೋಂದಾಯಿಸಿ ಮತ್ತು ಪ್ರವೇಶ ಮಾಡಿ. ಈವೆಂಟ್ ಐಡಿ: 2659
ಆರ್‌ಎಫ್‌ಕ್ಯೂ ಬಯಸುವ ಘಟಕದ ಹೆಸರು ಮತ್ತು ವಿಳಾಸ:
ಮುಖ್ಯಸ್ಥ–ಸಂಗ್ರಹಣೆ & ಒಪ್ಪಂದಗಳು
ಬೆಂಗಳೂರು ಅಂತರಾಷ್ಟ್ರೀಯ ವಿಮಾನನಿಲ್ದಾಣ ನಿಯಮಿತ
ಆಲ್ಫಾ 3ಎ, ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನನಿಲ್ದಾಣ
ದೇವನಹಳ್ಳಿ, ಬೆಂಗಳೂರು–560 300. ಇ–ಮೇಲ್: ramesh.hegde@bialairport.com
ದೂರವಾಣಿ ಸಂಖ್ಯೆ: 080–66782203. www.bengaluruairport.com

ಕರ್ನಾಟಕ ಸರ್ಕಾರ
ಜಿಲ್ಲಾ ಆಸ್ಪತ್ರೆ, ಬಳ್ಳಾರಿ DISTRICT HOSPITAL, BALLARI.
ಎಸ್‌ಟಿಡಿ–08392, ಜಿಲ್ಲಾ ಶಸ್ತ್ರಚಿಕಿತ್ಸಕರು–274255 ಸ.ಆ.ಅಧಿಕಾರಿ–274254 ಕಛೇರಿ:275254 Email: bellaryds@gmail.com
ಸಂ:ಜಿಆಬ/ಎ.ಆರ್.ಎಸ್./ಟೆಂಡರ್/ಹೆಚ್.ಎನ್.ಎಸ್./01/23–24
ದಿನಾಂಕ: 24/01/2024

ಟೆಂಡರ್ ಪ್ರಕಟಣೆ

ಜಿಲ್ಲಾ ಆಸ್ಪತ್ರೆ, ಬಳ್ಳಾರಿ ಇಲ್ಲಿಗೆ ಒಂದು ವರ್ಷದ ಅವಧಿಗಾಗಿ ಹೆಚ್.ಎನ್.ಎಸ್. (ಆಸ್ಪತ್ರೆಯ ಅವಶ್ಯಕ ವಸ್ತುಗಳು) ಸರಬರಾಜು ಮಾಡಲು ಪ್ರತಿಷ್ಠಿತ/ಅಧಿಕೃತ ನೊಂದಾಯಿತ ಸಂಸ್ಥೆಯವರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಕರೆಯಲಾಗಿದೆ, ಟೆಂಡರ್‌ನ ವಿವರಗಳು ಈ ಕೆಳಕಂಡಂತೆ ಇರುತ್ತವೆ.
ಅವಧಿ: ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಟೆಂಡರ್ ವಿವರ: ಹೆಚ್.ಎನ್.ಎಸ್.(ಆಸ್ಪತ್ರೆಯ ಅವಶ್ಯಕ ವಸ್ತುಗಳು). ಟೆಂಡರ್ ಮೊತ್ತ ರೂ.: 68,20,500/–. ಇ.ಎಂ.ಡಿ ಮೊತ್ತ ರೂ.: 1,70,513/–. ಆನ್ಲೈನ್ ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ & ಸಮಯ: ದಿನಾಂಕ: 08/02/2024 ಸಾಯಂಕಾಲ 4.30 pm ವರೆಗೆ. ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ, ಸಮಯ & ಸ್ಥಳ: 09/02/2024 ಸಾಯಂಕಾಲ 4.30 ಕ್ಕೆ ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಾರ್ಯಾಲಯ ಬಳ್ಳಾರಿ. ಷರಾ: –
ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/750/ಕೆಎಸ್‌ಎಂಸಿಎ/2023–24

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ವನ್ಯಜೀವಿ ಉಪ ವಿಭಾಗ, ಕನಕಪುರ–562117,
Email:acfkkpwl@gmail.com
ಸಂಖ್ಯೆ: ಸ.ಅ.ಸಂ/ವ.ಉ.ವಿ/ಕಾಮಗಾರಿ/ಇ–ಟೆಂಡರ್/ಸಿಆರ್–05/2023–24
ದಿನಾಂಕ: 25.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ – 2ನೇ ಕರೆ – ಇ–ಪ್ರೊಕ್ಯೂರ್‌ಮೆಂಟ್

2023–24ನೇ ಸಾಲಿನಲ್ಲಿ ಕಾವೇರಿ ವನ್ಯಜೀವಿ ವಿಭಾಗದ ಕನಕಪುರ ವನ್ಯಜೀವಿ ಉಪ ವಿಭಾಗದ ಹಲಗೂರು ವನ್ಯಜೀವಿ ವಲಯ ವ್ಯಾಪ್ತಿಯಲ್ಲಿ ರೈಲ್ವೇ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿ ನಿರ್ವಹಿಸುವ ಸಂಬಂಧ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಇ–ಟೆಂಡರ್ (ಅಲ್ಪಾವಧಿ ಟೆಂಡರ್) ಆಹ್ವಾನಿಸಿದ್ದು, ಹೆಚ್ಚಿನ ಮಾಹಿತಿಗಾಗಿ ಹಾಗೂ ಟೆಂಡರ್‌ಗಳ ಷರತ್ತುಗಳ ಬಗ್ಗೆ ಗುತ್ತಿಗೆದಾರರು ಈ ಕೆಳಸಹಿದಾರರರ ಕಛೇರಿಯ ಕೆಲಸದ ವೇಳೆಯಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ (http://kppp.karnataka.gov.in) ನಲ್ಲಿ ಪರಿಶೀಲಿಸಲು ಕೋರಿದೆ.
ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಕನಕಪುರ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/475/2023–24

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ರಾಮನಗರ ವಿಶೇಷ ವಿಭಾಗ, ರಾಮನಗರ.
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 09/2023–24 ದಿನಾಂಕ : 23–01–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2023–24 ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ 08 ಸಂಖ್ಯೆಯ ಅಂದಾಜು ಮೊತ್ತ ರೂ. 70.00 ಲಕ್ಷಗಳಿಂದ ರೂ. 495.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ ಮುಂತಾದ ಇತರ ಮಾಹಿತಿಗಳನ್ನು http://kppp.karnataka.gov.in ವೆಬ್‌ಸೈಟ್ ಮೂಲಕ ಅಥವಾ ಸದರಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

1) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ : 25–01–2024 ರಿಂದ 08–02–2024 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ : 08–02–2024 ವೇಳೆ 16.00 ಗಂಟೆಯೊಳಗೆ ಸಲ್ಲಿಸುವುದು. 3) ಪೂರ್ವಭಾವಿ ಸಭೆಯ ದಿನಾಂಕ : 05–02–2024 ರ ಬೆಳಿಗ್ಗೆ 11.30 ಗಂಟೆಗೆ, 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 09–02–2024 ವೇಳೆ 4.30 ಗಂಟೆ. (ಸಾಧ್ಯವಾದಲ್ಲಿ)

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ರಾಮನಗರ ವಿಭಾಗ, ರಾಮನಗರ.
ಡಿಐಪಿಆರ್/ರಾಮನಗರ/419/ಮಣಿಪಾಲ್/2023–24

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಆಯುಕ್ತರ ಕಛೇರಿ, ನಂ. 17, ವಾರ್ತಾಸೌಧ,
ಭಗವಾನ್ ಮಹಾವೀರ್ ರಸ್ತೆ, ಬೆಂಗಳೂರು 560001
ಟೆಂಡರ್ ಅಧಿಸೂಚನೆ ಸಂ.: ಡಿಐಪಿಆರ್/ಪಿ.ಎಫ್.ಎಸ್./ಸಿಎಂ/ವಿಡಿಯೊ/2023-24/9090 ದಿನಾಂಕ: 22.01.2024

ಮುಖ್ಯ ಮಂತ್ರಿಗಳ ದೈನಂದಿನ ಅಧಿಕೃತ ಕಾರ್ಯಕ್ರಮಗಳ, ವಿಡಿಯೊ ಕವರೇಜಿಗಾಗಿ ಇ–ಟೆಂಡರ್ ಆಹ್ವಾನ.

ಮುಖ್ಯ ಮಂತ್ರಿಗಳ ದೈನಂದಿನ ಅಧಿಕೃತ ಕಾರ್ಯಕ್ರಮಗಳ ವಿಡಿಯೊ ಕವರೇಜಿಗಾಗಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಿ ಕೊಂಡಿರುವ, ಆಸಕ್ತ ಟೆಂಡರರ್ / ಬಿಡ್ಡರುಗಳಿಗೆ ಇ–ಟೆಂಡರ್ ಆಹ್ವಾನಿಸಿದೆ.
ಆಸಕ್ತ ಟೆಂಡರರ್ / ಬಿಡ್ಡರುಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ನಿಂದ ಸದರಿ ದಾಖಲೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: 23-02-2024ರ ಮಧ್ಯಾಹ್ನ 03.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 26-02-2024ರ ಬೆಳಗ್ಗೆ 11.00 ಗಂಟೆಗೆ, ಮತ್ತು ಆರ್ಥಿಕ ಬಿಡ್‌ಗಳನ್ನು ದಿನಾಂಕ: 28-02-2024ರ ಬೆಳಗ್ಗೆ 11.00 ಗಂಟೆಗೆ ಮೇಲ್ಕಂಡ ಕಚೇಯಲ್ಲಿ ತೆರೆಯಲಾಗುವುದು. ಇನ್ನೂ ಹೆಚ್ಚಿನ ವಿವರಗಳಿಗೆ ದೂರವಾಣಿ ಸಂ: 080-22028068 ಅನ್ನು ಸಂಪರ್ಕಿಸಬಹುದು.
ಸಹಿ/- (ಹೇಮಂತ್ ಎಂ ನಿಂಬಾಳ್ಕರ್, ಐಪಿಎಸ್) ಆಯುಕ್ತರು, ಡಿಐಪಿಆರ್.
DIPR/CP/RO3242/AAPL/2023-24

(ಕರ್ನಾಟಕ ಸರ್ಕಾರ)
ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ,
(ವಿಭಾಗೀಯ ಮಟ್ಟದ 150 ಹಾಸಿಗೆಗಳ ಆಸ್ಪತ್ರೆ)
email:crawfordhospital@gmail.com phone:08173-243098
ಸಂ.ಕ್ರಾ.ಸಾ.ಆ.ಸ/ಗ್ರೂಪ್–ಡಿ &ನಾ.ಕ್ಲಿ.ಟೆ/241/2023–24 ದಿನಾಂಕ:23/01/2024

ಇ ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2024–25ನೇ ಸಾಲಿಗೆ ಹೊರ ಗುತ್ತಿಗೆ ಗ್ರೂಪ್–ಡಿ ಮತ್ತು ನಾನ್–ಕ್ಲಿನಿಕಲ್ ಸೇವೆಯನ್ನು ನೀಡಲು ಅರ್ಹ ಟೆಂಡರ್‌ದಾರರಿಂದ/ ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಪಾರದರ್ಶಕ ಅಧಿನಿಯಮ 1999–2000 ಮೇರೆಗೆ ದ್ವಿಲಕೋಟೆ ಪದ್ಧತಿಯನ್ವಯ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರಿನ ವಾರ್ಷಿಕ ಅಂದಾಜು ಮೊತ್ತ 7076400/–ಆಸಕ್ತ ಸರಬರಾಜುದಾರರು ವೆಬ್‌ಸೈಟ್ www.kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವ ಮೂಲಕ ಇ– ಪ್ರಕ್ಯೂರ್ ಮೆಂಟ್ ನಲ್ಲಿ ಭಾಗವಹಿಸಬಹುದು. ರೂ. 1415280/–ಗಳ ಇ.ಎಂ.ಡಿ ಯನ್ನು ಇ–ಪಾವತಿ ಮೂಲಕ ಸಕಾಲದಲ್ಲಿ ಭರ್ತಿಮಾಡಿದ ಟೆಂಡರ್‌ಗಳನ್ನು ದಿ॥ 07/02/2024 ರ ಸಂಜೆ 5 ಗಂಟೆಯೊಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಅಥವಾ ವೆಬ್‌ಸೈಟ್‌ನಲ್ಲಿ ನೋಡಬಹುದು.
ಸಹಿ/–ಆಡಳಿತ ವೈದ್ಯಾಧಿಕಾರಿಗಳು, ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ,
ವಾಸಾಸಂಇ/ಹಿಸನಿ/ಹಾಸನ/684/ಕೆಎಸ್‌ಎಂಸಿಎ/689/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹಾದೇವಪುರ ವಿಭಾಗ, ಬೆಂಗಳೂರು–560048.
ಸಂ: ಕಾಪಾಅ/ಎಂಡಿಪಿ/ಟೆಂಡರ್/12/2023–24 ದಿನಾಂಕ: 25.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ ಲಕೋಟೆ ಟೆಂಡರ್) (ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಹಾದೇವಪುರ ವಿಭಾಗ, ಇವರು ಐಟಂ ದರದಲ್ಲಿ ಅರ್ಹ ಟೆಂಡರ್‌ದಾರರಿಂದ ಈ ಕೆಳಕಂಡ ಕಾಮಗಾರಿಗಾಗಿ ಬೃಬೆಂಮ ಪಾಲಿಕೆಯಲ್ಲಿ ನೊಂದಾಯಿತ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್ ಅಥವಾ ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಾಗಿ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)
1	ಬೈರತಿ ವಾರ್ಡ್ ಸಂಖ್ಯೆ 99ರ ಬೈರತಿ ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಬೋರ್‌ವೆಲ್ ಮತ್ತು ಅದಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಒದಗಿಸುವುದು.	100.00	2,00,000/–
ಪೂರ್ಣಗೊಳಿಸುವ ಕಾಲಾವಧಿ: 6 ತಿಂಗಳು			

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ವಿಚಾರಣೆಗಳನ್ನು ಸಲ್ಲಿಸಲು ಅಂತಿಮ ದಿನಾಂಕ: 30.01.2024ರ ಮಧ್ಯಾಹ್ನ 3.00 ಗಂಟೆಯೊಳಗಾಗಿ (3) ಪೂರ್ವ ಭಾವಿ ಸಭೆಯ ದಿನಾಂಕ: 01.02.2024ರ ಬೆಳಗ್ಗೆ 11.00 ಗಂಟೆಗೆ. (4) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 07.02.2024ರ ಸಂಜೆ 4.00 ಗಂಟೆಯವರೆಗೆ (5) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 08.02.2024ರ ಸಂಜೆ 04.30 ಗಂಟೆಗೆ. (6) ಆರ್ಥಿಕ ಬಿಡನ್ನು ತೆರೆಯುವ ದಿನಾಂಕ: 12.02.2024 ರ ಸಂಜೆ 4.00 ಗಂಟೆಗೆ.
ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಎಲ್ಲಾ ಕೆಲಸದ ದಿವಸಗಳಂದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: www.kppp.karnataka.gov.in ನಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು ಮಹಾದೇವಪುರ ವಿಭಾಗ, ಬಿಬಿಎಂಪಿ

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–2278480, ಫ್ಯಾಕ್ಸ್: 2275106, ಇ–ಮೇಲ್: itstaff_ulb_tumkur@yahoo.com ವೆಬ್‌ಸೈಟ್:www.tumkur city. mrc. gov.in
ಸಂ:ತುಮಪಾ/ತಾಂಶಾ/ಪಶಾ/ಸಿಆರ್– /2023–24 ದಿನಾಂಕ: 22.01.2024

ಅಲ್ಪಾವಧಿ ಟೆಂಡರ್ /ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮ್ಮದಂತೆ 2023–24ನೇ ಸಾಲಿನ ಮಹಾನಗರಪಾಲಿಕೆ 15ನೇ ಹಣಕಾಸು ನಿಧಿಯಲ್ಲಿ ಸ್ವಚ್ಛ ಭಾರತ ನಿಧಿಯಲ್ಲಿ ವಿವಿಧ ಕಾಮಗಾರಿಯನ್ನು ಕೈಗೊಳ್ಳಲು ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಅಲ್ಪಾವಧಿ ಟೆಂಡರ್ / ಅಲ್ಪಾವದಿ ಮರು ಟೆಂಡರ್ ಪ್ರಕಟಣೆ ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in/ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ ಈ ಕಛೇರಿಯ www.tumakurucity.mrc.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.
ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.
1. ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ:23–01–2024 ರಿಂದ ದಿನಾಂಕ:30–01–2024ರವರೆಗೆ. 2. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:30–01–2024ರಂದು ಸಾಯಂಕಾಲ 4.30 ಗಂಟೆವರೆಗೆ. 3. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:31–01–2024ರ ಸಾಯಂಕಾಲ 4.35ಗಂಟೆವರೆಗೆ
ಸಹಿ/– ಕಾರ್ಯಪಾಲಕ ಅಭಿಯಂತರರು ತುಮಕೂರು ಮಹಾನಗರ ಪಾಲಿಕೆ, ತುಮಕೂರು
DIPR/TUM/466/KSMCA/2023-24

ಪೊಲೀಸ್ ಅಧೀಕ್ಷಕ ರವರ ಕಛೇರಿ, ಮೈಸೂರು ಜಿಲ್ಲೆ
ಕಿತ್ತೂರು ರಾಣಿ ಚೆನ್ನಮ್ಮ ಸರ್ಕಲ್, ಹೈದರಾಲಿ ರಸ್ತೆ, ಜಲಪುರಿ, ಮೈಸೂರು, 570019
ದೂರವಾಣಿ: :+91 821–2520040,+91 821–2444268,
ಈಮೇಲ್: spmys@ksp.gov.in

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಇ.ಪ್ರೊಕ್ಯೂರ್‌ಮೆಂಟ್ ಪೋರ್ಟಲ್–2 ಮುಖಾಂತರ)

ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಮೈಸೂರು ರವರು ಮೈಸೂರು ಜಿಲ್ಲಾ ವ್ಯಾಪ್ತಿಯ ಪೊಲೀಸ್ ಉಪ ವಿಭಾಗಗಳಿಗೆ ಅವಶ್ಯವಿರುವ ಆಧುನಿಕ ಸಂಚಾರ ನಿರ್ವಹಣೆಯ ವ್ಯವಸ್ಥೆಯ (ITMS) ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್–ಲೈನ್ ಟೆಂಡರುಗಳನ್ನು ಈ ಕೆಳಕಂಡಂತೆ ಆಹ್ವಾನಿಸಿರುತ್ತಾರೆ.

	ಟೆಂಡರ್ ಸಂಖ್ಯೆ/ದಿನಾಂಕ	ಅಂದಾಜು ಮೌಲ್ಯ ರೂ. ಲಕ್ಷಗಳಲ್ಲಿ
1	KSP/2023-24/IND0056 Dt.20/01/2024	99.77
2	KSP/2023-24/IND0057 Dt.20/01/2024	92.59
3	KSP/2023-24/IND0058 Dt.20/01/2024	92.11
4	KSP/2023-24/IND0059 Dt.20/01/2024	92.98
5	KSP/2023-24/IND0060 Dt.20/01/2024	87.89
6	KSP/2023-24/IND0061 Dt.20/01/2024	67.35

ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಇತರೆ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ,
DIPR/DDMYS/KSMCA/955/2023-24

❦ ಸುಭಾಷಿತ ❦

ಕಾಪಿಟ್ಟುಕೊಳ್ಳುವುದು ಮತ್ತು ಬಿಟ್ಟುಬಿಡುವುದರ ನಡುವೆ ಸಮತೋಲನ ಕಾಯ್ದುಕೊಳ್ಳುವುದೇ ಜೀವನ.

-ರೂಮಿ

ಸೌರವಿದ್ಯುತ್ ಉತ್ಪಾದನೆ: ಮಹತ್ವದ ಯೋಜನೆ, ಶೀಘ್ರ ಅನುಷ್ಠಾನಗೊಳ್ಳಲಿ

ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಘೋಷಿಸಿರುವ 'ಪ್ರಧಾನಮಂತ್ರಿ ಸೂರ್ಯೋದಯ ಯೋಜನೆ'ಯು ದೇಶದ ಇಂಧನ ಉತ್ಪಾದನೆಯ ಗತಿಯನ್ನೇ ಬದಲಿಸಬಹುದಾದ ಮಹತ್ವಾಕಾಂಕ್ಷಿ ಉಪಕ್ರಮ. ದೇಶದಾದ್ಯಂತ ಒಂದು ಕೋಟಿ ಮನೆಗಳ ಮೇಲೆ ಸೌರವಿದ್ಯುತ್ ಘಟಕಗಳನ್ನು ಅಳವಡಿಸುವ ಪ್ರಸ್ತಾವವನ್ನು ಈ ಯೋಜನೆಯು ಹೊಂದಿದೆ. ಹವಾಮಾನ ಬದಲಾವಣೆ ಮತ್ತು ಜಾಗತಿಕ ತಾಪಮಾನ ಹೆಚ್ಚಳದ ಇಂದಿನ ಸಂದರ್ಭದಲ್ಲಿ, ನವೀಕರಿಸಬಹುದಾದ ಇಂಧನ ಮೂಲಗಳ ಬಳಕೆಯ ಪ್ರಮಾಣವನ್ನು ಸಾಧ್ಯವಾದಷ್ಟೂ ಹೆಚ್ಚಿಸುವ ತುರ್ತು ಅಗತ್ಯವಿದೆ. ಕಲ್ಲಿದ್ದಲು, ಕಚ್ಚಾತೈಲದಂಥ ಪಳೆಯುಳಿಕೆ ಅಥವಾ ಸಾಂಪ್ರದಾಯಿಕ ಇಂಧನ ಮೂಲಗಳ ಬಳಕೆಯನ್ನು ಕಡಿಮೆ ಮಾಡುವುದಾಗಿ ಜಾಗತಿಕ ಸಮುದಾಯಕ್ಕೆ ಭಾರತ ಕೊಟ್ಟಿರುವ ಮಾತನ್ನು ಕೂಡ ಉಳಿಸಿಕೊಳ್ಳಬೇಕಿದೆ. ಆ ದಿಸೆಯಲ್ಲಿ ಪ್ರಸಕ್ತ ಯೋಜನೆಯ ಮಹತ್ವವನ್ನು ನಾವು ಗ್ರಹಿಸಬೇಕಿದೆ. ಅಲ್ಲದೆ, ಸೌರವಿದ್ಯುತ್ ಘಟಕಗಳು ಗೃಹಬಳಕೆಯ ಶಕ್ತಿಮೂಲಗಳ ವೆಚ್ಚವನ್ನು ಬಹುಪಾಲು ತಗ್ಗಿಸಲಿವೆ. ವರ್ಷದಲ್ಲಿ ಸರಿಸುಮಾರು 250ರಿಂದ 300 ದಿನಗಳವರೆಗೆ ಒಳ್ಳೆಯ ಬಿಸಿಲು ಬೀಳುವುದರಿಂದ ತಾರಸಿ ಮೇಲಿನ ವಿದ್ಯುತ್ ಉತ್ಪಾದನೆಗೆ ಭಾರತವು ಅತ್ಯಂತ ತಕ್ಕ ತಾಣವಾಗಿದೆ. ದೇಶದಲ್ಲಿ ಒಟ್ಟಾರೆ 30 ಕೋಟಿ ಮನೆಗಳ ಮೇಲೆ ಸೌರವಿದ್ಯುತ್ ಘಟಕ ಹಾಕಲು ಅವಕಾಶವಿದೆ ಎಂದೂ ಅಂದಾಜಿಸಲಾಗಿದೆ.

ಇಂಧನ ಕ್ಷೇತ್ರದಲ್ಲಿ ಜನರ ಸ್ವಾವಲಂಬನೆಯನ್ನು ಹೆಚ್ಚಿಸಲಿರುವ ಈ ಯೋಜನೆಯ ಬಗ್ಗೆ ಅಗತ್ಯವಾಗಿ ಜನಜಾಗೃತಿ ಮೂಡಿಸಬೇಕಾಗಿದೆ

ಕೇಂದ್ರ ಸರ್ಕಾರವು ಗೃಹ ಬಳಕೆದಾರ ಗ್ರಾಹಕರಿಗೆ ಸೌರವಿದ್ಯುತ್ ಘಟಕ ಅಳವಡಿಸಿಕೊಳ್ಳುವಂತೆ ಉತ್ತೇಜಿಸಲು 2022ರ ಜುಲೈನಲ್ಲಿಯೇ ನೋಂದಣಿ ವ್ಯವಸ್ಥೆಯನ್ನು ಆರಂಭಿಸಿದೆ. ಆದರೆ, ಇದುವರೆಗೆ ಅದಕ್ಕೆ ಹೇಳಿಕೊಳ್ಳುವಂತಹ ಪ್ರತಿಕ್ರಿಯೆ ಸಿಕ್ಕಿಲ್ಲ. ಸದ್ಯ ದೇಶದಲ್ಲಿ ಹತ್ತು ಲಕ್ಷ ಮನೆಗಳು ಮಾತ್ರ ಸೌರವಿದ್ಯುತ್ ಘಟಕ ಹೊಂದಿವೆ. 2022ರ ವೇಳೆಗೆ 100 ಗಿಗಾ ವಾಟ್ ಸೌರವಿದ್ಯುತ್ ಉತ್ಪಾದನೆ ಮಾಡುವಷ್ಟು ಮೂಲ ಸೌಕರ್ಯವನ್ನು ಹೊಂದಬೇಕು ಎಂಬ ಗುರಿಯೊಂದಿಗೆ ಕೇಂದ್ರ ಸರ್ಕಾರ 2014ರಲ್ಲಿಯೇ ಯೋಜನೆಯನ್ನು ಹಾಕಿಕೊಂಡಿತ್ತು. ಆದರೆ, ಆ ಗುರಿಯನ್ನು ಇನ್ನೂ ಸಾಧಿಸಲು ಸಾಧ್ಯವಾಗಿಲ್ಲ. ಕೋವಿಡ್ ಸಾಂಕ್ರಾಮಿಕದಿಂದಲೂ ಈ ಯೋಜನೆಗೆ ಭಾಗಶಃ ಹಿನ್ನಡೆಯಾಗಿದೆ. ಇದುವರೆಗೆ 11 ಗಿಗಾ ವಾಟ್ ಉತ್ಪಾದನೆಗೆ ಬೇಕಾದ ಸೌರವಿದ್ಯುತ್ ಘಟಕಗಳ ಅಳವಡಿಕೆ ಮಾತ್ರ ಸಾಧ್ಯವಾಗಿದೆ. ಅದರಲ್ಲಿ ಗೃಹ ಘಟಕಗಳ ಉತ್ಪಾದನಾ ಸಾಮರ್ಥ್ಯದ ಪ್ರಮಾಣ 2.7 ಗಿಗಾ ವಾಟ್‌ನಷ್ಟಿದೆ. ಈ ಕಳಪೆ ಸಾಧನೆಗೆ ಹಲವು ಕಾರಣಗಳುಂಟು. ಸೌರವಿದ್ಯುತ್ ಘಟಕ ಅಳವಡಿಕೆಯ ವೆಚ್ಚವು ಜಗತ್ತಿನ ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಕಡಿಮೆ ಇರುವುದು ನಿಜವಾದರೂ ಜನಸಾಮಾನ್ಯರ ಪಾಲಿಗೆ ಅದು ಇನ್ನೂ ಕೈಗೆಟಕುತ್ತಿಲ್ಲ. ರಾಷ್ಟ್ರೀಯ ಸೌರವಿದ್ಯುತ್ ಯೋಜನೆ ಮೂಲಕ ಈ ಘಟಕಗಳ ಸ್ಥಾಪನೆಗೆ ಒಟ್ಟು ವೆಚ್ಚದ ಶೇ 40ರಷ್ಟನ್ನು ನೆರವಿನ ರೂಪದಲ್ಲಿ ನೀಡಲಾಗುತ್ತಿದೆ. ಸರ್ಕಾರ ಈಗ ಹೊಸದಾಗಿ ಘೋಷಿಸಿರುವ ಕಾರ್ಯಕ್ರಮದ ಮೂಲಕ ಜನಸಾಮಾನ್ಯರಿಗೆ ಹೆಚ್ಚಿನ ಆರ್ಥಿಕ ಹಾಗೂ ತಾಂತ್ರಿಕ ನೆರವು ಸಿಗಬಹುದೆಂಬ ನಿರೀಕ್ಷೆ ಇದೆ. ಆಕರ್ಷಕ ಕೊಡುಗೆ ಇದಾಗಿರಲಿದೆ ಎಂದೂ ಆಶಿಸಲಾಗಿದೆ.

ತಾರಸಿ ಮೇಲೆ ವಿದ್ಯುತ್ ಉತ್ಪಾದನೆ ಮಾಡುವುದರ ಮಹತ್ವದ ಕುರಿತು ಜನಜಾಗೃತಿ ಆಂದೋಲನವನ್ನು ಆರಂಭಿಸುವುದಾಗಿ ಪ್ರಧಾನಿ ಪ್ರಕಟಿಸಿದ್ದಾರೆ. ಗ್ರಾಮಾಂತರ ಭಾಗದಲ್ಲಿ ಇಂತಹ ಜನಜಾಗೃತಿಯ ಅಗತ್ಯ ತುಂಬಾ ಹೆಚ್ಚಾಗಿದೆ. ತಾರಸಿ ಮೇಲೆ ಉತ್ಪಾದನೆಯಾಗುವ ವಿದ್ಯುತ್‌ಗೆ ಮುಖ್ಯ ವಿದ್ಯುತ್ ಜಾಲದೊಂದಿಗೆ ಸಂಪರ್ಕ ಕಲ್ಪಿಸಿದರೆ ಗ್ರಾಮಾಂತರ ಭಾಗದಲ್ಲಿ ವಿದ್ಯುತ್ ಕಡಿತದ ಸಮಸ್ಯೆಗೂ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ. ಹೆಚ್ಚು ಹೆಚ್ಚು ಇ-ವಾಹನ ಚಾರ್ಜಿಂಗ್ ಪಾಯಿಂಟ್‌ಗಳನ್ನು ಅಳವಡಿಸಲೂ ಇದರಿಂದ ಅವಕಾಶ ಒದಗಲಿದೆ. ಇ-ವಾಹನಗಳ ಮಾರಾಟದಲ್ಲಿ ಚಾರ್ಜಿಂಗ್ ಪಾಯಿಂಟ್‌ಗಳ ಕೊರತೆಯೇ ಮುಖ್ಯ ತೊಡಕು. ಈ ಯೋಜನೆಯ ಅನುಷ್ಠಾನದಿಂದ ಆ ತೊಡಕು ಸಹ ನೀಗಲಿದೆ. ಯೋಜನೆಯ ಜಾರಿಗೆ ಪ್ರಧಾನಿಯವರೇನೂ ಕಾಲಮಿತಿಯನ್ನು ನಿಗದಿಗೊಳಿಸಿಲ್ಲ. ಸಾಧ್ಯವಾದಷ್ಟು ಬೇಗ ಜನರಿಗೆ ತಲುಪುವಂತಾದರೆ ಒಳ್ಳೆಯದು. ಯೋಜನೆಯಲ್ಲಿ ಜನರ ಪಾಲ್ಗೊಳ್ಳುವಿಕೆಯು ಇಂಧನದಂತಹ ಪ್ರಮುಖ ಕ್ಷೇತ್ರದಲ್ಲಿ ಅವರ ಸ್ವಾವಲಂಬನೆಯನ್ನು ಹೆಚ್ಚಿಸಲಿದೆ. ಅಭಿವೃದ್ಧಿ ಚಟುವಟಿಕೆಗಳಿಗೂ ಇದು ವೇಗವರ್ಧಕವಾಗಲಿದೆ.

ಕೇಂದ್ರ– ರಾಜ್ಯಗಳ ಸಂಬಂಧ ಸುಧಾರಣೆ: ಗಣರಾಜ್ಯದ ಆಶಯಕ್ಕೆ ಪೂರಕ

ಗಣರಾಜ್ಯ ಭಾರತ: ಒಂದು ಅವಲೋಕನ

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ದೇಶವು ತನ್ನ 75ನೇ ಗಣರಾಜ್ಯೋತ್ಸವವನ್ನು ಆಚರಿಸುತ್ತಿರುವುದು ನಿಜಕ್ಕೂ ಒಂದು ಸಂಭ್ರಮದ ಸಂದರ್ಭ. ಇದು ದೇಶದ ಸಾಧನೆಗಳನ್ನು ಹಾಗೂ ಸವಾಲುಗಳನ್ನು ಗುರುತಿಸಬೇಕಿರುವ ಹೊತ್ತು ಕೂಡ ಹೌದು. ದೇಶದ ಈಗಿನ ಜನಸಂಖ್ಯೆಯಲ್ಲಿ ಶೇಕಡ 2ಕ್ಕಿಂತ ಕಡಿಮೆ ಜನ 1950ರ ಜನವರಿ 26ಕ್ಕಿಂತ ಮೊದಲು ಜನಿಸಿದವರು. ಅಂದರೆ, ಬಹುತೇಕರು ದೇಶವು ಗಣರಾಜ್ಯವಾದ ನಂತರದಲ್ಲಿ ಜನಿಸಿದವರು. ನಾವು ಅಂಗೀಕರಿಸಿದ ಸಂವಿಧಾನಕ್ಕೆ ಅನುಗುಣವಾಗಿ, ಸಂಸದೀಯ ಮಾದರಿಯ ಸರ್ಕಾರವನ್ನು ರೂಪಿಸಿಕೊಳ್ಳಲಾಯಿತು. ಕೇಂದ್ರದಲ್ಲಿ ಸರ್ಕಾರದ ಮುಖ್ಯಸ್ಥರಾಗಿ ಚುನಾಯಿತ ರಾಷ್ಟ್ರಪತಿಯನ್ನು ಹೊಂದಲಾಯಿತು.

ಸಂಸದೀಯ ಮಾದರಿಯ ಸರ್ಕಾರವನ್ನು ಹೊಂದಿದ ಗಣರಾಜ್ಯವಾಗಿ ನಾವು ಪ್ರಧಾನಿ ನೇತೃತ್ವದ ಸಚಿವ ಸಂಪುಟವನ್ನು ಹೊಂದಿದ್ದೇವೆ. ಪ್ರಧಾನಿಯವರು ಲೋಕಸಭೆಯಲ್ಲಿ ಬಹುಮತ ಹೊಂದಿರುತ್ತಾರೆ.

ನಾವು ಗಣರಾಜ್ಯವಾದ ನಂತರದಲ್ಲಿ, ಹೆಚ್ಚಿನ ಲೋಕಸಭಾ ಚುನಾವಣೆಗಳ ವಿಷಯವು ಪ್ರಧಾನಿ ಸ್ಥಾನಕ್ಕೆ ಯಾರು ಬರಬೇಕು ಎಂಬುದರ ಸುತ್ತ ಅಥವಾ ಪ್ರಧಾನಿ ಸ್ಥಾನದಲ್ಲಿ ಇರುವವರನ್ನು ಸೋಲಿಸಬೇಕು ಎಂಬುದರ ಸುತ್ತವೇ ಗಿರಕಿ ಹೊಡೆದಿದೆ. ದೇಶದ ಚುನಾವಣೆಗಳು 'ಅಧ್ಯಕ್ಷೀಯ' ಮಾದರಿಗೆ ಹೊರಳಿಕೊಂಡಿವೆ ಎಂದು ಹಲವಾರು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. 'ಅಧ್ಯಕ್ಷೀಯ' ಎಂಬುದಕ್ಕಿಂತಲೂ ಹೆಚ್ಚಾಗಿ, ಅವು 'ಪ್ರಧಾನಿ'ಯ ಸುತ್ತ ಕೇಂದ್ರೀಕೃತವಾಗಿವೆ ಎನ್ನಬಹುದು.

ಈಗ ಕೆಲವು ವರ್ಷಗಳಿಂದ ನಾವು ಕೇಂದ್ರ ಸರ್ಕಾರವನ್ನು ಆಡಳಿತಾರೂಢ ಪಕ್ಷದ ಮೂಲಕ ಗುರುತಿಸುತ್ತಿಲ್ಲ. ಬದಲಿಗೆ, ಪ್ರಧಾನಿ ಹುದ್ದೆಯಲ್ಲಿ ಇರುವವರ ಮೂಲಕ ಸರ್ಕಾರವನ್ನು ಗುರುತಿಸಲಾಗುತ್ತಿದೆ. ಇದು ಈಚೆಗಿನ ವಿದ್ಯಮಾನವಷ್ಟೇ ಅಲ್ಲ. ನಾವು ಗಣರಾಜ್ಯವಾದಾಗಿನಿಂದ ಬಹುತೇಕ ಹೀಗೇ ಆಗಿದೆ. ಸಂಸದೀಯ ಆಡಳಿತ ವ್ಯವಸ್ಥೆಯ ಮಹತ್ವವನ್ನು ನಮ್ಮ ಸಂವಿಧಾನವು ಕೇಂದ್ರದ ಮಟ್ಟದಲ್ಲಿ ಮಾತ್ರವಲ್ಲದೆ, ರಾಜ್ಯಗಳ ಮಟ್ಟದಲ್ಲಿಯೂ ಒತ್ತಿ ಹೇಳಿದೆ. ಹೀಗಿದ್ದರೂ ಇಲ್ಲಿ ಒಂದು ಮಹತ್ವದ ವ್ಯತ್ಯಾಸ ಇದೆ. ರಾಜ್ಯಗಳ ಮಟ್ಟದಲ್ಲಿ, ವಿಧಾನಸಭೆಗೆ ಉತ್ತರದಾಯಿ ಆಗಿರುವ ಮುಖ್ಯಮಂತ್ರಿ ನೇತೃತ್ವದ ಸಚಿವ ಸಂಪುಟ ಇರುತ್ತದೆ. ರಾಷ್ಟ್ರಪತಿಯು ಚುನಾಯಿತ ಆಗಿರುತ್ತಾರಾದರೂ, ರಾಜ್ಯದ ಮೊದಲ ಪ್ರಜೆಯಾದ ರಾಜ್ಯಪಾಲ ಚುನಾಯಿತ ವ್ಯಕ್ತಿ ಅಲ್ಲ; ಅವರು ನೇಮಕಗೊಂಡ ವ್ಯಕ್ತಿ. ಕೇಂದ್ರದಲ್ಲಿ ಯಾವುದೇ ಪಕ್ಷ ಅಥವಾ ಮೈತ್ರಿಕೂಟ ಅಧಿಕಾರದಲ್ಲಿರಲಿ, ರಾಜ್ಯಪಾಲರ ಹುದ್ದೆಯು ವಿವಾದಗಳಲ್ಲಿ ಮುಳುಗಿಕೊಂಡೇ ಇದೆ.

ಇಲ್ಲಿ ಸಮಸ್ಯೆಗೆ ಮೂರು ಆಯಾಮಗಳಿವೆ. ಮೊದಲನೆಯದು, ರಾಜ್ಯಪಾಲರ ಹೊಣೆಗಾರಿಕೆಗಳ ವಿಚಾರವಾಗಿ ಸ್ಪಷ್ಟತೆ ಇಲ್ಲ. ರಾಜ್ಯಪಾಲರು ಕೇಂದ್ರದ ಪ್ರತಿನಿಧಿಯೋ ಅಥವಾ ಕೇಂದ್ರ ಮತ್ತು ರಾಜ್ಯದ ನಡುವೆ ಕೊಂಡಿಯೋ? ರಾಜ್ಯಗಳ ಮಟ್ಟದಲ್ಲಿ ನಿಜವಾದ ಅಧಿಕಾರವಿರುವುದು ಮುಖ್ಯಮಂತ್ರಿ ನೇತೃತ್ವದ ಸಂಪುಟಕ್ಕೋ (ಇದು ಪ್ರಜಾತಾಂತ್ರಿಕವಾಗಿ ಆಯ್ಕೆಯಾದ ವಿಧಾನಸಭೆಗೆ ಉತ್ತರದಾಯಿ) ಅಥವಾ ರಾಜ್ಯಪಾಲರು ರಾಜ್ಯದ ಆಡಳಿತದಲ್ಲಿ ಸಕ್ರಿಯ ಪಾತ್ರ ನಿಭಾಯಿಸಬಹುದೋ? ರಾಜ್ಯ ಹಾಗೂ ಕೇಂದ್ರದಲ್ಲಿ ಆಡಳಿತಾರೂಢ ಪಕ್ಷಗಳು ಬೇರೆ ಬೇರೆ ಆಗಿದ್ದಾಗ ಮುಖ್ಯಮಂತ್ರಿ ಮತ್ತು ರಾಜ್ಯಪಾಲರ ನಡುವಿನ ಸಂಘರ್ಷವು ಗಣರಾಜ್ಯದ ಕಾರ್ಯಗಳಲ್ಲಿ ದೊಡ್ಡ ಉಪದ್ರವದಂತೆ ಇದೆ.

ಸಮಸ್ಯೆಯ ಎರಡನೆಯ ಆಯಾಮ ಇರುವುದು ರಾಜ್ಯಪಾಲರನ್ನಾಗಿ ಯಾರನ್ನು ನೇಮಕ ಮಾಡಬೇಕು ಎಂಬ ವಿಚಾರದಲ್ಲಿ. ಈ ವಿಚಾರವಾಗಿ ಸಂವಿಧಾನ ರಚನಾ ಸಭೆಯು ವಿಸ್ತೃತವಾಗಿ ಚರ್ಚಿಸಿದೆ. ಸಂವಿಧಾನವು ರಾಜ್ಯಪಾಲರಾಗಿ ನೇಮಕವಾಗುವವರ ಅರ್ಹತೆಗೆ ಸಂಬಂಧಿಸಿದಂತೆ ಸಾಮಾನ್ಯವಾದ ಕೆಲವು ಅಂಶಗಳನ್ನು ಉಲ್ಲೇಖಿಸಿದೆ. ಸಾಧ್ಯವಾದಷ್ಟು ಮಟ್ಟಿಗೆ ರಾಜ್ಯಪಾಲರ ಹುದ್ದೆಗೆ ರಾಜಕಾರಣಿಗಳನ್ನು ನೇಮಿಸಬಾರದು ಎಂದು ನೆಹರೂ ಮತ್ತು ಅಂಬೇಡ್ಕರ್ ಹೇಳಿದ್ದರು. ಸಮಾಜದ ವಿವಿಧ ಕ್ಷೇತ್ರಗಳ ಹಿರಿಯರನ್ನು ಅಲ್ಲಿಗೆ ನೇಮಕ ಮಾಡಬೇಕು ಎಂದಿದ್ದರು. ಆದರೆ ಸಂವಿಧಾನ ಜಾರಿಯಾದಾಗಿನಿಂದಲೂ ಇದನ್ನು ಪಾಲಿಸಿರುವುದು ಕಡಿಮೆ. ರಾಜ್ಯಪಾಲರಾಗಿ ನೇಮಕಗೊಂಡ ಪ್ರತಿ 10 ಮಂದಿಯಲ್ಲಿ ಎಂಟು ಮಂದಿ ಸಕ್ರಿಯ ರಾಜಕಾರಣಿಗಳಾಗಿದ್ದವರು ಎಂಬುದನ್ನು ಅಧ್ಯಯನಗಳು ತೋರಿಸಿಕೊಟ್ಟಿವೆ.

ಕಳೆದ 74 ವರ್ಷಗಳಲ್ಲಿ ಅತ್ಯಂತ ಹೆಚ್ಚಾಗಿ ದುರ್ಬಳಕೆಯಾದ ಸಂವಿಧಾನದ ವಿಧಿಗಳಲ್ಲಿ 356ನೇ ವಿಧಿಯೂ ಒಂದು. ಇದು ಕೇಂದ್ರ ಸರ್ಕಾರಕ್ಕೆ ರಾಜ್ಯವೊಂದರಲ್ಲಿ, ಸಾಂವಿಧಾನಿಕ ವ್ಯವಸ್ಥೆ ಕುಸಿದುಬಿದ್ದಾಗ ರಾಷ್ಟ್ರಪತಿ ಆಡಳಿತವನ್ನು ಹೇರಲು ಅವಕಾಶ ಕಲ್ಪಿಸುತ್ತದೆ. ಸಾಂವಿಧಾನಿಕ ವ್ಯವಸ್ಥೆ 'ಕುಸಿದುಬಿದ್ದಿದೆ' ಎಂಬುದನ್ನು ತೀರ್ಮಾನಿಸುವವರು ರಾಜ್ಯಪಾಲರು. ಸರ್ಕಾರಕ್ಕೆ ಸದನದಲ್ಲಿ ಬಹುಮತ ಇಲ್ಲ ಎಂದು ತೀರ್ಮಾನಿಸಿ, ವಿಧಾನಸಭೆಯಲ್ಲಿ ಬಹುಮತ ಪರೀಕ್ಷೆಗೆ ಕಾಯದೆ, ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸು ಮಾಡಿ ರಾಜ್ಯಪಾಲರು ಕೇಂದ್ರಕ್ಕೆ ಪತ್ರ ರವಾನಿಸುತ್ತಿದ್ದರು. ಆದರೆ ಎಸ್.ಆರ್. ಬೊಮ್ಮಾಯಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ಬಂದ ನಂತರದಲ್ಲಿ ಈ ವಿಧಿಯ ದುರ್ಬಳಕೆ ತಗ್ಗಿದೆ. ಹೀಗಿದ್ದರೂ, ರಾಜ್ಯಪಾಲರು ಹಾಗೂ ಮುಖ್ಯಮಂತ್ರಿ ನಡುವಿನ ಸಂಘರ್ಷಗಳು ದೇಶದ ಎಲ್ಲೆಡೆ ಇವೆ. ಕೇಂದ್ರ ಹಾಗೂ ರಾಜ್ಯದಲ್ಲಿ ಆಡಳಿತ ನಡೆಸುವ ಪಕ್ಷಗಳು ಬೇರೆ ಬೇರೆ ಆಗಿದ್ದಾಗ ಇದು ಕಣ್ಣಿಗೆ ರಾಚುತ್ತದೆ.

ಇದು ಮೂರನೆಯ ಆಯಾಮದ ಬಗ್ಗೆ ನಮ್ಮ ಗಮನವನ್ನು ಸೆಳೆಯುತ್ತದೆ. ಅಂದರೆ, ರಾಜ್ಯಪಾಲರ ನೇಮಕದ ವಿಧಾನದ ಬಗ್ಗೆ. ರಾಷ್ಟ್ರಪತಿಯವರು ರಾಜ್ಯಪಾಲರನ್ನು ನೇಮಕ ಮಾಡಬೇಕು ಎಂದು ಸಂವಿಧಾನ ಹೇಳುತ್ತದೆ. ಅಂದರೆ, ಆಚರಣೆಯಲ್ಲಿ ಕೇಂದ್ರ ಸಂಪುಟದ ಸಲಹೆಯನ್ನು ಆಧರಿಸಿ ಈ ನೇಮಕ ಆಗಬೇಕು. ಸಂವಿಧಾನ ರಚನಾ ಸಭೆಯಲ್ಲಿದ್ದ ನಾಯಕರು, ರಾಜ್ಯಪಾಲರ ನೇಮಕಕ್ಕೂ ಮೊದಲು ಮುಖ್ಯಮಂತ್ರಿಯ ಜೊತೆ ಸಮಾಲೋಚನೆ ನಡೆಸಲಾಗುತ್ತದೆ ಎಂಬ ಭರವಸೆ ಹೊಂದಿದ್ದರು. ಆರಂಭದ ವರ್ಷಗಳಲ್ಲಿ ಇದನ್ನು ಪಾಲಿಸಲಾಯಿತಾದರೂ, ನಂತರದಲ್ಲಿ ಈ ಪದ್ಧತಿಯನ್ನು ಕೈಬಿಡಲಾಯಿತು. ಮುಖ್ಯಮಂತ್ರಿ ಜೊತೆ ಸಮಾಲೋಚನೆ ನಡೆಸುವ ಬದಲು, ರಾಜ್ಯಪಾಲರ ನೇಮಕದ ಬಗ್ಗೆ ಮುಖ್ಯಮಂತ್ರಿಗೆ ಮಾಹಿತಿ ನೀಡಲಾಗುತ್ತಿದೆ. ಹಲವು ಸಂದರ್ಭಗಳಲ್ಲಿ, ರಾಜ್ಯವೊಂದರ ರಾಜ್ಯಪಾಲರ ನೇಮಕದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಸಿಗುವ ರೀತಿಯಲ್ಲಿಯೇ ಮುಖ್ಯಮಂತ್ರಿಗೂ ಮಾಹಿತಿ ಸಿಗುತ್ತದೆ. ಕೇಂದ್ರದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಪಕ್ಷ ಹಾಗೂ ರಾಜ್ಯಗಳಲ್ಲಿ ಆಡಳಿತಾರೂಢ ಪಕ್ಷ ಬೇರೆ ಬೇರೆ ಆಗಿದ್ದಾಗ ಈ ರೀತಿ ಆಗುವುದು ಹೆಚ್ಚು.

ಇದರ ಉದ್ದೇಶ ಸ್ಪಷ್ಟ. ರಾಜ್ಯಪಾಲರು ಕೇಂದ್ರವನ್ನು ಪ್ರತಿನಿಧಿಸುತ್ತಾರೆ ಹಾಗೂ ರಾಜ್ಯ ಸರ್ಕಾರವನ್ನು ವಜಾಗೊಳಿಸುವ ಅವಕಾಶ ಎಷ್ಟು ಬೇಗ ಬರುತ್ತದೆ ಎಂಬುದಕ್ಕೆ ಕಾದು, ಅದನ್ನು ಬಳಸಿಕೊಳ್ಳುತ್ತಾರೆ. ದೇಶವು ಗಣರಾಜ್ಯವಾದ ಮೊದಲ 4 ದಶಕಗಳ ಅವಧಿಗೆ ಈ ಮಾತು ಹೆಚ್ಚು ಅನ್ವಯವಾಗುತ್ತದೆ. ಆದರೆ ಬೊಮ್ಮಾಯಿ ಪ್ರಕರಣದ ತೀರ್ಪು ಹೊರಬಿದ್ದ ನಂತರದಲ್ಲಿ ರಾಜ್ಯಪಾಲರು ರಾಜ್ಯ ಸರ್ಕಾರಗಳಿಗೆ ಅಡ್ಡಿ ಉಂಟುಮಾಡಲು ಹೊಸ ವಿಧಾನಗಳನ್ನು ಹುಡುಕಿಕೊಂಡರು.

ದೇಶವು ಗಣರಾಜ್ಯವಾಗಿ ಬದಲಾದ 74 ವರ್ಷಗಳ ನಂತರವಾದರೂ, ರಾಜಕೀಯ ಮುಖಂಡರು ಪ್ರಮುಖ ರಾಜಕೀಯ ಸಂಸ್ಥೆಗಳು ಸುಗಮವಾಗಿ ಕೆಲಸ ನಿರ್ವಹಿಸುವಂತೆ ಮಾಡಲು ಒಮ್ಮತಕ್ಕೆ ಬರಬೇಕು. ಈ ಸಂಸ್ಥೆಗಳನ್ನು ರಾಜಕೀಯ ಹಗೆ ಸಾಧಿಸಿಕೊಳ್ಳಲು ಬಳಸಬಾರದು. ಗಣರಾಜ್ಯವು 75 ವರ್ಷಗಳನ್ನು ಪೂರೈಸಿ, ಅದರ ಆಚೆಗೆ ಹೆಜ್ಜೆ ಇರಿಸುವ ಸಂದರ್ಭದಲ್ಲಿ, ಗಣರಾಜ್ಯದ ನಿಯಮಗಳನ್ನು ಅವುಗಳ ಆಶಯಕ್ಕೆ ಅನುಗುಣವಾಗಿ ಪಾಲಿಸುವಂತೆ ಆಗಲು ಇದು ಬಹಳ ಮುಖ್ಯವಾದ ಸುಧಾರಣಾ ಕ್ರಮವಾಗುತ್ತದೆ.

ಚುರುಮುರಿ

ಮ್ಯಾಜಿಕ್ ಬಟನ್!

• ಬಿ.ಎನ್.ಮಲ್ಲೇಶ್

'ಗುಡ್ಡೆ ಪೇಪರ್ ನೋಡಿದ್ಯಾ? ಪಿರಿಯಾಪಟ್ಟದಲ್ಲಿ ಸ್ವತಃ ಸಿಎಂ ಬಟನ್ ಒತ್ತಿದ್ರೂ ನೀರೆತ್ತೋ ಮೋಟ್ರು ಆನ್ ಆಗ್ಲಿಲ್ಲಂತೆ, ಅದ್ಕೆ ಅದ್ಯಾರೋ ಆಫೀಸರ್‌ನ ಸಸ್ಪೆಂಡ್ ಮಾಡಿದಾರೆ...' ದುಬ್ಬೀರ ಗುಡ್ಡೆಗೆ ಪೇಪರ್ ತೋರಿಸಿ ಹೇಳಿದ.

'ಅದಿರ್ಲಿ, ಇಲ್ಲಿ ನಿಗಮ, ಮಂಡಳಿಗೆ ಸಿಎಮ್ಮು, ಡೀಸಿಎಮ್ಮು ಸೇರೇ ಬಟನ್ ಒತ್ತಿದ್ರಪ, ಅದು ಆನ್ ಆಯ್ತಾ? ಒರಿಜಿನಲ್ ಬಟನ್ ಇರೋದು ಕೈಕಮಾಂಡ್ ಹತ್ರ' ಗುಡ್ಡೆ ನಕ್ಕ.

'ಅದು ಆನ್ ಆಗದಂಗೆ ಕೆಲವು ಫಿಟ್ಟಿಂಗ್ ಇಟ್ಟಿರ್ತಾರೆ ಕಣ್ರಲೆ, ಮೋಟ್ರು ಫಿಟ್ಟಿಂಗ್ ಎಲ್ಲಿ ತಪ್ಪಿದೆ ಹುಡುಕಬೋದು, ಈ ರಾಜಕೀಯದ ಫಿಟ್ಟಿಂಗ್ ಹುಡುಕೋದು ಕಷ್ಟ' ತೆಪರೇಸಿ ಅನುಭವದ ಮಾತಾಡಿದ.

'ನೋಡ್ರಪ ಯಾರ್‍ಯಾರ ಬಟನ್ ಎಲ್ಲೆಲ್ಲಿರ್ತಾವೆ ಹೇಳೋದು ಕಷ್ಟ. ಈಗ ರಾಜ್ಯದ ಕಮಲಕ್ಕನ ಬಟನ್ನು ತೆನೆಯಕ್ಕನತ್ರ ಐತಂತೆ ಗೊತ್ತಾ?' ಮಂಜಮ್ಮ ನಕ್ಕಳು.

'ಮಂಜಮ್ಮ ಸುಮ್ನೆ ಗೊತ್ತಿಲ್ದೆ ಮಾತಾಡ್ಬೇಡ, ಕಮಲಕ್ಕನ ಬಟನ್ನು ಸ್ವಲ್ಪ ಸ್ಟ್ರಕ್ ಆಗಿತ್ತಂತೆ, ರಿಪೇರಿಗೆ ತೆನೆಯಕ್ಕನತ್ರ ಕೊಟ್ಟಿದಾರೆ ಅಷ್ಟೆ' ಕೊಟ್ರೇಶಿಗೆ ಸಿಟ್ಟು ಬಂತು.

'ಕರೆಕ್ಟ್, ಈಗ ಕೈಯಪ್ಪನ ಮನೇಲಿ ಮೂವರು ಡಿಸಿಎಂ ಬೇಕು ಅಂತ ಒಬ್ರು ರೊಳ್ಳಿ ತೆಗೆದಿದ್ರಲ್ಲ, ಅವರ ಬಟನ್ ಎಲ್ಲಿದೆ ಅಂತ ನಿಮಗೇನರೆ ಗೊತ್ತಾ?' ಕೊಟ್ರೇಶಿ ಪರ ತೆಪರೇಸಿ ವಾದಿಸಿದ.

'ಆತು ಆತು... ಜಗಳ ಬ್ಯಾಡ, ಈ ಬಟನ್‌ಗಳು ಎಲ್ಲೋ ಯಾರೋ ಒತ್ತಿದ್ರೆ ಮ್ಯಾಜಿಕ್ ತರ ಇನ್ನೆಲ್ಲೋ ಆನ್ ಆಗಿರ್ತವು. ಕೆಲವು ಸಲ ಎಷ್ಟು ಒತ್ತಿದ್ರೂ ಆನೇ ಆಗಲ್ಲ' ದುಬ್ಬೀರ ಸಮಾಧಾನಪಡಿಸಿದ.

ಅಷ್ಟರಲ್ಲಿ ದುಬ್ಬೀರನ ಮೊಬೈಲ್ ರಿಂಗಾಯಿತು. ದುಬ್ಬೀರ ಧಡಕ್ಕನೆ ಎದ್ದು 'ಒಂದ್ನಿಮಿಷ ಬಂದೆ, ಹಲೋ...' ಎನ್ನುತ್ತ ಆಚೆ ಹೋದ.

ಗುಡ್ಡೆಗೆ ನಗು. 'ಇದು ಯಾರ ಬಟನ್ ಗೊತ್ತಾ? ಅವನೆಂಡ್ತಿದು... ಅಲ್ಲಿ ಫೋನ್ ಬಟನ್ ಒತ್ತಿದ್ರೆ ಇಲ್ಲಿ ಇವ್ನು ಹೆಂಗ್ ಎದ್ದು ಓಡೋದ ನೋಡಿ' ಎಂದ. ಎಲ್ಲರೂ ಸದ್ದು ಕೇಳಿಸದ ಹಾಗೆ ಕಿಸಕ್ಕೆಂದರು.

ದಿನದ ಟ್ವೀಟ್

ಜಿಗಿವೀರರು?!

ಜಗದೀಶ ಶೆಟ್ಟರ್, ನಿತೀಶ್ ಕುಮಾರ್ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರು ಒಟ್ಟಿಗೆ ಕೈಜೋಡಿಸಿ, ತಮ್ಮದೇ ಆದ ಒಂದು ಪಕ್ಷವನ್ನು ಹುಟ್ಟುಹಾಕಲಿ. ಅದಕ್ಕೆ ಎಸ್‌ಪಿಐ ಎಂದು ನಾಮಕರಣ ಮಾಡಲಿ. ಅಂದರೆ, ಸ್ವಿಚಿಂಗ್ ಪಾರ್ಟಿ ಆಫ್ ಇಂಡಿಯಾ.

ನಿಶಾಂತ್ ಎಂ.

ಕಿಡಿನುಡಿ

ಹೋದ ವರ್ಷ ಬಿಜೆಪಿ ಟಿಕೆಟ್ ಸಿಗದಿದ್ದರಿಂದ ಕಾಂಗ್ರೆಸ್ ಟಿಕೆಟ್‌ನಿಂದ ಸ್ಪರ್ಧಿಸಿ ಸೋತು ಸುಣ್ಣವಾಗಿದ್ದ ಶೆಟ್ಟರ್, ಈಗ ನಾಚಿಕೆಯಿಲ್ಲದೆ ಮತ್ತೆ ಬಿಜೆಪಿಗೆ ವಾಪಸಾಗಿದ್ದಾರೆ. ಹಾಗೆಯೇ ಬಿಜೆಪಿ ಸಹ ನಾಚಿಕೆಯಿಲ್ಲದೆ ಅವರನ್ನು ಮತ್ತೆ ಬರಮಾಡಿಕೊಂಡಿದೆ. ಇದು ಕರ್ನಾಟಕದ ರಾಜಕೀಯ!



ಶಿವ್ ಅರೂರ್, ಪತ್ರಕರ್ತ, ಲೇಖಕ

25 ವರ್ಷಗಳ ಹಿಂದೆ

ಮಂಗಳವಾರ, 26-1-1999

• ಕಂಬನಿ ಮಿಡಿತದೊಂದಿಗೆ ಸ್ಟಿವರ್ಟ್ ಅಂತ್ಯಕ್ರಿಯೆ

ಬಾರಿಪದಾ, ಜ. 25– ರಾಷ್ಟ್ರದ ಜನತೆ ವಿಶೇಷವಾಗಿ ಕ್ರೈಸ್ತ ಜನಾಂಗದವರು ಆಸ್ಟ್ರೇಲಿಯಾದ ಧರ್ಮಪ್ರಚಾರಕ ಗ್ರಹಾಂ ಸ್ಟಿವರ್ಟ್ ಸ್ಟೇನ್ಸ್ ಅವರ ದಾರುಣ ಅಂತ್ಯಕ್ಕೆ ದಿಗ್ಭ್ರಮೆ ವ್ಯಕ್ತಪಡಿಸಿದ್ದು, ಇಂದು ಮುಂಜಾನೆ ಇಲ್ಲಿ ಅಸಂಖ್ಯಾತ ಜನರ ಕಂಬನಿ ಮಿಡಿತದೊಂದಿಗೆ ಸ್ಟಿವರ್ಟ್ ಮತ್ತು ಅವರ ಇಬ್ಬರು ಮಕ್ಕಳ ಅಂತ್ಯಕ್ರಿಯೆ ನಡೆಸಲಾಯಿತು.

ಸ್ಟಿವರ್ಟ್ 34 ವರ್ಷಗಳ ಕಾಲ ಬಡವರಲ್ಲಿ ಅತಿ ಬಡವರಾದ ಕುಷ್ಠರೋಗಿಗಳ ಸೇವೆಯನ್ನು ಮಾಡಿದ್ದರು. ವಿವಿಧ ಭಾಗಗಳಿಂದ ಬಂದಿದ್ದ ಕುಷ್ಠರೋಗಿಗಳ ಜತೆ ಸಾವಿರಾರು ಜನರು ಅಂತ್ಯಕ್ರಿಯೆ ಸಮಯದಲ್ಲಿ ಬಿಕ್ಕಿ ಬಿಕ್ಕಿ ಅಳುತ್ತಿದ್ದರು.

ಕರುಣೆ ತೋರಿಸಲ್ಲ: ಸ್ಟಿವರ್ಟ್ ಹಾಗೂ ಅವರ ಇಬ್ಬರು ಮಕ್ಕಳನ್ನು ಸಜೀವವಾಗಿ ದಹಿಸಿ ಅಮಾನವೀಯ ಕೃತ್ಯ ನಡೆಸಿದವರಿಗೆ 'ಯಾವುದೇ ಕರುಣೆ ತೋರಿಸುವುದಿಲ್ಲ' ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಹೇಳಿದ್ದಾರೆ.

ಬಿಲ್ಲು ಮತ್ತು ಬಾಣಗಳನ್ನು ಹಿಡಿದಿದ್ದ ಬಜರಂಗದಳ ಕಾರ್ಯಕರ್ತರು, ಜೀಪಿನೊಳಗೆ ನಿದ್ರಿಸುತ್ತಿದ್ದ 58 ವರ್ಷ ವಯಸ್ಸಿನ ಗ್ರಹಾಂ ಸ್ಟಿವರ್ಟ್ ಸ್ಟೇನ್ಸ್ ಮತ್ತು ಅವರ ಇಬ್ಬರು ಪುತ್ರರಾದ ಫಿಲಿಪ್ಸ್ (9) ಮತ್ತು ತಿಮೋಥಿ (7) ಅವರನ್ನು ಜೀವಂತವಾಗಿ ದಹಿಸಿದ್ದರು.

• ಗೌಡರ ಜತೆ ಚರ್ಚೆಗೆ ಪಟೇಲ್ ನಿಷ್ಠ ಸಚಿವರ ನಕಾರ

ಬೆಂಗಳೂರು, ಜ. 25– ಕೆಲವರನ್ನು ಸಂಪುಟದಿಂದ ಕೈಬಿಡಬೇಕೆಂಬ ವಿಚಾರದ ಹಿನ್ನೆಲೆಯಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರೊಂದಿಗೆ 'ಪ್ರತ್ಯೇಕ'ವಾಗಿ ಮಾತುಕತೆ ನಡೆಸಲು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರಿಗೆ ನಿಷ್ಠರಾಗಿರುವ ಹಿರಿಯ ಒಕ್ಕಲಿಗ ಸಚಿವರು ಸ್ಪಷ್ಟವಾಗಿ ನಿರಾಕರಿಸಿದ್ದಾರೆ.

'ನನ್ನ ನಾಯಕತ್ವದ ವಿರುದ್ಧ ಬಂಡಾಯವೆದ್ದಿರುವ ಒಕ್ಕಲಿಗ ಸಚಿವರುಗಳನ್ನು ನನ್ನ ಬಳಿಗೆ ಕಳುಹಿಸಿ; ನಾನು ಅವರ ಜೊತೆ ಮಾತನಾಡುತ್ತೇನೆ' ಎಂದು ದೇವೇಗೌಡರು ಮುಖ್ಯಮಂತ್ರಿ ಪಟೇಲ್ ಅವರ ಮೂಲಕ ಸಂದೇಶ ಕಳುಹಿಸಿದ್ದರು ಎಂದು ತಿಳಿದುಬಂದಿದೆ.

50 ವರ್ಷಗಳ ಹಿಂದೆ

ಶನಿವಾರ, 26-1-1974

• ಲೆವಿ ಪಡೆವವರೆಗೆ ಅಕ್ರಮ ಸಂಗ್ರಹ ಬೇಡ: ವರ್ತಕರಿಗೆ ಸಚಿವರ ಮನವಿ

ಬೆಂಗಳೂರು, ಜ. 25– ಸರ್ಕಾರ ಉದ್ದೇಶಿಸಿರುವಷ್ಟು ಲೆವಿ ಭತ್ತವನ್ನು ಪಡೆಯುವವರೆಗೆ ಭತ್ತವನ್ನು ಅಕ್ರಮವಾಗಿ ಶೇಖರಿಸಿಡಬಾರದೆಂದು ಆಹಾರ ಸಚಿವ ಕೆ.ಎಚ್. ಪಾಟೀಲರು ಇಂದು ರಾಜ್ಯದ ವರ್ತಕ ವೃಂದಕ್ಕೆ ಮನವಿ ಮಾಡಿದರು.

ತೆರೆದ ಮನಸ್ಸಿನಿಂದ ಹಾಗೂ ಅಷ್ಟೇ ಖಂಡತುಂಡವಾಗಿ ಮಾತನಾಡಿದ ಆಹಾರ ಸಚಿವರು, ಅಕ್ರಮವಾಗಿ ಸಂಗ್ರಹಿಸಿದರೆ ಸರ್ಕಾರದ ತೀವ್ರ ಕ್ರಮ ತಪ್ಪದೆಂದೂ ಎಚ್ಚರಿಕೆ ನೀಡಿದರು.

'ನಿರಪರಾಧಿಗಳನ್ನು ಶಿಕ್ಷಿಸುವ ಇಚ್ಛೆ ನನಗಿಲ್ಲ. ಅಪರಾಧಿಗಳ ಸಂಖ್ಯೆಯನ್ನು ಹೆಚ್ಚಿಸುವ ಬಯಕೆಯೂ ಇಲ್ಲ' ಎಂದು ಸೂಚ್ಯವಾಗಿ ಹೇಳಿ, ಸರ್ಕಾರದೊಡನೆ ಸಹಕರಿಸಬೇಕು ಎಂದು ಕೋರಿದರು.

'ಹಿಂದಿನದ್ದನ್ನು ಬಿಟ್ಟುಬಿಡಿ. ಹಿಂದಿನ ಬಾಬು ನಡೆಯೋದಿಲ್ಲ. ಮಗ ಸಿಕ್ಕಿದರೂ ಕೆ.ಎಚ್.ಪಾಟೀಲ್ ಬಿಡೋದಿಲ್ಲ' ಎಂದು ಸ್ಪಷ್ಟಪಡಿಸಿದರು.

• ವಿ.ಕೆ.ಆರ್.ವಿ. ರಾವ್ ಡಿ.ವಿ.ಜಿ.ಗೆ ಪದ್ಮಭೂಷಣ

ನವದೆಹಲಿ, ಜ. 25– ಕನ್ನಡದ ಖ್ಯಾತ ಸಾಹಿತಿ ಡಾ. ಡಿ.ವಿ.ಗುಂಡಪ್ಪ ಅವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ನೀಡಲಾಗಿದೆ.

ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಕೇಂದ್ರದ ಮಾಜಿ ಸಚಿವ ಡಾ. ವಿ.ಕೆ.ಆರ್.ವಿ. ರಾವ್ ಅವರಿಗೂ ಪದ್ಮಭೂಷಣ ಪ್ರಶಸ್ತಿ ದೊರೆತಿದೆ.

ಚರ್ಚೆ

ಹೋರಾಟಕ್ಕೆ ಬೇಕು ಭಾಷೆಯ ಅಸ್ತ್ರ

ಸಮಸ್ಯೆಗಳ ಕುರಿತು ಸಂವಾದಿಸಬಹುದಾದ ಭಾಷೆಯ ಅಲಭ್ಯತೆ ದಲಿತ ಸಮುದಾಯದ ಯುವಜನರನ್ನು ಹೋರಾಟ ವಿಮುಖರನ್ನಾಗಿಸುತ್ತಿದೆ

ದಲಿತ ಸಂಘರ್ಷ ಸಮಿತಿಗೆ 50 ವರ್ಷಗಳು ತುಂಬಿದ ಸಂದರ್ಭವನ್ನು ಉಲ್ಲೇಖಿಸಿ ಗುರುಪ್ರಸಾದ್ ಕಂಟಲಗೆರೆ ಅವರು ಬರೆದಿರುವ ಲೇಖನವನ್ನು (ಪ್ರ.ವಾ., ಜ. 24) ಓದಿದಾಗ, ಕರ್ನಾಟಕದ ಸಾಮಾಜಿಕ ಚಳವಳಿಗೆ ಹೊಸ ದಿಕ್ಕನ್ನು ಸೂಚಿಸಿದ ಸಮಿತಿ ಮತ್ತು ಅದು ನಿರ್ವಹಿಸಿಕೊಂಡು ಬಂದ ಹೋರಾಟವು ಕಣ್ಣಮುಂದೆ ಹಾದುಹೋಯಿತು.

ಈ ಅವಧಿಯಲ್ಲಿ ದಲಿತರ ಹಕ್ಕು ಮತ್ತು ಆಶಯವನ್ನು ಎತ್ತಿಹಿಡಿಯಲು ಸಮಿತಿ ನಡೆಸಿದ ಬೀದಿ ಹೋರಾಟಗಳು ಅಸಂಖ್ಯ. ಸಮಿತಿಯ ನೂರಾರು ಹೋರಾಟಗಾರರು ವೈಯಕ್ತಿಕ ಬದುಕನ್ನು ತ್ಯಾಗ ಮಾಡಿ ದಲಿತ ಸಮುದಾಯಗಳ ಸಬಲೀಕರಣದಲ್ಲಿ ತೊಡಗಿಕೊಂಡಿದ್ದಾರೆ. ಹಾಗೆ ನೋಡಿದರೆ, ರಾಜ್ಯದಲ್ಲಿ ಇಂದಿಗೂ ದುಡಿಯುವ ಮತ್ತು ವಂಚಿತ ಸಮುದಾಯಗಳ ಹಕ್ಕುಗಳ ಪರವಾಗಿ ಪ್ರಭುತ್ವವನ್ನು ಎದುರಿಸಿ ನಿಂತು ಬೀದಿ ಹೋರಾಟವನ್ನು ರೂಪಿಸುವ ಶಕ್ತಿ ಮತ್ತು ಸಾಮರ್ಥ್ಯ ಇರುವುದು ಮತ್ತು ಆ ರೀತಿಯ ಹೋರಾಟಗಳಲ್ಲಿ ನಿರಂತರವಾಗಿ ತೊಡಗಿಕೊಂಡಿರುವುದು ಎಡ ಚಳವಳಿ ಮತ್ತು ದಲಿತ ಚಳವಳಿ ಮಾತ್ರ ಎನ್ನುವುದನ್ನು ಯಾವ ಸಂದೇಹವೂ ಇಲ್ಲದೆ ಹೇಳಬಹುದಾಗಿದೆ.

ಇಷ್ಟೊಂದು ಸಾಮರ್ಥ್ಯ ಇರುವ ಸಮಿತಿ ಇಂದು ಏಕೆ ಹಿನ್ನಡೆ ಅನುಭವಿಸುತ್ತಿದೆ? ಇಷ್ಟೆಲ್ಲ ಹೋರಾಟದ ಹೊರತಾಗಿಯೂ ಏಕೆ ಪರಿಣಾಮಕಾರಿ ರಾಜಕೀಯ ಶಕ್ತಿಯಾಗಿ ಬೆಳೆಯಲಿಲ್ಲ ಎಂಬ ಪ್ರಾಮಾಣಿಕ ಆತ್ಮವಿಮರ್ಶೆಯೂ ಸಂಘಟನೆಯ ಒಳಗೆ ಮತ್ತು ಹೊರಗೆ ನಡೆದಿದೆ. ಅದಕ್ಕೆ ಉತ್ತರವಾಗಿ, ವರ್ತಮಾನದಲ್ಲಿ ಸಮಿತಿಯ ಹಿನ್ನಡೆಗೆ ಸಂಘಟನೆಯಲ್ಲಿನ ಒಡಕು, ಸಂಪನ್ಮೂಲಗಳ ಅಲಭ್ಯತೆ, ಆಳುವ ಅಧಿಕಾರವು ಪಟ್ಟಭದ್ರರ ಕೈಯಲ್ಲೇ ಇರುವಂತಹ ಅಂಶಗಳನ್ನು ನಾವು ಬಹಳಷ್ಟು ಕಾಲ ಚರ್ಚಿಸಿದ್ದೇವೆ.

ಈ ವಾದಕ್ಕೆ ಒಂದು ಮಿತಿ ಇದೆ. ಏಕೆಂದರೆ ಎಪ್ಪತ್ತರ ದಶಕದಲ್ಲಿ ಸಂಘಟನೆ ರೂಪುಗೊಂಡಾಗ, ಮೇಲೆ ಹೇಳಿದ ಎಲ್ಲಾ ಮಿತಿಗಳು ಇದ್ದವು. ಅವುಗಳ ಹೊರತಾಗಿಯೂ ಸಂಘಟನೆ ಬೆಳೆಯಿತು. ಇದಕ್ಕೆ ಕಾರಣ ಎಂದರೆ, ಆಗ ಸಮಿತಿ ತನ್ನ ಸಂಘಟನೆ ಮತ್ತು ಅದನ್ನು ಆಧರಿಸಿದ ಸಾಹಿತ್ಯಕ ಚಳವಳಿಯನ್ನು ಕಟ್ಟಿದ ನಿರೂಪಣೆ ಜನರನ್ನು ತಾಕಿದ್ದವು. ಅಂದರೆ, ಸಮಿತಿಯು ಆಗ ಜನರೊಂದಿಗೆ ಸಂವಾದಿಸಲು ಬಳಸುತ್ತಿದ್ದ ನುಡಿಗಟ್ಟು ಜನರ ದಿನನಿತ್ಯದ ಬವಣೆಗಳನ್ನು ಪ್ರತಿನಿಧಿಸುತ್ತಿತ್ತು.

ಇಂದು ಹಾಗೆ ಆಗುತ್ತಿಲ್ಲ. ಇದಕ್ಕಿರುವ ಮುಖ್ಯ ಕಾರಣ, ಸಮಿತಿಯು ಬೀದಿ ಹೋರಾಟಗಳ ಜೊತೆ ಜೊತೆಗೆ ನಿರ್ವಹಿಸಬೇಕಾಗಿದ್ದ ಬೌದ್ಧಿಕ, ಸಾಂಸ್ಕೃತಿಕ ಚಳವಳಿಯನ್ನು ಯಾವ ಪ್ರಮಾಣದಲ್ಲಿ ನಿರ್ವಹಿಸಬೇಕಿತ್ತೋ ಆ ಪ್ರಮಾಣದಲ್ಲಿ ನಿರ್ವಹಿಸದೇ ಹೋದದ್ದು ಅನ್ನಿಸುತ್ತದೆ. ಇಂದು ಉದಾರೀಕರಣ ಮತ್ತು ಖಾಸಗೀಕರಣದಂಥ ನೀತಿಗಳ ಅವೈಜ್ಞಾನಿಕ ಜಾರಿಯ ಕಾರಣಕ್ಕೆ ಸೃಷ್ಟಿಯಾಗಿರುವ ಕಳಪೆ ದರ್ಜೆಯ ಉದ್ಯೋಗಗಳನ್ನು ನಿರ್ವಹಿಸುತ್ತಿರುವ ಬಹುತೇಕರು ದಲಿತ ಸಮುದಾಯಕ್ಕೆ ಸೇರಿದವರು ಎನ್ನುವ ವಾಸ್ತವವೂ ನಮ್ಮ ಮುಂದಿದೆ.

ಕಾಲದೊಂದಿಗೆ ಮನುಷ್ಯ ಶೋಷಣೆಯ ಸ್ವರೂಪ ಬದಲಾಗುತ್ತಿರುವ ಈ ಸಮಯದಲ್ಲಿ, ಈ ಕಾಲಕ್ಕೆ ಅಗತ್ಯವಾದ ಸಾಂಸ್ಕೃತಿಕ ರಾಜಕಾರಣ ಮತ್ತು ಭಾಷೆಯೊಂದನ್ನು ರೂಪಿಸುವಲ್ಲಿ ಹಿಂದಿದ್ದೇವೆ ಅನ್ನಿಸುತ್ತದೆ. ಉದಾಹರಣೆಗೆ, ಇಂದು ಬೀದಿಯಲ್ಲಿ ನಿಂತು ದಲಿತ ಸಮುದಾಯಗಳ ವರ್ತಮಾನದ ಬವಣೆಗಳ ಕುರಿತು ಮಾತನಾಡುತ್ತಿರುವ ಹೋರಾಟಗಾರನಿಗೆ ಲಭ್ಯವಿರುವುದು 70–80ರ ದಶಕದಲ್ಲಿ ದಲಿತ ಸಂಘರ್ಷ ಸಮಿತಿ ಕಟ್ಟಿಕೊಟ್ಟಿರುವ ಸಂಕಥನ ಮತ್ತು ಭಾಷೆಯೇ ಆಗಿದೆ! ಅದು ಎಷ್ಟೇ ಆಪ್ತವಾಗಿದ್ದರೂ ಎಷ್ಟೇ ಸೃಜನಶೀಲವಾಗಿದ್ದರೂ ಈ ಕಾಲಕ್ಕೆ ಅಗತ್ಯವಾದ ಮಾರ್ಪಾಡಿಗೆ ಒಳಗಾಗಿಲ್ಲ ಎಂಬ ವಾಸ್ತವವನ್ನು ನಾವು ಗ್ರಹಿಸಿಕೊಂಡು ಮುಂದಕ್ಕೆ ಹೋಗಬೇಕಿದೆ.

ಈ ಸಾಂಸ್ಕೃತಿಕ ರಾಜಕಾರಣದ ಕೊರತೆಯ ಕಾರಣಕ್ಕೆ, 21ನೇ ಶತಮಾನದ ಸವಾಲುಗಳಿಗೆ ಎದುರಾಗುತ್ತಿರುವ ದಲಿತ ಸಮುದಾಯದ ಯುವಜನರು 'ಸಾಂಸ್ಕೃತಿಕ ಅನಾಥಪ್ರಜ್ಞೆ'ಯನ್ನು ಅನುಭವಿಸುತ್ತಿದ್ದಾರೆ. ಇತ್ತ ಆಧುನಿಕವೂ ಅಲ್ಲದ ಅತ್ತ ಸಾಂಪ್ರದಾಯಿಕವೂ ಅಲ್ಲದ ಸಮಾಜವೊಂದರಲ್ಲಿ ಗಟ್ಟಿಯಾಗಿ ನಿಂತು ತಮ್ಮ ಸಮಸ್ಯೆಗಳ ಕುರಿತು ಸಂವಾದಿಸಬಹುದಾದ ಭಾಷೆಯ ಅಲಭ್ಯತೆ ಅವರನ್ನು ಹೋರಾಟ ವಿಮುಖರನ್ನಾಗಿಸುತ್ತಿದೆ ಅಥವಾ ಹೋರಾಟದ ಕುರಿತು ನಿರ್ಲಿಪ್ತ ಭಾವವೊಂದು ಆವರಿಸುತ್ತಿದೆ. ಇದರ ಪರಿಣಾಮವಾಗಿ, ಮೂಲಭೂತವಾದಿಗಳು ರೂಪಿಸುತ್ತಿರುವ 'ಸಾಂಸ್ಕೃತಿಕ ನಿರೂಪಣೆ'ಗಳನ್ನು ಅವರು ಅಪ್ಪುತ್ತಿದ್ದಾರೆ. ಈ ಮೂಲಭೂತವಾದಿ ಧೋರಣೆಗಳ ಅಂತಿಮ ಬಲಿಪಶುಗಳು ಅವರೇ ಎಂದು ಅವರಿಗೆ ಅರಿವಾಗುವಷ್ಟರಲ್ಲಿ ಕಾಲ ಮಿಂಚಿಹೋಗಿರಲಿದೆ ಅನ್ನಿಸುತ್ತದೆ.

ಹಾಗಾಗಿ, 21ನೇ ಶತಮಾನದ ಸಮಸ್ಯೆಗಳನ್ನು ಎದುರಿಸಲು ಬೇಕಾದ ತಿಳಿವು ಯಾವುದು, ಅದನ್ನು ಯಾವ ಯಾವ ಚಿಂತನೆಯಿಂದ ಪಡೆಯಬಹುದು, ಸಾಂಸ್ಕೃತಿಕ ಅನಾಥಪ್ರಜ್ಞೆಯನ್ನು ಎದುರಿಸುತ್ತಿರುವ ಯುವಜನರ ಮುಂದೆ ಅವುಗಳನ್ನು ಚರ್ಚಿಸುವ ಭಾಷೆ ಯಾವುದು ಎಂಬ ಸಂಗತಿಗಳ ಆತ್ಮವಿಮರ್ಶೆಯ ಅಗತ್ಯವೊಂದಿದೆ. ಇಲ್ಲವಾದರೆ, ಹೆಚ್ಚುತ್ತಿರುವ ಸಂಪ್ರದಾಯವಾದಿ ಮತ್ತು ಮೂಲಭೂತವಾದಿ ನಿಲುವುಗಳು ಶೋಷಿತರ ನಡುವಿನ ಈ ಸಾಂಸ್ಕೃತಿಕ ಅನಾಥಪ್ರಜ್ಞೆಯನ್ನು ಬಳಸಿಕೊಂಡು ಅವರನ್ನೇ ಪರಸ್ಪರ ವಿರುದ್ಧವಾಗಿ ಹೋರಾಡಲು ಹಚ್ಚಿ, ನಮ್ಮ 'ಸಾಮಾಜಿಕ ವ್ಯವಸ್ಥೆ'ಯನ್ನು ಹಿಂದಕ್ಕೆ ಒಯ್ಯುವ ಮತ್ತು ಅದನ್ನು ಎಲ್ಲರಿಗೂ ಒಪ್ಪಿಸಿ ಜನರನ್ನು ಆಳುವ ಎಲ್ಲಾ ಸಾಧ್ಯತೆಗಳು ಇವೆ.

ಕಿರಣ್ ಎಂ. ಗಾಜನೂರು

ಶ್ರೀನಿವಾಸ ಡಿ. ಮಣಗಳ್ಳಿ, ಕಲಬುರಗಿ

ವಾಚಕರ ವಾಣಿ

ಸಂವಿಧಾನ ಪೀಠಿಕೆ ಓದು: ನಡೆಯಲಿ ಅಭಿಯಾನ

ಗಣರಾಜ್ಯೋತ್ಸವ ಆಚರಣೆಯು ಭಾರತೀಯರ ಪಾಲಿಗೆ ಬಹಳ ಮುಖ್ಯವಾದುದು. ದೇಶವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದರೂ ಅದರ ಮೌಲ್ಯಗಳು ಕ್ರಮೇಣ ಕಣ್ಮರೆಯಾಗುತ್ತಿರುವುದು ದುರ್ದೈವ. ಪ್ರಜಾಪ್ರಭುತ್ವ ವ್ಯವಸ್ಥೆ ಹೇಗೆ ಸಾಗಬೇಕೆಂಬುದನ್ನು ಸಂವಿಧಾನವು ಸ್ಪಷ್ಟವಾಗಿ ಹೇಳಿದೆ. ಸಂವಿಧಾನ ಈ ದೇಶದ ಆತ್ಮ ಇದ್ದ ಹಾಗೆ. ಸಂವಿಧಾನದ ಆಶಯಗಳು ನಿಜವಾದ ಅರ್ಥದಲ್ಲಿ ಈಡೇರಿವೆಯೇ ಎಂಬುದನ್ನು ನಾವು ಎಚ್ಚರಿಕೆಯಿಂದ ಗಮನಿಸಬೇಕಿದೆ. ಉತ್ತಮ ಸಮಾಜ ನಿರ್ಮಾಣಕ್ಕೆ ಸಂವಿಧಾನವು ದಿಕ್ಸೂಚಿ, ದಾರಿದೀಪ ಇದ್ದ ಹಾಗೆ. ರಾಜಕೀಯದಲ್ಲಿ ಇಂದು ಮೌಲ್ಯಗಳು ಮರೆಯಾಗುತ್ತಿವೆ. ಪ್ರಜೆಗಳು ಮತ್ತು ಜನಪ್ರತಿನಿಧಿಗಳು ತಮ್ಮ ಜವಾಬ್ದಾರಿಗಳನ್ನು ಮರೆತಿದ್ದಾರೆ. ಇದರಿಂದ ಹೊರಬಂದು ಜನರು ಉತ್ತಮ ನಾಗರಿಕರಾಗಬೇಕು. ಉತ್ತಮ ಸಮಾಜ ನಿರ್ಮಾಣವಾಗಬೇಕು.

ಕೆಲ ದಿನಗಳ ಹಿಂದೆ ಸರ್ಕಾರ ಆಯೋಜಿಸಿದ್ದ 'ಸಂವಿಧಾನ ಪೀಠಿಕೆ ಓದು' ವಿಶೇಷ ಅಭಿಯಾನವು ಶಾಲಾ ಕಾಲೇಜುಗಳಲ್ಲಿ ನಿಯಮಿತವಾಗಿ ನಡೆಯಬೇಕಾದುದು ಒಂದು ರಾಷ್ಟ್ರೀಯ ಅಗತ್ಯ. ಶಾಲಾ ಹಂತದಲ್ಲೇ ಮಕ್ಕಳಿಗೆ ಸಂವಿಧಾನದ ಬಗ್ಗೆ ಅರಿವು ಮೂಡಿಸಿದ್ದೇ ಆದಲ್ಲಿ, ಅವರು ಉತ್ತಮ ನಾಗರಿಕರಾಗುತ್ತಾರೆ.

ಪ್ರಸಾದ್ ಜಿ.ಎಂ., ಮೈಸೂರು

ಜನರೇ ತಿರಸ್ಕರಿಸಿ ಬುದ್ಧಿ ಕಲಿಸಲಿ

ಈ ಬಾರಿಯ ವಿಧಾನಸಭಾ ಚುನಾವಣೆಗೆ ಹುಬ್ಬಳ್ಳಿಯಿಂದ ಬಿಜೆಪಿ ಟಿಕೆಟ್ ನಿರಾಕರಿಸಲಾಯಿತು ಎಂದು ಕೋಪಗೊಂಡ ಜಗದೀಶ ಶೆಟ್ಟರ್ ಅವರು ಕಾಂಗ್ರೆಸ್ ಸೇರಿದ್ದು ಮತ್ತು ಆ ಪಕ್ಷದಿಂದ ಸ್ಪರ್ಧಿಸಿ ಸೋತು ಅದೇ ಪಕ್ಷದಿಂದ ವಿಧಾನ ಪರಿಷತ್ತಿನ ಸದಸ್ಯರಾಗಿದ್ದು ರಾಜ್ಯದ ಜನತೆಗೆ ಗೊತ್ತಿರುವ ವಿಚಾರ. ಆ ಸಂದರ್ಭದಲ್ಲಿ, ಬಿಜೆಪಿಯಿಂದ ನಾನಾ ಸ್ಥಾನಗಳನ್ನು ಅಲಂಕರಿಸಿ, ತಾವು ಮುಖ್ಯಮಂತ್ರಿ ಸ್ಥಾನಕ್ಕೆ ಏರಿದ್ದುದನ್ನೂ ಮರೆತು ಆ ಪಕ್ಷವನ್ನು ವಾಚಾಮಗೋಚರವಾಗಿ ನಿಂದಿಸಿದ್ದರು. ತದನಂತರ ವೈಭವೋಪೇತವಾಗಿ ಶೆಟ್ಟರ್ ಅವರನ್ನು ಕಾಂಗ್ರೆಸ್ ಬರಮಾಡಿಕೊಂಡಿತ್ತು.

ಈಗ ಅದೇ ಶೆಟ್ಟರ್ ಅವರು ಅದಾವ ಕಾರಣದಿಂದಲೋ ಏನೋ ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಬಿಜೆಪಿಗೆ ವಾಪಸಾಗಿದ್ದಾರೆ. ಬಿಜೆಪಿಯಿಂದ ಬಂದ ಶೆಟ್ಟರ್ ಅವರು ಚುನಾವಣೆಯಲ್ಲಿ ಸೋತರೂ ಕಾಂಗ್ರೆಸ್ ಪಕ್ಷ ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿತ್ತು. ಆ ಋಣವಾದರೂ ಕಾಂಗ್ರೆಸ್ ವಿಚಾರದಲ್ಲಿ ಇರಬೇಕಿತ್ತು. ಆದರೆ ಆ ಕನಿಷ್ಠ ನಿಷ್ಠೆಯನ್ನೂ ತೋರದೆ ಅವರು ಪಕ್ಷಾಂತರ ಮಾಡಿದ್ದಾರೆ. ಇಂತಹ ಇಬ್ಬಗೆಯ ಜನಪ್ರತಿನಿಧಿಗಳನ್ನು ಪಕ್ಷಗಳು ಹೇಗೆ ನಂಬುತ್ತವೋ? ಬರೀ ಆರೆಂಟು ತಿಂಗಳಿಗೇ ಪಕ್ಷಗಳನ್ನು ಅಂಗಿಯಂತೆ ಬದಲಾಯಿಸುತ್ತಾ ಸಾಗುವ ಇಂತಹವರಿಗೆ ಪಕ್ಷದ ಸಿದ್ಧಾಂತದಂತೆ ಕೆಲಸ ಮಾಡಲು ಸಾಧ್ಯವೇ? ಬರೀ ಅಧಿಕಾರಕ್ಕಾಗಿ ಪಕ್ಷಾಂತರಗೊಳ್ಳುವ ಇಂತಹವರನ್ನು ಜನರೇ ತಿರಸ್ಕರಿಸಿ ಬುದ್ಧಿ ಕಲಿಸಬೇಕು ಅಷ್ಟೆ. ಮೇಲಾಗಿ, ಚುನಾವಣಾ ಆಯೋಗ ಕೂಡ, ಪಕ್ಷದ ಸದಸ್ಯತ್ವ ಪಡೆದ ಆರು ವರ್ಷಗಳ ನಂತರವಷ್ಟೇ ಆ ಪಕ್ಷದ ವತಿಯಿಂದ ಚುನಾವಣೆಗೆ ಸ್ಪರ್ಧಿಸಲು ಅನುವಾಗುವಂತೆ ನಿಯಮ ತಂದಲ್ಲಿ ಪಕ್ಷಾಂತರದ ಇಂತಹ ಅಪಸವ್ಯಗಳಿಗೆ ಕಡಿವಾಣ ಬೀಳಬಹುದು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಶ್ರದ್ಧೆ ಇದ್ದರೆ ಉಪವಾಸ ಸುಲಭ

'ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು 11 ದಿನಗಳ ಉಪವಾಸ ವ್ರತ ನಡೆಸಿದ್ದರು ಎನ್ನಲಾಗುತ್ತದೆ. ಆದರೆ, ಇಷ್ಟು ದಿನ ಉಪವಾಸ ಮಾಡಿದರೆ ಬದುಕಲು ಸಾಧ್ಯವಿಲ್ಲ ಎಂದು ವೈದ್ಯರು ಹೇಳಿದ್ದಾರೆ' ಎಂಬ ಕಾಂಗ್ರೆಸ್ ನಾಯಕ ಎಂ.ವೀರಪ್ಪ ಮೊಯಿಲಿ ಅವರ ಮಾತು ಒಪ್ಪತಕ್ಕದ್ದಲ್ಲ. ನಮ್ಮ ದೇಶದ ಅನೇಕ ಧಾರ್ಮಿಕ ಆಚರಣೆಗಳನ್ನು ಉಪವಾಸ ಇದ್ದುಕೊಂಡೇ ಆಚರಿಸಲಾಗುತ್ತದೆ ಎಂಬ ವಿಷಯ ಮೊಯಿಲಿ ಅವರಿಗೆ ಗೊತ್ತಿಲ್ಲವೇ? ಜೈನ ಸಮುದಾಯದಲ್ಲಿ ಉಪವಾಸದ ಕಠಿಣ ನಿಯಮಗಳಿವೆ. ದಿಗಂಬರ ಜೈನ ಮುನಿಗಳು ತಿಂಗಳು ಅಥವಾ ಎರಡು ತಿಂಗಳಿಗೆ ಒಂದು ಬಾರಿ ಮಾತ್ರ ಆಹಾರ ಸ್ವೀಕರಿಸಿದ ಉದಾಹರಣೆಗಳಿವೆ. ಭಾದ್ರಪದ ಮಾಸದಲ್ಲಿ ಜೈನರು ಆಚರಿಸುವ ಷೋಡಶಕಾರಣ ಹಾಗೂ ದಶಲಕ್ಷಣ ಪರ್ವಗಳೆಂಬ ಹಬ್ಬಗಳಲ್ಲಿ ವ್ರತಧಾರಿಗಳು 16 ಅಥವಾ 11 ದಿನಗಳ ಉಪವಾಸ ಕೈಗೊಳ್ಳುತ್ತಾರೆ. ಇವರಲ್ಲಿ ದಿಗಂಬರ ಸಂಪ್ರದಾಯದವರು ಉಪವಾಸದ ಅವಧಿಯಲ್ಲಿ ಒಂದೇ ಒಂದು ಹನಿ ನೀರನ್ನೂ ಸೇವಿಸುವುದಿಲ್ಲ, ಶ್ವೇತಾಂಬರರಲ್ಲಿ ನೀರು ಮಾತ್ರ ಸೇವನೆ ಮಾಡುತ್ತಾರೆ. ಉಪವಾಸ ಮಾಡುವುದು ಶ್ರದ್ಧೆ ಇರುವವರಿಗೆ ಸುಲಭವೇ ಆಗಿರುತ್ತದೆ.

ಶಾಂತಿನಾಥ ಕೆ. ಹೋತಪೇಟಿ, ಹುಬ್ಬಳ್ಳಿ

ರೈತರ ವಿಷಯದಲ್ಲಿ 'ಜಾಣತನ' ಸಲ್ಲ

ಬರ ಪರಿಹಾರದ ನೆರವು ಬೇಕಾದರೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಹೆಸರಿನಲ್ಲಿ ಜಂಟಿಯಾಗಿ ಬ್ಯಾಂಕ್‌ನಲ್ಲಿ ಖಾತೆ ತೆರೆಯಬೇಕು ಎಂದು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ಹೇಳಿರುವುದು ವರದಿಯಾಗಿದೆ (ಪ್ರ.ವಾ., ಜ. 25). ರಾಜ್ಯ ವಿಧಾನಮಂಡಲವು ಅಂಗೀಕರಿಸಿದ ಮಸೂದೆಗಳಿಗೆ ರಾಜ್ಯಪಾಲರು ಸಹಿ ಮಾಡುತ್ತಿಲ್ಲವೆಂದು ಬೇರೆ ಬೇರೆ ರಾಜ್ಯಗಳಲ್ಲಿ ಪ್ರಾರಂಭವಾಗಿರುವ ತಿಕ್ಕಾಟದಂತೆ, ಜಂಟಿ ಖಾತೆ ತೆರೆಸಿ ಹಣ ಬಿಡುಗಡೆ ಮಾಡಬೇಕೆನ್ನುವ ತೀರ್ಮಾನವೂ ಪರಸ್ಪರ ಸಂಘರ್ಷಕ್ಕೆ ಕಾರಣವಾಗುತ್ತದೆ.

ಕೊಟ್ಟಂತೆಯೂ ಇರಬೇಕು, ಕೊಡದೆಯೂ ಇರಬೇಕು ಎನ್ನುವ ಜಾಣತನದ ಪ್ರದರ್ಶನದಿಂದ, ಸಂಕಷ್ಟದಲ್ಲಿರುವ ಯಾವ ರೈತರಿಗೂ ಪ್ರಯೋಜನ ಆಗುವುದಿಲ್ಲ. ಜೇನುಹುಳುಗಳೇ ಸಂಗ್ರಹಿಸಿದ ತುಪ್ಪ, ಆ ಹುಳುಗಳು ಹಸಿದಾಗ ತಿನ್ನಲಾಗದೆ ಮನುಷ್ಯನ ದುರಾಸೆಯಿಂದ ಬಾಟಲಿ ಸೇರಿದಂತೆ ರೈತರ ಸ್ಥಿತಿ ಆಗಿರುವುದು ವಿಪರ್ಯಾಸ. ಅಪ್ಪ ಅಮ್ಮನ ಜಗಳದಲ್ಲಿ ಕೂಸು ಬಡವಾಗದಿರಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ರೈಲ್ವೆ ನಷ್ಟಕ್ಕೆ ಇಲ್ಲಿದೆ ಉತ್ತರ!

ಕೊಂಕಣ ರೈಲ್ವೆ ವಿಭಾಗವು ಟಿಕೆಟ್‌ರಹಿತ ಪ್ರಯಾಣಿಕರಿಂದ 2023ರ ಡಿಸೆಂಬರ್ ತಿಂಗಳೊಂದರಲ್ಲೇ ₹ 1.95 ಕೋಟಿ ದಂಡ ವಸೂಲು ಮಾಡಿದೆ. ಅದೇರೀತಿ, ನೈರುತ್ಯ ರೈಲ್ವೆ ವಿಭಾಗ ಮತ್ತು ಬೆಂಗಳೂರು ವಿಭಾಗಗಳಲ್ಲೂ ಟಿಕೆಟ್ ರಹಿತ ಪ್ರಯಾಣಕ್ಕಾಗಿ ಕೋಟ್ಯಂತರ ರೂಪಾಯಿ ದಂಡ ವಸೂಲು ಮಾಡಿರುವುದಾಗಿ ವರದಿಯಾಗಿದೆ.

ಇದಕ್ಕೆ ಹೊರತಾಗಿ, ದಂಡ ಕೊಡದೆ ತಪ್ಪಿಸಿಕೊಂಡ ಮತ್ತು ಹೊಂದಾಣಿಕೆ ಮಾಡಿಕೊಂಡ ಪ್ರಕರಣಗಳಲ್ಲಿ ಇನ್ನೂ ಎಷ್ಟು ಮೊತ್ತದ ದಂಡ ವಸೂಲಾಗುತ್ತಿತ್ತೋ? ಇದು, ಭಾರತೀಯ ರೈಲ್ವೆಯು ಸರ್ಕಾರದ ನಿರೀಕ್ಷೆಯಷ್ಟು ಲಾಭವನ್ನು ಗಳಿಸುತ್ತಿಲ್ಲವೇಕೆ ಎನ್ನುವ ಪ್ರಶ್ನೆಗೆ ಉತ್ತರ ಇರಬಹುದು. ಇದರೊಂದಿಗೆ, ದೇಶದಲ್ಲಿ ಪ್ರಾಮಾಣಿಕತೆ ಪಾತಾಳಕ್ಕೆ ಇಳಿದಿರುವುದನ್ನು ಸಹ ತೋರಿಸುತ್ತದೆ.

ರಮಾನಂದ ಶರ್ಮಾ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮರೆಯುತ್ತಿದೆಯೇ ಝೇಂಕಾರ?

ಭಾರತ ಮತ್ತು ಅಮೆರಿಕದಲ್ಲಿನ ಸಮಸ್ಯೆಗಳ ನೋಟ

ಕುಲಾಂತರಿ ತಳಿಗಳು ಮತ್ತು ಕೃಷಿಯಲ್ಲಿ ಅತಿಯಾದ ರಾಸಾಯನಿಕಗಳ ಬಳಕೆಯಿಂದಾಗಿ ಜೇನು ನೊಣಗಳು ಭಾರಿ ಸಂಖ್ಯೆಯಲ್ಲಿ ಸಾಯುತ್ತಿವೆ ಎಂಬ ಕಳವಳಕಾರಿ ಅಂಶ ಅಧ್ಯಯನಗಳಿಂದ ತಿಳಿದು ಬಂದಿದೆ. ಅಮೆರಿಕದಲ್ಲಿ ಈ ಕುರಿತು ಹಲವು ಅಧ್ಯಯನಗಳು ನಡೆದಿವೆ. ಹಾಗಾಗಿ, ಜೇನು ನೊಣಗಳ ಸಾವಿನ ಪ್ರಮಾಣ ಮತ್ತು ಅದಕ್ಕೆ ಕಾರಣ ತಿಳಿದು ಬಂದಿದೆ. ಭಾರತದಲ್ಲಿಯೂ ಪರಿಸ್ಥಿತಿ ಅದೇ ರೀತಿ ಇದ್ದರೂ ಇಲ್ಲಿ ಹೆಚ್ಚು ಅಧ್ಯಯನಗಳು ನಡೆದಿಲ್ಲ. ಜೇನು ನೊಣಗಳು ಎದುರಿಸುತ್ತಿರುವ ಸಂಕಷ್ಟಗಳ ವಿವರಗಳು ಇಲ್ಲಿವೆ

ಪ್ರಜಾವಾಣಿ ವಾರ್ತೆ

ಕುಲಾಂತರಿ ಸಾಸಿವೆಯ ಕುರಿತು ದೇಶದಲ್ಲಿ ಚರ್ಚೆ ನಡೆಯುತ್ತಿದೆ. ಇದನ್ನು ತೆರೆದ ಪರಿಸರದಲ್ಲಿ ಬೆಳೆಯುವುದು ಹಾಗೂ ದೊಡ್ಡ ಪ್ರಮಾಣದಲ್ಲಿ ಬೆಳೆಯುವ ಕುರಿತು ಸುಪ್ರೀಂ ಕೋರ್ಟ್‌ನ ಮುಂದೆ ಅರ್ಜಿಗಳಿವೆ. ಈ ಅರ್ಜಿಗಳ ವಿಚಾರಣೆ ವೇಳೆ, 'ಕುಲಾಂತರಿ ಸಾಸಿವೆಯಿಂದಾಗಿ ಜೇನು ನೊಣಗಳು ಮಕರಂದ ಹೀರಲು ಹೆಚ್ಚು ಶ್ರಮವಹಿಸಬೇಕಾಗುತ್ತದೆ ಎಂದಿರುವ ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ (ಐಸಿಎಆರ್) ವರದಿಯನ್ನು ಯಾಕೆ ಪರಿಗಣಿಸಿಲ್ಲ' ಎಂದು ಕೇಂದ್ರ ಸರ್ಕಾರವನ್ನು ಕೆಲವು ದಿನಗಳ ಹಿಂದೆ ಪ್ರಶ್ನಿಸಿದೆ. ಇದೇ ವೇಳೆ, ಅಮೆರಿಕದಲ್ಲಿ ಜೇನು ನೊಣಗಳ ಸಾಮೂಹಿಕ ಸಾವಿನ ಕುರಿತು ಅಲ್ಲಿನ ಕೃಷಿ ಸಚಿವಾಲಯ ವರದಿಯೊಂದನ್ನು ಬಿಡುಗಡೆ ಮಾಡಿದೆ. 'ಇರುವೆಗಳು ಹಾಗೂ ಗೆದ್ದಲುಗಳು ಬರದಂತೆ ತಡೆಯಲು ಬಳಸುವ ರಾಸಾಯನಿಕದ ಕಾರಣದಿಂದಾಗಿ ಸಾವು ಸಂಭವಿಸದೆ' ಎಂದು ಅದು ಹೇಳಿದೆ.

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಸ್ಯಾನ್ ಡಿಯೇಗೊ ಜೇನು ನೊಣ ಸಂರಕ್ಷಣಾ ತಾಣದಲ್ಲಿ ಸುಮಾರು 24 ತಾಸುಗಳ ಅಂತರದಲ್ಲಿ ಸುಮಾರು 30 ಲಕ್ಷ ಜೇನು ನೊಣಗಳು ಅಂದರೆ, ತಾಣದಲ್ಲಿದ್ದ ಒಟ್ಟು ನೊಣಗಳಲ್ಲಿ ಶೇ 95ರಷ್ಟು ಜೇನು ನೊಣಗಳು ಸತ್ತುಬಿದ್ದಿದ್ದವು. 'ಉದ್ದೇಶಪೂರ್ವಕವಾಗಿಯೇ ಜೇನು ನೊಣಗಳಿಗೆ ವಿಷ ಉಣಿಸಲಾಗಿದೆ' ಎಂದು ಸಂರಕ್ಷಣಾ ತಾಣದ ಅಧಿಕಾರಿಗಳು ಅಲ್ಲಿನ ಕೃಷಿ ಸಚಿವಾಲಯಕ್ಕೆ ದೂರು ನೀಡಿದ್ದರು. ಈ ಬಗ್ಗೆ ಸಚಿವಾಲಯವು ನೇಮಿಸಿದ ತಜ್ಞರ ತಂಡವು ಹಲವು ತಿಂಗಳ ಅಧ್ಯಯನ ನಡೆಸಿದ ಬಳಿಕ ಇತ್ತೀಚೆಗೆ ವರದಿ ಬಿಡುಗಡೆ ಮಾಡಿದೆ. 'ಇರುವೆ ಹಾಗೂ ಗೆದ್ದಲನ್ನು ನಾಶಪಡಿಸುವ ಫಿಪ್ರೊನಿಲ್ ಎನ್ನುವ ರಾಸಾಯನಿಕದಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜೇನು ನೊಣಗಳು ಸತ್ತಿವೆ' ಎಂದು ಹೇಳಿದೆ. ಆದರೆ, ಈ ರಾಸಾಯನಿಕದ ಸಂಪರ್ಕಕ್ಕೆ ಜೇನು ನೊಣಗಳಗಳು ಹೇಗೆ ಬಂದವು ಎನ್ನುವ ಕುರಿತು ತಜ್ಞರ ತಂಡಕ್ಕೆ ಪತ್ತೆ ಮಾಡಲು ಸಾಧ್ಯವಾಗಿಲ್ಲ. ಆದರೆ, ಯುಸಿ ಸ್ಯಾನ್ ಡಿಯೇಗೊ ವಿಶ್ವವಿದ್ಯಾಲಯದ ಪ್ರೊಫೆಸರ್ ಆಗಿರುವ ಜೇಮ್ಸ್ ನೀಹ್ ಅವರು ಕೆಲವು ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಇವರು ತಜ್ಞರ ತಂಡದಲ್ಲಿಯೂ ಇದ್ದರು.

'ಫಿಪ್ರೊನಿಲ್ ಎನ್ನುವ ರಾಸಾಯನಿಕವನ್ನು ಕಟ್ಟಡ ನಿರ್ಮಾಣದಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಹೀಗೆ ಬಳಕೆಯಾದ ರಾಸಾಯನಿಕವು ನೀರಿನ ಮೂಲದ ಸಂಪರ್ಕಕ್ಕೆ ಬಂದಿರಬಹುದು. ಜೇನು ನೊಣಗಳು ಆ ನೀರು ಕುಡಿದಿರಬಹುದು' ಎಂದು ಜೇಮ್ಸ್ ನೀಹ್ ಅವರು ಊಹಿಸಿದ್ದಾರೆ. 'ಜೇನು ಪೆಟ್ಟಿಗೆಯನ್ನು ಇರುವೆ ಮುತ್ತಬಾರದು ಎನ್ನುವ ಕಾರಣಕ್ಕೆ ಫಿಪ್ರೊನಿಲ್ ಅನ್ನು ಪೆಟ್ಟಿಗೆಗೆ ಬಳಿಯಲಾಗುತ್ತದೆ. ಆದರೆ, ನಾವು ಇದನ್ನು ಬಳಸುವುದಿಲ್ಲ. ಸ್ವಲ್ಪಪ್ರಮಾಣದಲ್ಲಿ ಬಳಸುವ ಪರಿಪಾಟ ಇದೆ' ಎನ್ನುತ್ತಾರೆ ಜೇನು ನೊಣ ಸಂರಕ್ಷಣಾ ತಾಣದ ಸಹ ಮಾಲೀಕ ಪಾಲ್ ಗನ್.

ಭಾರತದಲ್ಲಿ ಜೋನು ನೊಣಗಳ ಸ್ಥಿತಿಯು ಇದಕ್ಕೆ ಹೊರತಾಗಿಲ್ಲ. ಕೃಷಿಯಲ್ಲಿನ ಅತಿಯಾದ ರಾಸಾಯನಿಕ ಬಳಕೆಯಿಂದಾಗಿ ಜೇನು ನೊಣವೂ ಸೇರಿದಂತೆ ಪರಾಗಸ್ಪರ್ಶ ಜೀವಿಗಳ ಸಂಖ್ಯೆ ಇಳಿಮುಖವಾಗುತ್ತಿದೆ. ಕುಲಾಂತರಿ ಹತ್ತಿಯ ಕಾರಣಕ್ಕೆ ಜೇನು ನೊಣಗಳ ಸಂಖ್ಯೆ ಇಳಿಯುತ್ತಿದೆ ಎಂದು ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯ ಪ್ರದೇಶ ಹಾಗೂ ಹರಿಯಾಣದ ರೈತರು ಹಾಗೂ ಜೇನು ನೊಣ ಸಾಕಣೆದಾರರು ದೂರುತ್ತಿದ್ದಾರೆ.

ಅಮೆರಿಕವು ತನ್ನ ಕೃಷಿ ಭೂಮಿಯನ್ನು ಹೆಚ್ಚಿಸಿಕೊಂಡಿದೆ. ಅದಕ್ಕೆ ಬಳಸುವ ರಾಸಾಯನಿಕದ ಪ್ರಮಾಣವನ್ನೂ ಹೆಚ್ಚಿಸಿಕೊಂಡಿದೆ. 2022ರಲ್ಲಿ ನಡೆದ ಅಧ್ಯಯನವೊಂದರ ಪ್ರಕಾರ, ಕಳೆದ 25 ವರ್ಷಗಳಿಗೆ ಹೋಲಿಸಿದರೆ, ಇತ್ತೀಚೆಗೆ ರಾಸಾಯನಿಕಗಳನ್ನು ಬಳಸುತ್ತಿರುವ ಪ್ರಮಾಣವು ಅಮೆರಿಕದಲ್ಲಿ ಶೇ 140ರಷ್ಟು ಏರಿಕೆಯಾಗಿದೆ. ಬಾದಾಮಿ ಹಾಲಿನ ಉತ್ಪಾದನೆಯು ಅಮೆರಿಕದ ಮುಖ್ಯ ರಫ್ತು ವಸ್ತುಗಳಲ್ಲಿವೊಂದು. ಇದರ ಪ್ರಮಾಣವನ್ನು ಹೆಚ್ಚಿಸಿಕೊಳ್ಳಲು ನಿಯೊ ನಿಕೋಟಿನಾಯ್ಡ್ಸ್ ಹಾಗೂ ಗ್ಲಿಫೋಸೇಟ್ ರಾಸಾಯನಿಕವನ್ನು ಬಳಸುವುದನ್ನು ಹೆಚ್ಚಿಗೆ ಮಾಡಿಕೊಳ್ಳಲಾಗಿದೆ. ಅಮೆರಿಕದಲ್ಲಿ ಜೇನು ನೊಣ ಸಾಕಾಣಿಕೆಯೂ ದೊಡ್ಡ ಉದ್ಯಮ. ಈ ರಾಸಾಯನಿಕದ ಕಾರಣಕ್ಕಾಗಿ ಈ ಉದ್ಯಮಕ್ಕೆ ಅತಿ ಹೆಚ್ಚು ಹೊಡೆತ ಬಿದ್ದಿದೆ. 2022ರಲ್ಲಿ ಖಾಸಗಿ ಜೇನು ನೊಣ ಸಾಕಣೆದಾರರು ಅವರಲ್ಲಿದ್ದ ಜೇನುನೊಣಗಳ ಪೈಕಿ ಶೇ 50ರಷ್ಟನ್ನು ಕಳೆದುಕೊಂಡಿದ್ದಾರೆ. ಯುನಿವರ್ಸಿಟೀಸ್ ಆಫ್ ಮೇರಿಲೆಂಡ್ ಹಾಗೂ ಅಬರ್ನ್ ವಿಶ್ವವಿದ್ಯಾಲಯ ನಡೆಸಿದ ಸಮೀಕ್ಷೆಯಲ್ಲಿ ಈ ಮಾಹಿತಿ ಇದೆ. ಜೊತೆಗೆ, ಹೀಗೆ ಜೇನು ನೊಣಗಳು ದೊಡ್ಡ ಸಂಖ್ಯೆಯಲ್ಲಿ ಸಾಯುವುದು ಅಮೆರಿಕದಲ್ಲಿ ಇದೇ ಮೊದಲೇನಲ್ಲ. 2000ರಿಂದ ಈಚೆಗೆ ಈ ಪ್ರಮಾಣ ಅಧಿಕಗೊಳ್ಳುತ್ತಲೇ ಇದೆ.

ಭಾರತದಲ್ಲಿ ಇಂಥ ಸಮೀಕ್ಷೆ ನಡೆಸುವ ಪರಿಪಾಟ ಇಲ್ಲ. ಕೃಷಿಕರು, ಜೇನು ಸಾಕಣೆದಾರರ ಅನುಭವ ಹಾಗೂ ಅವರ ಹೇಳಿಕೆಗಳಿಂದಲೇ ಜೇನು ನೊಣಗಳ ಸಂಖ್ಯೆಯ ಕುರಿತು ಮಾಹಿತಿ ದೊರೆಯುತ್ತದಷ್ಟೆ. ಕುಲಾಂತರಿ ಬೆಳೆಗಳು ಹಾಗೂ ರಾಸಾಯನಿಕ ಬಳಕೆಯಿಂದ ಪರಾಗಸ್ಪರ್ಶ ಜೀವಿಗಳ ಮೇಲೆ ಪರಿಣಾಮ ಬೀರುವ ಕುರಿತೂ ಹೆಚ್ಚಿನ ಅಧ್ಯಯನಗಳು ನಡೆದಿಲ್ಲ. ಕುಲಾಂತರಿ ತಳಿಗಳನ್ನು ಸೃಷ್ಟಿಸುವಲ್ಲಿ ಬಳಸುವ ರಾಸಾಯನಿಕಗಳ ಕಾರಣದಿಂದಾಗಿ ಜೇನು ನೊಣಗಳಿಗೆ ಸಂಕಷ್ಟ ಎದುರಾಗುತ್ತದೆ. ನೈಸರ್ಗಿಕ ತಳಿಗಳಲ್ಲಿ ಹೂವು ಬಿಡುವ ಮೊದಲು ಅಥವಾ ನಂತರದಲ್ಲಿ ಕುಲಾಂತರಿ ತಳಿಗಳಲ್ಲಿ ಹೂವು ಬಿಡುತ್ತವೆ. ಇದೇ ಮುಖ್ಯ ಸಮಸ್ಯೆ. ಇದರಿಂದ ಪರಾಗಸ್ಪರ್ಶ ಪ್ರಕ್ರಿಯೆಗೆ ತೊಡಕಾಗುತ್ತದೆ. ಇದರಿಂದ ಇಳುವರಿಯೂ ಕಡಿಮೆ; ಜೊತೆಗೆ ಇದು ಜೇನು ಉತ್ಪಾದನೆಯನ್ನು ಕಡಿತಗೊಳಿಸುತ್ತದೆ ಎನ್ನುವುದು ಕೃಷಿಕರ ಅಭಿಪ್ರಾಯ.

ದೇಶದಲ್ಲಿ ನಿಯೊ ನಿಕೋಟಿನಾಯ್ಡ್ಸ್ ಹಾಗೂ ಗ್ಲಿಫೋಸೇಟ್ ರಾಸಾಯನಿಕ ಬಳಕೆಯನ್ನು ನಿಷೇಧಿಸಲಾಗಿದೆ. ಆದರೆ, ಈಗಾಗಲೇ ಭೂಮಿಯಲ್ಲಿ ಡಿಡಿಟಿ ಸೇರಿದಂತೆ ಹಲವು ರಾಸಾಯನಿಕಗಳನ್ನು ಅಧಿಕವಾಗಿ ಬಳಸಿ ಆಗಿದೆ. ಇವುಗಳ ಅಂಶಗಳು ಭೂಮಿಯಲ್ಲಿ ಇನ್ನೂ ಇವೆ. ಬೀಜಗಳನ್ನೂ ರಾಸಾಯನಿಕಗಳಲ್ಲಿ ಅದ್ದಿ ಭೂಮಿಯಲ್ಲಿ ಊರಲಾಗುತ್ತದೆ. ಇವುಗಳಿಂದ ಜೇನು ನೊಣಗಳು ಸಾಯುತ್ತವೆ ಎನ್ನುವುದು ಒಂದು ಕಡೆಯಾದರೆ, ಹೂವುಗಳ ಪರಿಮಳವನ್ನು ಆಘ್ರಾಣಿಸುವ ಜೇನು ನೊಣಗಳ ಶಕ್ತಿಯನ್ನು ಇವು ಕುಂದಿಸುತ್ತವೆ ಎನ್ನುವುದು ಇನ್ನೊಂದು ಕಡೆ. ಕಡಿಮೆ ರಾಸಾಯನಿಕ ಬಳಸುವ ಗದ್ದೆಗಳಿಗಿಂತ ಹೆಚ್ಚಿನ ಪ್ರಮಾಣದ ರಾಸಾಯನಿಕ ಸಿಂಪಡಿಸುವ ಪ್ರದೇಶಗಳಲ್ಲಿರುವ ಜೇನು ನೊಣಗಳ ಆಘ್ರಾಣಿಸುವ ಶಕ್ತಿ ಕಡಿಮೆ ಇರುತ್ತದೆ ಎಂದು ಕೋಲ್ಕತ್ತ ವಿಶ್ವವಿದ್ಯಾಲಯವು ತನ್ನ ಅಧ್ಯಯನ ವರದಿಯೊಂದರಲ್ಲಿ ತಿಳಿಸಿದೆ.

'ಇತರ ಪರಾಗಸ್ಪರ್ಶ ಜೀವಿಗಳಿಗೆ ಕುತ್ತು'

'ಪರಾಗಸ್ಪರ್ಶದಲ್ಲಿ ಜೇನುನೊಣಗಳ ಪಾತ್ರ ಬಹಳ ಮುಖ್ಯವಾದುದು. ಹಾಗಾಗಿ, ಅವುಗಳ ಸಂರಕ್ಷಣೆ ಅಗತ್ಯ ಎಂದು ಜನರು ಜೇನು ಸಾಕಣೆಯಲ್ಲಿ ಹೆಚ್ಚು ಹೆಚ್ಚು ತೊಡಗಿಕೊಳ್ಳುತ್ತಿದ್ದಾರೆ. ಹೀಗೆ ಹೆಚ್ಚು ಹೆಚ್ಚು ಜೇನು ನೊಣಗಳನ್ನು ಸಾಕುವುದರಿಂದ ಇತರ ಪರಾಗಸ್ಪರ್ಶ ಜೀವಿಗಳಿಗೆ ಹೆಚ್ಚು ತೊಂದರೆ' ಎಂದು ಟೊರಾಂಟೊ ಯಾರ್ಕ್ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಹಾಗೂ ಸಂರಕ್ಷಣಾ ಜೀವಶಾಸ್ತ್ರಜ್ಞೆ ಶೀಲಾ ಕೋಲಾ ಹೇಳುತ್ತಾರೆ. ಈ ಬಗ್ಗೆ ಪ್ರಬಂಧವೊಂದನ್ನು ಅವರು ಪ್ರಕಟಿಸಿದ್ದಾರೆ.

'ಜೇನು ನೊಣಗಳನ್ನು ಬಿಟ್ಟರೆ ಜನರಿಗೆ ಇತರ ಪರಾಗಸ್ಪರ್ಶ ಜೀವಿಗಳ ಕುರಿತು ಮಾಹಿತಿಯೇ ಇಲ್ಲ. ಅಮೆರಿಕದಲ್ಲಂತೂ ಜೇನು ಸಾಕಾಣಿಕೆ ದೊಡ್ಡ ಉದ್ಯಮವೇ ಆಗಿದೆ. ಹೀಗೆ ಹೆಚ್ಚು ಹೆಚ್ಚು ಜೇನು ನೊಣಗಳನ್ನು ಸಾಕುವುದರಿಂದ ಇತರ ಪರಾಗಸ್ಪರ್ಶ ಜೀವಿಗಳಿಗೆ, ನೈಸರ್ಗಿಕವಾಗಿ ಇರುವ ಜೇನು ನೊಣಗಳಿಗೆ ಆಹಾರವೇ ಇಲ್ಲದಂತಾಗುತ್ತದೆ. ಮೊದಲೇ ಇವುಗಳು ಸಂಕಷ್ಟದಲ್ಲಿವೆ. ಆಹಾರ ಕೊರತೆಯು ಇನ್ನಷ್ಟು ಸಂಕಷ್ಟಕ್ಕೆ ಕಾರಣವಾಗುತ್ತದೆ' ಎನ್ನುತ್ತಾರೆ ಅವರು.

ಸ್ಪ್ಯಾನಿಷ್ ನ್ಯಾಷನಲ್ ರಿಸರ್ಚ್ ಕೌನ್ಸಿಲ್‌ನ ಅಲ್‌ಫ್ರೆಡೊ ವಾಲಿಡೊ ಹಾಗೂ ಪೆಡ್ರೊ ಜೋರ್ಡನ್ ಎನ್ನುವ ಇಬ್ಬರು ಸಂಶೋಧಕರು ಆಫ್ರಿಕಾದ ಕ್ಯಾನರಿ ದ್ವೀಪದಲ್ಲಿ ಅಧ್ಯಯನ ನಡೆಸಿದ್ದಾರೆ. 'ಜೇನು ನೊಣಗಳನ್ನು ಸಾಕುವುದರಿಂದ ಗಿಡಗಳು ಹಾಗೂ ಪರಾಗಸ್ಪರ್ಶ ಜೀವಿಗಳ ನಡುವಿನ ಜೈವಿಕವಾದ ಸಂಪರ್ಕ ಕೊಂಡಿ ಕಡಿದು ಹೋಗುತ್ತದೆ. ಜೇನು ನೊಣಗಳು ಇರುವ ಪ್ರದೇಶದಲ್ಲಿ ಬೇರೆ ಯಾವ ಪರಾಗಸ್ಪರ್ಶ ಜೀವಿಯೂ ಇರುವುದಿಲ್ಲ. ಜೇನು ನೊಣ ಪೆಟ್ಟಿಗೆ ಇಟ್ಟಿರುವ ತುಸು ದೂರದ ಪ್ರದೇಶದಲ್ಲಿ ಕೆಲವು ಬೆಳೆಗಳು ಹೆಚ್ಚಿನ ಇಳುವರಿ ನೀಡಬಹುದಷ್ಟೇ' ಎಂದಿದ್ದಾರೆ.

ಆಧಾರ: ಪಿಟಿಐ, ಎಪಿ, 'ದಿ ಸ್ಯಾನ್ ಡಿಯೇಗೊ ಯೂನಿಯನ್ ಟ್ರಿಬ್ಯೂನ್' ವರದಿ, ಅಮೆರಿಕ ಕೃಷಿ ಸಚಿವಾಲಯದ ವರದಿ, ದಿ ಗಾರ್ಡಿಯನ್, 'ಸೈಂಟಿಫಿಕ್ ರಿಪೋರ್ಟ್'ನ ವರದಿಗಳು

ಸಂಸಾರವೆಂಬ ಪಾತ್ರೆಯಲ್ಲಿ ಕುದಿಯುವ ಎಸ್ರು



ಅಕ್ಷತಾ ಪಾಂಡವಪುರ

ಚಾಮರಾಜನಗರದ ಹೆಣ್ಣುಮಗಳು ಹುಚ್ಚೀರಿ. ಗಂಡ, ಮಗಳೇ ಆಕೆಯ ಪ್ರಪಂಚ. ತನ್ನ ಕನಸುಗಳನ್ನೆಲ್ಲ ಮೂಟೆ ಕಟ್ಟಿ ಕುಡುಕ ಗಂಡನ ಜೊತೆಗೆ ಬದುಕುವ ಆಕೆಯ ಜೀವನದ ಏರಿಳಿತಗಳ ಕಥೆಯೇ 'ಕೋಳಿ ಎಸ್ರು' ಚಿತ್ರದ ಒಂದೆಳೆ. ಕೆ.ಟಿ.ಚಿಕ್ಕಣ್ಣ ಅವರ 'ಹುಚ್ಚೀರಿ ಎಸರಿನ ಪ್ರಸಂಗ' ನಾಟಕದ ಕಥೆಯನ್ನು ಆಧರಿಸಿದ ಈ ಚಿತ್ರಕ್ಕೆ ಈಗಾಗಲೇ ಸಾಕಷ್ಟು ಪ್ರಶಸ್ತಿಗಳು ಲಭಿಸಿವೆ. ನಿರ್ದೇಶಕಿ ಚಂಪಾ ಶೆಟ್ಟಿ ಸಿನಿಮಾ, ಮನರಂಜನೆ, ಹಾಸ್ಯ ಎಂಬಿತ್ಯಾದಿ ಅಂಶಗಳಿಗೆ ಹೆಚ್ಚು ತಲೆ ಕೆಡಿಸಿಕೊಳ್ಳದೇ ಒಂದು ಸಂಪೂರ್ಣ ಕಲಾತ್ಮಕ ಚಿತ್ರವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗಾಗಿ ಚಿತ್ರ ಪ್ರಾರಂಭದಿಂದ ಕೊನೆಯ ತನಕ ನಿಧಾನವಾಗಿಯೇ ಸಾಗುತ್ತದೆ.

ಹುಚ್ಚೀರಿಯಾಗಿ ನಟಿಸಿರುವ ನಟಿ ಅಕ್ಷತಾ ಪಾಂಡವಪುರ ನಟನೆಯಿಂದಲೇ ಇಡೀ ಚಿತ್ರವನ್ನು ಹೆಗಲ ಮೇಲೆ ಹೊತ್ತುಕೊಂಡು ಸಾಗುತ್ತಾರೆ. ಈಕೆಯ ಗಂಡ, ನಯಾ ಪೈಸೆ ಕೆಲಸ ಮಾಡದೆ ಹೆಂಡತಿ ದುಡಿದಿರುವುದನ್ನೂ ಕದ್ದು ಮದ್ಯ ಕುಡಿಯುವವ. ಗಂಡನ ಬೈಗುಳ, ಹಿಂಸೆಗೆ ಹುಚ್ಚೀರಿ ಮೌನ, ದುರುಗುಟ್ಟಿದ ನೋಟದಿಂದಲೇ ಉತ್ತರಿಸುವ ರೀತಿ ಅವರ ನಟನೆಯ ತಾಕತ್ತಿಗೆ ಹಿಡಿದ ಕನ್ನಡಿಯಂತಿದೆ. ಹುಚ್ಚೀರಿ ಗಂಡನಾಗಿ ಪ್ರಕಾಶ್ ಶೆಟ್ಟಿ ಇಷ್ಟವಾಗುತ್ತಾರೆ. ಆದರೆ ಆ ಪಾತ್ರದ ಪೋಷಣೆ ಇನ್ನಷ್ಟು ಗಟ್ಟಿಯಾಗಬೇಕಿತ್ತು.

ನಾವು ನೋಡಿದ ಸಿನಿಮಾ

ಕೋಳಿ ಎಸ್ರು

- **ನಿರ್ಮಾಣ:** ಎಪ್ರೊನ್ ಪ್ರೊಡಕ್ಷನ್
- **ನಿರ್ದೇಶನ:** ಚಂಪಾ ಶೆಟ್ಟಿ
- **ತಾರಾಗಣ:** ಅಕ್ಷತಾ ಪಾಂಡವಪುರ, ಪ್ರಕಾಶ್ ಶೆಟ್ಟಿ, ಬೇಬಿ ಅಪೇಕ್ಷಾ ಮತ್ತಿತರರು

ರಂಗಭೂಮಿ ಹಿನ್ನೆಲೆಯುಳ್ಳ ಚಂಪಾ ಶೆಟ್ಟಿ ರಂಗಗೀತೆಗಳನ್ನು, ನಾಟಕದ ದೃಶ್ಯಗಳನ್ನು ಕಥೆಗೆ ಪೂರಕವಾಗಿ ಬಳಸಿಕೊಂಡು ಚಿತ್ರವನ್ನು ವರ್ಣಮಯವಾಗಿಸಿದ್ದಾರೆ. ಹುಚ್ಚೀರಿ ಮಗಳಾಗಿ ಬೇಬಿ ಅಪೇಕ್ಷಾ ಮುದ್ದಾಗಿ ನಟಿಸಿದ್ದಾಳೆ. ಚಾಮರಾಜನಗರ ಪ್ರದೇಶದ ಹಳ್ಳಿ ಚಿತ್ರಣ, ಭಾಷೆ ಎಲ್ಲವೂ ಸೊಗಸಾಗಿದೆ. ಸೂಕ್ತ ಲೈಟಿಂಗ್ ಮೂಲಕ ಚೆಂದದ ದೃಶ್ಯಗಳು ಸೆರೆ ಹಿಡಿಯುವಲ್ಲಿ ಛಾಯಾಚಿತ್ರಗ್ರಾಹಕ ಫ್ರಾನ್ಸಿಸ್ ರಾಜ್‌ಕುಮಾರ್ ಯಶಸ್ವಿಯಾಗಿದ್ದಾರೆ. ಆದರೆ ಹಿನ್ನೆಲೆ ಸಂಗೀತ ಇನ್ನಷ್ಟು ಉತ್ತಮವಾಗಬಹುದಿತ್ತು.

ಕೂಲಿ ಕೆಲಸ ಮಾಡುವವರೂ ಮೊಬೈಲ್ ಹೊಂದಿರುವ ಈ ಕಾಲದಲ್ಲಿ 'ಕೋಳಿ ಎಸ್ರು' ತಿನ್ನಬೇಕೆಂಬ ಮಗಳ ಆಸೆಗಾಗಿ ತಾಯಿ ಶೀಲ ಕಳೆದುಕೊಳ್ಳುವ ಸ್ಥಿತಿಗೆ ಹೋಗುವ ಕಥೆಯ ಎಳೆಯನ್ನು ಇಂದಿನ ಕಾಲಮಾನಕ್ಕೆ ಒಗ್ಗಿಸಬಹುದಿತ್ತು. ಚಿತ್ರ ಒಂದು ಗಟ್ಟಿಯಾದ ಸಂದೇಶದೊಂದಿಗೆ ಕಾಡುವುದಿಲ್ಲ. ಎಲ್ಲಿಯೂ ಕಥೆ ನಡೆಯುವ ಕಾಲಘಟ್ಟವನ್ನು ಸ್ಪಷ್ಟವಾಗಿ ಹೇಳದೆ ನಿರ್ದೇಶಕರು ಜಾಣ್ಮೆ ಮೆರೆದಿದ್ದಾರೆ. ಎತ್ತಿನಗಾಡಿ ಬಳಕೆಯಲ್ಲಿದ್ದ ಕಾಲದ ಕಥೆ ಎಂಬುದು ಅಲ್ಲಲ್ಲಿ ಗೋಚರವಾಗುತ್ತದೆ. ಚಿತ್ರಕಥೆಯನ್ನು ಇನ್ನಷ್ಟು ಗಟ್ಟಿಗೊಳಿಸುವ ಅವಕಾಶ ನಿರ್ದೇಶಕರಿಗಿತ್ತು. ಚಿತ್ರದ ದ್ವಿತೀಯಾರ್ಧದಲ್ಲಿ ಒಂದಷ್ಟು ಕಾಲ ಹುಚ್ಚೀರಿ ತೆರೆಯ ಮೇಲೆ ಕಾಣಿಸದೆ ಸಿನಿಮಾದ ವೇಗ ಇನ್ನಷ್ಟು ಕುಸಿಯುತ್ತದೆ. ಹುಚ್ಚೀರಿ ಪಾತ್ರದ ಪೋಷಣೆ, ಆಕೆಗಾಗುವ ಅವಮಾನಗಳು, ತಂದೆ-ತಾಯಿ ಸಂಘರ್ಷದಿಂದ ಮಗಳು ಲಕ್ಷ್ಮಿ ಮನಸ್ಸಿನ ಮೇಲಾಗುವ ಪರಿಣಾಮಗಳನ್ನು, ಭಾವುಕ ಸನ್ನಿವೇಶಗಳನ್ನು ಚಿತ್ರಕಥೆಯಲ್ಲಿ ತರಬಹುದಾಗಿತ್ತು.

–ವಿನಾಯಕ ಕೆ.ಎಸ್.

ಪ್ರಜಾವಾಣಿ ನೋಡಿಯೊ | ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮನೆ ಮನೆಗೆ ತೆರಳಿ ಪೊಲೀಸರು ಯುವಕರನ್ನು ವಶಕ್ಕೆ ಪಡೆಯುತ್ತಿರುವ ದೃಶ್ಯಗಳಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆಯಾಗುತ್ತಿದೆ. ರಾಮಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪಣೆ ನೆರವೇರುವುದಕ್ಕೆ ಹಿಂದಿನ ದಿನ (ಜ.21) ಮುಂಬೈನ ಮೀರಾ ರಸ್ತೆಯಲ್ಲಿ ಕೋಮು ಸಂಘರ್ಷ ನಡೆದಿದೆ. ಈ ಸಂಘರ್ಷದಲ್ಲಿ ಭಾಗಿಯಾಗಿರುವ ಯುವಕರನ್ನು ಪೊಲೀಸರು ಬಂಧಿಸುತ್ತಿದ್ದಾರೆ ಎಂದು ಈ ವಿಡಿಯೊದೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳಲಾಗುತ್ತಿದೆ. 'ಜನವರಿ 22ರಂದು ಪ್ರಭು ಶ್ರೀರಾಮನ ಶೋಭಾಯಾತ್ರೆಯು ಮೀರಾ ರಸ್ತೆಯಲ್ಲಿ ನಡೆಯಿತು. ಈ ವೇಳೆ, ಜಿಹಾದಿಗಳು ಕೇಸರಿ ಶಾಲನ್ನು ಎಳೆದಾಡಿದರು. ಮಹಿಳೆಯನ್ನು ಅವಮಾನಿಸಿದರು. ಯಾತ್ರೆಯೊಂದಿಗೆ ತೆರಳುತ್ತಿದ್ದ ಕಾರುಗಳನ್ನು ಕುಟ್ಟಿದರು. ಈ ಜಿಹಾದಿಗಳನ್ನು ಹುಡುಕಿ, ಅವರ ಮನೆಯಿಂದ ಹೊರಗೆಳೆದು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಲಾಯಿತು' ಎಂದು ಫೇಸ್‌ಬುಕ್‌ನಲ್ಲಿ ಕೆಲವರು ಮಾಹಿತಿ ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಬಿಜೆಪಿ ಶಾಸಕ ಟಿ.ರಾಜ ಸಿಂಗ್ ಅವರನ್ನು 2022ರ ಆಗಸ್ಟ್‌ನಲ್ಲಿ ಪೊಲೀಸರು ಹೈದರಾಬಾದ್‌ನಲ್ಲಿ ಬಂಧಿಸಿದರು. ಅವರು ಪ್ರವಾದಿ ಮೊಹಮ್ಮದರ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ್ದರು. ನಂತರ ಕೆಲವೇ ದಿನಗಳಲ್ಲಿ ಅವರನ್ನು ಬಿಡುಗಡೆ ಮಾಡಲಾಯಿತು. ಇದನ್ನು ವಿರೋಧಿಸಿ ಕೆಲವು ಯುವಕರು ಪ್ರತಿಭಟನೆ ನಡೆಸಿದ್ದರು. ಈ ವೇಳೆಯಲ್ಲಿ ಈ ಯುವಕರನ್ನು ಬಂಧಿಸಲಾಗಿತ್ತು. ಈ ಬಂಧನದ ವಿಡಿಯೊವನ್ನು ಮೀರಾ ರಸ್ತೆಯಲ್ಲಿ ನಡೆದ ಸಂಘರ್ಷದ ಹಿನ್ನೆಲೆಯಲ್ಲಿ ಬಳಸಿಕೊಳ್ಳಲಾಗುತ್ತಿದೆ. ಛತ್ರಪತಿ ಸಾಂಬಾಜಿನಗರದಲ್ಲಿ 2023ರ ಏಪ್ರಿಲ್‌ನಲ್ಲಿ ರಾಮ ನವಮಿಯ ಸಂದರ್ಭದಲ್ಲೂ ಸಂಘರ್ಷ ಏರ್ಪಟ್ಟಿತ್ತು. ಈ ಸಂದರ್ಭದಲ್ಲಿಯೂ ಇದೇ ವಿಡಿಯೊವನ್ನು ಬಳಸಿಕೊಂಡು ಕೋಮು ದ್ವೇಷ ಹರಡಲಾಗಿತ್ತು ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಕನ್ನಡವೇ ಸತ್ಯ?

ನುಡಿ ಬೆಳಗು



ಪ್ರೊ.ಎಂ.ಕೃಷ್ಣೇಗೌಡ

'ನೈರೋಬಿಗೆ ಹೋಗ್ತಾ ಇದೀನಿ ಕಣೋ' ಅಂದೆ. ಅವನು ಎರಡನೇ ತರಗತಿ...ಅಲ್ಲಲ್ಲ, ಕ್ಷಮಿಸಿ, ಸೆಕೆಂಡ್ ಸ್ಟಾಂಡರ್ಡ್.
'ವಾವ್, ಆಫ್ರಿಕಾಕ್ಕೆ ಹೋಗ್ತಾ ಇದೀರ? ಕೀನ್ಯಾಕ್ಕೆ?' ಅಂದ. ಬೆರಗಾಗಿ ಹೋದೆ. ನನಗೆ ಎರಡನೇ ಕ್ಲಾಸಿನಲ್ಲಿದ್ದಾಗ ಡೆಲ್ಲಿ ಎಲ್ಲಿದೆ? ಅನ್ನೋದಲ್ಲ, ಬೆಂಗಳೂರು ಎತ್ಲಾ ಕಡೆಗಿದೆ ಅನ್ನುವ ಅಂದಾಜು ಕೂಡಾ ಇರಲಿಲ್ಲ.

'ನೈರೋಬಿ ಆಫ್ರಿಕಾದಲ್ಲಿದೆ ಅಂತ ನಿನಗೆ ಹೇಗೆ ಗೊತ್ತಾಯ್ತೋ' ಅಂತ ಕೇಳಿದೆ.

'ನಮ್ ಲಂಚ್ ಬ್ರೇಕಲ್ಲಿ, ಸ್ಕೂಲ್ ಬಸ್ಸಲ್ಲಿ ನಮ್ ಫ್ರೆಂಡ್ಸ್ ಎಲ್ಲಾ ಚಾಟ್ ಮಾಡ್ತಾ ಇರ್ತೀವಲ್ಲ, ಆಗ ವಿ ಡಿಸ್ಕಸ್ ಆಲ್ ದಿಸ್' ಅಂದ. 'ಬರೋವಾಗ ನನಗೊಂದು ಬ್ಲ್ಯಾಕ್ ರೈನಾಸಿರಸ್ ತಂದುಕೊಡ್ತೀರಾ?' ಅಂದ. ಅವನಿಗೆ ಅಲ್ಲಿ ಬ್ಲ್ಯಾಕ್ ರೈನಾಸಿರಸ್ ಇರುವ ವಿಷಯ ಕೂಡಾ ಗೊತ್ತು. ಆತ ನಮ್ಮ ಸಮೀಪ ಸಂಬಂಧಿಕರ ಹುಡುಗ.

ಸ್ವಲ್ಪ ಹೊತ್ತಾದ ಮೇಲೆ ಆ ಮಾತು ಈ ಮಾತು ಆಡುತ್ತ 'ನಾನು ನಿನಗೆ ಏನಾಗಬೇಕೋ?' ಅಂದೆ. 'ಅಂಕಲ್' ಅಂದ. 'ನಿಮ್ಮಪ್ಪ ನನಗೆ ಏನಾಗಬೇಕು?' ಅಂದೆ. 'ಯು ಮೀನ್ ಡ್ಯಾಡ್?' ಅಂದ. 'ಹ್ಞೂ' ಅಂದೆ. 'ಕಸಿನ್' ಅಂದ. 'ಕಸಿನ್ ಅಂದ್ರೆ ಹೇಗೆ ಕಸಿನ್?' ಅಂದೆ. 'ಸಾರಿ ಅಂಕಲ್, ಅದೆಲ್ಲಾ ನನ್ಗೆ ಗೊತ್ತಾಗಲ್ಲ' ಅಂದ. ಸುಮ್ನೆ ತಲೆ ತಿನ್ಬೇಡಿ ಅನ್ನುವ ಭಾವವಿತ್ತು ಆ ಮಾತಿನಲ್ಲಿ. ನಾನು ಸುಮ್ಮನಾದೆ.

ಸ್ವಲ್ಪ ಹೊತ್ತು ಕಳೆದ ಮೇಲೆ ಅವನು ಮತ್ತು ನಾನು ಡೈನಿಂಗ್ ಟೇಬಲ್ ಮೇಲೆ ತಿಂಡಿ ತಿನ್ನುತ್ತಿದ್ದೊ. ಅವರ ಮನೆಯಲ್ಲಿ ಅಕ್ಕಿ ರೊಟ್ಟಿಗೆ ಬೆಂಡೇಕಾಯಿ ಗೊಜ್ಜು ಮಾಡಿದ್ದರು. ನಾನು ಅವನಿಗೆ ಗೊಜ್ಜಿನ ಕಡೆ ಕೈಮಾಡಿ ಕೇಳಿದೆ– 'ಇದೇನು?' 'ಕರಿ' ಅಂದ. 'ಎಂಥಾ ಕರಿ?' ಅಂದೆ. 'ಲೇಡೀಸ್ ಫಿಂಗರ್' ಅಂದ. 'ನಿನಗೆ ಇನ್ನ್ಯಾವ್ಯಾವ ತರಕಾರಿಗಳು ಗೊತ್ತು?' ಅಂದೆ. ಅವನು, 'ಬ್ರಿಂಜಾಲ್...' ಅಂತ ಶುರು ಮಾಡಿದ. 'ಕನ್ನಡದಲ್ಲಿ ಹೇಳು ಪುಟ್ಟೂ' ಅಂದೆ. 'ಬ್ರಿಂಜಾಲ್ ಅಂದ್ರೆ ಕನ್ನಡಾನೆ ಅಲ್ವ?' ಅಂದ. 'ಸರಿ, ಹೇಳು, ಇನ್ನ್ಯಾವ್ಯಾವ ತರಕಾರಿ ಗೊತ್ತು? ಕನ್ನಡದಲ್ಲಿ ಹೇಳು' ಅಂದೆ. ಅವನು ಹೇಳುತ್ತಾ ಹೋದ- 'ಪೊಟ್ಯಾಟೋ, ಟೊಮ್ಯಾಟೊ, ಆನಿಯನ್, ಬೀನ್ಸ್, ಕ್ಯಾರೆಟ್... ಆ್ಯಂಡ್....' ಅಷ್ಟಕ್ಕೆ ಗಾಡಿ ನಿಂತಿತು.

'ಸೋಪ್ ಅನ್ನೋದಕ್ಕೆ ಕನ್ನಡದಲ್ಲಿ ಏನಂತಾರೆ ಗೊತ್ತಾ?' ಅಂದೆ. ಸೋಪ್‌ಗೆ ಸೋಪ್ ಅಂತಾರೆ, ಇನ್ನೇನಂತಾರೆ?' ಅಂದ.
'ನೀನು ಸ್ಕೂಲ್ ಊಟದ ಡಬ್ಬಿಗೆ ಏನ್ ತೊಗೊಂಡ್ ಹೋಗ್ತೀಯ?' ಅಂದೆ.

'ಆಮ್ಲೆಟ್, ಎಗ್, ಬ್ರೆಡ್, ಬಟರ್, ಸ್ಯಾಂಡ್ ವಿಚ್, ನೂಡಲ್ಸ್, ಪಾಸ್ತಾ, ಪ್ರಿಂಗಲ್ಸ್...' ಹೇಳುತ್ತಾ ಹೋದ. ನಮ್ಮ ಮಕ್ಕಳು ಗ್ಲೋಬಲ್ ಆಗ್ತಾ ಇದ್ದಾರೆ. ನಾವು ಲೋಕಲ್‌ಗಳೇ ಈ ಗ್ಲೋಬಲ್‌ಗಳನ್ನು ಹೆತ್ತವರು. ಬೆಳೆಸುತ್ತಿರುವವರು.

ಅಂತೂ ಉದಯವಾಯಿತು ನಮ್ಮ ಚೆಲುವ ಕನ್ನಡ ನಾಡು... ಅಲ್ವ?

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಜನವರಿ 26, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಕೃಷ್ಣ ಪ್ರತಿಪದ್ ಗಂ. 25-20 ನಕ್ಷತ್ರ: ಪುಷ್ಯ ಗಂ. 10-28 ಯೋಗ: ಪ್ರೀತಿ ಗಂ. 07-42 ಕರಣ: ಬಾಲವ ಗಂ. 12-19, ಮಕರ ಮಾಸದ 11 ನೇ ದಿನ, ಮಳೆನಕ್ಷತ್ರ: ಶ್ರವಣ 1.
ರಾಹುಕಾಲ : ಬೆಳಿಗ್ಗೆ 10-30 – 12-00, ಸೂರ್ಯೋದಯ : 07-01 ಸೂರ್ಯಾಸ್ತ : 06-24
ಮುಸ್ಲಿಂ ದಿನಾಂಕ : 14 ರಜಬ್
ದಿನ ವಿಶೇಷ : ಗಣರಾಜ್ಯೋತ್ಸವ ದಿನಾಚರಣೆ
ಅದೃಷ್ಟ ಸಂಖ್ಯೆ : 3, 8

ಮೇಷ: ಹಿಂದೆ ಆರಂಭ ಮಾಡಿದ ಯೋಜನೆಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸಿ. ಜೀವನದಲ್ಲಿ ನಡೆದ ಕಹಿ ಘಟನೆಗಳನ್ನು ಪಾಠದ ರೂಪದಲ್ಲಿ ಮಗನಿಗೆ ಹೇಳುವ ಅನಿವಾರ್ಯತೆ ಸನ್ನಿವೇಶ ಎದುರಾಗುವುದು.

ವೃಷಭ: ಉದ್ಯೋಗದ ಸಂದರ್ಶನದಲ್ಲಿ ಧೈರ್ಯದಿಂದ ಮುನ್ನುಗಿ, ಶುಭಫಲವನ್ನು ಹೊಂದುವಿರಿ. ಗುಣಾತ್ಮಕ ಕಾರ್ಯಗಳಿಗೆ ಮಹತ್ವ ನೀಡುವುದು ಉತ್ತಮ ಈ ದಿನ ನಿಮ್ಮ ಆತ್ಮವಿಶ್ವಾಸವನ್ನು ಕಳೆದುಕೊಳ್ಳಬೇಡಿ.

ಮಿಥುನ: ರಕ್ತದ ಒತ್ತಡ, ಮೂತ್ರ ಸಂಬಂಧದ ದೋಷಗಳ ಬಗ್ಗೆ ಜಾಗ್ರತೆ ವಹಿಸಿ. ಅನಿರೀಕ್ಷಿತ ಪ್ರಯಾಣವು ಬದುಕಿನ ಹೊಸ ದಾರಿಗೆ ಕಾರಣವಾಗಲಿದೆ. ಸಂಜೆ ಅಚ್ಚರಿಯ ಸುದ್ದಿಯೊಂದನ್ನು ಕೇಳಲಿರುವಿರಿ.

ಕರ್ಕಾಟಕ: ಕೋರ್ಟಿನ ಕೆಲಸಗಳನ್ನು ತ್ವರಿತಗತಿಯಲ್ಲಿ ನಡೆಸಿಕೊಡುವಂತೆ ವಕೀಲರಲ್ಲಿ ಕೇಳಿಕೊಳ್ಳುವುದು ಉತ್ತಮ. ಸಾಫ್ಟ್‌ವೇರ್ ಕ್ಷೇತ್ರದ ಉದ್ಯೋಗಿಗಳಿಗೆ ಉನ್ನತಸ್ಥಾನ ಸಿಗಲಿದೆ. ಬಿಳಿ, ಕೆಂಪು ಬಣ್ಣ ಶುಭ ತರಲಿದೆ.

ಸಿಂಹ: ದೇಹಕ್ಕೆ ಅವಶ್ಯಕತೆ ಇರುವಷ್ಟು ನಿದ್ದೆಯನ್ನು, ವಿಶ್ರಾಂತಿಯನ್ನು ಮಾಡುವುದರಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಸ್ನೇಹ ಸಂಬಂಧಗಳು ಗಟ್ಟಿಯಾಗಿ ಸಹಕಾರಗಳು ನಿರೀಕ್ಷೆಗೆ ಮೀರಿ ಬರಲಿದೆ.

ಕನ್ಯಾ: ಅಭಿವೃದ್ಧಿಗೆ ಪೂರಕವಾದ ಹೊಸ ಅವಕಾಶಗಳ ಬಾಗಿಲು ತೆರೆಯಲಿದೆ, ಈ ದಿನ ನಿಯೋಜಿತ ಕೆಲಸಗಳನ್ನು ಅಕ್ಕರೆಯಿಂದ ಒಪ್ಪಿಕೊಳ್ಳಿ, ಮತ್ತೊಂದು ಹೊಸ ಕೆಲಸ ನಿಮಗಾಗಿ ಕಾದಿರುವುದು. ಹಣದ ಚಿಂತೆ ಇರುವುದಿಲ್ಲ.

ತುಲಾ: ಹೊಲದ ಅಥವಾ ಜಮೀನಿನ ಕೆಲಸಕ್ಕೆ ಆಳನ್ನು ಗೊತ್ತು ಮಾಡಿಕೊಳ್ಳುವುದು ಉತ್ತಮ. ಪೊಲೀಸ್ ಅಧಿಕಾರಿಗಳಿಗೆ ಅಧಿಕ ಕೆಲಸದ ಒತ್ತಡ ಇರಲಿದೆ. ಕಾರ್ಯಸಾಧನೆಗಾಗಿ ವಾಮಮಾರ್ಗವನ್ನು ಬಳಸಬೇಡಿ.

ವೃಶ್ಚಿಕ: ವಾದ ಮಾಡುವ ಅಭ್ಯಾಸದಿಂದ ಸಂಬಂಧಗಳನ್ನು ಹಾಳುಮಾಡಿಕೊಳ್ಳುವ ಲಕ್ಷಣಗಳು ಕಂಡುಬರಲಿದೆ. ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಏಕಾಗ್ರತೆ ಅನಿವಾರ್ಯ. ಕಬ್ಬಿಣ ಹಾಗೂ ಸಿಮೆಂಟ್ ವ್ಯಾಪಾರಸ್ಥರಿಗೆ ಲಾಭ.

ಧನು: ಅಮೂಲ್ಯ ವಸ್ತುವಿನ ಅಗಲಿಕೆಯು ಅಥವಾ ಕಾಣೆಯಾಗುವಿಕೆಯು ನಿಮ್ಮ ಮನಸ್ಸಿಗೆ ದೊಡ್ಡ ಗಾಯವನ್ನು ಮಾಡುತ್ತದೆ. ಆತಂಕ ತುಂಬಿದ ಕೆಲಸಕಾರ್ಯದಲ್ಲಿರುವವರ ಮನೆಯಲ್ಲಿ ನೆಮ್ಮದಿ ತುಂಬುವುದು.

ಮಕರ: ಮಾರುಕಟ್ಟೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ ಷೇರು ಕೊಳ್ಳುವ ಯೋಜನೆಗೆ ಮುಂದಾಗಿ. ಜಮೀನಿನ ಕೆಲಸಗಳು ಯಾವುದೇ ತೊಂದರೆ ಇಲ್ಲದೆ ನೆರವೇರಲಿವೆ. ಮಾನಸಿಕವಾಗಿ ಗೊಂದಲಗಳಿರುವುದು.

ಕುಂಭ: ರಾಜಕಾರಣಿಗಳಿಗೆ ಮತ್ತು ಸರ್ಕಾರಿ ನೌಕರರಿಗೆ ಈ ದಿನ ಸುಯೋಗವೆಂದು ಹೇಳಬಹುದು. ಆಹಾರ ಪದಾರ್ಥದ ಬೆಳೆಯನ್ನು ಬೆಳೆದ ಕೃಷಿಕರಿಗೆ ಉತ್ತಮ ಲಾಭ ಸಿಗುವುದು. ಮಕ್ಕಳು ನಿಮಗೆ ಸಂತಸ ತರಲಿದ್ದಾರೆ.

ಮೀನ: ಪ್ರೀತಿಯ ವಿಷಯವನ್ನು ಸಂಬಂಧಪಟ್ಟವರ ಮುಂದಿಡುವುದು ಲೇಸು, ನಾಳೆ ಎನ್ನುವುದು ಈ ವಿಷಯದಲ್ಲಿ ಸೂಕ್ತವಲ್ಲ. ಮೀನ-ಮೇಷ ಎಣಿಸದೆ ನಿಮ್ಮ ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳಬಹುದು.

ಪದಬಂಧ 5572

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗೆ ಯೋಗವಿದ್ದರೂ ಅಗಲುವಿಕೆ! (3)
3.ಪಂಜನ್ನು ಹಚ್ಚಿದಾಗ ಹಕ್ಕಿಗೂಡು ಕಾಣಿಸಿದೆಯಲ್ಲಾ (3)
6.ರೀತಿಯೊಡನೆ ಬರುವ ಜೋಡುನುಡಿ (3)
7.ಇಬ್ಬಂದಿಯೇನಿಲ್ಲ!ಕಚೇರಿಯ ನೌಕರ ವರ್ಗ (3)
8.ವಿರಳವಾಗಿರುವ ನಲ್ಮೆ (3)
10.ಶವವನ್ನು ಸುಡಲು ಒಟ್ಟಿದ ಕಟ್ಟಿಗೆ ರಾಶಿ! (2)
11.ಉತ್ತರ ದಿಕ್ಕಿದು (3)
12.ತೀರ ದೂರವಿರುವ ದಡ! (2)
14.ಬಿನ್ನಹ ಈ ರೀತಿ ಬಂದಿದೆ (3)
15.ನಂಟರ ಸಮೂಹ (3)
16.ನಗ ಧರಿಸಿಕೊಂಡು ನೋಡಿರುವ ಪಟ್ಟಣ (3)
17.ಕುಂಬಾರನ ಚಕ್ರವಿದು (3)
18.ಅತಿಶಯವಾದ ಮೋಹ (3)

ಮೇಲಿಂದ ಕೆಳಕ್ಕೆ
1.ಕೆಂಗಲ್ ಹನುಮಂತಯ್ಯನವರು ನಿರ್ಮಿಸಿದ ಭವ್ಯ ಕಟ್ಟಡ (5)
2.ಗರಿ ಹಿಡಿದವನ ಹಿರಿಮೆ (3)
3.ದೀವಟಿಗೆ ಇಲ್ಲಿ ಕಾಣುತ್ತಿದೆ (2)
4.ವಿಲಾಸಪ್ರಿಯತೆಯನ್ನು ಹೀಗೆನ್ನಿ (4)
5.ಮಂದಿ ಪ್ರವೇಶಿಸಿರುವ ದೇಗುಲ (2)
9.ಬರವಿದ್ದಾಗ ದಿಟ್ಟಿಸಿ ನೋಡಿರುವ ಆಕಾಶ (3)
10.ಚಿಗುರನ್ನು ತಿನ್ನುತ್ತಿರುವ ಹುಲ್ಲೆ (3)
11.ವಿರಮಿಸಿಕೊಳ್ಳುವ ಮನೆಯಿದು (5)
12.ಚುರುಕಾದ ಗಮನ (4)
13.ಬಲೆ ಹಿಡಿದಿರುವ ಬಲಹೀನೆ (3)
14.ಸರಸದ ವಿರುದ್ಧ ಪದ (3)
16.ಕುಯುಕ್ತಿಗೆ ಹೆಸರಾದ ಪ್ರಾಣಿ (2)



5571ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸೂಕ್ಷ್ಮದರ್ಶಕ
3.ಕುಲಾವಿ 5.ರಸಕವಳ
7.ಸಫಲ 8.ನಿರಪರಾಧಿ
11.ಸಮೀಕ್ಷೆ 12.ಹೊಸಜೀವನ
15.ಜಯಿಂದ
16.ಹೆರಿಗೆಮನೆ

ಮೇಲಿಂದ ಕೆಳಕ್ಕೆ:
1.ಸೂಕರ 2.ದಶಕ
4.ವಿದಳನ 6.ವಕ್ರಾರ
7.ಸಮಾಧಿ 8.ನಿರೀಕ್ಷೆ
9.ರಾಯಸ 10.ಆಸಹಜ
13.ಜೇರಿಗೆ 14.ನಮೂನೆ

ಸುಡೊಕು 5957

	4			2		7		3
6		9	5		7		4	
	3			8		6		
	7			9			3	
	9	3	6					4
4				5		8		
7			8		9			
	5						8	
	8			4		9		1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5956 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ಅತ್ಯಾಚಾರ: ಆರೋಪಿಗಳ ಸಂಖ್ಯೆ 18ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಹಾವೇರಿ: ಹಾನಗಲ್ ತಾಲ್ಲೂಕಿನ ನಾಲ್ಕರ ಕ್ರಾಸ್ ಬಳಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಗುರುವಾರ ಮತ್ತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದು, ಈವರೆಗೆ ಬಂಧಿತರಾದ ಆರೋಪಿಗಳ ಸಂಖ್ಯೆ 18ಕ್ಕೆ ಏರಿಕೆಯಾಗಿದೆ.

ಅಕ್ಕಿಆಲೂರಿನ ಮೀನು ವ್ಯಾಪಾರಿಗಳಾದ ಇಸ್ಮಾಯಿಲ್ ಓಣಿಕೇರಿ (28), ಮೊಹಮ್ಮದ್ ಸಾದಿಕ್ ಕುಸನೂರು (25) ಮತ್ತು ಮೊಬೈಲ್ ರಿಪೇರಿ ಮಾಡುವ ಆಸೀಫ್‌ಖಾನ್ (26) ಬಂಧಿತರು.

'ಅಪಘಾತದಲ್ಲಿ ಕಾಲಿನ ಮೂಳೆ ಮುರಿದುಕೊಂಡು, ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಾಗಿದ್ದ ಅಕ್ಕಿಆಲೂರಿನ ಆರೋಪಿ ಮೊಹಮ್ಮದ್ ಸೈಫ್ ಸಾವಿಕೇರಿ (19) ಬುಧವಾರ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದ. ಆತನನ್ನೂ ಬಂಧಿಸಲಾಗಿದೆ' ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗೋಪಾಲ್ ಸಿ. ಅವರು ತಿಳಿಸಿದ್ದಾರೆ.

ಜಾಮೀನಿಗೆ ಅರ್ಜಿ: ಆರೋಪಿ ಆಟೊ ಚಾಲಕ ಅಬ್ದುಲ್‌ಖಾದರ್ ಹಂಚಿನಮನಿ ಜಾಮೀನು ಕೋರಿ ಹಾವೇರಿ ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾನೆ ಎನ್ನಲಾಗಿದೆ.

ನಿಧನ ವಾರ್ತೆ

ಸಿ.ಪಿ.ಹುಚ್ಚೇಗೌಡ

ಚಾಮರಾಜನಗರ: ನಗರದ ಗಾಂಧಿವಾದಿ, ಸಮಾಜ ಸೇವಕ ಸಿ.ಪಿ. ಹುಚ್ಚೇಗೌಡ (91) ಅವರು ಗುರುವಾರ ಬೆಳಿಗ್ಗೆ ನಿಧನರಾದರು.

ಗುತ್ತಿಗೆದಾರರಾಗಿದ್ದ ಅವರು ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತ್ಯಿಕ ಕಾರ್ಯಕ್ರಮಗಳಿಗೆ ಸದಾ ಬೆಂಬಲ–ನೆರವು ನೀಡುತ್ತಿದ್ದರು. ಬಿಳಿಗಿರಿರಂಗನಬೆಟ್ಟದಲ್ಲಿದ್ದ ಗಾಂಧಿಭವನದ ಆದಿವಾಸಿ ಕೇಂದ್ರದ ಸಲಹಾ ಸಮಿತಿ ಸದಸ್ಯರೂ ಆಗಿದ್ದರು. ಚಾಮರಾಜನಗರದಲ್ಲಿ ಸಂಜೆ ಅಂತ್ಯಕ್ರಿಯೆ ನೆರವೇರಿತು.

ಉಗ್ರರ ನಂಟು: ಭಟ್ಕಳ ಮಹಿಳೆ ವಶಕ್ಕೆ

ಪ್ರಜಾವಾಣಿ ವಾರ್ತೆ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ಮುಂಬೈನಲ್ಲಿ ಬಂಧನಕ್ಕೆ ಒಳಗಾದ ಉಗ್ರನೊಬ್ಬನ ಜೊತೆ ನಂಟು ಹೊಂದಿರುವ ಭಟ್ಕಳದ ಮಹಿಳೆಯ ಮನೆಯ ಮೇಲೆ ಬುಧವಾರ ರಾತ್ರಿ ದಾಳಿ ನಡೆಸಿದ ಮುಂಬೈ ಎಟಿಎಸ್ ತಂಡ ಮಹಿಳೆಯನ್ನು ವಶಕ್ಕೆ ಪಡೆದು ಗುರುವಾರ ಭಟ್ಕಳದಲ್ಲೇ ವಿಚಾರಣೆ ನಡೆಸಿದೆ.

ಉಗ್ರ ಸಂಘಟನೆ ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಮತ್ತು ಸಿರಿಯಾ ಜೊತೆ ನಂಟು ಹೊಂದಿರುವ ಮಹಾರಾಷ್ಟ್ರದ ನಾಸಿಕ್‌ನ ಒಬ್ಬ ಯುವಕನನ್ನು ಮುಂಬೈ ಎಟಿಎಸ್ ತಂಡ ಬಂಧಿಸಿತ್ತು. ಆತನ ಜೊತೆ ಸಂಪರ್ಕದಲ್ಲಿದ್ದ ಮುಂಬೈಯ ಒಬ್ಬ ಮಹಿಳೆಯನ್ನು ಬಂಧಿಸಿರುವ ಎಟಿಎಸ್ ತಂಡ ಅವರ ಸಂಪರ್ಕದಲ್ಲಿದ್ದ ಭಟ್ಕಳದ ಜಾಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಆಜಾದ ನಗರದ ಆಯಿಷಾ ಎಂಬುವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದೆ.

'ಆಯಿಷಾ ಪತಿ ಮೃತಪಟ್ಟಿದ್ದು, ತಂದೆ ತಾಯಿ ಮಕ್ಕಳ ಜೊತೆ ವಾಸವಿದ್ದಾರೆ. ಸ್ಥಳೀಯ ಮದರಸಾದಲ್ಲಿ ಶಿಕ್ಷಕಿ ಆಗಿರುವ ಅವರು ಹೆಣ್ಣುಮಕ್ಕಳಿಗೆ ಧರ್ಮಶಿಕ್ಷಣ ಬೋಧಿಸುತ್ತಾರೆ. ಬಂಧಿತ ಉಗ್ರನಿಗೆ ಹಣ ವರ್ಗಾವಣೆ ಮಾಡಿರುವ ಮತ್ತು ನೇರ ಸಂಪರ್ಕ ಇರುವ ಬಗ್ಗೆ ತನಿಖೆ ನಡೆದಿದೆ. ಅವರ ಮನೆ ಶೋಧಿಸಿರುವ ತಂಡ ಮೊಬೈಲ್ ಹಾಗೂ ಇತರ ವಸ್ತುಗಳನ್ನು ವಶಕ್ಕೆ ಪಡೆದಿದೆ' ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು – 560027

ಸಂಖ್ಯೆ: ಬೆಮಸಾ/ಕೇಕ/ಕಾಇ/ಕಾನಿಅ/1536–1539/2023–24 ದಿನಾಂಕ: 23.01.2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 28–31/2023–24

ಅರ್ಹ ಗುತ್ತಿಗೆದಾರರಿಂದ 1) "ಬೆಂಗಳೂರು ಕೆಂಗೇರಿಯಲ್ಲಿನ ಘಟಕದ–12ರಲ್ಲಿ ವಿದ್ಯುತ್ ವಾಹನಗಳ ಚಾರ್ಜಿಂಗ್ ಸ್ಟೇಷನ್‌ನಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಆವರಣಕ್ಕೆ ಕಾಂಕ್ರೀಟ್ ಅಳವಡಿಸುವುದು" ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. 393.00 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 5,90,000/-. 2) "ಬೆಂಗಳೂರು ಸಾದರಮಂಗಲದಲ್ಲಿನ ಘಟಕ–51ರ ಆವರಣಕ್ಕೆ ಪೇವ್ಮೆಂಟ್ ಕಾಂಕ್ರೀಟ್ ಅಳವಡಿಸುವುದು ಹಾಗೂ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸುವುದು" ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. 296.00 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 4,44,000/-. 3) "ಬೆಂಗಳೂರು ಭೈರತಿಯಲ್ಲಿನ ಘಟಕ–48ರ ಆವರಣಕ್ಕೆ ಪೇವ್ಮೆಂಟ್ ಕಾಂಕ್ರೀಟ್ ಅಳವಡಿಸುವುದು ಹಾಗೂ ಇತರೆ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸುವುದು" ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. 592.00 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 8,88,000/- ಮತ್ತು 4) "ಬೆಂಗಳೂರು ದೀಪಾಂಜಲಿನಗರದಲ್ಲಿರುವ ಬೆಂ.ಮ.ಸಾ.ಸಂಸ್ಥೆಯ ಘಟಕ–16 ರಲ್ಲಿ ವಿದ್ಯುತ್ ಬಸ್ ಚಾರ್ಜಿಂಗ್‌ಗಾಗಿ 3700 ಕೆ.ವಿ.ಎ. ಸಾಮರ್ಥ್ಯದ ಹೆಚ್.ಟಿ. ವಿದ್ಯುತ್ ಸಂಪರ್ಕ ಒದಗಿಸುವುದು" ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. 170.00 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 2,55,000/- ಕೆಲಸಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಭಾಗವಹಿಸುವ ಗುತ್ತಿಗೆದಾರರು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

(1) ಟೆಂಡರ್ ಸಲ್ಲಿಸಲು ಕಡೆ ದಿನಾಂಕ: 06.02.2024. (2) ಟೆಂಡರ್ ತೆರೆಯುವ ದಿನಾಂಕ: 08.02.2024

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಬೆ.ಮ.ಸಾ.ಸಂಸ್ಥೆ

ರಾಷ್ಟ್ರೀಯ ಆರೋಗ್ಯ ಅಭಿಯಾನ

ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ

ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು – 560023.
ದೂರವಾಣಿ ಸಂಖ್ಯೆ: 080–23113584 ಇ–ಮೇಲ್: pdrch-hfws@gmail.com

No: DD/EMS/MMU/Tender-1-14/3-16/2023-24 Date: 25-01-2024

ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

Tender No: NHM/2023-24/SE0012, NHM/2023-24/SE0013, NHM/2023-24/SE0014, NHM/2023-24/SE0015, NHM/2023-24/SE0016, NHM/2023-24/SE0017, NHM/2023-24/SE0018, NHM/2023-24/SE0019, NHM/2023-24/SE0020, NHM/2023-24/SE0021, NHM/2023-24/SE0022, NHM/2023-24/SE0023, NHM/2023-24/SE0024, NHM/2023-24/SE0025.

ಸಂಚಾರಿ ಆರೋಗ್ಯ ಘಟಕಗಳ ಸ್ಥಾಪನೆ ಹಾಗೂ ನಿರ್ವಹಣೆ ಮಾಡಲು ಅರ್ಹ ಸೇವಾದಾರರನ್ನು ಆಯ್ಕೆ ಮಾಡಲು ಟೆಂಡರ್ ಕರೆದಿರುವ ಬಗ್ಗೆ.

ಜಿಲ್ಲಾವಾರು 14 ಟೆಂಡರ್‌ಗಳ ಮೂಲಕ ಸಂಚಾರಿ ಆರೋಗ್ಯ ಘಟಕಗಳ ಸ್ಥಾಪನೆ ಹಾಗೂ ನಿರ್ವಹಣೆ ಮಾಡಲು ಅರ್ಹ ಸೇವಾದಾರರನ್ನು ಆಯ್ಕೆ ಮಾಡಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: **24–01–2024 ಹಾಗೂ 25–01–2024 ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಸದರಿ ಟೆಂಡರ್‌ನ್ನು ಸ್ವೀಕರಿಸುವ ಕೊನೆಯ ದಿನಾಂಕ: **21–02–2024 ಹಾಗೂ 22–02–2024 ರ ಅಪರಾಹ್ನ 5.30 ಗಂಟೆಗೆ ಅಥವಾ ಮುಂಚಿತವಾಗಿ.**

ಸಹಿ/–
ವಾಸಾಸಂಇ/ವಾ.ಪ್ರ/3264/ಅಡ್ವರ್ಟೋ/2023–24 ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ

ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ, ಬಂದರು ವಿಭಾಗ, ಬೈತಖೋಲ್, ಕಾರವಾರ ಉತ್ತರ ಕನ್ನಡ ಜಿಲ್ಲೆ–581302

ದೂ: 08382-229672 ಇ–ಮೇಲ್: eepdkwr4@gmail.com/eepdk@rediffmail.com

ನಂ:ಕಾನಿಇಂ/ಬಂವಿಕಾ/ಟೆಂಡರ್/2023–24/903 ದಿನಾಂಕ: 24–01–2024

ಟೆಂಡರು ಪ್ರಕಟಣೆ

(ಕೆ.ಪಿ.ಪಿ.ಪಿ ಪದ್ದತಿಯಲ್ಲಿ ಮಾತ್ರ) (ದ್ವಿ ಲಕೋಟೆ ಪದ್ದತಿ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಕೆ.ಪಿ.ಪಿ.ಪಿ ಪದ್ದತಿಯಲ್ಲಿ ಟೆಂಡರ್ ಕರೆಯಲಾಗಿದ್ದು **www.kppp.karnataka.gov.in** ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.

"ಜಿಎಸ್‌ಟಿಯನ್ನು ಅನುಮೋದಿತ ಟೆಂಡರ್ ಮೊತ್ತಕ್ಕೆ ಅನುಗುಣವಾಗಿ ಪ್ರತ್ಯೇಕವಾಗಿ ಪಾವತಿಸಲಾಗುವುದು"

ಕಾಮಗಾರಿಯ ಹೆಸರು ಮತ್ತು ಇಂಡೆಂಟ ನಂ: ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಮುರುಡೇಶ್ವರದಲ್ಲಿ ಯೋಜಿತ ಮೀನುಗಾರಿಕಾ ಹೊರ ಬಂದರು ನಿರ್ಮಾಣ ಕುರಿತು ಬ್ರೇಕ್‌ವಾಟರ್ ನಿರ್ಮಾಣ ಪೂರ್ವ ಮೆರೈನ್ ಜಿಯೋ ಟೆಕ್ನಿಕಲ್ ಇನ್‌ವೆಸ್ಟಿಗೇಷನ್ ಭೂಪರದ ಸಮೀಕ್ಷೆ ಕಾಮಗಾರಿ. **Indent No. IDD/2023-24/OW/WORK_INDENT39,** ಟೆಂಡರಿಗಿಟ್ಟ ಮೊತ್ತ ರೂ. **24,80,473.20,** ಟೆಂಡರ್ ಬಗ್ಗೆ ಸ್ಪಷ್ಟನೆಗಳಿಗಾಗಿ ಕೋರಿಕೆ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ: **05–02–2024 ಸಂಜೆ 16.00 ಘಂಟೆಯವರೆಗೆ,** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ: **07–02–2024 ಸಂಜೆ 16.00 ಘಂಟೆಯವರೆಗೆ**

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ವಿಭಾಗ, ಕಾರವಾರ (ಉ.ಕ)
DIPR/ADK/KSMCA/592/23-24 Dt.24.01.24

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

3ನೇ ಮಹಡಿ, PWD ಕಟ್ಟಡದ ಆವರಣ, ಆನಂದರಾವ್ ವೃತ್ತ, ಬೆಂಗಳೂರು–560009.
ದೂರವಾಣಿ: 080–22353833, ಇಮೇಲ್ ವಿಳಾಸ: adww.dwcd@gmail.com
ವೆಬ್‌ಸೈಟ್: www.dwcd.karnataka.gov.in

ಸಂ: ಮಮಅಇ/ಮಕವಿ/ಮಿಶ/SHEW/05/2023-24 ದಿನಾಂಕ : 24.01.2024

ಅಧಿಸೂಚನೆ

ಕೇಂದ್ರ ಪುರಸ್ಕೃತ 'ಮಿಷನ್ ಶಕ್ತಿ' ಯೋಜನೆಗಳ ಅನುಷ್ಠಾನಕ್ಕಾಗಿ 'ರಾಜ್ಯ ಮಹಿಳಾ ಸಬಲೀಕರಣ ಘಟಕ' (SHEW) ಪ್ರಾರಂಭಿಸಲು ಸಂಬಂಧಿಸಿದ ಹುದ್ದೆಗಳಿಗೆ ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

Sl.No	Name of the Post	No of Post
1	State Mission Coordinator	01
2	Gender Specialist	01
3	PMMVY-State Coordinator	01
4	Research & Training Specialist	01
5	Accounts Assistant	01
6	Office Assistant (with computer knowledge)	01

ಆಸಕ್ತಿಯುಳ್ಳ ಅಭ್ಯರ್ಥಿಗಳು ಹೆಚ್ಚಿನ ವಿವರ, ಷರತ್ತು ಮತ್ತು ನಿಬಂಧನೆಗಳ ಬಗ್ಗೆ ಹಾಗೂ ನಿಗದಿತ ನಮೂನೆಯ ಅರ್ಜಿಯನ್ನು ನಿರ್ದೇಶನಾಲಯದ ವೆಬ್‌ಸೈಟ್ : **https://dwcd.karnataka.gov.in** ರಲ್ಲಿ ಪಡೆಯಬಹುದಾಗಿದೆ. ಪ್ರತ್ಯೇಕ ಹುದ್ದೆಗೆ ಪ್ರತ್ಯೇಕ ಅರ್ಜಿ ಸಲ್ಲಿಸುವುದು. ಸಂಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಮುಚ್ಚಿದ ಲಕೋಟೆಯಲ್ಲಿ "ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 3ನೇ ಮಹಡಿ, PWD ಕಟ್ಟಡದ ಆವರಣ, ಆನಂದರಾವ್ ವೃತ್ತ, ಬೆಂಗಳೂರು–560009" ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಅನ್ವಯಿಸಿ 15 ದಿನಗಳೊಳಗೆ ಸಲ್ಲಿಸತಕ್ಕದ್ದು. ಅವಧಿ ಮೀರಿ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
DIPR/CP/3248/Zen/2023-24

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದಉದ್ಯಮ)
ಕಾರ್ಯಪಾಲಕ ಇಂಜನಿಯರ್‌ರವರ ಕಚೇರಿ, ನಂ.2 ಹಾರಂಗಿ ಬಲದಂಡೆ ನಾಲಾ ವಿಭಾಗ, ಹುಣಸೂರು, ಮೈಸೂರುಜಿಲ್ಲೆ– 571 105.
08222-252211 Fax: 252211 eeharangi@yahoo.co.in

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 03/2023–24, ದಿ: 25.01.2024

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಪದ್ಧತಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಸೂಚಿತ ದರ್ಜೆ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಪದ್ಧತಿ ಮುಖಾಂತರ ಶೇಕಡವಾರು ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ದಿ: 25.01.2024 ರಿಂದ ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ ದಿ: 05.02.2024 ಅಪರಾಹ್ನ 4.00 ಗಂಟೆಯ ವರೆಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ಡನ್ನು ದಿ: 06.02.2024ರ ಅಪರಾಹ್ನ 4.30 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ಡು ಅನುಮೋದನೆಯಾದ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ವೆಬ್‌ಸೈಟ್ ವಿಳಾಸ: https://kppp.karnataka.gov.in/kpppರಲ್ಲಿ ಪಡೆಯಬಹುದಾಗಿದೆ. ಕಾಮಗಾರಿ ವಿವರ SCHEME TO LIFT WATER FROM LAKSHMANATHIRTHA RIVER NEAR MARDUR VILLAGE TO FILL 49 DRY TANKS FOR DRINKING WATER PURPOSE IN HUNSUR & HD KOTE TALUK OF MYSORE DISTRICT (On Turn key basis) ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.7048.60 ಲಕ್ಷಗಳು ಇ.ಎಂ.ಡಿ ರೂ.70.50 ಲಕ್ಷಗಳು, ಈ ಕಾಮಗಾರಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ತಿಳಿಸಿರುವಂತೆ ಟೆಂಡರ್ ಪ್ರೊಸೆಸಿಂಗ್ ಶುಲ್ಕ ನಿಗದಿಯಾಗಿದ್ದು, ಕಾಮಗಾರಿ ಪೂರ್ಣಗೊಳಿಸಲು ಕಾಲಮಿತಿ 18 ತಿಂಗಳು (ಮಳೆಗಾಲ ಸೇರಿ). ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

DIPR/DDMYS/KSMCA/961/2023-24 ಸಹಿ/– ಕಾರ್ಯಪಾಲಕ ಇಂಜಿನಿಯರ್

ಕರ್ನಾಟಕ ಸರ್ಕಾರ

ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ವೈದ್ಯಕೀಯ ಶಿಕ್ಷಣ ಸ್ವಾಯುತ್ತ ಸಂಸ್ಥೆ, ಸಾಗರ ರಸ್ತೆ, ಶಿವಮೊಗ್ಗ–577 201
ಫೋನ್: 08182 229933/ 269701, ಫ್ಯಾಕ್ಸ್ : 08182 264100,
ವೆಬ್‌ಸೈಟ್: www.sims-shimoga.com

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

No:SIMS/Store/Tender/Notification/7/2023-24 ದಿನಾಂಕ: 23.01.2024

ಈ ಕೆಳಗಿನ HNS, Drugs, Chemical ಮತ್ತು Equipments ಹಾಗೂ ಇತರೆ ಸಾಮಾಗ್ರಿಗಳನ್ನು ಒದಗಿಸುವ ಬಗ್ಗೆ ದ್ವಿ–ಲಕೋಟೆ ಪದ್ದತಿಯಲ್ಲಿ ಆನ್ ಲೈನ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl NO	Tender No. & Date	Name of the Item	Publish, Duration, End, Date and time.
1	SIMS/PRCU/TNDR/45/1262891/2023-24, PSTR-SIMS-SMG Dated: 23.01.2024	Re-Tender for the supply of IV Contrast, X-ray film & other Items to Radiology Dept, SIMS Teaching Mcgann Hospital Shivamogga.	From: 29-01-2024 to 06-02-2024 at 5.00 PM.
2	SIMS/SCSP/TSP/Tender/Notification/2023-24 dated: 23.01.2024.	Re-Tender for the Purchase of Tabs to SIMS, Shimoga	From: 24-01-2024 to 31-01-2024 at 5.00 PM.
3	SIMS/Pest Control/UC/2023-24/1265894 Dated : 23.01.2024	Re-Tender for pest control services at Mc-gann Teaching Hospital SIMS, Shivamogga.	From: 29-01-2024 to 06-02-2024 at 5.00 PM.
4	SIMS/EST-2/42/Drugs/2023-24 Dated: 23.01.2024	Re-Tender for the supply of Drugs (Inj, Drops & Others) to SIMS Teaching Mcgann Hospital Shivamogga.	From: 06-02-2024 to 07-03-2024 at 5.00 PM.
5	SIMS/EST-2/10/Drugs/2023-24 Dated: 23.01.2024	Re-Tender for the supply of Drugs (Tab, Syrup & Others) to SIMS Teaching Mcgann Hospital Shivamogga.	From: 06-02-2024 to 07-03-2024 at 5.00 PM.

ಆನ್ ಲೈನ್ ನಲ್ಲಿ ಬಿಡ್ ದಾಖಲೆಗಳನ್ನು ವೆಬ್ ಸೈಟ್ http://kppp.karnataka.gov.in ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ತೆರೆಯುವ ದಿನಾಂಕವನ್ನು ಟೆಂಡರ್ ಪುಸ್ತಕದಲ್ಲಿ ತಿಳಿಸಲಾಗುವುದು. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು, ಯಾವುದೇ ಕಾರಣ ನೀಡದೆ ಟೆಂಡರ್ ನ್ನು ಸ್ವೀಕರಿಸುವ/ ತಿರಸ್ಕರಿಸುವ/ ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/– ನಿರ್ದೇಶಕರು/ಡೀನ್
ವಾ.ಸಾ.ಸಂ.ಇ./ಶಿ/ನಂ.124-01/ಝೇಂಕಾರ್/2023-24 ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಶಿವಮೊಗ್ಗ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, ರಾಜಾರಾಜೇಶ್ವರಿ ನಗರ ವಿಭಾಗ, ಬಿಬಿಎಂಪಿ ಕಚೇರಿ, ಚೌಡೇಶ್ವರಿ ಬಸ್ ನಿಲ್ದಾಣದ ಹತ್ತಿರ, ಮತ್ತಿಕೆರೆ, ಬೆಂಗಳೂರು–560 054.

ಸಂಖ್ಯೆ:ಕಾಅ/ರಾರಾನವಿ/ಟೆಂಡರ್/10/2023–24 ದಿನಾಂಕ: 25–01–2024

ಅಲ್ಪಾವಧಿ ಟೆಂಡರ್‌ಗೆ ಆಹ್ವಾನ (ಐಎಫ್‌ಟಿ)
ದ್ವಿ ಲಕೋಟೆ ಪದ್ಧತಿ ಕೆಡಬ್ಲ್ಯೂ–4 ಮತ್ತು 5 (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿ ನಗರ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಕೆಳತಿಳಿಸಿದ ಕಾಮಗಾರಿಗಳನ್ನು ನಿರ್ವಹಿಸಲು ಬಿ.ಬಿ.ಎಂ.ಪಿ / ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ/ ಎಂಇಎಸ್ / ರೈಲ್ವೇಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು/ ವರ್ಗ
1)	2023–24ರ ಪ್ಯಾಕೇಜ್ ನಂ.1–ಆರ್‌ಆರ್ ಎನ್‌ಡಿ–(ಎ) ವಾರ್ಡ್ ನಂ.16 ಜಾಲಹಳ್ಳಿ 37 ಯಶವಂತಪುರ, 17 ಜೆಪಿ ಪಾರ್ಕ, 38 ಎಚ್‌ಎಂಟಿ, 42 ಲಕ್ಷ್ಮೀದೇವಿನಗರ, 69 ಲಗ್ಗೆರೆ, 73 ಕೊಟ್ಟಿಗೆಪಾಳ್ಯಯ ಮತ್ತು ಸುತ್ತಲಿನ ಪ್ರದೇಶಗಳ ಆಯ್ದ ರಸ್ತೆಗಳು ಮತ್ತು ಒಳಚರಂಡಿಗಳ ನಿರ್ಮಾಣ, ಸುಧಾರಣೆ ಅಭಿವೃದ್ಧಿ (12 ಕಾಮಗಾರಿಗಳು) (ಬಿ) ವಾರ್ಡ್ ನಂ.73, ಕೊಟ್ಟಿಗೆಪಾಳ್ಯದಲ್ಲಿ ಹೊಸ ಸಿಸಿ ರಸ್ತೆಯ ನಿರ್ಮಾಣ (1 ಕಾಮಗಾರಿ) ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮತ್ತು (ಸಿ) ವಾರ್ಡ್ ನಂ. 73 ಕೊಟ್ಟಿಗೆಪಾಳ್ಯದಲ್ಲಿ ಪಾತ್‌ವೇ ಒದಗಿಸುವುದು ಮತ್ತು ಸುತ್ತಮುತ್ತಲಿನ ಪ್ರದೇಶಗಳು (1 ಕಾಮಗಾರಿ) ಆರ್.ಆರ್.ನಗರ ವಿಭಾಗದಲ್ಲಿ ಒಟ್ಟು (14 ಕಾಮಗಾರಿಗಳು) (ಇತರೆ). ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.1970.00. ಇಎಂಡಿ ಮೊತ್ತ: ರೂ.1700000.
2)	2023–24ರ ಪ್ಯಾಕೇಜ್ ಸಂಖ್ಯೆ.2 –ಆರ್.ಆರ್.ನಗರ ವಾರ್ಡ್ ನಂ.129ರ ಜ್ಞಾನಭಾರತಿ ಮತ್ತು 160 ಆರ್.ಆರ್.ನಗರದಲ್ಲಿ ಆಯ್ದ ರಸ್ತೆಗಳು ಮತ್ತು ಆಯ್ದ ಒಳಚರಂಡಿಗಳ ಸುಧಾರಣೆ ಮತ್ತು ಅಭಿವೃದ್ಧಿಗಳು (6 ಕಾಮಗಾರಿಗಳು) ಮತ್ತು ಸುತ್ತಮುತ್ತಲಿನ ಪ್ರದೇಶಗಳು ಆರ್.ಆರ್.ನಗರ ವಿಭಾಗದಲ್ಲಿ ಒಟ್ಟು (6 ಕಾಮಗಾರಿಗಳು). (ಇತರೆ). ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.1930.00. ಇಎಂಡಿ ಮೊತ್ತ: ರೂ.1700000.
3)	2023–24ರ ಆರ್.ಆರ್.ನಗರ ವಿಭಾಗದಲ್ಲಿ ಪ್ಯಾಕೇಜ್ ಸಂಖ್ಯೆ.3–ವಾರ್ಡ್ ನಂ.17ರ ಜೆ.ಪಿ.ಪಾರ್ಕ್‌ನ ಅಕ್ಕಿಯಪ್ಪ ಗಾರ್ಡನ್‌ನಲ್ಲಿ ಆರ್‌ಓ ಘಟಕ, ಅಂಗನವಾಡಿ ಕೇಂದ್ರ ಮತ್ತು ಸಮುದಾಯ ಭವನದ ನಿರ್ಮಾಣ (1 ಕಾಮಗಾರಿ), (ಬಿ) ವಾರ್ಡ್ ನಂ.69 ಲಗ್ಗೆರೆಯ ಅಂಬೇಡ್ಕರ್ ಕಾಲೋನಿ ಬಳಿಯ ಸಮುದಾಯ ಭವನದ ನವೀಕರಣ (1 ಕಾಮಗಾರಿ), (ಸಿ) ಮಲ್ಲತ್ತಹಳ್ಳಿಯ GMPS ಶಾಲೆಯ ನವೀಕರಣ ಮತ್ತು ನಿರ್ಮಾಣ (1 ಕಾಮಗಾರಿ) ಮತ್ತು , ಹಳೇ ಮಲ್ಲತ್ತಹಳ್ಳಿಯ ಅಂಗನವಾಡಿ ಕೇಂದ್ರದ ಸುಧಾರಣೆ ಮತ್ತು ಅಭಿವೃದ್ಧಿ ಕಾಮಗಾರಿ 2023–24ನೇ ಸಾಲಿನಲ್ಲಿ ಆರ್.ಆರ್.ನಗರ ವಿಭಾಗದಲ್ಲಿ –ಒಟ್ಟು (4 ಕಾಮಗಾರಿಗಳು). (ಇತರೆ). ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.750.00. ಇಎಂಡಿ ಮೊತ್ತ: ರೂ.9600000.

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 29–01–2024 ರಿಂದ ಡೌನ್‌ಲೋಡ್ ಮಾಡಿಕೊಳ್ಳ ಬಹುದು. **2.** ಪೂರ್ವ ಬಿಡ್ ಸಭೆಯನ್ನು ದಿನಾಂಕ 08.02.2024 ರಂದು ಸಂಜೆ 3:30 ಗಂಟೆಗೆ ಮುಖ್ಯ ಅಭಿಯಂತರರು, ಆರ್.ಆರ್. ನಗರ ವಲಯ, 18ನೇ ಕ್ರಾಸ್, ಐಡಿಯಲ್ ಹೋಮ್ಸ್, ಆರ್.ಆರ್. ನಗರ, ಬೆಂಗಳೂರು ಕಛೇರಿಯಲ್ಲಿ ತೆರೆಯಲಾಗುವುದು. 3. ಯಾವುದೇ ವಿಚಾರಣೆಗಳನ್ನು ಬರಹದಲ್ಲಿ ಬೆಳಗ್ಗೆ 10.00 ಗಂಟೆಯೊಳಗೆ ಕಾರ್ಯಪಾಲಕ ಅಭಿಯಂತರರು, (ರಾಜಾರಾಜೇಶ್ವರಿ ನಗರ ವಲಯ)ರವರ ಕಚೇರಿಗೆ ತಲುಪಿಸತಕ್ಕದ್ದು, ಬೃಬೆಂಮಪಾ. 4. ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವ **ಕೊನೆಯ ದಿನಾಂಕ: 12–02–2024 ರಂದು ಸಂಜೆ 6:00 ಗಂಟೆಗೆ ಅಥವಾ ಮುಂಚಿತವಾಗಿ. 4.** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 14–02–2024 ರ ಬೆಳಗ್ಗೆ 11:00 ಗಂಟೆಯ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ **https://kppp.karnataka.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/-, ಕಾರ್ಯಪಾಲಕ ಅಭಿಯಂತರರು, ರಾಜಾರಾಜೇಶ್ವರಿ ನಗರ ವಿಭಾಗ, ಬೃಬೆಂಮಪಾ.

ಸಾರ್ವಜನಿಕ ಸೂಚನೆ

ಕೋಲಾರ ಜಿಲ್ಲೆ ಮಾಲೂರು ತಾಲೂಕು, ಕಸಬಾ ಹೋಬಳಿ, ತೊರ್ನಹಳ್ಳಿ ಅಗ್ರಹಾರ ಗ್ರಾಮದ ಸರ್ವೆ ನಂ 76 ರಲ್ಲಿ (ಮೂಲತಃ ಸರ್ವೆ ನಂ 21 ರಿಂದ ಭಾಗವಾಗಿದ್ದು) 9 ಗುಂಟೆ ಖರಾಬು ಜಮೀನು ಸೇರಿ 9 ಎಕರೆ 9 ಗುಂಟೆ ಅಳತೆಯ ಜಮೀನಿನ ("ಶೆಡ್ಯೂಲ್ ಆಸ್ತಿ") ಹಕ್ಕು ಈ ಮೂಲಕ ಸೂಚನೆ ನೀಡಲಾಗಿದೆ ಮಾಲೀಕತ್ವವನ್ನು ಪ್ರತಿಪಾದಿಸುವ ಮತ್ತು ಪ್ರಸ್ತುತ ಅನುಸೂಚಿತ ಆಸ್ತಿಯನ್ನು ಹೊಂದಿರುವ ದಿವಂಗತ ಶ್ರೀ ಕೆ ನಾರಾಯಣಸ್ವಾಮಿ ಅವರ ಪುತ್ರರಾದ ಶ್ರೀಎಚ್ ಎನ್ ಚಲಪತಿ ಮತ್ತು ಶ್ರೀ ಹೆಚ್ ಎನ್ ಮಧು ಅವರ ಪರವಾಗಿ ಕಾನೂನು ಸಲಹೆಗಾರರಾಗಿ ಈ ಪರಿಶೀಲನೆ ನಡೆಸುತ್ತಿದ್ದಾರೆ. ಈ ಹಕ್ಕು KGF ನ ಸಿವಿಲ್ ನ್ಯಾಯಾಲಯದಲ್ಲಿ RA ನಂ. 206/2033(ಹಿಂದಿನ ನಂ. 105/2013) ಮತ್ತು ಕೋಲಾರದ ಉಪ ವಿಭಾಗಾಧಿಕಾರಿಯ ನ್ಯಾಯಾಲಯದಲ್ಲಿ RA ನಂ. 3/2023 ರಲ್ಲಿ ಬಾಕಿ ಉಳಿದಿರುವ ಕಾನೂನು ಪ್ರಕ್ರಿಯೆಗಳಿಗೆ ಒಳಪಟ್ಟಿರುತ್ತದೆ ("ಕಾನೂನು ಪ್ರಕ್ರಿಯೆಗಳು")

ಈ ಸೂಚನೆಯ ಉದ್ದೇಶವು ಮೇಲೆ ತಿಳಿಸಲಾದ ಕಾನೂನು ಪ್ರಕ್ರಿಯೆಗಳ ಹೊರತಾಗಿ, ಶೆಡ್ಯೂಲ್ ಆಸ್ತಿಯ ಮಾಲೀಕತ್ವ ಸಂಬಂಧಿಸಿದ ಯಾವುದೇ ಕ್ಲೈಮ್‌ಗಳನ್ನು ಖಚಿತಪಡಿಸಿಕೊಳ್ಳಲು ಮತ್ತು ಪರಿಶೀಲಿಸುವಲ್ಲಿ ಸರಿಯಾದ ಪರಿಶ್ರಮವನ್ನು ನಡೆಸುವುದು ಮಾತ್ರ. ಈ ಸೂಚನೆಯನ್ನು ಕೇವಲ ಶೆಡ್ಯೂಲ್ ಆಸ್ತಿಯ ಮಾಲೀಕತ್ವದ ಪರಿಶೀಲನೆಯ ಕಾರ್ಯವಿಧಾನದ ಹಂತವಾಗಿ ಅರ್ಥೈಸಲಾಗುತ್ತದೆ ಮತ್ತು ನಡೆಯುತ್ತಿರುವ ಕಾನೂನು ಪ್ರಕ್ರಿಯೆಗಳ ಬೆಳಕಿನಲ್ಲಿ ಸಾರ್ವಜನಿಕ ಕ್ರಮ ಅಥವಾ ಹಕ್ಕುಗಳ ಸಲ್ಲಿಕೆಗೆ ಆಹ್ವಾನ ಅಥವಾ ಅವಕಾಶವಾಗಿ ಗ್ರಹಿಸಬಾರದು. ಈ ಸೂಚನೆಯ ವಿತರಣೆಯು ಕಾರ್ಯವಿಧಾನದ ಅವಶ್ಯಕತೆಯಾಗಿದೆ, ಶೀರ್ಷಿಕೆ ಪರಿಶೀಲನೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಅನುಸರಣೆಯನ್ನು ಖಾತ್ರಿಪಡಿಸುತ್ತದೆ ಮತ್ತು ಇದು ಶೆಡ್ಯೂಲ್ ಆಸ್ತಿಯ ಪ್ರಸ್ತುತ ಸ್ಥಿತಿಯನ್ನು ಸವಾಲು ಮಾಡಲು ಅಥವಾ ವಿವಾದಿಸಲು ಯಾವುದೇ ಹಕ್ಕುಗಳನ್ನು ವಿಸ್ತರಿಸುವುದಿಲ್ಲ, ಏಕೆಂದರೆ ಅದು ಕಾನೂನು ಪ್ರಕ್ರಿಯೆಗಳಲ್ಲಿ ನ್ಯಾಯಾಲಯದಿಂದ ನಿರ್ಣಯಿಸಲ್ಪಡುತ್ತಿದೆ.

ಯಾವುದೇ ವ್ಯಕ್ತಿಯು ಶೆಡ್ಯೂಲ್ ಆಸ್ತಿಯಲ್ಲಿ ಅಥವಾ ಅದರ ಯಾವುದೇ ಭಾಗದ ಬಗ್ಗೆ ಯಾವುದೇ ಕ್ಲೈಮ್ ಮಾಲೀಕತ್ವದ ಹಕ್ಕು, ಅಥವಾ ಆಸಕ್ತಿ ಹೊಂದಿದ್ದರೆ, ಅದು ಆಡಳಿತ ಹಕ್ಕು, ಪ್ರಯೋಜನಕಾರಿ ಹಿತ, ಅಥವಾ ಪೂರ್ವಾಧಿಕಾರಿ ಹಕ್ಕುಗಳಂತಹ ಹಕ್ಕುಗಳು ಅಥವಾ ಯಾವುದೇ ಒಪ್ಪಂದ ಕಾನೂನು ಪ್ರಕರಣ, ಅಥವಾ ನ್ಯಾಯಾಲಯ ಅಥವಾ ಅಧಿಕಾರಿಯ ನಿರ್ಧಾರದ ಮೂಲಕ, ಅಧಿಕಾರ ಪತ್ರ, ಉತ್ತರಾಧಿಕಾರ, ನೆಲದ ಬಳಕೆ ಸೂಚ್ಯಂಕ (ಎಫ್‌ಎಸ್‌ಐ), ಅಭಿವೃದ್ಧಿ ಹಕ್ಕುಗಳು, ಪಾಲುದಾರಿಕೆ, ಕುಟುಂಬ ಒಪ್ಪಂದ ಅಥವಾ ಇತರೆ ಯಾವುದೇ ನಿಲುವು ಅಥವಾ ಇತರೇ ಹೊರೆಗಳು ಕಾನೂನು ಮೂಲಕ ಹೊಂದಿದ್ದರೆ ("ದಾವೆ"), ಅವರನ್ನು ಈ ಸೂಚನೆ ಪ್ರಕಟವಾದ ದಿನಾಂಕದಿಂದ 10 ದಿನಗಳೊಳಗೆ ತಮ್ಮ ದಾಖಲೆಗಳೊಂದಿಗೆ ಕೆಳಗೆ ಸಹಿ ಮಾಡಿದ ವ್ಯಕ್ತಿಗೆ ಸಲ್ಲಿಸಲು ಕೋರಲಾಗಿದೆ. ಈ ಸಮಯಾವಧಿಯೊಳಗೆ ಯಾವುದೇ ಪ್ರತಿಕ್ರಿಯೆ ಬಾರದಿದ್ದರೆ, ಯಾವುದೇ ಹಕ್ಕು ಅಥವಾ ದಾವೆ ಇಲ್ಲ ಎಂದು ಭಾವಿಸಲಾಗುವುದು ಅಥವಾ ಅದು ಇದ್ದಿದ್ದರೆ, ದಾವೆದಾರರು ಅಂತಹ ಹಕ್ಕನ್ನು ಅಥವಾ ದಾವೆಯನ್ನು ತ್ಯಜಿಸಿದ್ದಾರೆ ಮತ್ತು ಅದನ್ನು ಪ್ರಯೋಗಿಸಲು ತಮ್ಮ ಹಕ್ಕನ್ನು ತ್ಯಜಿಸಿದ್ದಾರೆ ಎಂದು ಭಾವಿಸಲಾಗುವುದು.

ಶೆಡ್ಯೂಲ್ ಆಸ್ತಿ

ಕೋಲಾರ ಜಿಲ್ಲೆ ಮಾಲೂರು ತಾಲೂಕು, ಕಸಬಾ ಹೋಬಳಿ, ತೊರ್ನಹಳ್ಳಿ ಅಗ್ರಹಾರ ಗ್ರಾಮದ ಸರ್ವೆ ನಂ. 76ರಲ್ಲಿ (ಮೂಲತಃ ಸರ್ವೆ ನಂ. 21 ರಿಂದ ಭಾಗವಾಗಿದ್ದು) 9 ಗುಂಟೆ ಖರಾಬು ಜಮೀನು ಸೇರಿ 9 ಎಕರೆ 9 ಗುಂಟೆ ಜಮೀನಿಗೆ ಚಕ್ಕುಬಂದಿ:–

ಪೂರ್ವಕ್ಕೆ : ಸರ್ವೆ ನಂಬರ್‌ಗಳು 16, 17/1, 17/2 ಮತ್ತು 18/1ರಲ್ಲಿ ಭೂಮಿ.
ಪಶ್ಚಿಮಕ್ಕೆ : ಸರ್ವೆ ನಂಬರ್‌ಗಳು 72, 71, 70, 21, 69 ಮತ್ತು 68ರಲ್ಲಿ ಭೂಮಿ.
ಉತ್ತರಕ್ಕೆ : ಸರ್ವೆ ನಂಬರ್ 22ರಲ್ಲಿನ ಭೂಮಿ; ಮತ್ತು
ದಕ್ಷಿಣಕ್ಕೆ : ಸರ್ವೆ ನಂಬರ್ 19ರಲ್ಲಿನ ಭೂಮಿ.

ದಿನಾಂಕ : 26–01–2024
ಸ್ಥಳ : ಬೆಂಗಳೂರು

ಪವಿತ್ರಾ ಬಿ ಟಿ
ಕೌನ್ಸಿಲ್
ಖೇತಾನ್ ಅಂಡ್ ಕೋ ಎಲ್‌ಎಲ್‌ಪಿ.
ಎಂಬೆಸ್ಸಿ ಕ್ವೆಸ್ಟ್, 3ನೇ ಮಹಡಿ, 45/1, ಮ್ಯಾಗ್ರಾಥ್ ರೋಡ್, ಬೆಂಗಳೂರು – 560 025
ಫೋನ್: +91 80 4339 7000

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸಹಾಯಕ ನಿರ್ದೇಶಕರ ಕಛೇರಿ, ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಜಿಲ್ಲಾ ಪಂಚಾಯತ್ ಮೈಸೂರು.
ದೂರವಾಣಿ ಸಂ:0821–2564179 e mail:adyssmysore@gmail.com

ಸಂ:DYES/2023-24/SEOO55 ದಿನಾಂಕ: 20.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಷಯ:–2023–24/24–25 ನೇ ಸಾಲಿಗೆ ಕ್ರೀಡಾವಸತಿ ಶಾಲೆ/ನಿಲಯ, ಚಾಮುಂಡಿ ವಿಹಾರ್ ಕ್ರೀಡಾಂಗಣ ಮೈಸೂರು ಇಲ್ಲಿನ ಕ್ರೀಡಾಪಟುಗಳಿಗೆ ಊಟೋಪಹಾರ ಪೂರೈಕೆಗೆ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವ–ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಒಂದು ವರ್ಷದ ಅವಧಿಗೆ ಸಹಾಯಕ ನಿರ್ದೇಶಕರ ಕಛೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಾಮುಂಡಿ ವಿಹಾರ ಕ್ರೀಡಾಂಗಣ, ಮೈಸೂರು ಕ್ರೀಡಾ ವಸತಿ ಶಾಲೆ/ನಿಲಯದ ಕ್ರೀಡಾಪಟುಗಳಿಗೆ ಊಟೋಪಹಾರ ಪೂರೈಕೆಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮಗಳು 2000 ಅನ್ವಯ ಅರ್ಹ ಪೂರೈಕೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಇ–ಟೆಂಡರ್ ಅಹ್ವಾನಿಸಲಾಗಿದೆ.

ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ಲಗತ್ತುಗಳೊಂದಿಗೆ **30.01.2024 ರ ಸಂಜೆ:5:00 ಗಂಟೆಯೊಳಗೆ** ಇ–ಪೋರ್ಟಲ್ ಮೂಲಕ ಸಲ್ಲಿಸುವುದು. **ದಿನಾಂಕ:01.02.2024ರ ಬೆಳಿಗ್ಗೆ: 11.00 ಗಂಟೆಗೆ** ಸಲ್ಲಿಸಲಾದ ಟೆಂಡರ್‌ಗಳನ್ನು ಹಾಜರಿದ್ದ ಟೆಂಡರ್‌ದಾರರ ಸಮ್ಮುಖದಲ್ಲಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಾಮುಂಡಿ ವಿಹಾರ ಕ್ರೀಡಾಂಗಣ, ಮೈಸೂರು ಇಲ್ಲಿ ತೆರೆಯಲಾಗುವುದು. (ಸ್ಥಳ ಮತ್ತು ದಿನಾಂಕ ಬದಲಾವಣೆಗೊಳಪಟ್ಟಿರುತ್ತದೆ). ಟೆಂಡರ್ ಫಾರಂಗಳನ್ನು ಮತ್ತು ಇತರ ವಿವರಗಳನ್ನು **https:/kppp.karnataka.gov.in** ಇ–ಪೋರ್ಟಲ್‌ನಲ್ಲಿ **ದಿನಾಂಕ 20.01.2024** ರಂದು ಪಡೆಯಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡ ಇಲಾಖೆ, ಚಾಮುಂಡಿ ವಿಹಾರ ಕ್ರೀಡಾಂಗಣ ಮೈಸೂರು ಇಲ್ಲಿನ **ದೂರವಾಣಿ ಸಂಖ್ಯೆ 0821–2564179** ರ ಮೂಲಕ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಸಹಾಯಕ ನಿರ್ದೇಶಕರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು
DIPR/MYS/KAVITA/936/2023-24

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು–560083.
ದೂರವಾಣಿ: 080 29755405. ಇ ಮೇಲ್ ಐಡಿ: dcfbannerghatta@gmail.com

ಸಂಖ್ಯೆ : ಎ3/ಬರಾಉ/ಸಿಆರ್–54/2023–24 ದಿನಾಂಕ: 22.01.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2023–24ನೇ ಸಾಲಿನಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಕೋಡಿಹಳ್ಳಿ ಮತ್ತು ಹಾರೋಹಳ್ಳಿ ವನ್ಯಜೀವಿ ವಲಯದಲ್ಲಿ ರೈಲ್ವೆ ಹಳಿ ಮೂಲಕ ಆನೆ ತಡೆ ಬೇಲಿ ನಿರ್ಮಿಸುತ್ತಿದ್ದು, ರೈಲ್ವೆ ಹಳಿಗಳನ್ನು ಖರೀದಿಸಿ, ಸಾಗಣೆ ಮಾಡಲು ಹಾಗೂ ರೈಲ್ವೆ ಹಳಿ ಬೇಲಿ ನಿರ್ಮಿಸಲು ಅರ್ಹ ಪಿ.ಡಬ್ಲ್ಯೂ.ಡಿ ಗುತ್ತಿಗೆದಾರರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

Works Component Tender

Sl. No.	Nature of the work	Estimate value of work (in Rupees) (including GST %)	Earnest Money Deposit (Rs.)	Revenue Solvency /Bank Guarantee (in lakhs)
1	Construction of Elephant Proof Barricading using used Rails along the boundary of Kodihalli wildlife range during 2023-24 from Kadushivanahalli tar road to chamalekunte-1220 Mtrs	1,99,90,000.00	2,99,850.00	50.00
2	Construction of Elephant Proof Barricading using used Rails along the boundary of harohalli wildlife range during 2023-24 from Bilikal APC camp to Karikallu Vaddu-900 Mtrs	1,53,00,000.00	2,29,500.00	50.00
3	Construction of Elephant Proof Barricading using used Rails along the boundary of Kodihalli wildlife range during 2023-24 from Thattekere tentacle gate to Mavinamaradhaggu -1170 Mtrs	1,99,90,000.00	2,99,850.00	50.00
4	Construction of Elephant Proof Barricading using used Rails along the boundary of Kodihalli wildlife range during 2023-24 from Chikkondanahalli gate to Kenechegowda mane-1100 Mtrs	1,88,00,000.00	2,82,000.00	50.00
5	Construction of Elephant Proof Barricading using used Rails along the boundary of Kodihalli wildlife range during 2023-24 from Digambaraswamihalla to Neralahatti gate-100 Mtrs	1,72,00,000.00	2,58,000.00	50.00
6	Construction of Elephant Proof Barricading using used Rails along the boundary of Kodihalli wildlife range during 2023-24 from Jouguhalla to Mettukalluhaadi-1130 Mtrs	1,99,90,000.00	2,99,850.00	50.00
7	Construction of Elephant Proof Barricading using used Rails along the boundary of Kodihalli wildlife range during 2023-24 from Gudigowdanakerehalla to Kadushivanahalli tar road -1220 Mtrs	1,99,90,000.00	2,99,850.00	50.00
8	Construction of Elephant Proof Barricading using used Rails along the boundary of Harohalli wildlife range during 2023-24 from Karikallu Vaddu to Ranganathapura Solar gate-1100 Mtrs	1,82,00,000.00	2,73,000.00	50.00
9	Construction of Elephant Proof Barricading using used Rails along the boundary of Kodihalli wildlife range during 2023-24 from KML quarry to Jogu halla-1100 Mtrs	1,99,90,000.00	2,99,850.00	50.00
10	Construction of Elephant Proof Barricading using used Rails along the boundary of Kodihalli wildlife range during 2023-24 from Kolagondanahalli APC to KML quarry-1170 Mtrs	1,99,90,000.00	2,99,850.00	50.00
11	Construction of Elephant Proof Barricading using used Rails along the boundary of Kodihalli wildlife range during 2023-24 from Mavinamaradhaggu to Mookaalimaramma temple road-1220 Mtrs	1,99,90,000.00	2,99,850.00	50.00
12	Construction of Elephant Proof Barricading using used Rails along the boundary of Kodihalli wildlife range during 2023-24 from Kadushivanhalli APC to gudigowdana kere-1220 Mtrs	1,99,90,000.00	2,99,850.00	50.00
13	Construction of Elephant Proof Barricading using used Rails along the boundary of Kodihalli wildlife range during 2023-24 from Thangadi platation to Tenginamaradabande-850 Mtrs	1,47,11,000.00	2,20,665.00	50.00

Cost of Documents (Rs.) : As per E-procurement
Period of Completion (in Months): As per Norms

ಷರತ್ತುಗಳು: ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.02.2024 ರಂದು ಬೆಳಿಗ್ಗೆ 11.00 ಗಂಟೆ. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ವಾಸಾಸಂಇ/ವಾಪ್ರ/3240/ಆಕಾರ್/2023–24 ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬನ್ನೇರುಘಟ್ಟ

ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ

ಮಳಿಗೆಗಳು 9AM - 11PM ವರೆಗು ತೆರೆದಿರುತ್ತದೆ

ಫೈನಾನ್ಸ್ BONANZA UPTO ₹11,500 ಕ್ಯಾಶ್ ಬ್ಯಾಕ್*

ಕ್ಯಾಶ್ ಬ್ಯಾಕ್ BONANZA UPTO 20% ಕ್ಯಾಶ್ ಬ್ಯಾಕ್*

AXIS BANK | citi | HDFC BANK | HSBC | ICICI Bank | IndusInd Bank | kotak | RBL BANK | Union Bank | YES BANK | Standard Chartered | Bank of Baroda | FEDERAL BANK | SBI card

ಅತಿ ದೊಡ್ಡ ಗಣರಾಜ್ಯೋತ್ಸವ ಸೇಲ್
UPTO 70% OFF
3 ದಿನಗಳು ಮಾತ್ರ (26–28 ಜನವರಿ)

ಉಚಿತ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್ ಮೌಲ್ಯ ₹20,000

ಎಕ್ಸ್‌ಚೇಂಜ್ BONANZA UPTO ₹25,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಮತ್ತು ಗೃಹೋಪಯೋಗಿ ವಸ್ತುಗಳ ಎಕ್ಸ್‌ಚೇಂಜ್ ಮೇಲೆ*

FINANCE POWERED BY Groww — 0% EMI | 2,000 ಕ್ಯಾಶ್ ಬ್ಯಾಕ್ | MIN PRODUCT VALUE ₹10,000

MobiKwik 5% ಕ್ಯಾಶ್ ಬ್ಯಾಕ್* on UPI — MINIMUM TRANSACTION ₹5000, MAXIMUM CASHBACK UPTO ₹1000

ಕೇವಲ ಪಾವತಿಸಿ ₹1 ಮನೆಗೆ ತೆಗೆದುಕೊಂಡು ಹೋಗಿ*

ಫೈನಾನ್ಸ್ ಬೊನಾಂಜಾ 1 ಇ.ಎಮ್.ಐ ಉಚಿತ*

ಇನ್ಸ್ಟಂಟ್ ಅಪ್ರೂವಲ್ UPTO ₹4,00,000*

ಎಲ್ಲಾ LG ಉತ್ಪನ್ನಗಳ ಮೇಲೆ ಭರವಸೆಯ ಉಡುಗೊರೆಗಳು: BT SPEAKER | INDUCTION COOKER | STEAM IRON | KETTLE | DRY IRON

24 HOURS EXPRESS DELIVERY*

SAMSUNG 70 4K ULTRA SMART ಎಲ್ ಇ ಡಿ 70TU7200 — ಗಣರಾಜ್ಯೋತ್ಸವ ದಿನ ವಿಶೇಷ ಕೊಡುಗೆ 55% ಕಡಿತ — SPECIAL PRICE: ₹99,000 MRP: ₹2,19,900

SONY 65 4K ULTRA HD SMART OLED GOOGLE TV XR-65A80K — 48% ಕಡಿತ — SPECIAL PRICE: ₹1,81,990 MRP: ₹3,49,900

LG 55 4K SMART Oಎಲಇಡಿ OLED55G1PTZ — 56% ಕಡಿತ — SPECIAL PRICE: ₹1,19,900 MRP: ₹2,69,990

NY NEVER BEFORE PRICES — 43 4K SMART LED ₹18,990 MRP ₹39,990 ಇ.ಎಮ್.ಐ ₹1,583 (52% ಕಡಿತ) | 55 4K SMART LED ₹29,990 MRP ₹65,990 ಇ.ಎಮ್.ಐ ₹2,499 (54% ಕಡಿತ) | 65 4K SMART LED ₹49,990 MRP ₹99,900 ಇ.ಎಮ್.ಐ ₹4,166 (50% ಕಡಿತ)

Haier 43 4K SMART ಎಲ್ ಇ ಡಿ — 41% ಕಡಿತ — SPECIAL PRICE: ₹31,000 MRP: ₹52,490

OPPO RENO 10 – 8/256 GB — OFFER PRICE ₹32,999* — ಇ.ಎಮ್.ಐ ₹2,750 — UPTO 10% CASH BACK* — ಉಚಿತ: ₹3,999 ಮೌಲ್ಯದ SMART WATCH+ 70% OFF ON DAMAGE PROTECTION

Redmi 13C 8/256 — OFFER PRICE ₹14,499* — ಇ.ಎಮ್.ಐ ₹1,208 — 70% DISCOUNT ON DAMAGE PROTECTION

SAMSUNG Galaxy S24 Ultra — S24 SERISES — PRE BOOKING OPEN — HDFC Cash Back ₹5,000* — Effective Price: ₹1,19,999* (512GB) — EMI: ₹13,333 — For Pre Booking customers only - Get 1 year Accidental & Liquid Damage Protection @ Just ₹199

vivo Y56 (5G*) — ₹14,990* ONWARDS — ಇ.ಎಮ್.ಐ ₹1,249 — ಉಚಿತ: ₹1,599 ಮೌಲ್ಯದ POWER BANK+ 70% OFF ON DAMAGE PROTECTION

iPhone 15\15 PRO\ PRO MAX — STARTS FROM ₹72,990* — ಇ.ಎಮ್.ಐ ₹3,042 — 70% OFF ON DAMAGE PROTECTION

hp 15s — N4500, 8GB,512GB SSD, 15.6" HD, WIN 11, MSO 2021 — ಇ.ಎಮ್.ಐ ₹2,499 — OFFER PRICE ₹29,990* — ಉಚಿತ: ಸ್ಮಾರ್ಟ್ ವಾಚ್ WORTH ₹3999 + PAY RS. 2499 AND GET GOODIES WORTH ₹10999

Lenovo SLIM 3i — RYZEN 7 5700U, 16GB, 512GB SSD, 15.6 FHD, INT AMD RADEON GFX, WIN 11 MSO 21 — ಇ.ಎಮ್.ಐ ₹4,166 — OFFER PRICE ₹49,990* — ಉಚಿತ: METAL BT ಸ್ಮಾರ್ಟ್ ವಾಚ್ WORTH ₹7999 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999

HOT DEAL — i5 10TH GEN, 8GB/1TB+ 256 GB SSD, 14 FHD, WIN10 — ಇ.ಎಮ್.ಐ ₹3,083 — OFFER PRICE ₹36,990* — ಉಚಿತ: METAL BT ಸ್ಮಾರ್ಟ್ ವಾಚ್ WORTH ₹7999

DELL INS 3520 — 12TH GEN I5-1235U, 16GB DDR4, 512GB SSD/15.6 FHD, WIN 11 MSO 2021 — ಇ.ಎಮ್.ಐ ₹4,499 — OFFER PRICE ₹53,990* — ಉಚಿತ: METAL BT ಸ್ಮಾರ್ಟ್ ವಾಚ್ WORTH ₹7999+ PAY ₹2499 AND GET GOODIES WORTH ₹12199

hp VICTUS- GAMING — RYZEN 5 5600H, 16GB, 512GB SSD, RADEON RX6500M 4GB GFX, 15.6 FHD, WIN 11 — ಇ.ಎಮ್.ಐ ₹4,749 — OFFER PRICE ₹56,990* — ಉಚಿತ: METAL BT ಸ್ಮಾರ್ಟ್ ವಾಚ್ WORTH ₹7999 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999

LG 694 LTRS SIDE BY SIDE GC-B257SLUV — 32% ಕಡಿತ — SPECIAL PRICE: ₹90,390 MRP: ₹1,32,199

SAMSUNG 523L Top Mount Freezer with Twin Cooling Plus™ RT54B6558SL — 30% ಕಡಿತ — SPECIAL PRICE: ₹56,890 MRP: ₹80,990

Haier 276 ಲೀ ಫ್ರಾಸ್ಟ್ ಫ್ರೀ — 42% ಕಡಿತ — SPECIAL PRICE: ₹33,490 MRP: ₹58,200

BOSCH 9 ಕೆಜಿ ಫ್ರಂಟ್ ಲೋಡಿಂಗ್ — 32% ಕಡಿತ — SPECIAL PRICE: ₹50,240 MRP: ₹73,490

LG 10.5/7KG FRONT LOAD WASHER-DRYER, AI DIRECT DRIVE™, BLACK VCM FHD1057STB — 26% ಕಡಿತ — SPECIAL PRICE: ₹70,640 MRP: ₹94,990

LG SOUND BAR OK55 — 500W for Karaoke Playback, Recording, Echo Effects and Vocal Effects, DJ Effects, DJ Wheel, DJ Loop, Party Thruster, DJ Pad and Multi-Color Lighting, Bass Blast, XBOOM App (Black) — EMI ₹1,833 — OFFER PRICE ₹21,990*

LG SOUND BAR SC9S — 3.1.3 Ch, 400W, DOLBY ATMOS & IMAX ENHANCED — EMI ₹2,666 — OFFER PRICE ₹31,990*

DAIKIN 1.0 TON 5 STAR INVERTER — 32% ಕಡಿತ — SPECIAL PRICE: ₹37,990 MRP: ₹55,500

Godrej 23ಲೀ ಕನ್‌ವೆಕ್ಷನ್ ಮೈಕ್ರೋವೇವ್ — 40% ಕಡಿತ — SPECIAL PRICE: ₹9,000 MRP: ₹15,100

Greenchef MIXER GRINDERS:TULIP 3 JAR 600W + PRESSURE COOKERS:3 LTR NAMO — 58% ಕಡಿತ — OFFER PRICE: ₹2,024 COMBI MRP: ₹4,798

Greenchef GAS STOVES:BLISS 2 BURNER + NON STICK COOKWARE:2PC DUET PACK — 58% ಕಡಿತ — OFFER PRICE: ₹2,024 COMBI MRP: ₹4,798

Greenchef CLASSIC SS 2IN1 COMBO (3LTRS + 2LTRS PAN) KETTLES:S S KETTLE 1.5LTRS - SWIFT — 58% ಕಡಿತ — OFFER PRICE: ₹2,024 COMBI MRP: ₹4,798

NIRLEP NON STICK COOKWARE: ASPA 4 Pc SET + VL IRON BOX:ECO DRY IRON — 58% ಕಡಿತ — OFFER PRICE: ₹2,024 COMBI MRP: ₹4,798

LG SAMSUNG SONY Panasonic Haier NY IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo OPPO ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA WHITELINE V-GUARD ZEBRONICS KAFF ZONE

GIRIAS THE CONSUMER DURABLE PEOPLE Since 1971

ಶಿರಾ 9035023188 | ಬಾಗೇಪಲ್ಲಿ 9036289562 | ಚನ್ನಪಟ್ಟಣ 9035023186 | ಹಿರಿಯೂರು 9035023185 | ತಿಪಟೂರು 90362 89548 | ಉತ್ತರಹಳ್ಳಿ 90362 89563 | ಹೊಸಕೋಟೆ 90362 89545 | ಕುಣಿಗಲ್ 90362 89546 | ಮಾದನಾಯಕನಹಳ್ಳಿ 90362 89550 | ಗೌರಿಬಿದನೂರು 90354 99244 | ಮಾಗಡಿರಸ್ತೆ 90362 89557 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಕೆಆರ್ ಪುರಂ 9019929881 | ಅಂದ್ರಹಳ್ಳಿ 95918 35070 | ಚಿಕ್ಕಜಾಲ 95918 32080 | ಅತ್ತಿಬೆಲೆ 99009 77747 | ಹೆಬ್ಬಗೋಡಿ 90350 50023 | ಭಾರ್ತಿಯಾ ಮಾಲ್ 70900 00981 | ಮಂತ್ರಿ ಮಾಲ್ 95919 25353 | ಕೆಂಗೇರಿ 99009 77712 | ಸಹಕಾರನಗರ 90199 29882 | ದೊಡ್ಡಬಳ್ಳಾಪುರ 77602 12888 | ಎಲೆಕ್ಟ್ರಾನಿಕ್ ಸಿಟಿ 9591103536 | ಕನಕಪುರ ಮುಖ್ಯ ರಸ್ತೆ 90082 20739 | ಜಾಲಹಳ್ಳಿ ಕ್ರಾಸ್ 9008220804 | ಆರ್.ಟಿ.ನಗರ 91080 65665 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಗಾಂಧಿನಗರ 9035499311 | ಹೊಸೂರು ರಸ್ತೆ 9035499022 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಇಂದಿರಾನಗರ 9035499255 | ಜಯನಗರ 90354 99077 | ಜೆ.ಪಿ.ನಗರ 9606922698 | ಕತ್ರಿಗುಪ್ಪೆ 9035499288 | ಕೋರಮಂಗಲ 90354 11200 | ಮಲ್ಲೇಶ್ವರಂ 90354 99233 | ಮತ್ತಿಕೆರೆ 90352 22377 | ಮಾರತ್‌ಹಳ್ಳಿ 90354 99011 | ಮೈಸೂರು ರಸ್ತೆ 90354 99188 | ನಾಗರಭಾವಿ 90354 99191 | ನೆಲಮಂಗಲ 9606922798 | ರಾಜಾಜಿನಗರ 9035499144 | ಸದಾಶಿವನಗರ 9035499088 | ವಿಜಯನಗರ 96069 22795 | ಯಲಹಂಕ 9036001315 | ರಾಮನಗರ 9606922697 | ತುಮಕೂರು 90082 18009 | ಕೋಲಾರ 90082 20791 | ಚಿಕ್ಕಬಳ್ಳಾಪುರ 9591561669 | ಚಿಂತಾಮಣಿ 90362 89552 | ಹೊಸೂರು 04344 243633.

STORE LOCATOR

*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. Cash Back / vouchers will be credited to the customer bank account / BFL wallet after clearing 3 EMI. Upto Rs.11,500 Bajaj cash back / vouchers valid only in selected cities & valid only on Selected models & Brands. EMI offers the above products based on 9,12,18,24 & fixed emi schemes.*Exchange offer valid on MRP and Product as to be in good working condition. Free smart watch valid on 20000 & above Purchase on select models & brands.

151 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಲೋಕಸಭಾ ಚುನಾವಣೆ: ಬಗೆಹರಿಯದ ಸೀಟುಹಂಚಿಕೆ ಸಮಸ್ಯೆ

ಬಿಕ್ಕಟ್ಟು: ಚೌಧರಿಯತ್ತ ಟಿಎಂಸಿ ಬೊಟ್ಟು

ಪ್ರಜಾವಾಣಿ ವಾರ್ತೆ



ಅಧೀರ್ ರಂಜನ್ ಚೌಧರಿ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಟಿಎಂಸಿ ಏಕಾಂಗಿಯಾಗಿಯೇ ಸ್ಪರ್ಧಿಸಲಿದೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಘೋಷಿಸಿದ ಬೆನ್ನಲ್ಲೇ, ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಒಟ್ಟಕ್ಕೆ ಪಶ್ಚಿಮ ಬಂಗಾಳದಲ್ಲಿ ಅಡ್ಡಿ ಉಂಟಾಗಲು ಕಾಂಗ್ರೆಸ್‌ನ ಹಿರಿಯ ನಾಯಕ ಅಧೀರ್ ರಂಜನ್ ಚೌಧರಿ ಅವರೇ ಕಾರಣ ಎಂದು ಟಿಎಂಸಿ ಗುರುವಾರ ದೂರಿದೆ.

ಪಕ್ಷ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ವಿರುದ್ಧ ಚೌಧರಿ ನಿರಂತರವಾಗಿ ವಾಗ್ದಾಳಿ ನಡೆಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಇತರ ನಾಯಕರು ಟಿಎಂಸಿ ವಿರುದ್ಧ ದಾಳಿ ನಡೆಸುತ್ತಿಲ್ಲ. ಆದಾಗ್ಯೂ, ಅಧೀರ್ ರಂಜನ್ ಚೌಧರಿ ವಿರುದ್ಧ ಕಾಂಗ್ರೆಸ್ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಟಿಎಂಸಿ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಪಕ್ಷದ ರಾಜ್ಯಸಭಾ ಸದಸ್ಯ ಡೆರೆಕ್ ಒಬ್ರಿಯಾನ್ ಅವರು, 'ಇಂಡಿಯಾ ಮೈತ್ರಿಕೂಟ ಸಮರ್ಪಕವಾಗಿ ಕಾರ್ಯ ನಿರ್ವಹಣೆ ಮಾಡದಿರುವುದಕ್ಕೆ ಮೂರು ಕಾರಣಗಳಿವೆ. ಅವು, ಅಧೀರ್, ಅಧೀರ್ ಹಾಗೂ ಅಧೀರ್' ಎಂದು ಹೇಳಿದ್ದಾರೆ.

'ಸ್ವತಃ ಅಧೀರ್ ರಂಜನ್ ಚೌಧರಿ ಅವರೇ ತಮ್ಮ ಪಕ್ಷದ ಸಮಾಧಿ ಅಗೆಯುತ್ತಿದ್ದಾರೆ' ಎಂದೂ ಡೆರೆಕ್ ಕುಟುಕಿದ್ದಾರೆ.

ಚೌಧರಿ ವಿರುದ್ಧದ ಟೀಕೆಯನ್ನು ಮತ್ತಷ್ಟು ಹರಿತಗೊಳಿಸಿದ ಅವರು, 'ಇಂಡಿಯಾ ಮೈತ್ರಿಕೂಟಕ್ಕೆ ಸಾಕಷ್ಟು ವಿರೋಧಿಗಳಿದ್ದಾರೆ. ಮುಖ್ಯವಾಗಿ ಬಿಜೆಪಿ ನಾಯಕರು ಮತ್ತು ಚೌಧರಿ ಪದೇಪದೇ ಮೈತ್ರಿಕೂಟದ ವಿರುದ್ಧ ಮಾತನಾಡಿದ್ದಾರೆ' ಎಂದರು.

'ಇಂಡಿಯಾ' ವಿರುದ್ಧ ಅಧೀರ್ ರಂಜನ್ ಚೌಧರಿ ವಾಗ್ದಾಳಿ ನಡೆಸುತ್ತಿದ್ದಾರೆ. ಆದರೆ, ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಮಾತುಗಳಿಗೆ ಧ್ವನಿಯಾಗಿದ್ದಾರಷ್ಟೆ

ಡೆರೆಕ್ ಒಬ್ರಿಯಾನ್, ಟಿಎಂಸಿ ರಾಜ್ಯಸಭಾ ಸದಸ್ಯ

'ಪಶ್ಚಿಮ ಬಂಗಾಳದ ಸಮಸ್ಯೆಗಳ ಬಗ್ಗೆ ಚೌಧರಿ ಮಾತನಾಡಿಲ್ಲ. ರಾಜ್ಯಕ್ಕೆ ಕೇಂದ್ರ ಸರ್ಕಾರ ನೀಡುವ ಹಣಕಾಸು ನೆರವಿನ ಬಗ್ಗೆ ಧ್ವನಿ ಎತ್ತಿಲ್ಲ. ಅಲ್ಲದೇ, ರಾಜ್ಯದಲ್ಲಿ ಜಾರಿ ನಿರ್ದೇಶನಾಲಯ ನಡೆಸಿದ ದಾಳಿಗಳಿಗೆ ಅವರು ಸಹಮತ ವ್ಯಕ್ತಪಡಿಸಿದ್ದಾರೆ' ಎಂದು ದೂರಿದರು.

'ಮೈತ್ರಿ ವಿಷಯದಲ್ಲಿ ನಾವು ಈಗ ಮುಂದೆ ಸಾಗಿದ್ದೇವೆ' ಎಂದು ಹೇಳಿದ ಅವರು, 'ಇಂಡಿಯಾ' ಮೈತ್ರಿಕೂಟದಿಂದ ಟಿಎಂಸಿ ಹೊರಗೆ ಬಂದಿದೆಯೇ ಎಂಬ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದರು.

'ಒಂದು ವೇಳೆ, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲಿಸಿ 300 ಸ್ಥಾನಗಳಲ್ಲಿ ಗೆದ್ದುಬರುವ ಕೆಲಸವನ್ನು ಕಾಂಗ್ರೆಸ್ ಮಾಡಿದಲ್ಲಿ, ಆಗ, ಟಿಎಂಸಿ ಆ ಪಕ್ಷಕ್ಕೆ ಬೆಂಬಲ ನೀಡಲಿದೆ' ಎಂದರು.

'ಚುನಾವಣೆ ವಿಚಾರವಾಗಿ ಪಶ್ಚಿಮ ಬಂಗಾಳದಲ್ಲಿರುವ ವಸ್ತುಸ್ಥಿತಿಯನ್ನು ಕಾಂಗ್ರೆಸ್ ಅರ್ಥ ಮಾಡಿಕೊಳ್ಳಬೇಕು. ಎರಡು ಕ್ಷೇತ್ರಗಳಲ್ಲಿ ಗೆದ್ದಿರುವ ಕಾಂಗ್ರೆಸ್ ಪಡೆದ ಮತ ಪ್ರಮಾಣ ಶೇ 4ರಷ್ಟು ಮಾತ್ರ. ಹೀಗಾಗಿ, ಕಾಂಗ್ರೆಸ್ ಇತರರ ಗೆಲುವಿನ ಓಟಕ್ಕೆ ತಡೆ ಒಡ್ಡುವ ಸಾಮರ್ಥ್ಯವನ್ನು ಹೊಂದಿಲ್ಲ' ಎಂದು ಹೇಳಿದ್ದಾರೆ.

ಬಿಜೆಪಿ ಸೋಲಿಸಲು ಟಿಎಂಸಿ ಸಖ್ಯ ಅಗತ್ಯ: ಕಾಂಗ್ರೆಸ್

ಸಿಲಿಗುರಿ (ಪಶ್ಚಿಮ ಬಂಗಾಳ): ಟಿಎಂಸಿ ನಾಯಕಿ ಹಾಗೂ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಹೊಗಳಿರುವ ಕಾಂಗ್ರೆಸ್, 'ರಾಜ್ಯದಲ್ಲಿ ಟಿಎಂಸಿ ದೊಡ್ಡ ಶಕ್ತಿ. ಬಿಜೆಪಿಯನ್ನು ಸೋಲಿಸಲು ಆ ಪಕ್ಷದ ಬೆಂಬಲ ಬೇಕೇಬೇಕು' ಎಂದು ಗುರುವಾರ ಹೇಳಿದೆ.

ಮಮತಾ ಬ್ಯಾನರ್ಜಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸಿಟ್ಟು ಶಮನ ಮಾಡುವ ಯತ್ನ ಮಾಡಿದ್ದಾರೆ.

'ಪಶ್ಚಿಮ ಬಂಗಾಳದಲ್ಲಿ ಸ್ಥಾನಗಳ ಹಂಚಿಕೆ ಕುರಿತು ಉಂಟಾಗಿರುವ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳುವ ವಿಶ್ವಾಸ ಹೊಂದಿದ್ದೇವೆ. ರಾಜ್ಯದಲ್ಲಿ ಬಿಜೆಪಿಯನ್ನು ಸೋಲಿಸಬೇಕು ಎಂದಾದಲ್ಲಿ 'ಇಂಡಿಯಾ' ಮೈತ್ರಿಕೂಟದಲ್ಲಿ ಟಿಎಂಸಿ ಇರಲೇಬೇಕು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಮಮತಾ ಬ್ಯಾನರ್ಜಿ ಅವರು ಘೋಷಣೆ ಮಾಡಿದ ಮಾರನೇ ದಿನವೇ ಅವರ ಮನವೊಲಿಸಲು ಕಾಂಗ್ರೆಸ್ ಮುಂದಾಗಿದೆ.

ಬಾಗ್ಡೋಗ್ರಾ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜೈರಾಮ್ ರಮೇಶ್, 'ಮಮತಾ ಬ್ಯಾನರ್ಜಿ ಸೇರಿದಂತೆ ಟಿಎಂಸಿ ನಾಯಕರು ಭಾರತ ಜೋಡೊ ನ್ಯಾಯ ಯಾತ್ರೆಯಲ್ಲಿ ಪಾಲ್ಗೊಳ್ಳಬೇಕು ಎಂಬುದು ನಮ್ಮ ನಾಯಕರಾದ ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಅವರ ಅಪೇಕ್ಷೆಯಾಗಿದೆ' ಎಂದರು.

'ಮಮತಾ ಬ್ಯಾನರ್ಜಿ ಅವರು 5, 10, 15 ಅಥವಾ 20 ನಿಮಿಷವಾದರೂ ಯಾತ್ರೆಯಲ್ಲಿ ಪಾಲ್ಗೊಳ್ಳಬೇಕು ಎಂಬುದು ನಮ್ಮ ಇಚ್ಛೆ. ಕೆಲವೇ ನಿಮಿಷಗಳ ಅವರ ಉಪಸ್ಥಿತಿ ನಮ್ಮ ಈ ಯಾತ್ರೆಯ ವರ್ಚಸ್ಸನ್ನು ಹೆಚ್ಚಿಸಲಿದೆ' ಎಂದು ಹೇಳಿದರು.

ಜನರ ಹಣದಲ್ಲಿ ಮೋದಿ ಪ್ರಚಾರ: ಖರ್ಗೆ ಟೀಕೆ

ಹೈದರಾಬಾದ್: ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕರ ಹಣವನ್ನು ಯುವಜನರ ಉದ್ಯೋಗ ಸೃಷ್ಟಿಗೆ ಬಳಸುವ ಬದಲು ತಮ್ಮ ಪ್ರಚಾರ ಹಾಗೂ ಜಾಹೀರಾತಿಗೆ ಬಳಸುತ್ತಿದ್ದಾರೆ ಎಂದು ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

ಇಲ್ಲಿ ನಡೆದ ಕಾಂಗ್ರೆಸ್ ಬೂತ್ ಮಟ್ಟದ ಕಾರ್ಯಕರ್ತರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

'ಅಯೋಧ್ಯೆಯಲ್ಲಿ ಮೋದಿ ಅವರು ಗರ್ಭ ಗುಡಿಯಲ್ಲಿ ಏಕಾಂಗಿಯಾಗಿ ಪೂಜೆ ನೆರವೇರಿಸಿದರು. ಬಿಜೆಪಿಯ ಹಿರಿಯ ನಾಯಕರಾದ ಎಲ್.ಕೆ. ಅಡ್ವಾಣಿ ಮತ್ತು ಮುರಳಿ ಮನೋಹರ ಜೋಶಿ ಅವರು ಇರಲಿಲ್ಲ. ತಮ್ಮ ಸಂಪುಟದ ಸಚಿವರು ಅಲ್ಲಿಗೆ ಬರುವುದಕ್ಕೂ ಮೋದಿ ಸಮ್ಮತಿಸಲಿಲ್ಲ. ಅವರು ಅಲ್ಲಿ ಒಬ್ಬರೇ ಇದ್ದರು. ದೇವರು ದೇಶದ ಎಲ್ಲ ಮನೆಗಳಲ್ಲೂ ಇದ್ದಾರೆ. ಆದರೆ, ಮೋದಿ ಅವರು ದೇವರು ತನ್ನ ಸನಿಹ ಇದ್ದಾನೆ ಎನ್ನುವಂತೆ ಬಿಂಬಿಸುತ್ತಿದ್ದಾರೆ. ಹಸಿದವರಿಗೆ ಅನ್ನ ಕೊಡಬೇಕು. ನಿರುದ್ಯೋಗಿಗೆ ಉದ್ಯೋಗ ಕೊಡಬೇಕು. ಆದರೆ, ಮೋದಿ ಅವರು ತಮ್ಮ ಸಮಯವನ್ನು ರಾಜಕಾರಣ ಮತ್ತು ಪ್ರಚಾರಕ್ಕೆ ಬಳಸುತ್ತಿದ್ದಾರೆ. ಜನರ ಹಣದಲ್ಲಿ ಅವರು ಪ್ರಚಾರ ಕಾರ್ಯ ಮಾಡುತ್ತಿದ್ದಾರೆ' ಎಂದು ಖರ್ಗೆ ಟೀಕಿಸಿದರು.

'ಮೋದಿ ಮತ್ತು ಅಮಿತ್ ಶಾ ಅವರು ಇ.ಡಿ, ಐ.ಟಿ, ಸಿಬಿಐ ಬಳಸಿ ಸರ್ಕಾರಗಳನ್ನು ಉರುಳಿಸಬಲ್ಲರು' ಎಂದು ತೆಲಂಗಾಣದ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರನ್ನು ಖರ್ಗೆ ಎಚ್ಚರಿಸಿದರು.

'ಇಂಡಿಯಾ'ದಿಂದ ಒಗ್ಗಟ್ಟಿನ ಹೋರಾಟ

ಕೂಚ್ ಬಿಹಾರ್, ಪಶ್ಚಿಮ ಬಂಗಾಳ (ಪಿಟಿಐ): ದೇಶದಾದ್ಯಂತ ಅನ್ಯಾಯದ ವಿರುದ್ಧ ಪ್ರತಿಪಕ್ಷಗಳ 'ಇಂಡಿಯಾ' ಒಕ್ಕೂಟ ಒಗ್ಗಟ್ಟಿನಿಂದಲೇ ಹೋರಾಟ ನಡೆಸಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಲೋಕಸಭೆ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷ ಏಕಾಂಗಿಯಾಗಿಯೇ ಸ್ಪರ್ಧಿಸಲಿದೆ ಎಂಬ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಹೇಳಿಕೆ ಹಿಂದೆಯೇ ರಾಹುಲ್ ಈ ಮಾತು ಹೇಳಿದ್ದಾರೆ.

ರಾಹುಲ್ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ ಜೋಡೊ ನ್ಯಾಯಯಾತ್ರೆಯು ಗುರುವಾರ, ಪಶ್ಚಿಮ ಬಂಗಾಳವನ್ನು ಕೂಚ್ ಬಿಹಾರ್ ಜಿಲ್ಲೆಯ ಬಕ್ಷಿರಹತ್ ಮೂಲಕ ಪ್ರವೇಶಿಸಿತು. ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಅಧಿರ್ ರಂಜನ್ ಚೌಧರಿ ರಾಹುಲ್ ಅವರನ್ನು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ರಾಹುಲ್‌ಗಾಂಧಿ, ಬಿಜೆಪಿ ಮತ್ತು ಆರ್‌ಎಸ್‌ಎಸ್ ದೇಶದಾದ್ಯಂತ ಹಿಂಸಾಚಾರ ಮತ್ತು ಮತ್ತು ದ್ವೇಷ ಭಾವನೆಯನ್ನು ಬೆಳೆಸುತ್ತಿವೆ ಎಂದು ಆರೋಪಿಸಿದರು.

ದೇಶದಾದ್ಯಂತ ಅನ್ಯಾಯ ವ್ಯಾಪಿಸಿದೆ ಎಂದೇ ಈ ಯಾತ್ರೆಗೆ 'ನ್ಯಾಯ' ಪದ ಸೇರಿಸಿಕೊಳ್ಳಲಾಗಿದೆ. ಈ ಅನ್ಯಾಯದ ವಿರುದ್ಧ ಇಂಡಿಯಾ ಮೈತ್ರಿಕೂಟ ಒಗ್ಗಟ್ಟಿನಿಂದಲೇ ಹೋರಾಟ ನಡೆಸಲಿದೆ ಎಂದು ಹೇಳಿದರು.

ನ್ಯಾಯಯಾತ್ರೆಗೆ ರಾಜ್ಯದಲ್ಲಿ ಸಿಪಿಎಂ ಮತ್ತು ಎಡಪಕ್ಷಗಳು ಕೈಜೋಡಿಸುವ ನಿರೀಕ್ಷೆಯಿದೆ. ಆದರೆ, ಸಮರ್ಪಕ ಮಾಹಿತಿ ಇಲ್ಲ ಎಂಬ ಕಾರಣ ನೀಡಿರುವ ಟಿಎಂಸಿ ಯಾತ್ರೆಯಿಂದ ಅಂತರ ಕಾಯ್ದುಕೊಂಡಿದೆ.

ನ್ಯಾಯಯಾತ್ರೆಯು ಪಶ್ಚಿಮ ಬಂಗಾಳದಲ್ಲಿ ಐದು ದಿನ, ಆರು ಜಿಲ್ಲೆಗಳಲ್ಲಿ, ಲೋಕಸಭೆಯ ಆರು ಕ್ಷೇತ್ರಗಳ ವ್ಯಾಪ್ತಿಯಲ್ಲಿ ಒಟ್ಟು 523 ಕಿ.ಮೀ. ದೂರ ಸಂಚರಿಸಲಿದೆ. ಕಳೆದ ಏಪ್ರಿಲ್‌ನಲ್ಲಿ ನಡೆದ ವಿಧಾನಸಭೆ ಚುನಾವಣೆ ಬಳಿಕ ಇದು ರಾಹುಲ್‌ಗಾಂಧಿಯವರ ಪ್ರಥಮ ಭೇಟಿಯಾಗಿದೆ.

ಪಶ್ಚಿಮ ಬಂಗಾಳದಲ್ಲಿ ನ್ಯಾಯಯಾತ್ರೆಯ ವೇಳೆ ರಾಹುಲ್‌ಗಾಂಧಿ ಬೆಂಬಲಿಗರ ಮಾತು ಆಲಿಸಿದರು –ಪಿಟಿಐ ಚಿತ್ರ

'ಯಾತ್ರೆ ಸಾಗಿದ ಕಡೆ ಬಿಜೆಪಿಗೆ ಗೆಲುವು'

ಗುವಾಹಟಿ (ಪಿಟಿಐ): 'ಅಸ್ಸಾಂನಲ್ಲಿ ರಾಹುಲ್‌ಗಾಂಧಿ ನೇತೃತ್ವದ ನ್ಯಾಯಯಾತ್ರೆಯು ಸಾಗಿಹೋಗಿರುವ ಎಲ್ಲ ಕ್ಷೇತ್ರಗಳಲ್ಲಿಯೂ ಬಿಜೆಪಿ ಜಯಗಳಿಸಲಿದೆ' ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ನ್ಯಾಯಯಾತ್ರೆ ಸಾಗಿಹೋದ ಎಲ್ಲ ಕಡೆ ಬಿಜೆಪಿ ಜಯಗಳಿಸಲಿದೆ. ಈ ಕಾರಣಕ್ಕಾಗಿಯಾದರೂ ರಾಹುಲ್‌ಗಾಂಧಿ ಬಿಜೆಪಿಗೆ ಬೇಕು' ಎಂದು ಹೇಳಿದರು. ಲೋಕಸಭೆ ಚುನಾವಣೆ ಬಳಿಕ ರಾಹುಲ್‌ಗಾಂಧಿ ಅವರ ಬಂಧನವಾಗಲಿದೆ ಎಂದೂ ಮುಖ್ಯಮಂತ್ರಿ ಪುನರುಚ್ಚರಿಸಿದರು. ಯಾತ್ರೆ ವೇಳೆ ಜರುಗಿದ ಅಹಿತಕರ ಬೆಳವಣಿಗೆ ಕುರಿತು ಪೊಲೀಸರು, ರಾಹುಲ್ ವಿರುದ್ಧ ಮೊಕದ್ದಮೆ ದಾಖಲಿಸಿದ್ದಾರೆ.

ಯಾತ್ರೆಗೆ ಎರಡು ದಿನ ವಿರಾಮ

ಪಶ್ಚಿಮ ಬಂಗಾಳಕ್ಕೆ ಪ್ರವೇಶ ಬಳಿಕ ನ್ಯಾಯಯಾತ್ರೆಗೆ ಎರಡು ದಿನ ವಿರಾಮ ನೀಡಲಾಗಿದೆ. ಯಾತ್ರೆಯ ನೇತೃತ್ವ ವಹಿಸಿರುವ ರಾಹುಲ್‌ಗಾಂಧಿ ಗುರುವಾರ ಮಧ್ಯಾಹ್ನ ನವದೆಹಲಿಗೆ ಮರಳಿದರು.

ಇದಕ್ಕೆ ಮುನ್ನ ಅವರು ಇಲ್ಲಿ ರೋಡ್ ಶೋ ನಡೆಸಿದರು. 'ತುರ್ತು ಕಾರ್ಯ ನಿಮಿತ್ತ ರಾಹುಲ್ ಗಾಂಧಿ ದೆಹಲಿಗೆ ತೆರಳಿದ್ದಾರೆ. ಯಾತ್ರೆ 28ರಂದು ಪುನರಾರಂಭವಾಗಲಿದೆ' ಎಂದು ಮುಖಂಡ ಸುಭಂಕರ್ ಸರ್ಕಾರ್ ತಿಳಿಸಿದರು.

'ಜನರಿಂದಲೇ ಚುನಾವಣಾ ಕಹಳೆ'

ಉತ್ತರ ಪ್ರದೇಶದಲ್ಲಿ ಪ್ರಧಾನಿ ಮೋದಿ ವಿಶ್ವಾಸ • ವಿಪಕ್ಷಗಳ ವಿರುದ್ಧ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಲಖನೌ, ಉತ್ತರಪ್ರದೇಶ: ಅಯೋಧ್ಯೆಯಲ್ಲಿ ಬಾಲರಾಮ ಮೂರ್ತಿ ಪ್ರತಿಷ್ಠಾಪನೆ ಹಿಂದೆಯೇ, ಪ್ರಧಾನಿ ನರೇಂದ್ರ ಮೋದಿ ಗುರುವಾರ ರಾಜ್ಯದ ಬುಲಂದಶಹರ್ ಜಿಲ್ಲೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಚುನಾವಣಾ ಕಹಳೆ ಮೊಳಗಿಸಿದರು.

ಬಾಲರಾಮ ಮೂರ್ತಿ ಪ್ರತಿಷ್ಠಾಪನೆಯನ್ನು ಪ್ರಸ್ತಾಪಿಸಿದ ಅವರು, ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪಟ್ಟಿ ಮಾಡಿದರು. ಇದೇವೇಳೆ, ಬಿಜೆಪಿಯೇತರ ಆಡಳಿತವಿರುವ ರಾಜ್ಯಗಳಲ್ಲಿ ಅಭಿವೃದ್ಧಿ ಕಡೆಗಣಿಸಲಾಗಿದೆ ಎಂದು ಪ್ರತಿಪಕ್ಷಗಳನ್ನು ತರಾಟೆಗೆ ತೆಗೆದುಕೊಂಡರು.

ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕುಟುಂಬಗಳ ಹಿಡಿತದಲ್ಲಿ ಇರುವ ಪಕ್ಷಗಳನ್ನು ಸೋಲಿಸಿ ಮತ್ತು ಸ್ಪಷ್ಟ ಬಹುಮತದ ಸ್ಥಿರ ಸರ್ಕಾರವನ್ನು ಆಯ್ಕೆಮಾಡಿ

ನರೇಂದ್ರ ಮೋದಿ, ಪ್ರಧಾನಿ

'ಮೋದಿ ಚುನಾವಣಾ ಕಹಳೆ ಮೊಳಗಿಸುತ್ತಾರೆ ಎಂದು ಕೆಲ ಚಾನಲ್‌ಗಳು ವರದಿ ಮಾಡಿವೆ. ಆದರೆ, ಮೋದಿ ಅಭಿವೃದ್ಧಿಯ ಕಹಳೆ ಮೊಳಗಿಸ್ತಾರೆ. ಚುನಾವಣಾ ಕಹಳೆ ಮೊಳಗಿಸುವ ಜರೂರತ್ತು ಮೋದಿಗಿಲ್ಲ. ಅದನ್ನು ಜನರೇ ಮೋದಿಗಾಗಿ ಮಾಡುತ್ತಾರೆ' ಎಂದು ಹೇಳಿದರು.

ನ್ಯೂ ಕುರ್ಜಾ ಮತ್ತು ನ್ಯೂ ರೆವರಿ ನಡುವಿನ 173 ಕಿ.ಮೀ. ಉದ್ದದ ನೂತನ ವಿದ್ಯುತ್‌ಚಾಲಿತ ರೈಲ್ವೆ ಜೋಡಿ ಮಾರ್ಗದಲ್ಲಿ ಎರಡು ಗೂಡ್ಸ್ ರೈಲುಗಳ ಸಂಚಾರಕ್ಕೆ ಚಾಲನೆ ನೀಡಿದ ಬಳಿಕ ಅವರು ಸಾರ್ವಜನಿಕ ಸಭೆಯಲ್ಲಿ ಮಾತನಾಡಿದರು. ತಮ್ಮ ಭಾಷಣದಲ್ಲಿ ಬಾಲರಾಮ ಮೂರ್ತಿ ಪ್ರತಿಷ್ಠಾಪನೆ ವಿಷಯ ಪ್ರಸ್ತಾಪಿಸಿದ ಅವರು, 'ದೇಶದ ಪ್ರತಿಷ್ಠೆಯನ್ನು ಪ್ರತಿಷ್ಠಾಪಿಸುವ ಕಾಲ ಈಗ ಬಂದಿದೆ. ನಮ್ಮ ಗುರಿ 2047ರ ವೇಳೆಗೆ ಭಾರತನ್ನು ಅಭಿವೃದ್ಧಿ ರಾಷ್ಟ್ರವಾಗಿಸುವುದೇ ಆಗಿದೆ' ಎಂದರು.

'ಸುಪ್ರೀಂ' ನ್ಯಾಯಮೂರ್ತಿಯಾಗಿ ಪಿ.ಬಿ. ವರಾಳೆ ಪ್ರಮಾಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಅವರು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ಗುರುವಾರ ಪ್ರಮಾಣವಚನ ಸ್ವೀಕರಿಸಿದರು.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ವರಾಳೆ ಅವರಿಗೆ ಸುಪ್ರೀಂ ಕೋರ್ಟ್ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಮಾಣವಚನ ಬೋಧಿಸಿದರು.

ಈಗ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಸಂಖ್ಯೆ 34ಕ್ಕೆ ಏರಿದೆ. ವರಾಳೆ ನೇಮಕದಿಂದಾಗಿ ಉನ್ನತ ನ್ಯಾಯಾಲಯವು ಮೊದಲ ಬಾರಿಗೆ ದಲಿತ ಸಮುದಾಯದ ಮೂವರು ನ್ಯಾಯಮೂರ್ತಿಗಳನ್ನು ಹೊಂದಿದಂತೆ ಆಗಿದೆ. ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಸಿ.ಟಿ.ರವಿಕುಮಾರ್ ಅವರು ಪರಿಶಿಷ್ಟ ಜಾತಿಯ ಇನ್ನಿಬ್ಬರು ನ್ಯಾಯಮೂರ್ತಿಗಳು.

ವರಾಳೇ

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಸ್ಥಾನಕ್ಕೆ ವರಾಳೆ ಹೆಸರನ್ನು ಕೊಲಿಜಿಯಂ ಕಳೆದ ವಾರ ಶಿಫಾರಸು ಮಾಡಿತ್ತು. ಇದಕ್ಕೆ ಕೇಂದ್ರ ಸರ್ಕಾರ ಬುಧವಾರ ಅನುಮೋದನೆ ನೀಡಿತ್ತು.

ಅಯೋಧ್ಯೆ: ದರ್ಶನದ ಅವಧಿ ವಿಸ್ತರಣೆ

ಅಯೋಧ್ಯೆ (ಪಿಟಿಐ): ಅಯೋಧ್ಯೆಯ ರಾಮ ಮಂದಿರದಲ್ಲಿ ಬೆಳಿಗ್ಗೆ 6 ಗಂಟೆಯಿಂದಲೇ ಬಾಲರಾಮನ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದು ಗುರುವಾರದಿಂದಲೇ ಜಾರಿಗೆ ಬಂದಿದೆ. ರಾತ್ರಿ 10 ಗಂಟೆಯವರೆಗೆ ದರ್ಶನಕ್ಕೆ ಅವಕಾಶ ಇರಲಿದೆ. ಪ್ರವಾಹದೋಪಾದಿಯಲ್ಲಿ ಬರುತ್ತಿರುವ ಭಕ್ತರ ದಂಡನ್ನು ನಿಯಂತ್ರಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಇದುವರೆಗೆ ಬೆಳಿಗ್ಗೆ 6.30ರಿಂದ 12 ಗಂಟೆಯವರೆಗೆ, ಮಧ್ಯಾಹ್ನ 2.30ರಿಂದ ಸಂಜೆ 7 ಗಂಟೆಯವರೆಗೆ ದರ್ಶನಕ್ಕೆ ಅವಕಾಶ ನೀಡಲಾಗುತ್ತಿತ್ತು. ಗುರುವಾರ ಮಧ್ಯಾಹ್ನದವರೆಗೆ ಅಂದಾಜು 50 ಸಾವಿರ ಭಕ್ತರು ಮಂದಿರಕ್ಕೆ ಭೇಟಿ ನೀಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಂಚಾರ ದಟ್ಟಣೆಯನ್ನು ನಿಯಂತ್ರಿಸುವ ಉದ್ದೇಶದಿಂದ ಅಯೋಧ್ಯೆ ಕಡೆ ಸಾಗುವ ಪ್ರಮುಖ ರಸ್ತೆಗಳನ್ನು ಇನ್ನೂ ಮುಕ್ತವಾಗಿಸಿಲ್ಲ. ಅಲ್ಲದೆ, ಅಯೋಧ್ಯೆಗೆ ಬಸ್ ಸೇವೆಗಳನ್ನು ಇನ್ನೂ ಪುನರಾರಂಭಿಸಿಲ್ಲ.

ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನೆರವೇರಿದ ನಂತರದಲ್ಲಿ ಅಧಿಕಾರಿಗಳು ಅಯೋಧ್ಯೆಯಲ್ಲಿ ಕಠಿಣ ಭದ್ರತಾ ನಿಯಮಗಳನ್ನು ಜಾರಿಗೆ ತಂದಿದ್ದಾರೆ. ಕ್ಷಿಪ್ರ ಕಾರ್ಯಾಚರಣೆ ಪಡೆ ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಸಿಬ್ಬಂದಿಯನ್ನು ಮಂದಿರದ ಹೊರಗಡೆ ನಿಯೋಜಿಸಲಾಗಿದೆ. ಬಸ್ತಿ, ಗೊಂಡ, ಅಂಬೇಡ್ಕರ್‌ನಗರ, ಬಾರಾಬಂಕಿ, ಸುಲ್ತಾನಪುರ ಮತ್ತು ಅಮೇಥಿಯಿಂದ ಅಯೋಧ್ಯೆಯ ಕಡೆ ಸಾಗುವ ರಸ್ತೆಗಳನ್ನು, ಅಯೋಧ್ಯೆಯ ಗಡಿಯಿಂದ 15 ಕಿ.ಮೀ. ದೂರದಲ್ಲೇ ಬಂದ್ ಮಾಡಲಾಗಿದೆ.

ಜೈಪುರ: ಫ್ರಾನ್ಸ್ ಅಧ್ಯಕ್ಷರಿಗೆ ಡಿಜಿಟಲ್ ಪಾವತಿ ವ್ಯವಸ್ಥೆಯ ಪರಿಚಯ

ಮೋದಿ– ಮ್ಯಾಕ್ರನ್ ರೋಡ್ ಶೋ

ಪ್ರಜಾವಾಣಿ ವಾರ್ತೆ/ಪಿಟಿಐ

ಜೈಪುರ: ದೆಹಲಿಯಲ್ಲಿ ಶುಕ್ರವಾರ ನಡೆಯಲಿರುವ ಗಣರಾಜ್ಯೋತ್ಸವ ಸಮಾರಂಭದ ಮುಖ್ಯ ಅತಿಥಿಯಾಗಿರುವ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರು ಗುರುವಾರ ಗುಲಾಬಿ ನಗರ ಜೈಪುರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ರೋಡ್ ಶೋನಲ್ಲಿ ಭಾಗವಹಿಸಿದರು. ಈ ಮೂಲಕ ಮ್ಯಾಕ್ರನ್ ಅವರು ಪಿಂಕ್ ಸಿಟಿಯ ಇತಿಹಾಸ, ಕಲೆ, ಸಂಸ್ಕೃತಿಯನ್ನು ತಿಳಿದುಕೊಂಡರು.

ಇದಕ್ಕೂ ಮುನ್ನಾ ಇಲ್ಲಿನ ಜಂತರ್ ಮಂತರ್‌ನಲ್ಲಿ ಪ್ರಧಾನಿ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರನ್ ಪರಸ್ಪರ ಅಪ್ಪಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು.

ಬಳಿಕ ಜಂತರ್ ಮಂತರ್‌ನಿಂದ ತೆರೆದ ವಾಹನದಲ್ಲಿ, ಬಿಗಿ ಭದ್ರತೆಯ ನಡುವೆ ಸಾಗಿದ ಇಬ್ಬರೂ ನಾಯಕರು, ರಸ್ತೆ ಬದಿಯಲ್ಲಿ ನೆರೆದಿದ್ದ ಜನರತ್ತ ಕೈಬೀಸಿದರು. ರಸ್ತೆಗಳ ಇಕ್ಕೆಲಗಳಲ್ಲಿ ಜಮಾಯಿಸಿದ್ದ ಜನರು ಭಾರತ ಮತ್ತು ಫ್ರಾನ್ಸ್ ಧ್ವಜಗಳು ಹಾಗೂ ಇಬ್ಬರೂ ನಾಯಕರ ಪೋಸ್ಟರ್‌ಗಳನ್ನು ಹಿಡಿದು ಉತ್ಸಾಹ ತೋರಿದರು.

ಡಿಜಿಟಲ್ ಪಾವತಿ ಕುರಿತು ಮಾಹಿತಿ: ಇದೇ ವೇಳೆ ಸ್ಥಳೀಯ ಅಂಗಡಿಗಳಿಗೆ ಫ್ರಾನ್ಸ್ ಅಧ್ಯಕ್ಷರನ್ನು ಕರೆದೊಯ್ದ ಮೋದಿ ಅವರು, ಭಾರತದಲ್ಲಿ ಜಾರಿಗೊಳಿಸಿರುವ ಡಿಜಿಟಲ್ ಪಾವತಿ ವ್ಯವಸ್ಥೆ, ಅದರ ಸುರಕ್ಷತೆ ಹಾಗೂ 'ಭೀಮ್ ಆ್ಯಪ್' ಕುರಿತು ಮಾಹಿತಿ ನೀಡಿದರು. ಕರಕುಶಲ ಅಂಗಡಿಯೊಂದರಲ್ಲಿ ಇದ್ದ ಅಯೋಧ್ಯೆಯ ರಾಮಮಂದಿರದ ಪ್ರತಿಕೃತಿಯನ್ನು ತೋರಿಸಿ, ಮಂದಿರದ ಬಗ್ಗೆ ಪ್ರಧಾನಿ ವಿವರಿಸಿದರು. ಡಿಜಿಟಲ್ ಪಾವತಿ ಮೂಲಕ ₹ 500 ಅನ್ನು ಅಂಗಡಿ ಮಾಲೀಕನಿಗೆ ಪಾವತಿಸಿದ ಮೋದಿ ಅವರು, ಆ ಪ್ರತಿಕೃತಿಯನ್ನು ಮ್ಯಾಕ್ರನ್ ಅವರಿಗೆ ಉಡುಗೊರೆಯಾಗಿ ನೀಡಿದರು.

ಬಳಿಕ ಸಮೀಪದ 'ಸಾಹು ಚಹಾ' ಅಂಗಡಿಯಲ್ಲಿ ಉಭಯ ನಾಯಕರು ಚಹ ಸವಿದರು. ಈ ಅಂಗಡಿಯ ಮಾಲೀಕನಿಗೂ ಡಿಜಿಟಲ್ ಪಾವತಿ ಮೂಲಕ ಹಣ ವರ್ಗಾಯಿಸಿದ ಮೋದಿ ಅವರು ಅದರ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂಬುದರ ಕುರಿತ ಮಾಹಿತಿಯನ್ನು ಫ್ರಾನ್ಸ್ ಅಧ್ಯಕ್ಷರಿಗೆ ತಿಳಿಸಿದರು.

ನಂತರ, ರೋಡ್ ಶೋ ಮೂಲಕ ಉಭಯ ನಾಯಕರು ಇತಿಹಾಸ ಪ್ರಸಿದ್ಧ ಹವಾಮಹಲ್‌ಗೆ ಭೇಟಿ ನೀಡಿದರು. 1799ರಲ್ಲಿ ಮಹಾರಾಜ ಸವಾಯಿ ಪ್ರತಾಪ್ ಸಿಂಗ್ ಅವರು ನಿರ್ಮಿಸಿದ 953 ಕಿಟಕಿಗಳನ್ನು ಹೊಂದಿರುವ ಹವಾಮಹಲ್‌ನ ಐತಿಹಾಸಿಕ ಮಹತ್ವ ಹಾಗೂ ಅಲ್ಲಿನ ವಾಸ್ತುಶಿಲ್ಪದ ಕುರಿತು ಮೋದಿ ಅವರು ಮ್ಯಾಕ್ರನ್‌ಗೆ ವಿವರಿಸಿದರು. ಉಭಯ ನಾಯಕರು ರಾತ್ರಿ ನಗರದ ರಾಂಬಾಗ್ ಪ್ಯಾಲೇಸ್ ಹೋಟೆಲ್‌ನಲ್ಲಿ ಭೋಜನ ಸವಿದು, ಪರಸ್ಪರ ಮಾತುಕತೆ ನಡೆಸಿದರು.

ರಾಜ್ಯಪಾಲ, ಸಿ.ಎಂರಿಂದ ಸ್ವಾಗತ: ಜೈಪುರಕ್ಕೆ ಗುರುವಾರ ಮಧ್ಯಾಹ್ನ ಬಂದ ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರನ್ ಮತ್ತು ಫ್ರಾನ್ಸ್ ನಿಯೋಗವನ್ನು ವಿಮಾನ ನಿಲ್ದಾಣದಲ್ಲಿ ರಾಜಸ್ಥಾನದ ರಾಜ್ಯಪಾಲ ಕಲ್ರಾಜ್ ಮಿಶ್ರಾ ಮತ್ತು ಮುಖ್ಯಮಂತ್ರಿ ಭಜನಲಾಲ್ ಶರ್ಮಾ ಅವರು ಬರಮಾಡಿಕೊಂಡರು. ಬಳಿಕ ಮ್ಯಾಕ್ರನ್ ಅವರು ಇಲ್ಲಿನ ಐತಿಹಾಸಿಕ ನೆಲೆಗಳು, ಅಂಬರ್ ಅರಮನೆ ಸೇರಿದಂತೆ ಕೆಲ ತಾಣಗಳನ್ನು ವೀಕ್ಷಿಸಿದರು. ಅಂಬರ್ ಕೋಟೆಯ ಬಳಿ ರಾಜಸ್ಥಾನದ ಚಿತ್ರಕಲೆಯನ್ನು ವೀಕ್ಷಿಸಿ, ಕಲಾವಿದರ ಜತೆ ಮಾತುಕತೆ ನಡೆಸಿದರು. ಅಲ್ಲಿಯೇ ಭಾರತದ ವಿದ್ಯಾರ್ಥಿಗಳೊಂದಿಗೆ ಅವರು ಸಂವಾದವನ್ನೂ ನಡೆಸಿದರು.

ಮುಖ್ಯಾಂಶಗಳು

- ಇಮ್ಯಾನುಯೆಲ್ ಮ್ಯಾಕ್ರನ್ ಗಣರಾಜ್ಯೋತ್ಸವ ಸಮಾರಂಭದ ಮುಖ್ಯ ಅತಿಥಿ
- ಜಂತರ್ ಮಂತರ್‌ನಿಂದ ತೆರೆದ ವಾಹನದಲ್ಲಿ ಸಾಗಿದ ಇಬ್ಬರೂ ನಾಯಕರು
- ರಾಮಮಂದಿರದ ಪ್ರತಿಕೃತಿ ತೋರಿಸಿ, ಮಂದಿರದ ಬಗ್ಗೆ ವಿವರಿಸಿದ ಮೋದಿ

ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ರಾತ್ರಿ ಜೈಪುರದಲ್ಲಿ ರೋಡ್ ಶೋ ನಡೆಸಿದರು –ಎಎಫ್‌ಪಿ ಚಿತ್ರ

ಕೇರಳ: ಭಾಷಣದ 2 ಪ್ಯಾರಾ ಓದಿದ ರಾಜ್ಯಪಾಲ!

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳ ವಿಧಾನಸಭೆಯ ಬಜೆಟ್ ಅಧಿವೇಶನ ಗುರುವಾರ ನಾಟಕೀಯ ಆರಂಭಕ್ಕೆ ಸಾಕ್ಷಿಯಾಯಿತು. ಬಜೆಟ್ ಅಧಿವೇಶನಕ್ಕೂ ಮುನ್ನ ಸದನವನ್ನು ಉದ್ದೇಶಿಸಿ ಭಾಷಣ ಮಾಡಿದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಆರಂಭಿಕ ಮತ್ತು ಕೊನೆಯ ಪ್ಯಾರಾ ಮಾತ್ರ ಓದಿದರು.

ಪಿಣರಾಯಿ ವಿಜಯನ್ ನೇತೃತ್ವದ ಸರ್ಕಾರ ಮತ್ತು ರಾಜ್ಯಪಾಲರ ನಡುವೆ ಕಳೆದ ಕೆಲ ಸಮಯಗಳಿಂದ ಜಟಾಪಟಿ ನಡೆಯುತ್ತಿದೆ. ರಾಜ್ಯಪಾಲರು ಭಾಷಣದ ಎರಡು ಪ್ಯಾರಾ ಮಾತ್ರ ಓದಿರುವುದು ಈ 'ಸಂಘರ್ಷದ' ಮುಂದುವರಿದ ಭಾಗ ಎನ್ನಲಾಗಿದೆ.

ಬೆಳಿಗ್ಗೆ 9ಕ್ಕೆ ಸದನಕ್ಕೆ ಬಂದ ರಾಜ್ಯಪಾಲರನ್ನು ಮುಖ್ಯಮಂತ್ರಿ ಹಾಗೂ ಸ್ಪೀಕರ್ ಎ.ಎನ್.ಶಂಶೀರ್ ಬರಮಾಡಿಕೊಂಡರು. ಭಾಷಣದ ಮೊದಲ ಪ್ಯಾರಾ ಓದಿದ ರಾಜ್ಯಪಾಲರು, ಇನ್ನು ಕೊನೆಯ ಪ್ಯಾರಾ ಓದುವುದಾಗಿ ಹೇಳಿದರು. ಕೊನೆಯ ಪ್ಯಾರಾ ಓದಿದ ಬಳಿಕ ಸದನದಿಂದ ನಿರ್ಗಮಿಸಿದರು.

ವಿರೋಧ ಪಕ್ಷ ಯುಡಿಎಫ್‌ನ ಸದಸ್ಯರು ರಾಜ್ಯಪಾಲರ ಕ್ರಮದ ವಿರುದ್ಧ ಪ್ರತಿಭಟಿಸಿದರು. 'ರಾಜ್ಯಪಾಲರು ಇಡೀ ಭಾಷಣ ಓದುವ ಅಗತ್ಯವಿಲ್ಲ' ಎಂದು ಸ್ಪೀಕರ್ ಹೇಳಿದರು. ರಾಜ್ಯಪಾಲರು ವಿಧಾನಸಭೆಗೆ ಅಗೌರವ ತೋರಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಹಾಗೂ ಸಿಪಿಎಂ ನಾಯಕ ಇ.ಪಿ.ಜಯರಾಜನ್ ಟೀಕಿಸಿದ್ದಾರೆ.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರನ್ನು ವಿಧಾನಸಭೆ ಅಧಿವೇಶನಕ್ಕೆ ಸ್ವಾಗತಿಸಿದರು –ಪಿಟಿಐ ಚಿತ್ರ

ಪತಿ–ಪತ್ನಿ ಸಂಬಂಧ ಹೇಗಿರಬೇಕೆಂದು ವಿವರಿಸಿದ ನ್ಯಾಯಮೂರ್ತಿ

ಹೈಕೋರ್ಟ್ ಆದೇಶದಲ್ಲಿ ಮನುಸ್ಮೃತಿ ಉಲ್ಲೇಖ

ರಾಂಚಿ (ಪಿಟಿಐ): ಪತ್ನಿಯೊಬ್ಬಳು ಪತಿಯಿಂದ ಜೀವನಾಂಶ ಕೇಳಿದ ಪ್ರಕರಣಕ್ಕೆ ಸಂಬಂಧಿಸಿದ ಆದೇಶ ನೀಡುವಾಗ ಜಾರ್ಖಂಡ್ ಹೈಕೋರ್ಟ್ ಮನುಸ್ಮೃತಿಯಲ್ಲಿ ಇರುವ ಅಂಶಗಳನ್ನು ಉಲ್ಲೇಖಿಸಿದೆ.

ಈ ಆದೇಶವು ಪತಿ, ಪತ್ನಿ ನಡುವಿನ ಸಂಬಂಧ ಹೇಗಿರಬೇಕು ಎಂಬುದನ್ನು ಹೇಳುತ್ತದೆ. ಮದುವೆಯ ನಂತರದಲ್ಲಿ ಹೆಣ್ಣನ್ನು ಗಂಡನ ಮನೆಯವರು ಹೇಗೆ ಸ್ವೀಕರಿಸುತ್ತಾರೆ ಎಂಬುದನ್ನು ವಿವರಿಸಲು ನ್ಯಾಯಮೂರ್ತಿ ಸುಭಾಷ್ ಚಂದ್ ಅವರು ಸುಪ್ರೀಂ ಕೋರ್ಟ್‌ನ ಮಾತುಗಳನ್ನು ಉಲ್ಲೇಖಿಸಿದ್ದಾರೆ.

ಋಗ್ವೇದ, ಯಜುರ್ವೇದ, ಮನುಸ್ಮೃತಿಯಲ್ಲಿ ಇರುವ ಸಾಲುಗಳನ್ನು ಮತ್ತು ತೆರೆಸಾ ಚಾಕೊ ಅವರ 'ಇಂಟ್ರಡಕ್ಷನ್ ಟು ಫ್ಯಾಮಿಲಿ ಲೈಫ್ ಎಜುಕೇಷನ್' ಎಂಬ ಪುಸ್ತಕದ ಸಾಲುಗಳನ್ನು ಕೂಡ ಉಲ್ಲೇಖಿಸಿದ್ದಾರೆ.

ಪಾಶ್ಚಿಮಾತ್ಯ ಜಗತ್ತಿನಲ್ಲಿ ಮದುವೆಯ ನಂತರದಲ್ಲಿ ಮಗ, ಕುಟುಂಬದಿಂದ ಬೇರೆಯಾಗುತ್ತಾನೆ. ಆದರೆ ಭಾರತದಲ್ಲಿ ಹೀಗೆ ಆಗುವುದಿಲ್ಲ ಎಂದು ನ್ಯಾಯಮೂರ್ತಿ ಹೇಳಿದ್ದಾರೆ. ಪ್ರತ್ಯೇಕವಾಗಲು ಬಲವಾದ ಹಾಗೂ ಸಮರ್ಥನೀಯವಾದ ಕಾರಣಗಳು ಇಲ್ಲದಿದ್ದರೆ, ಮದುವೆಯ ನಂತರ ಪತ್ನಿಯು ತನ್ನ ಪತಿಯ ಕುಟುಂಬದ ಜೊತೆ ಇರಬೇಕು ಎಂದು ಬಯಸಲಾಗುತ್ತದೆ ಎಂಬುದನ್ನು ಸುಪ್ರೀಂ ಕೋರ್ಟ್‌ನ ತೀರ್ಪೊಂದನ್ನು ಉಲ್ಲೇಖಿಸಿ ಅವರು ಹೇಳಿದ್ದಾರೆ.

ಪುರುಷ ಮತ್ತು ಮಹಿಳೆ ಮದುವೆಯ ನಂತರದಲ್ಲಿ ಹೇಗೆ ವರ್ತಿಸಬೇಕು ಎಂಬ ವಿಚಾರವಾಗಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ನಿರೀಕ್ಷೆಗಳು ಇರುತ್ತವೆ ಎಂದು ನ್ಯಾಯಮೂರ್ತಿ ಚಂದ್ ಅವರು ಚಾಕೊ ಅವರ ಪುಸ್ತಕವನ್ನು ಉಲ್ಲೇಖಿಸಿ ಹೇಳಿದ್ದಾರೆ. ಕುಟುಂಬದ ಪ್ರತಿ ಸದಸ್ಯನೂ ತನ್ನ ಹೊಣೆಯನ್ನು ನಿಭಾಯಿಸಿದರೆ ಮಾತ್ರ ಮದುವೆಯ ಉದ್ದೇಶ ಈಡೇರುತ್ತದೆ ಎಂದಿದ್ದಾರೆ.

ಪತಿಯ ಪಾತ್ರ ಏನಿರಬೇಕು ಎಂಬುದನ್ನು ಆದೇಶದಲ್ಲಿ ಹೇಳಲಾಗಿದೆ. ಪತಿಯು ಲೈಂಗಿಕತೆಯ ವಿಚಾರದಲ್ಲಿ ಸಂಗಾತಿಯಾಗಿರಬೇಕು, ಆತ ಜೊತೆಗಾರನಾಗಿ, ನಿಷ್ಠೆ ಹೊಂದಿದವನಾಗಿ, ನಿರ್ಧಾರ ಕೈಗೊಳ್ಳುವವನಾಗಿ ಇರಬೇಕು. ಪತಿಯು ಪತ್ನಿಗೆ ಭಾವನಾತ್ಮಕ ಬೆಂಬಲ ನೀಡುವವನಾಗಿರಬೇಕು ಎಂದು ಆದೇಶದಲ್ಲಿ ಹೇಳಲಾಗಿದೆ.

ಪತ್ನಿಯು ಮಮತೆ ತುಂಬಿದ ಜೊತೆಗಾರ್ತಿ ಆಗಿರಬೇಕು, ಲೈಂಗಿಕತೆಯ ವಿಚಾರದಲ್ಲಿ ಒಳ್ಳೆಯ ಸಂಗಾತಿಯಾಗಿರಬೇಕು, ನಿಷ್ಠೆ ಹೊಂದಿರುವವಳಾಗಿ, ಸಾಮಾಜಿಕ ಕೆಲಸಗಳಲ್ಲಿ ಪತಿಗೆ ಸಹಕಾರ ನೀಡಬೇಕು ಎಂದು ಹೇಳಲಾಗಿದೆ. ದಂಪತಿಯ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ಹೊಣೆಯನ್ನು ಪತ್ನಿ ವಹಿಸಿಕೊಳ್ಳಬೇಕು, ಪತಿಯ ಕೆಲಸಗಳಲ್ಲಿ ಆಸಕ್ತಿ ತೋರಿಸಬೇಕು, ಅವನ ಕೆಲಸಗಳನ್ನು ಅರ್ಥ ಮಾಡಿಕೊಳ್ಳಬೇಕು ಮತ್ತು ಆತನಿಗೆ ಬೌದ್ಧಿಕ ಸಾಹಚರ್ಯ ಒದಗಿಸಬೇಕು ಎಂದು ಕೂಡ ವಿವರಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಅಪಘಾತ: ಮಾಘ ಸ್ನಾನಕ್ಕೆ ತೆರಳುತ್ತಿದ್ದ 12 ಮಂದಿ ಸಾವು

ಷಹಜಹಾನ್‌ಪುರ (ಉತ್ತರ ಪ್ರದೇಶ, ಪಿಟಿಐ): ಆಟೊರಿಕ್ಷಾ ಹಾಗೂ ಟ್ರಕ್ ನಡುವೆ ಗುರುವಾರ ನಸುಕಿನಲ್ಲಿ ಸಂಭವಿಸಿದ ಮುಖಾಮುಖಿ ಡಿಕ್ಕಿಯಿಂದಾಗಿ, ಮೂವರು ಮಹಿಳೆಯರು ಸೇರಿದಂತೆ 12 ಜನರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಹುಣ್ಣಿಮೆಯ ದಿನದಂದು ಮಾಘಸ್ನಾನ ಮಾಡಲು ಇವರೆಲ್ಲರೂ ಫಾರೂಖಾಬಾದ್ ಬಳಿ ಹರಿಯುವ ಗಂಗಾ ನದಿಯ ಘಾಟಿಯಾ ಘಾಟ್‌ಗೆ ಆಟೊದಲ್ಲಿ ಹೋಗುತ್ತಿದ್ದರು ಎಂದು ಗೊತ್ತಾಗಿದೆ.

'ಮುಂಜಾನೆ ದಟ್ಟವಾಗಿ ಮಂಜು ಕವಿದಿದ್ದ ಕಾರಣ ರಸ್ತೆಯಲ್ಲಿ ಎದುರು ಬದಿ ಸರಿಯಾಗಿ ಗೋಚರಿಸುತ್ತಿರಲಿಲ್ಲ. ಟ್ರಕ್ ಎದುರಿಗೆ ಬರುತ್ತಿರುವುದು ಆಟೊ ಚಾಲಕನಿಗೆ ಗೊತ್ತಾಗಿಲ್ಲ' ಎಂದು ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕುಮಾರ್ ಮೀನಾ ಅವರು ಮಾಹಿತಿ ನೀಡಿದ್ದಾರೆ.

ಕೊಲೆ ಆರೋಪಿಗೆ ಸೇರಿದ್ದ ಅಕ್ರಮ ಕಟ್ಟಡ ನೆಲಸಮ

ಕವರ್ಧಾ (ಛತ್ತೀಸಗಢ) (ಪಿಟಿಐ): ಇಲ್ಲಿಯ ಗೋಶಾಲೆಯೊಂದರ ಕಾರ್ಮಿಕನನ್ನು ಹತ್ಯೆಗೈದಿದ್ದ ಪ್ರಕರಣದ ಮುಖ್ಯ ಆರೋಪಿಗೆ ಸೇರಿದ್ದ ಅಕ್ರಮ ಕಟ್ಟಡವನ್ನು ಬುಲ್ಡೋಜರ್ ಬಳಸಿ ಗುರುವಾರ ನೆಲಸಮ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಧ್ರಾಮ್ ಯಾದವ್ ಎಂಬವರನ್ನು ಜನವರಿ 21ರಂದು ಕವರ್ಧಾದ ಹೊರವಲಯದಲ್ಲಿ ಹತ್ಯೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಆರು ಮಂದಿ ಆರೋಪಿಗಳಿದ್ದು, ಅಯಾಜ್ ಖಾನ್ ಎಂಬಾತ ಪ್ರಮುಖ ಆರೋಪಿ ಆಗಿದ್ದಾನೆ.

ಅಯಾಜ್ ಮನೆಯ ಮುಂಭಾಗದಲ್ಲಿ ಭೂಮಿ ಒತ್ತುವರಿ ಮಾಡಿ ಅಂಗಡಿಯ ಮಳಿಗೆಯನ್ನು ನಿರ್ಮಿಸಲಾಗಿತ್ತು. ಸಂಬಂಧಪಟ್ಟ ಅಧಿಕಾರಿಗಳಿಂದ ಅನುಮತಿಯನ್ನೂ ಪಡೆದಿರಲಿಲ್ಲ. ಕವರ್ಧಾದ ಪೌರಾಡಳಿತ ಸಿಬ್ಬಂದಿ ಮತ್ತು ಪೊಲೀಸರು ಆತನ ನಿವಾಸಕ್ಕೆ ತೆರಳಿ ಅಕ್ರಮವಾಗಿ ನಿರ್ಮಿಸಿದ್ದ ಕಟ್ಟಡವನ್ನು ನೆಲಸಮಗೊಳಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

'ದೇವಸ್ಥಾನದ ಅವಶೇಷದ ಮೇಲೆ ಜ್ಞಾನವಾಪಿ ಮಸೀದಿ'

ವಾರಾಣಸಿ (ಪಿಟಿಐ): ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ ವೈಜ್ಞಾನಿಕ ಸಮೀಕ್ಷೆ ನಡೆಸಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಸಿದ್ಧಪಡಿಸಿರುವ ವರದಿಯು, ಈ ಮಸೀದಿಯನ್ನು ಅದಾಗಲೇ ಇದ್ದ ದೇವಸ್ಥಾನದ ಅವಶೇಷಗಳ ಮೇಲೆ ನಿರ್ಮಿಸಲಾಗಿದೆ ಎಂಬುದಾಗಿ ಸೂಚಿಸುತ್ತಿದೆ ಎಂದು ಹಿಂದೂ ಅರ್ಜಿದಾರರ ಪರ ವಕೀಲ ವಿಷ್ಣು ಶಂಕರ್ ಜೈನ್ ಗುರುವಾರ ಹೇಳಿದ್ದಾರೆ.

839 ಪುಟಗಳ ಸಮೀಕ್ಷಾ ವರದಿಯ ಪ್ರತಿಯು ಪ್ರಕರಣದ ಸಂಬಂಧಪಟ್ಟವರಿಗೆ ಕೋರ್ಟ್‌ನಿಂದ ಲಭ್ಯವಾಗಿದೆ ಎಂದು ಜೈನ್ ಹೇಳಿದ್ದಾರೆ. ಅದಾಗಲೇ ಇದ್ದ ದೇವಸ್ಥಾನವನ್ನು ಧ್ವಂಸಗೊಳಿಸಿ, ಅದರ ಅವಶೇಷಗಳ ಮೇಲೆ ಮಸೀದಿಯನ್ನು ನಿರ್ಮಿಸಲಾಗಿದೆ ಎಂಬುದನ್ನು ಸಮೀಕ್ಷಾ ವರದಿಯು ಸ್ಪಷ್ಟಪಡಿಸುತ್ತಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ದೇವಸ್ಥಾನದ ಅಸ್ತಿತ್ವದ ಬಗ್ಗೆ ಸಾಕಷ್ಟು ಸಾಕ್ಷ್ಯಗಳು ಸಮೀಕ್ಷಾ ವರದಿಯಲ್ಲಿ ಇವೆ ಎಂದು ಅವರು ಹೇಳಿದ್ದಾರೆ. ಹಿಂದೂ ಹಾಗೂ ಮುಸ್ಲಿಂ ಅರ್ಜಿದಾರರು ಸೇರಿದಂತೆ ಒಟ್ಟು 11 ಮಂದಿ ಈ ಸಮೀಕ್ಷೆಯ ವರದಿಯ ಪ್ರತಿ ತಮಗೆ ಬೇಕು ಎಂದು ಕೋರಿ ಅರ್ಜಿ ಸಲ್ಲಿಸಿದ್ದರು. ಜ್ಞಾನವಾಪಿ ಮಸೀದಿಯು ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ಹೊಂದಿಕೊಂಡಿದೆ.

2021-22 ರಲ್ಲಿ 4.33 ಕೋಟಿ ವಿದ್ಯಾರ್ಥಿಗಳು ಪ್ರವೇಶ

ಉನ್ನತ ಶಿಕ್ಷಣ: ಪ್ರವೇಶಾತಿ ಹೆಚ್ಚಳ

ನವದೆಹಲಿ (ಪಿಟಿಐ): ದೇಶದಲ್ಲಿ ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವವರ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದು, 2021-22ರ ಅವಧಿಯಲ್ಲಿ ಒಟ್ಟು 4.33 ಕೋಟಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದಿದ್ದಾರೆ.

ಅದಕ್ಕೂ ಹಿಂದಿನ ಶೈಕ್ಷಣಿಕ ವರ್ಷಕ್ಕೆ ಹೋಲಿಸಿದರೆ, ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದವರ ಸಂಖ್ಯೆಯಲ್ಲಿ 19 ಲಕ್ಷದಷ್ಟು ಏರಿಕೆಯಾಗಿದೆ ಎಂದು ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆಯ (ಎಐಎಸ್‌ಎಚ್‌ಇ) ವರದಿ ತಿಳಿಸಿದೆ. ಕೇಂದ್ರ ಶಿಕ್ಷಣ ಇಲಾಖೆಯು ವರದಿಯನ್ನು ಗುರುವಾರ ಬಿಡುಗಡೆ ಮಾಡಿದೆ. 2020-21 ರಲ್ಲಿ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದವರ ಸಂಖ್ಯೆ 4.14 ಕೋಟಿಯಷ್ಟಿತ್ತು.

ಮುಖ್ಯಾಂಶಗಳು

- ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆಯ ವರದಿ ಬಿಡುಗಡೆ
- 2020–21 ರಲ್ಲಿ 4.14 ಕೋಟಿ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು

'ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಹೆಣ್ಣುಮಕ್ಕಳ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದೆ. 2020-21ರಲ್ಲಿ 2.01 ಕೋಟಿಯಷ್ಟಿದ್ದ ಹೆಣ್ಣು ಮಕ್ಕಳ ಸಂಖ್ಯೆ 2021-22ರಲ್ಲಿ 2.07 ಕೋಟಿಗೆ ಹೆಚ್ಚಳವಾಗಿದೆ' ಎಂದು ವರದಿ ಹೇಳಿದೆ.

'ಪಿಎಚ್.ಡಿಗೆ ಪ್ರವೇಶ ಪಡೆದ ಹೆಣ್ಣುಮಕ್ಕಳ ಸಂಖ್ಯೆ ಕಳೆದ ಏಳು ವರ್ಷಗಳಲ್ಲಿ ಇಮ್ಮಡಿಯಾಗಿದೆ. 2014-15 ರಲ್ಲಿ 0.48 ಲಕ್ಷ ಮಂದಿ ಪಿಎಚ್.ಡಿಗೆ ಪ್ರವೇಶ ಪಡೆದಿದ್ದರೆ, 2021-22ರಲ್ಲಿ ಈ ಸಂಖ್ಯೆ 0.99 ಲಕ್ಷಕ್ಕೆ ಏರಿಕೆಯಾಗಿದೆ' ಎಂಬ ಅಂಶ ವರದಿಯಲ್ಲಿದೆ.

ಅಂಕಿ ಅಂಶಗಳು

2.07 ಕೋಟಿ – 2021–22ರಲ್ಲಿ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದ ಹೆಣ್ಣುಮಕ್ಕಳು

27.1 ಲಕ್ಷ – ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು

12.02 ಲಕ್ಷ – ಈಶಾನ್ಯ ರಾಜ್ಯಗಳ ವಿದ್ಯಾರ್ಥಿಗಳ ಸಂಖ್ಯೆ

'2021-22 ರಲ್ಲಿ ವಿಜ್ಞಾನ ವಿಷಯಗಳಲ್ಲಿ ಉನ್ನತ ಶಿಕ್ಷಣಕ್ಕೆ ಒಟ್ಟು 57.2 ಲಕ್ಷ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಇದರಲ್ಲಿ ಹೆಣ್ಣುಮಕ್ಕಳು (29.8 ಲಕ್ಷ), ಗಂಡು ಮಕ್ಕಳನ್ನು (27.4 ಲಕ್ಷ) ಹಿಂದಿಕ್ಕಿದ್ದಾರೆ' ಎಂದಿದೆ.

'ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಸಂಖ್ಯೆ ಕಳೆದ ಏಳು ವರ್ಷಗಳಲ್ಲಿ ಶೇ.65.2 ಏರಿಕೆಯಾಗಿದೆ. 2014-15 ರಲ್ಲಿ 16.41 ಲಕ್ಷ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರೆ, 2021-22 ರಲ್ಲಿ ಈ ಸಂಖ್ಯೆ 27.1 ಲಕ್ಷಕ್ಕೆ ಏರಿಕೆಯಾಗಿದೆ' ಎಂದು ವರದಿ ತಿಳಿಸಿದೆ.

ಹತ್ಯೆ ಕೃತ್ಯಗಳಲ್ಲಿ 'ಭಾರತೀಯ ಏಜೆಂಟ'ರ ಪಾತ್ರ –ಪಾಕ್ • ತಾನು ಬೆಳೆಸಿದ್ದನ್ನೇ ಪಾಕ್ ಅನುಭವಿಸುತ್ತಿದೆ: ಭಾರತ ಪ್ರತ್ಯುತ್ತರ

'ಆಧಾರರಹಿತ, ದುರುದ್ದೇಶದ ಆರೋಪ'

ಭಾರತದ ಪ್ರತಿಕ್ರಿಯೆ

- ಪಾಕ್ ಉಗ್ರರ ನೆಲೆ ಎಂಬುದು ಜಗತ್ತಿಗೆ ಗೊತ್ತು ಎಂದು ವ್ಯಂಗ್ಯ
- ತನ್ನ ತಪ್ಪಿಗೆ ಅನ್ಯ ದೂಷಣೆ ಸಮರ್ಥನೀಯವಲ್ಲ, ಪರಿಹಾರವೂ ಅಲ್ಲ
- ಇದು, ಭಾರತ ವಿರೋಧಿ ಅಪಪ್ರಚಾರದ ಮತ್ತೊಂದು ಯತ್ನ

ನವದೆಹಲಿ (ಪಿಟಿಐ): 'ಇಬ್ಬರು ಪಾಕಿಸ್ತಾನೀಯರ ಹತ್ಯೆಯಲ್ಲಿ 'ಭಾರತೀಯ ಏಜೆಂಟರ' ಪಾತ್ರವಿದೆ' ಎಂಬ ಪಾಕಿಸ್ತಾನದ ಆರೋಪವನ್ನು ಭಾರತ ಸಾರಾಸಗಟಾಗಿ ತಳ್ಳಿಹಾಕಿದೆ. 'ಇದು ಆಧಾರರಹಿತ ಮತ್ತು ದುರುದ್ದೇಶದ ಅಪಪ್ರಚಾರ' ಎಂದು ಕಟುವಾಗಿ ಪ್ರತಿಕ್ರಿಯಿಸಿದೆ.

'ಪಾಕಿಸ್ತಾನದ ಸಿಯಾಲ್ ಕೋಟ್ ಮತ್ತು ರಾವಲ್‌ಕೋಟ್‌ನಲ್ಲಿ ಕಳೆದ ವರ್ಷ ನಡೆದಿದ್ದ ಎರಡು ಪ್ರತ್ಯೇಕ ಹತ್ಯೆ ಪ್ರಕರಣಗಳಲ್ಲಿ 'ಭಾರತೀಯ ಏಜೆಂಟ'ರ ಪಾತ್ರವಿದೆ. ಈ ಬಗ್ಗೆ ಸ್ಪಷ್ಟ ಆಧಾರವಿದೆ' ಎಂದು ಪಾಕಿಸ್ತಾನ ಗುರುವಾರ ಆರೋಪಿಸಿತ್ತು.

ಇದಕ್ಕೆ ಹಿಂದೆಯೇ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, 'ಇದು, ಆಧಾರವಿಲ್ಲದ, ದುರುದ್ದೇಶದ ಆರೋಪ. ಭಾರತ ವಿರೋಧಿ ಪ್ರಚಾರ ನಡೆಸುವ ಪಾಕ್‌ನ ಮತ್ತೊಂದು ಯತ್ನ' ಎಂದು ಟೀಕಿಸಿದರು.

'ಭಾರತವು ಪಾಕಿಸ್ತಾನದ ನೆಲದಲ್ಲಿ ಗಡಿಯಾಚೆಗಿನ ಮತ್ತು ಕಾನೂನು ವಿರೋಧಿ ಹತ್ಯೆಯಲ್ಲಿ ತೊಡಗಿದೆ' ಎಂದು ಪಾಕಿಸ್ತಾನದ ವಿದೇಶಾಂಗ ಕಾರ್ಯದರ್ಶಿ ಮೊಹಮ್ಮದ್ ಸೈರಸ್ ಸಜ್ಜದ್ ಖಾಜಿ ಇಸ್ಲಾಮಾಬಾದ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದರು.

ಇದರ ಬೆನ್ನಲ್ಲೇ ಪ್ರತಿಕ್ರಿಯಿ ಸಿದ ರಣಧೀರ್ ಜೈಸ್ವಾಲ್, 'ಜಗತ್ತಿಗೆ ಗೊತ್ತಿರುವಂತೆ ಪಾಕಿಸ್ತಾನವು ಸುದೀರ್ಘ ಕಾಲದಿಂದ ಭಯೋತ್ಪಾದನೆ ಕೃತ್ಯ, ಸಂಘಟಿತ ಅಪರಾಧ ಮತ್ತು ಅನಧಿಕೃತ ಚಟುವಟಿಕೆಗಳಿಗೆ ಮೂಲನೆಲೆಯಾಗಿದೆ' ಎಂದು ಟೀಕಿಸಿದರು.

'ಪಾಕಿಸ್ತಾನವು ಈಗ ತಾನು ಬೆಳೆಸಿದ್ದರ ಫಲವನ್ನು ಅನುಭವಿಸುತ್ತಿದೆ. ತನ್ನ ತಪ್ಪಿಗಾಗಿ ಈಗ ಅನ್ಯ ದೇಶವನ್ನು ದೂಷಿಸುವುದು ಸಮರ್ಥನೀಯವೂ ಅಲ್ಲ ಹಾಗೂ ಸಮಸ್ಯೆಗೆ ಅದು ಪರಿಹಾರವೂ ಅಲ್ಲ' ಎಂದು ಕಟುವಾಗಿ ಪ್ರತಿಕ್ರಿಯಿಸಿದ್ದಾರೆ.

ಭಯೋತ್ಪಾದನೆಗೆ ಉತ್ತೇಜನ ನೀಡಿದ್ದಕ್ಕೆ ಮತ್ತು ಹಿಂಸಾಚಾರ ನಡೆಸಿದ್ದಕ್ಕೆ ಫಲವನ್ನು ಸ್ವತಃ ಅನುಭವಿಸಬೇಕಾದಿತು ಎಂದು ಭಾರತ ಮತ್ತು ಹಲವು ರಾಷ್ಟ್ರಗಳು ಈಗಾಗಲೇ ಸಾರ್ವಜನಿಕವಾಗಿಯೇ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದ್ದವು ಎಂದೂ ಅವರು ಉಲ್ಲೇಖಿಸಿದರು.

ಜೈಶ್ ಎ ಮೊಹಮ್ಮದ್ ಸಂಘಟನೆ ಸದಸ್ಯ ಶಹೀದ್ ಲತೀಫ್ ಹತ್ಯೆ ಕಳೆದ ವರ್ಷ ಅಕ್ಟೋಬರ್ 11ರಂದು ಪಾಕಿಸ್ತಾನದ ಸಿಯಾಲ್‌ಕೋಟ್‌ನಲ್ಲಿ ನಡೆದಿದ್ದರೆ, ಸೆಪ್ಟೆಂಬರ್ 8ರಂದು ಲಷ್ಕರ್ ಎ ತಯಬಾ ಸಂಘಟನೆ ಸದಸ್ಯ ರಿಯಾಜ್ ಅಹಮ್ಮದ್ ಹತ್ಯೆ ಪಾಕ್ ಆಕ್ರಮಿತ ಕಾಶ್ಮಿರದ ರಾವಲ್‌ಕೋಟ್‌ನಲ್ಲಿ ನಡೆದಿತ್ತು.

ಶಹೀದ್ ಲತೀಫ್ 2016ರಲ್ಲಿ ಪಠಾನ್‌ಕೋಟ್‌ನಲ್ಲಿ ಭಾರತೀಯ ವಾಯುಪಡೆ ಮೇಲೆ ನಡೆದಿದ್ದ ದಾಳಿಯ ರೂವಾರಿಯಾಗಿದ್ದ. ರಿಯಾಜ್ ಅಹಮ್ಮದ್ ಮೇಲೆ ಜಮ್ಮು ಮತ್ತು ಕಾಶ್ಮೀರದ ಧಾಂಗ್ರಿಯಲ್ಲಿ ನಡೆದಿದ್ದ ಉಗ್ರರ ದಾಳಿ ಕೃತ್ಯದ ಸಂಚು ರೂಪಿಸಿದ್ದ ಆರೋಪವಿತ್ತು.

ಈ ಹತ್ಯೆಗಳನ್ನು ಉಲ್ಲೇಖಿಸಿದ್ದ ಪಾಕ್ ವಿದೇಶಾಂಗ ಕಾರ್ಯದರ್ಶಿ ಅವರು, 'ಭಾರತೀಯ ಏಜೆಂಟರು ತಂತ್ರಜ್ಞಾನ ಬಳಸಿ ಪಾಕಿಸ್ತಾನ ನೆಲದಲ್ಲಿ ಹತ್ಯೆ ಕೃತ್ಯ ನಡೆಸುತ್ತಿದ್ದರು. ಸುರಕ್ಷಿತ ಅಡಗುತಾಣವಾಗಿ ವಿದೇಶಿ ನೆಲವನ್ನು ಬಳಸುತ್ತಿದ್ದಾರೆ' ಎಂದು ಆರೋಪಿಸಿದ್ದರು.

ಭಾರತೀಯ ಏಜೆಂಟರು ಕೃತ್ಯ ಎಸಗಲು ಹಣಕಾಸು ನೆರವು ನೀಡುತ್ತಿದ್ದು, ಕ್ರಿಮಿನಲ್‌ಗಳು, ಉಗ್ರರಿಗೆ ಬೆಂಬಲ ನಿಡುತ್ತಿದ್ದಾರೆ ಎಂದು ಹೇಳಿದ್ದರು. ಈ ಆರೋಪಕ್ಕೆ ಪೂರಕವಾಗಿ ಭಾರತದ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳ ಖಾತೆಗಳತ್ತ ಬೆರಳು ತೋರಿದ್ದರು. 'ಶಾಹೀದ್ ಲತೀಫ್ ಹತ್ಯೆ ಪ್ರಕರಣದ ತನಿಖೆ ವೇಳೆ ಭಾರತೀಯ ಏಜೆಂಟ್ ಯೋಗೇಶ್ ಕುಮಾರ್ ಕೈವಾಡ ಇರುವುದು ಪತ್ತೆಯಾಗಿತ್ತು' ಎಂದು ಆರೋಪಿಸಿದ್ದರು.

ಸಂಘರ್ಷಗಳಿಗೆ ಶಾಂತಿಯುತ ಪರಿಹಾರ –ಮುರ್ಮು ಆಶಯ

ದ್ರೌಪದಿ ಮುರ್ಮು

ನವದೆಹಲಿ (ಪಿಟಿಐ): 'ಜಗತ್ತಿನ ವಿವಿಧೆಡೆ ಮೂಡಿರುವ ಸಂಘರ್ಷವು ಶಾಂತಿಯತ ಮಾರ್ಗದಲ್ಲಿ ಪರಿಹಾರವಾಗಲಿದೆ' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

75ನೇ ಗಣರಾಜ್ಯೋತ್ಸವದ ಮುನ್ನಾದಿನವಾದ ಗುರುವಾರ ದೇಶವನ್ನುದ್ದೇಶಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ವಿವಿಧೆಡೆ ಸಂಘರ್ಷ ಪರಿಸ್ಥಿತಿ ಮೂಡಿದೆ. ಇದು, ಮನುಕುಲದ ಸರಣಿ ದುರಂತಗಳಿಗೂ ಕಾರಣವಾಗಿದೆ ಎಂದರು.

ಇದಕ್ಕೆ ಪರಿಹಾರ ಕ್ರಮಗಳಿಗೆ ಬದಲಿಗೆ ಭಯ ಮೂಡಿಸುವ ಮತ್ತು ಪೂರ್ವಗ್ರಹ ಪೀಡಿತ ಮಾತುಗಳು ಕೇಳಿಬರುತ್ತಿವೆ. ಗುರಿ ಸಾಧನೆಗೆ ಕಷ್ಟವಾದರೂ ಅಹಿಂಸೆಯೇ ಉತ್ತಮ ಮಾರ್ಗ ಎಂದು ಭಾರತ ಈಗಾಗಲೇ ಹಲವು ಬಾರಿ ನಿರೂಪಿಸಿದೆ ಎಂದರು.

ರಷ್ಯಾ–ಉಕ್ರೇನ್ ಯುದ್ಧ, ಗಾಜಾ ಪಟ್ಟಿಯಲ್ಲಿ ಮೂಡಿರುವ ಸಂಘರ್ಷದ ವಾತಾವರಣ ಉಲ್ಲೇಖಿಸಿ ಅವರು ಈ ಮಾತು ಹೇಳಿದರು.

ಪರಿಸರ ಬಿಕ್ಕಟ್ಟಿಗೆ ನೆರವು: ಜಾಗತಿಕವಾಗಿ ಮೂಡಿರುವ ಪರಿಸರದ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳಲು ಭಾರತದ ಪ್ರಾಚೀನ ವಿವೇಕ ನೆರವಾಗಬಹುದು ಎಂದು ರಾಷ್ಟ್ರಪತಿ ಅಭಿಪ್ರಾಯಪಟ್ಟರು.

ಮರುಬಳಕೆ ಇಂಧನ ಸಂಪನ್ಮೂಲ ಬಳಕೆಗೆ ಉತ್ತೇಜನ ನೀಡುವಲ್ಲಿ ಭಾರತ ಮುಂಚೂಣಿಯಲ್ಲಿದೆ. ಪರಿಸರ ಪ್ರಜ್ಞೆ ಜಾಗೃತಗೊಳಿಸುವ ಜೀವನಶೈಲಿಗೆ ಪ್ರೋತ್ಸಾಹ ನೀಡಲು ಭಾರತ 'ಲೈಫ್ ಮೂವ್‌ಮೆಂಟ್'ಗೆ ಚಾಲನೆ ನೀಡಿದೆ ಎಂದು ಸ್ಮರಿಸಿದರು.

ಜಿಡಿಪಿಯಲ್ಲಿ ಪ್ರಸಕ್ತ ವರ್ಷ ಶೇ 7.3 ಅಭಿವೃದ್ಧಿ ನಿರೀಕ್ಷೆ. ಇದು ದೇಶದ ಅದ್ವಿತೀಯ ಎಂದು ಶ್ಲಾಘಿಸಿದ ಅವರು, ಆಡಳಿತಶೈಲಿ ಸುಧಾರಣೆ, ಮಹಿಳಾ ಸಬಲೀಕರಣಕ್ಕೆ ನಾರಿ ಶಕ್ತಿ ವಂದನಾ ಅಧಿನಿಯಮ ಸಹಕಾರಿಯಾಗಲಿದೆ ಎಂದು ಹೇಳಿದರು.

ಆರು ಮಂದಿ ವೀರರಿಗೆ ಕೀರ್ತಿ ಚಕ್ರ

ಪ್ರಾಂಜಲ್‌ಗೆ ಶೌರ್ಯ ಪ್ರಶಸ್ತಿ

ನವೆಂಬರ್‌ನಲ್ಲಿ ಭಯೋತ್ಪಾದಕರ ಗುಂಡಿಗೆ ಬಲಿಯಾದ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ ಅವರಿಗೆ ಮರಣೋತ್ತರವಾಗಿ ಶೌರ್ಯ ಪ್ರಶಸ್ತಿ ಘೋಷಿಸಲಾಗಿದೆ. ಪ್ರಾಂಜಲ್ ಅವರು ಕರ್ನಾಟಕದವರು.

ಅಸ್ಸಾಂ ರೈಫಲ್ಸ್‌ನ ರೈಫಲ್‌ಮ್ಯಾನ್ ಅಲೋಕ್ ರಾವ್ ಅವರಿಗೂ ಮರಣೋತ್ತರವಾಗಿ ಶೌರ್ಯ ಪ್ರಶಸ್ತಿ ಘೋಷಿಸಲಾಗಿದೆ.

ನವದೆಹಲಿ: ಭಾರತೀಯ ಸೇನೆಯ ಆರು ಮಂದಿ ವೀರರನ್ನು ಕೀರ್ತಿ ಚಕ್ರ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಆರು ಮಂದಿ ಪೈಕಿ ಮೂವರು ಈ ಪ್ರಶಸ್ತಿಯನ್ನು ಮರಣೋತ್ತರವಾಗಿ ಪಡೆಯುತ್ತಿದ್ದಾರೆ.

ಶಾಂತಿಕಾಲದ ಎರಡನೆಯ ಅತ್ಯುನ್ನತ ಶೌರ್ಯ ಪ್ರಶಸ್ತಿ ಇದು. 21 ಪ್ಯಾರಾಚೂಟ್ ರೆಜಿಮೆಂಟ್‌ನ ಮೇಜರ್ ದಿಗ್ವಿಜಯ್ ಸಿಂಗ್, 4 ಸಿಖ್ ರೆಜಿಮೆಂಟ್‌ನ ಮೇಜರ್ ದೀಪೇಂದ್ರ ವಿಕ್ರಮ್, 21 ಮಹರ್‌ನ ಹವಾಲ್ದಾರ್ ಪವನ್ ಕುಮಾರ್ ಯಾದವ್ ಅವರು ರಾಷ್ಟ್ರಪತಿಯವರಿಂದ ಕೀರ್ತಿ ಚಕ್ರ ಪ್ರಶಸ್ತಿ ಸ್ವೀಕರಿಸಲಿದ್ದಾರೆ.

ಆರ್ಮಿ ಮೆಡಿಕಲ್ ಕೋರ್‌ನ ಕ್ಯಾಪ್ಟನ್ ಅಂಶುಮಾನ್ ಸಿಂಗ್, ಪ್ಯಾರಾಚೂಟ್ ರೆಜಿಮೆಂಟ್‌ನ 9ನೆಯ ತುಕಡಿಯ ಹವಾಲ್ದಾರ್ ಅಬ್ದುಲ್ ಮಜಿದ್, 55 ಗ್ರೆನೆಡಿಯರ್ಸ್‌ನ ಸಿಪಾಯಿ ಪವನ್ ಕುಮಾರ್ ಅವರು ಮರಣೋತ್ತರವಾಗಿ ಈ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಈ ಬಾರಿ ಅಶೋಕಚಕ್ರ ಪ್ರಶಸ್ತಿಯನ್ನು ಘೋಷಿಸಿಲ್ಲ. 16 ಮಂದಿಗೆ ಶೌರ್ಯ ಚಕ್ರ (ಇದರಲ್ಲಿ ಇಬ್ಬರಿಗೆ ಮರಣೋತ್ತರ), 53 ಮಂದಿಗೆ ಸೇನಾ ಪದಕ (ಏಳು ಮಂದಿಗೆ ಮರಣೋತ್ತರವಾಗಿ), ಒಬ್ಬರಿಗೆ ನೌಸೇನಾ ಪದಕ ಹಾಗೂ ನಾಲ್ಕು ಮಂದಿಗೆ ವಾಯುಸೇನಾ ಪದಕ ಘೋಷಿಸಲಾಗಿದೆ ಎಂದು ರಕ್ಷಣಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಶೌರ್ಯಚಕ್ರ ಪ್ರಶಸ್ತಿಗೆ ಆಯ್ಕೆಯಾದವರು: ಮಾನೆಓ ಫ್ರಾನ್ಸಿಸ್ (21 ಪ್ಯಾರಾಚೂಟ್ ರೆಜಿಮೆಂಟ್), ಮೇಜರ್ ಅಮನದೀಪ್ ಜಾಖಡ್ (4 ಸಿಖ್ ರೆಜಿಮೆಂಟ್), ನಯೀಬ್ ಸುಬೆದಾರ್ ಬರಿಯಾ ಸಂಜಯ್ ಕುಮಾರ್ ಭಮರ್ ಸಿಂಗ್ (ಮಹಾರ್ ರೆಜಿಮೆಂಟ್‌ನ), ಹವಾಲ್ದಾರ್ ಸಂಜಯ್ ಕುಮಾರ್ (9 ಅಸ್ಸಾಂ ರೈಫಲ್ಸ್) ಮತ್ತು ಪರ್ಷೋತ್ತಮ್ ಕುಮಾರ್ (ರಾಷ್ಟ್ರೀಯ ರೈಫಲ್ಸ್), ಅಕ್ಷತ್ ಉಪಾಧ್ಯಾಯ (ಜಾಟ್ ರೆಜಿಮೆಂಟ್).

ಭಾರತೀಯ ನೌಕಾಪಡೆಯ ಲೆಫ್ಟಿನೆಂಟ್ ಬಿಮಲ್ ರಂಜನ್ ಬೆಹೆರಾ ಮತ್ತು ವಾಯುಪಡೆಯ ವಿಂಗ್ ಕಮಾಂಡರ್ ಶೈಲೇಶ್ ಸಿಂಗ್, ಫ್ಲೈಟ್ ಲೆಫ್ಟಿನೆಂಟ್ ಹೃಷಿಕೇಶ್ ಜಯನ್, ಸಿಆರ್‌ಪಿಎಫ್‌ನ ಸಹಾಯಕ ಕಮಾಂಡೆಂಟ್ ಬಿಭೋರ್ ಕುಮಾರ್ ಸಿಂಗ್ ಅವರಿಗೂ ಶೌರ್ಯ ಪ್ರಶಸ್ತಿ ಘೋಷಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದ ಪೊಲೀಸರಾದ ಮೋಹನ್ ಲಾಲ್, ಅಮಿತ್ ರೈನಾ, ಫರೋಜ್ ಅಹಮದ್ ದರ್ ಮತ್ತು ವರುಣ್ ಸಿಂಗ್ ಅವರಿಗೆ ಶೌರ್ಯಚಕ್ರ ಘೋಷಣೆ ಆಗಿದೆ.

ತೈಪುಸಂ

ಚೆನ್ನೈನ ವಡಪಳನಿ ಮುರುಗನ್ ದೇವಸ್ಥಾನದ ಆವರಣದಲ್ಲಿ ಗುರುವಾರ ನಡೆದ ತೈಪುಸಂ ಉತ್ಸವದ ನಿಮಿತ್ತ, ಧಾರ್ಮಿಕ ಕಾರ್ಯದ ಭಾಗವಾಗಿ ಭಕ್ತರು ಕೊಂಡ ಹಾಯ್ದರು –ಪಿಟಿಐ ಚಿತ್ರ

ಫೆ.10-11ಕ್ಕೆ 'ಪುಸ್ತಕ ಸಂತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಲೋಕ ಪ್ರಕಾಶನ ಸಂಸ್ಥೆಯು ಫೆ.10 ಮತ್ತು 11ರಂದು ಎಚ್.ಎಸ್. ಆರ್. ಬಡಾವಣೆಯ ಸ್ವಾಭಿಮಾನಿ ಉದ್ಯಾನವನದಲ್ಲಿ 'ಪುಸ್ತಕ ಸಂತೆ' ಹಮ್ಮಿಕೊಂಡಿದೆ.

'ಪರಭಾಷಿಕರ ಕಾರಣದಿಂದ ಇಲ್ಲಿ ಕನ್ನಡತನ ದಿನೇ ದಿನೇ ಕ್ಷೀಣಿಸುತ್ತಿದೆ. ಈ ಭಾಗದ ಮಕ್ಕಳಿಗೆ ಕನ್ನಡದ ಓದು, ಹಬ್ಬಗಳು ಮರೆತು ಹೋಗುತ್ತಿರುವುದು ಆತಂಕದ ಸಂಗತಿ. ಆದ್ದರಿಂದ ಕನ್ನಡ ಸಂಸ್ಕೃತಿಯನ್ನು ಪಸರಿಸಲು 'ಪುಸ್ತಕ ಸಂತೆ' ಎಂಬ ವಿನೂತನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಪುಸ್ತಕ ಸಂತೆಯಲ್ಲಿ ನಾಡಿನ ನೂರಕ್ಕೂ ಅಧಿಕ ಪ್ರಕಾಶಕರು ಭಾಗವಹಿಸುತ್ತಿದ್ದಾರೆ. ನೂರಾರು ಸಾಹಿತಿಗಳು ಪಾಲ್ಗೊಳ್ಳುತ್ತಾರೆ' ಎಂದು ಸಂಸ್ಥೆ ಮುಖ್ಯಸ್ಥ ವೀರಕಪುತ್ರ ಶ್ರೀನಿವಾಸ ತಿಳಿಸಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಸಂತೆಯನ್ನು ಉದ್ಘಾಟಿಸುತ್ತಾರೆ. ಎರಡೂ ದಿನ ಗೀತ ಗಾಯನ, ಡೊಳ್ಳು ಕುಣಿತ, ಗೊಂಬೆ ಕುಣಿತ, ಆಹಾರ ಮೇಳ ಸೇರಿ ವಿವಿಧ ಆಕರ್ಷಣೆಗಳು ಇರುತ್ತವೆ. ಸುಮಾರು 20 ಸಾವಿರ ಜನರು ಭಾಗವಹಿಸುವ ನಿರೀಕ್ಷೆ ಇದೆ. ಕನ್ನಡ ಓದುವ ಸಂಸ್ಕೃತಿಯನ್ನು ಪಸರಿಸುವ ದೃಷ್ಟಿಯಿಂದ ಈ ಪುಸ್ತಕ ಸಂತೆ ಅತ್ಯಂತ ಮಹತ್ವವಾದದ್ದಾಗಿದೆ' ಎಂದು ಹೇಳಿದ್ದಾರೆ.

ಮತ್ತೆ ಬಿಜೆಪಿ ತೆಕ್ಕೆಗೆ ನಿತೀಶ್?

ಒಂದನೇ ಪುಟದಿಂದ

'ಇಂಡಿಯಾ' ಮೈತ್ರಿಕೂಟದಲ್ಲಿನ ಇತ್ತೀಚಿನ ಕೆಲ ಬೆಳವಣಿಗೆಗಳಿಂದ ನಿತೀಶ್ ಕುಮಾರ್ ಬೇಸರಗೊಂಡಿದ್ದರು. ಅದರಲ್ಲೂ, 'ಇಂಡಿಯಾ'ದ ಸಂಚಾಲಕ ಅಥವಾ ಪ್ರಧಾನಿ ಅಭ್ಯರ್ಥಿಯನ್ನಾಗಿ ತಮ್ಮ ಹೆಸರನ್ನು ಘೋಷಣೆ ಮಾಡದಿರುವುದು ಅವರ ಬೇಸರಕ್ಕೆ ಪ್ರಮುಖ ಕಾರಣ ಎನ್ನಲಾಗುತ್ತಿದೆ.

ವಿಪಕ್ಷಗಳ ಒಕ್ಕೂಟದ ಸಂಚಾಲಕ ಅಥವಾ ಪ್ರಧಾನಿ ಅಭ್ಯರ್ಥಿಯಾಗಿ ನಿತೀಶ್ ಕುಮಾರ್ ಅವರ ಹೆಸರನ್ನೇ ಘೋಷಿಸಲು ಜನವರಿ ಆರಂಭದಲ್ಲಿ 'ಇಂಡಿಯಾ' ಮೈತ್ರಿಕೂಟದ ನಾಯಕರು ನಿರ್ಧರಿಸಿದ್ದರು. ಆದರೆ, ಇಂತಹ ನಡೆಗೆ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರಿಂದ ಆಕ್ಷೇಪ ವ್ಯಕ್ತವಾಗಬಹುದು ಎಂಬ ಭೀತಿಯಿಂದ ಘೋಷಣೆ ಮಾಡಲಿಲ್ಲ ಎಂದು ಹೇಳಲಾಗುತ್ತಿದೆ.

ಇನ್ನು, ಸಮಾಜವಾದಿ ನಾಯಕ ಕರ್ಪೂರಿ ಠಾಕೂರ್ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ್ದ ನಿತೀಶ್ ಕುಮಾರ್, ಕುಟುಂಬ ರಾಜಕಾರಣವನ್ನು ಟೀಕಿಸಿದ್ದರು. ಇದು ಆರ್‌ಜೆಡಿ ಮತ್ತು ಲಾಲು ಪ್ರಸಾದ್ ಅವರ ಮೇಲಿನ ದಾಳಿಯೇ ಎಂದು ವ್ಯಾಖ್ಯಾನಿಸಲಾಗಿತ್ತು. ನಿತೀಶ್ ಕುಮಾರ್ ಅವರ ಈ ಮಾತು, 'ಮಹಾಘಟ ಬಂಧನ'ದಲ್ಲಿ ಎಲ್ಲವೂ ಸರಿ ಇಲ್ಲ ಎಂಬ ಪ್ರಬಲ ಸಂದೇಶ ರವಾನಿಸಿತ್ತು.

ಲಾಲು ಪ್ರಸಾದ್ ಮಕ್ಕಳಾದ ತೇಜಸ್ವಿ, ತೇಜ್ ಪ್ರತಾಪ್ ಯಾದವ್ ಹಾಗೂ ಮೀಸಾ ಭಾರತಿ ಅವರು ಪ್ರಮುಖ ರಾಜಕಾರಣಿಗಳಾಗಿರುವುದು ಗಮನಾರ್ಹ.

ಪಟ್ನಾದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜೆಡಿಯು ಹಿರಿಯ ನಾಯಕ ಹಾಗೂ ವಕ್ತಾರ ಕೆ.ಸಿ.ತ್ಯಾಗಿ, 'ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಮಿತ್ರಪಕ್ಷ ಆರ್‌ಜೆಡಿ ಗುರಿಯಾಗಿಸಿಕೊಂಡು ಕುಟುಂಬ ರಾಜಕಾರಣದ ಬಗ್ಗೆ ಮಾತನಾಡಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

'ಅಲ್ಲದೇ, ಕರ್ಪೂರಿ ಠಾಕೂರ್ ಅವರಿಗೆ ಭಾರತ ರತ್ನ ನೀಡಿದ್ದಕ್ಕಾಗಿ ಪ್ರಧಾನಿ ಮೋದಿ ಅವರಿಗೆ ನಿತೀಶ್ ಕುಮಾರ್ ಧನ್ಯವಾದ ಅರ್ಪಿಸಿದ್ದಾರೆ. ಇದು ಮೋದಿ ಕುರಿತು ಪ್ರಶಂಸೆ ವ್ಯಕ್ತಪಡಿಸಿದಂತೆಯೂ ಅಲ್ಲ' ಎಂದಿದ್ದಾರೆ. ಒಂದು ವೇಳೆ, ಈ ಬಾರಿ ನಿತೀಶ್ ಅವರು 'ಮಹಾ ಘಟಬಂಧನ'ದಿಂದ ಹೊರಬಂದರೆ, ಕಳೆದ ಆರು ವರ್ಷಗಳಲ್ಲಿ ಎರಡನೇ ಬಾರಿ ಅವರು ರಾಜ್ಯದಲ್ಲಿರುವ ಮೈತ್ರಿಕೂಟ ತೊರೆದಂತಾಗಲಿದೆ.

ಕರ್ಪೂರಿ ಠಾಕೂರ್ ಅವರಿಗೆ ಮರಣೋತ್ತರವಾಗಿ ಭಾರತ ರತ್ನ ಪುರಸ್ಕಾರ ಘೋಷಿಸಿದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ನಡೆ ಸಹ ಬಿಹಾರದಲ್ಲಿ ಈ ರಾಜಕೀಯ ಬೆಳವಣಿಗೆಗಳಿಗೆ ನಾಟಕೀಯ ತಿರುವು ನೀಡಿತು ಎನ್ನಲಾಗುತ್ತಿದೆ.

ಫೆ.4ರ ಪ್ರಧಾನಿ ರ್‍ಯಾಲಿಯತ್ತ ಚಿತ್ತ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ 'ಭಾರತ ಜೋಡೊ ನ್ಯಾಯ ಯಾತ್ರೆ'ಯ ಭಾಗವಾಗಿ ತಿಂಗಳಾಂತ್ಯಕ್ಕೆ ಬಿಹಾರದ ಪೂರ್ಣಿಯಾದಲ್ಲಿ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ. ಈ ರ್‍ಯಾಲಿಯಲ್ಲಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಭಾಗಿಯಾಗುವ ಸಾಧ್ಯತೆ ಕಡಿಮೆ ಎಂದು ಮೂಲಗಳು ತಿಳಿಸಿವೆ.

ಒಂದು ವೇಳೆ, ಬಿಜೆಪಿ ಜೊತೆಗೆ ಜೆಡಿಯು ಮೈತ್ರಿ ಮಾಡಿಕೊಳ್ಳುವುದು ಖಚಿತಗೊಂಡಲ್ಲಿ, ಫೆಬ್ರುವರಿ 4ರಂದು ಬಿಹಾರದ ಬೆತ್ತಿಯಾದಲ್ಲಿ ಹಮ್ಮಿಕೊಂಡಿರುವ ರ್‍ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ನಿತೀಶ್ ಕುಮಾರ್ ವೇದಿಕೆ ಹಂಚಿಕೊಳ್ಳಲಿದ್ದಾರೆ ಎಂದು ಮೂಲಗಳು ಹೇಳಿವೆ.

ಬಿಜೆಪಿ ಘಟಕದ ವಿರೋಧ: ಜೆಡಿಯು, ಬಿಜೆಪಿ ಹಾಗೂ ಆರ್‌ಜೆಡಿ ಇತ್ತೀಚೆಗೆ ಸರಣಿ ಸಭೆಗಳನ್ನು ನಡೆಸಿದ್ದವು. ಇದು ಕೂಡ ಊಹಾಪೋಹ ಹೆಚ್ಚಾಗಲು ಕಾರಣವಾಗಿದೆ.

ಒಂದು ವೇಳೆ, ಜೆಡಿಯು ಜೊತೆ ಮತ್ತೆ ಮೈತ್ರಿ ಮಾಡಿಕೊಂಡಲ್ಲಿ ನಿತೀಶ್ ಕುಮಾರ್ ಅವರಿಗೆ ಮುಖ್ಯಮಂತ್ರಿ ಪಟ್ಟ ನೀಡಬಾರದು ಎಂಬುವುದು ಬಿಜೆಪಿಯ ಬಿಹಾರ ಘಟಕದ ಅಭಿಪ್ರಾಯವಾಗಿದೆ. ಈ ಮಾತನ್ನು ಪಕ್ಷದ ವರಿಷ್ಠರಿಗೆ ರಾಜ್ಯ ಬಿಜೆಪಿ ನಾಯಕರು ತಿಳಿಸಿದ್ದಾರೆ ಎನ್ನಲಾಗಿದೆ. ಮೈತ್ರಿ ಸರ್ಕಾರ ರಚನೆಯಾದಲ್ಲಿ ಬಿಜೆಪಿಯವರೇ ಮುಖ್ಯಮಂತ್ರಿಯಾಗಬೇಕು, ಎರಡು ಉಪಮುಖ್ಯಮಂತ್ರಿ ಸ್ಥಾನಗಳನ್ನು ಜೆಡಿಯುಗೆ ಬಿಟ್ಟುಕೊಡಬೇಕು ಎಂಬ ಮಾತನ್ನು ಸಹ ವರಿಷ್ಠರಿಗೆ ತಿಳಿಸಿದ್ದರು ಎನ್ನಲಾಗಿದೆ.

ಜೆಡಿಯು ಪಕ್ಷವು ಬಿಜೆಪಿ ಜೊತೆ ಕೈಜೋಡಿಸಲು ಇಚ್ಛಿಸಿದಲ್ಲಿ, ಈ ಕುರಿತು ಪಕ್ಷವು ಸೂಕ್ತ ನಿರ್ಧಾರ ಕೈಗೊಳ್ಳುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇತ್ತೀಚೆಗೆ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದರು. ಇಂತಹ ಸಾಧ್ಯತೆ ಬಗ್ಗೆ ಪಕ್ಷವು ಮುಕ್ತವಾಗಿದೆ ಎಂಬ ಸುಳಿವನ್ನೂ ನೀಡಿದ್ದರು.

'ರಾಜ್ಯ ಸರ್ಕಾರಕ್ಕಿಲ್ಲ ಜಾತಿ ಗಣತಿ ಅಧಿಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಸೋಗಿನಲ್ಲಿ ಎಚ್. ಕಾಂತರಾಜ ಆಯೋಗವು ಅವೈಜ್ಞಾನಿಕವಾಗಿ ಜಾತಿ ಗಣತಿ ನಡೆಸಿದೆ. ಈ ಅಪೂರ್ಣ ಜಾತಿ ಗಣತಿಯ ವರದಿಯನ್ನು ಸ್ವೀಕರಿಸಿದರೆ ರಾಜ್ಯದಾದ್ಯಂತ ಹೋರಾಟ ಮಾಡಲಾಗುವುದು' ಎಂದು ಒಕ್ಕಲಿಗರ ಕ್ರಿಯಾ ಸಮಿತಿ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಇತಿಹಾಸ ಸಂಶೋಧಕ ತಲಕಾಡು ಚಿಕ್ಕರಂಗೇಗೌಡ, 'ಜಾತಿ ಗಣತಿ ನಡೆಸುವ ಯಾವುದೇ ಅಧಿಕಾರ ರಾಜ್ಯ ಸರ್ಕಾರಕ್ಕೆ ಇರುವುದಿಲ್ಲ. ಆದ್ದರಿಂದ ಜಾತಿ ಗಣತಿ ನಡೆಸುವ ಬಗ್ಗೆ ಯಾವುದೇ ಆದೇಶವನ್ನೂ ರಾಜ್ಯ ಸರ್ಕಾರ ಹೊರಡಿಸಿಲ್ಲ. ಆದರೆ, ಕೆಲ ಪ್ರದೇಶಗಳಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುವಾಗ ಜಾತಿಯ ಮಾಹಿತಿ ಪಡೆಯಲಾಗಿದೆ. ಇದನ್ನೇ ಜಾತಿ ಗಣತಿಯೆಂದು ಬಿಂಬಿಸಲಾಗುತ್ತಿದೆ. ಜಾತಿ ಗಣತಿ ಕೈಗೊಳ್ಳಬೇಕಾದರೆ ಸಂಪೂರ್ಣ ಜನಸಂಖ್ಯೆಯ ಎಲ್ಲ ಜಾತಿಗಳ ಸಮೀಕ್ಷೆಯನ್ನು ನಡೆಸಬೇಕು. ಇದನ್ನು ಕೇಂದ್ರ ಸರ್ಕಾರ ಮಾಡಬೇಕು' ಎಂದು ಆಗ್ರಹಿಸಿದರು.

'2015ರಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುವಾಗ ಹಿಂದುಳಿದ ವರ್ಗಗಳ ಆಯೋಗದಲ್ಲಿ ಉದ್ದೇಶಪೂರ್ವಕವಾಗಿ ಲಿಂಗಾಯಿತ, ಒಕ್ಕಲಿಗ, ಮುಸ್ಲಿಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿನಿಧಿಗಳನ್ನು ಕೈಬಿಡಲಾಗಿದೆ. ಎಚ್. ಕಾಂತರಾಜ ಆಯೋಗವು ಅನುಕೂಲಕ್ಕೆ ತಕ್ಕಂತೆ ಸಮೀಕ್ಷೆ ನಡೆಸಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಿತಿಯ ಅಧ್ಯಕ್ಷ ಕೆ.ಜಿ. ಕುಮಾರ್, 'ಕಾಂತರಾಜ ಆಯೋಗದ ವರದಿ ಕಾನೂನುಬಾಹಿರವಾಗಿದೆ. ಪ್ರತಿ ಹತ್ತು ವರ್ಷಗಳಿಗೊಮ್ಮೆ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ನಡೆಸಬೇಕೆಂಬ ನಿಯಮವಿದೆ. ಸಮೀಕ್ಷೆ ನಡೆಸಿ ಈಗಾಗಲೇ 8 ವರ್ಷಗಳು ಕಳೆದಿರುವುದರಿಂದ ಈ ಸಮೀಕ್ಷೆಯ ಆಧಾರದ ಮೇಲೆ ಸಾಮಾಜಿಕ ಮತ್ತು ಶೈಕ್ಷಣಿಕ ವರದಿ ತಯಾರಿಸುವುದು ಅಪ್ರಸ್ತುತ. 8 ವರ್ಷಗಳ ಅವಧಿಯಲ್ಲಿ ಸಮಾಜದಲ್ಲಿ ಹಲವಾರು ಬದಲಾವಣೆಯಾಗಿದ್ದು, ಈ ವರದಿಯು ಈಗಿನ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಪರಿಸ್ಥಿತಿಯ ನೈಜ ಸ್ಥಿತಿಯನ್ನು ಬಿಂಬಿಸುವುದಿಲ್ಲ' ಎಂದು ತಿಳಿಸಿದರು.

ಬಡ್ತಿ, ಬ್ಯಾಕ್‌ಲಾಗ್ ಹುದ್ದೆ: ನ್ಯಾಯ ಒದಗಿಸುವ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡ್ತಿ ಮೀಸಲಾತಿಯ ಗೊಂದಲ ಪರಿಹರಿಸಲು ರಾಜ್ಯ ಸರ್ಕಾರ 'ಜ್ಯೇಷ್ಠತೆ ಸಂರಕ್ಷಣಾ ಕಾಯ್ದೆ–2017' ರೂಪಿಸಿದರೂ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ ಎಂದು ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಎದುರು ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ ಅಳಲು ತೋಡಿಕೊಂಡಿದೆ.

ಸಮಿತಿಯ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಭೆಗೆ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ನೇತೃತ್ವದಲ್ಲಿ ಸಂಘದ ನಿಯೋಗ ದಾಖಲೆಗಳ ಸಹಿತ ಮನವಿ ಸಲ್ಲಿಸಿ, 'ಎಸ್‌ಸಿ ಮೀಸಲಾತಿ ಪ್ರಮಾಣ ಶೇ 15ರಿಂದ 17ಕ್ಕೆ, ಎಸ್‌ಟಿ ಮೀಸಲಾತಿ ಪ್ರಮಾಣ ಶೇ 3ರಿಂದ 7ರಷ್ಟು ಹೆಚ್ಚಿಸಿದರೂ ನೌಕರರಿಗೆ ಫಲ ಸಿಗುತ್ತಿಲ್ಲ. ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ ನ. 28ರಂದು ಹೊರಡಿಸಿರುವ ಆದೇಶದಿಂದ ಅನ್ಯಾಯ ಆಗುತ್ತಿದೆ' ಎಂದು ದೂರಿದೆ.

'ಮೀಸಲಾತಿಯನ್ನು ವಂಚಿಸಲು ಬಳಸಿಕೊಳ್ಳುತ್ತಿರುವ 1999ರ ಫೆ. 3 ಮತ್ತು ಏಪ್ರಿಲ್ 13ರಂದು ಆದೇಶಗಳನ್ನು ಅಡ್ವೊಕೇಟ್ ಜನರಲ್ ಅವರು ನೀಡಿದ್ದ ಅಭಿಪ್ರಾಯದಂತೆ ತಕ್ಷಣ ಹಿಂಪಡೆಯಬೇಕು, ಹೆಚ್ಚಳಗೊಳಿಸಿದ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ರೋಸ್ಟರ್ ಕಡ್ಡಾಯವಾಗಿ ಪಾಲಿಸಬೇಕು, ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವಾಗ 2015ರ ಮಾರ್ಚ್ 4ರ ಆದೇಶವನ್ನು ಪಾಲಿಸಬೇಕು, 100 ರೋಸ್ಟರ್ ಬಿಂದುಗಳ ಆದೇಶದ ನಂತರ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು 2023ರ ನ. 28ರಂದು ಹೊರಡಿಸಿರುವ ಹೊಸ ಆದೇಶವನ್ನು ತಕ್ಷಣದಿಂದ ಹಿಂಪಡೆದು, ಹೊಸ ಆದೇಶ ಹೊರಡಿಸಬೇಕು' ಎಂದು ಸಂಘ ಮನವಿ ಸಲ್ಲಿಸಿದೆ.

'ಜ್ಯೇಷ್ಠತೆ ಸಂರಕ್ಷಣಾ ಕಾಯ್ದೆ– 2017ನ್ನು ಯಥಾವತ್ ಪಾಲಿಸಬೇಕು, ಮೀಸಲಾತಿ ಬಗ್ಗೆ ಗೊಂದಲವಾಗುವ ರೀತಿಯಲ್ಲಿ ಅಭಿಪ್ರಾಯ ನೀಡುವ ಸುತ್ತೋಲೆ ಹೊರಡಿಸುವ ಡಿಪಿಎಆರ್ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ತೆಗೆದುಕೊಳ್ಳಬೇಕು, ನಿವೃತ್ತಿಯ ಬಳಿಕವೂ ಡಿಪಿಎಆರ್‌ನಲ್ಲಿ ಸಮಾಲೋಚಕರಾಗಿರುವ ದೇವರಾಜು, ಅಬ್ದುಲ್ ಖಾದರ್ ಮತ್ತು ರಾಮನಾಥನ್ ಅವರನ್ನು ಮುಖ್ಯಮಂತ್ರಿ ನೀಡಿದ ಸೂಚನೆಯಂತೆ ಕರ್ತವ್ಯದಿಂದ ಕೂಡಲೇ ಬಿಡುಗಡೆ ಮಾಡಬೇಕು' ಎಂದೂ ಆಗ್ರಹಿಸಿದೆ.

'ನಮ್ಮ ಮನವಿಯನ್ನು ಆಲಿಸಿದ ಕಲ್ಯಾಣ ಸಮಿತಿಯು ಸಕರಾತ್ಮಕವಾಗಿ ಸ್ಪಂದಿಸಿದೆ. ಸಂಬಂಧಿಸಿದ ಇಲಾಖೆಗಳಿಗೆ ಡಿಪಿಎಆರ್ ಮೂಲಕ ನಿರ್ದೇಶನಗಳನ್ನು ನೀಡಲಾಗುವುದೆಂದು ಭರವಸೆ ನೀಡಿದೆ' ಎಂದು ಚಂದ್ರಶೇಖರಯ್ಯ ತಿಳಿಸಿದರು.

ತಮಿಳು ಪತ್ರಕರ್ತನ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಖ್ಯಾಂಶಗಳು

- ಪೊಲೀಸರಿಗೆ ವಿಷಯ ತಿಳಿಸಿದ ನಂತರವೂ ಹಲ್ಲೆ
- ಪತ್ರಕರ್ತರ ಸಂಘಟನೆಗಳಿಂದ ಖಂಡನೆ
- ₹3 ಲಕ್ಷ ನೆರವು ಒದಗಿಸಲು ಸಿ.ಎಂ ಆದೇಶ

ಚೆನ್ನೈ: ತಮಿಳು ಸುದ್ದಿವಾಹಿನಿಯೊಂದರಲ್ಲಿ ಕೆಲಸ ಮಾಡುತ್ತಿರುವ, ತಿರುಪುರದ ಪತ್ರಕರ್ತ ನೇಸ ಪ್ರಭು ಅವರ ಮೇಲೆ ಆರು ಮಂದಿ ದುಷ್ಕರ್ಮಿಗಳು ಹಲ್ಲೆ ನಡೆಸಿದ್ದಾರೆ. ಹಲ್ಲೆ ನಡೆಸಿದವರ ಗುರುತು ಪತ್ತೆಯಾಗಿಲ್ಲ. ಪ್ರಭು ಅವರನ್ನು, ಅವರ ಮನೆಯಿಂದ ಬೆನ್ನತ್ತಿ ಹೋದ ದುಷ್ಕರ್ಮಿಗಳು, ಅಡ್ಡಗಟ್ಟಿ, ಕತ್ತಿಯಿಂದ ಹಲ್ಲೆ ಮಾಡಿದ್ದಾರೆ.

ಪತ್ರಕರ್ತ ಗಂಭೀರವಾಗಿ ಗಾಯಗೊಂಡಿದ್ದಾರೆ. ಹಲ್ಲೆ ನಡೆಸಿದವರು ಯಾರೇ ಆಗಿದ್ದರೂ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಭರವಸೆ ನೀಡಿದ್ದಾರೆ.

ತಿರುಪುರ ಜಿಲ್ಲೆಯ ಪಲ್ಲಾಡಂನಲ್ಲಿ ಇರುವ ತಮ್ಮ ಮನೆಯ ಸನಿಹದಲ್ಲಿ ಜನವರಿ 24ರ ರಾತ್ರಿ ಪ್ರಭು ಮೇಲೆ ಹಲ್ಲೆ ನಡೆದಿದೆ. ಗಂಭೀರವಾಗಿ ಗಾಯಗೊಂಡಿರುವ ಅವರನ್ನು ಕೊಯಮತ್ತೂರಿನಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಮೈಮೇಲೆ 62 ಕಡೆ ಗಾಯಗಳಾಗಿವೆ ಎಂದು ಸಹೋದ್ಯೋಗಿಗಳು ತಿಳಿಸಿದ್ದಾರೆ.

ಬುಧವಾರ ರಾತ್ರಿ 9ರ ಸುಮಾರಿಗೆ ಈ ಘಟನೆ ನಡೆದಿದೆ. ಇದಕ್ಕೆ ನಾಲ್ಕು ತಾಸುಗಳ ಮೊದಲು ಪೊಲೀಸ್ ಸಹಾಯವಾಣಿಗೆ ಕರೆ ಮಾಡಿದ್ದ ಪ್ರಭು ಅವರು, ತಮ್ಮ ಹಳ್ಳಿಗೆ ಇಬ್ಬರು ವ್ಯಕ್ತಿಗಳು ನೋಂದಣಿ ಸಂಖ್ಯೆ ಇಲ್ಲದ ವಾಹನದಲ್ಲಿ ಬಂದಿದ್ದಾರೆ, ಅವರು ತಮ್ಮ ಬಗ್ಗೆ ವಿಚಾರಿಸಿದ್ದಾರೆ ಎಂದು ತಿಳಿಸಿದ್ದರು. ಅಲ್ಲದೆ, ತಮಗೆ ರಕ್ಷಣೆ ಕೊಡುವಂತೆ ಕೋರಿದ್ದರು.

ವಿರೋಧ ಪಕ್ಷದ ನಾಯಕ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಈ ಘಟನೆಯ ಬಗ್ಗೆ ಆಘಾತ ವ್ಯಕ್ತಪಡಿಸಿದ್ದಾರೆ. ಈ ವಿಚಾರದಲ್ಲಿ ಪೊಲೀಸರು ಅಸಡ್ಡೆಯಿಂದ ವರ್ತಿಸಿದ್ದಾರೆ ಎಂದು ದೂರಿದ್ದಾರೆ.

ತಮಿಳುನಾಡು ಮತ್ತು ಪುದುಚೇರಿಯ ಪತ್ರಕರ್ತರು ಈ ಘಟನೆಯನ್ನು ಖಂಡಿಸಿದ್ದಾರೆ. ಅಕ್ರಮ ಚಟುವಟಿಕೆಗಳನ್ನು ಬಯಲಿಗೆಳೆದ ಪ್ರಭು ಅವರು ತಮ್ಮ ಜೀವಕ್ಕೆ ಬೆದರಿಕೆ ಇದೆ ಎಂಬ ಸಂಗತಿಯನ್ನು ಪೊಲೀಸರ ಗಮನಕ್ಕೆ ತಂದಿದ್ದರೂ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳಲಿಲ್ಲ ಎಂದು ಪತ್ರಕರ್ತರು ದೂರಿದ್ದಾರೆ.

ಪ್ರಭು ಅವರು ಸಹಾಯ ಕೋರಿ ಪೊಲೀಸರ ಜೊತೆ ದೂರವಾಣಿ ಮೂಲಕ ಮಾತನಾಡಿದ್ದ ಆಡಿಯೊ ತುಣುಕನ್ನು ಸಾಮಾಜಿಕ ಜಾಲತಾಣಗಳ ಮೂಲಕ ಹಲವರು ಹಂಚಿಕೊಂಡಿದ್ದಾರೆ. ಪ್ರಭು ಅವರು ಅದೆಷ್ಟು ಭಯಭೀತರಾಗಿದ್ದರು ಎಂಬುದನ್ನು ಈ ಆಡಿಯೊ ತುಣುಕಿನಲ್ಲಿ ಇರುವ ಸಂಭಾಷಣೆಯು ಹೇಳುತ್ತಿದೆ.

ಸಂಬಂಧಪಟ್ಟ ಪೊಲೀಸ್ ಇನ್‌ಸ್ಪೆಕ್ಟರ್ ಅವರನ್ನು ವರ್ಗಾಯಿಸಿ, ಹುದ್ದೆ ತೋರಿಸದಂತೆ ಸ್ಟಾಲಿನ್ ಸೂಚಿಸಿದ್ದಾರೆ. ಅಲ್ಲದೆ, ಪ್ರಭು ಅವರಿಗೆ ₹3 ಲಕ್ಷ ನೆರವು ಒದಗಿಸುವಂತೆ ಆದೇಶಿಸಿದ್ದಾರೆ.

ರಾಜ್ಯ ಸರ್ಕಾರದ ಮಾಲೀಕತ್ವದಲ್ಲಿರುವ ಮದ್ಯ ಮಾರಾಟ ಮಳಿಗೆಗಳು ಪಲ್ಲಾಡಂ ಪ್ರದೇಶದಲ್ಲಿ ನಿಗದಿತ ಅವಧಿಗೂ ಮೀರಿ ತೆರೆದಿರುತ್ತವೆ ಎಂದು ಪ್ರಭು ಅವರು ಕಳೆದ ಕೆಲವು ದಿನಗಳಲ್ಲಿ ವರದಿ ಮಾಡಿದ್ದರು.

ಮನೆಗೆ ನುಗ್ಗಿ ಕಳ್ಳತನ: ಬಂಧನ

ಬೆಂಗಳೂರು: ಬೀಗ ಹಾಕಿರುವ ಮನೆಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಗೋವಿಂದರಾಜನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ಕೆ.ಆರ್. ಪುರದ ಮೆಕ್ಕಾ ಮಸೀದಿ ರಸ್ತೆ ದೇವಸಂದ್ರದ ನಿವಾಸಿ ಇಮ್ರಾನ್‌ಖಾನ್ ಅಲಿಯಾಸ್ ಕೀಡ್ ಬಿನ್ ರಿಯಾಜ್‌ಖಾನ್ (26) ಬಂಧಿತ ಆರೋಪಿ. ಆರೋಪಿಯಿಂದ ₹4.5 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಷೇರುಪೇಟೆ ವಹಿವಾಟು 359



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,453
ಇಂದಿನ ಅಂತ್ಯ	21,352
▼	101
ದಿನದ ಕನಿಷ್ಠ	21,247

ವಿನಿಮಯ ದರ

$ ಡಾಲರ್	83.11
£ ಪೌಂಡ್	105.77
€ ಯೂರೊ	90.56
¥ ಯೆನ್ (100ಕ್ಕೆ)	57

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹570
12 ಕ್ಕೆ	₹75
ಮೈಸೂರು	
100ಕ್ಕೆ	₹572

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ನಿನ್ನೆಯ ದರ)

ಶೇಂಗಾ (ರಿಫೈನ್ಡ್)	₹1530 (1530)
ಸೋಯಾ (ರಿಫೈನ್ಡ್)	₹900 (900)
ಸೂರ್ಯಕಾಂತಿ (ರಿಫೈನ್ಡ್)	₹920 (925)
ಪಾಮೋಲಿನ್	₹862 (860)

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1300-1600
ಮಧ್ಯಮ	₹900-1300
ಸಣ್ಣ	₹400-800

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹159.50
ಆರ್‌ಎಸ್‌ಎಸ್-5	₹154
ಗುಡ್ ಲಾಟ್	₹137.50

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹222-465
ದ್ವಿತಳಿ (ಬಿ.ವಿ)	₹266-558

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹9500-10300
ಪುತ್ತೂರು	₹5500-9200
ತುಮಕೂರು	₹4100-5100

ರಾಮ್‌ರಾಜ್ ಕಾಟನ್ ಬ್ರ್ಯಾಂಡ್ ರಾಯಭಾರಿಯಾಗಿ ನಟ ರಿಷಬ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮ್‌ರಾಜ್ ಕಾಟನ್ ಸಂಸ್ಥೆಯ ಹೊಸ ಪ್ರಚಾರ ರಾಯಭಾರಿಯಾಗಿ ನಟ ರಿಷಬ್ ಶೆಟ್ಟಿ ನೇಮಕವಾಗಿದ್ದಾರೆ.

ರಿಷಬ್ ಅವರು ಸರಳ ಸಜ್ಜನಿಕೆಯ ನಟ. ಅವರಿಗೆ ಪರಂಪರೆಯ ಬೇರುಗಳ ಜೊತೆಗೆ ಆಪ್ತ ನಂಟಿದೆ. ಅವರು ರಾಮ್‌ರಾಜ್ ಬ್ರ್ಯಾಂಡ್ ಜೊತೆಗೆ ಕೈಜೋಡಿಸಿರುವುದು ಅತ್ಯಂತ ಗೌರವ ಹಾಗೂ ಹೆಮ್ಮೆಯ ಕ್ಷಣವಾಗಿದೆ ಎಂದು ಸಂಸ್ಥೆಯ ನಿರ್ದೇಶಕ ಅರುಣ್ ಈಶ್ವರ್ ಹೇಳಿದ್ದಾರೆ.

ರಿಷಬ್ ಅವರ ಸೃಜನಾತ್ಮಕ ನಟನಾ ಸಾಮರ್ಥ್ಯವು 'ಕಾಂತಾರ' ಸಿನಿಮಾ ಮೂಲಕ ನಿರೂಪಿತವಾಗಿದೆ. ಪಾರಂಪರಿಕ ಉಡುಗೆಯಾದ ಪಂಚೆಯನ್ನು ಉಡುವ ಭಾರತದ ಕೆಲವೇ ನಟರ ಪೈಕಿ ಅವರೂ ಒಬ್ಬರಾಗಿದ್ದಾರೆ. ಸಾಂಸ್ಕೃತಿಕ ಉತ್ಪನ್ನಗಳ ಬಗ್ಗೆ ಸಂಸ್ಥೆ ಮತ್ತು ರಿಷಬ್ ಅವರ ನಂಬಿಕೆ ಒಂದೇ ಆಗಿದೆ ಎಂದಿದ್ದಾರೆ.

ರಾಮ್‌ರಾಜ್ ಬ್ರ್ಯಾಂಡ್ ದಕ್ಷಿಣ ಭಾರತವನ್ನು ದಾಟಿ ಉತ್ತರ ಭಾರತಕ್ಕೂ ಪ್ರವೇಶಿಸುತ್ತಿದೆ. ರಿಷಬ್ ಅವರೊಂದಿಗಿನ ಬೆಸುಗೆಯು ನಮ್ಮ ಬ್ರ್ಯಾಂಡ್‌ಗೆ ನೆರವಾಗುತ್ತದೆ ಎಂದು ತಿಳಿಸಿದ್ದಾರೆ.

'ಸಂಸ್ಥೆಯ ಸಂಸ್ಥಾಪಕರಾದ ನಾಗರಾಜನ್ ಅವರ ಸರಳತೆ, ಸಾಮಾಜಿಕ ಕೆಲಸಗಳು ನನ್ನನ್ನು ರಾಯಭಾರಿಯಾಗಿ ಒಪ್ಪಿಕೊಳ್ಳುವಂತೆ ಮಾಡಿವೆ' ಎಂದು ನಟ ರಿಷಬ್ ಪ್ರತಿಕ್ರಿಯಿಸಿದ್ದಾರೆ.

ರಾಮ್‌ರಾಜ್ ಕಾಟನ್ ಬ್ರ್ಯಾಂಡ್‌ನ ಹೊಸ ಪ್ರಚಾರ ರಾಯಭಾರಿಯಾಗಿ ನೇಮಕವಾದ ನಟ ರಿಷಬ್ ಶೆಟ್ಟಿ ಅವರನ್ನು ಸಂಸ್ಥೆಯಿಂದ ಅಭಿನಂದಿಸಲಾಯಿತು

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	570
ಅಡಿಕೆ	
ಬಂಟ್ವಾಳ	
ಕೋಕ	18000-28500
ಹೊಸತು	28500-36000
ಹಳತು	42000-44500
ಕಾರ್ಕಳ	
ಹೊಸತು	25000-36000
ಹಳತು	30000-44500
ಕುಮಟ	
ಹಳೆಚಾಲಿ	36899-38519
ಹೊಸಚಾಲಿ	32011-36000
ಚಿಪ್ಪು	22809-34579
ಕೋಕ	13099-31611
ಪುತ್ತೂರು	
ಕೋಕ	11000-25000
ಹೊಸತು	27000-36000
ಸಾಗರ	
ಬಿಳಿಗೋಟು	23989-30499
ಚಾಲಿ	32499-38001
ಕೋಕ	23989-33989
ಕೆಂಪುಗೋಟು	28989-36499
ರಾಶಿ	37899-48499
ಸಿಪ್ಪೆಗೋಟು	9119-20710
ಶಿವಮೊಗ್ಗ	
ಬೆಟ್ಟೆ	44400-55189
ಗೊರಬಲು	16509-40699
ರಾಶಿ	31111-49200
ಸರಕು	46100-75210
ಸಿದ್ದಾಪುರ	
ಬಿಳಿಗೋಟು	31319-33600
ಚಾಲಿ	36869-38599
ಕೋಕ	29019-31899
ಹೊಸಚಾಲಿ	31859-35599
ಕೆಂಪುಗೋಟು	31319-36099
ರಾಶಿ	46309-47449
ತಟ್ಟಿಬೆಟ್ಟೆ	40069-45909
ಶಿರಸಿ	
ಬೆಟ್ಟೆ	39518-45298
ಬಿಳಿಗೋಟು	27099-35899
ಚಾಲಿ	36618-39618
ಕೆಂಪುಗೋಟು	33518-36698
ರಾಶಿ	44208-50039
ಯಲ್ಲಾಪುರ	
ಅಪಿ	56299-63509
ಬಿಳಿಗೋಟು	24899-34799
ಚಾಲಿ	35199-39699
ಕೋಕ	18109-31299
ಕೆಂಪುಗೋಟು	26899-35699
ರಾಶಿ	47899-55699
ತಟ್ಟಿಬೆಟ್ಟೆ	36810-47890
ಬೆಳ್ತಂಗಡಿ	
ಕೋಕ	26000-2800
ಹೊನ್ನಳ್ಳಿ	
ರಾಶಿ	48499-48499
ಕುಂದಾಪುರ	
ಹೊಸಚಾಲಿ	39000-55000
ಹಳೆಚಾಲಿ	35000-45000
ತುಮಕೂರು	
ರಾಶಿ	45800-47500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	14400	-	189.45 ಸೆಂಟ್ಸ್
ಎಸಿ	-	7,800	-	
ಆರ್‌ಪಿ	-	12,500	-	ಲಂಡನ್
ಆರ್‌ಸಿ	-	272 on OT	-	3,207 ಡಾಲರ್

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಎಚ್‌ಪಿಸಿಎಲ್‌ಗೆ ₹529 ಕೋಟಿ ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 3.73ರಷ್ಟು ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ಕಂಪನಿಯು ₹172.43 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹592.02 ಕೋಟಿ ಗಳಿಸಿದೆ. ಹಿಂದಿನ ಸಾಲಿಗೆ ಹೋಲಿಸಿದರೆ ಆದಾಯದಲ್ಲಿ ಮೂರು ಪಟ್ಟು ಹೆಚ್ಚಳವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಕುಸಿತದ ಹೊರತಾಗಿಯೂ 21 ತಿಂಗಳುಗಳಿಂದ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದಲ್ಲಿ ದರ ಕಡಿತಗೊಳಿಸಿಲ್ಲ. ಆದರೆ, ಕಚ್ಚಾ ತೈಲದ ದರ ಕಡಿಮೆಯಾದ ವೇಳೆ ಖರೀದಿ ಮತ್ತು ಸಂಸ್ಕರಣೆಯಲ್ಲಿ ವಿಳಂಬವಾಗಿದ್ದರಿಂದ ಕಂಪನಿಯು ನಷ್ಟ ಅನುಭವಿಸಿತ್ತು. ಅದರಿಂದ ಆಗಿದ್ದ ನಷ್ಟವನ್ನು ಈಗ ಸರಿದೂಗಿಸಿಕೊಳ್ಳಲಾಗಿದೆ ಎಂದು ಕಂಪನಿ ತಿಳಿಸಿದೆ.

ಗಡಿಯಾಚೆಗಿನ ಪಾವತಿಗೆ ನೆರವು • ವ್ಯವಹಾರದಲ್ಲಿ ಪಾರದರ್ಶಕತೆಗೆ ಸಹಕಾರಿ

'ಡಿಜಿಟಲ್ ಕರೆನ್ಸಿ ಸುಧಾರಣೆಗೆ ಒತ್ತು'

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರವು, ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿಯ (ಸಿಬಿಡಿಸಿ) ಸುಧಾರಣೆಯಲ್ಲಿ ತೊಡಗಿವೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಗುರುವಾರ ನಡೆದ ಹಿಂದೂ ಕಾಲೇಜಿನ 125ನೇ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, 'ಡಿಜಿಟಲ್ ಕರೆನ್ಸಿಯು ಗಡಿಯಾಚೆಗಿನ ಪಾವತಿಗಳಿಗೂ ನೆರವಾಗಲಿದೆ ಎಂದು ಬಲವಾಗಿ ನಂಬಿದ್ದೇವೆ. ಅಲ್ಲದೆ, ಹಣಕಾಸು ವ್ಯವಹಾರದಲ್ಲಿ ಪಾರದರ್ಶಕತೆ ತರಲು ಸಹಕಾರಿಯಾಗಲಿದೆ' ಎಂದು ಹೇಳಿದರು.

ಆರ್‌ಬಿಐ ಪ್ರಾರಂಭದಲ್ಲಿ ಸಗಟು ವಹಿವಾಟು ವಿಭಾಗದಲ್ಲಿ ಪ್ರಾಯೋಗಿಕವಾಗಿ ಡಿಜಿಟಲ್ ರೂಪಾಯಿಯನ್ನು ಬಿಡುಗಡೆಗೊಳಿಸಿತ್ತು. ಎಸ್‌ಬಿಐ, ಬ್ಯಾಂಕ್ ಆಫ್ ಬರೋಡ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಯೆಸ್ ಬ್ಯಾಂಕ್, ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಮತ್ತು ಎಚ್‌ಎಸ್‌ಬಿಸಿ ಸಗಟು ವಹಿವಾಟಿನ ಡಿಜಿಟಲ್ ರೂಪಾಯಿಯನ್ನು ನೀಡುತ್ತವೆ.

2022ರ ಡಿಸೆಂಬರ್ 1ರಿಂದ ಚಿಲ್ಲರೆ ವಹಿವಾಟು ವಿಭಾಗದಲ್ಲಿಯೂ ಡಿಜಿಟಲ್ ಆಧಾರಿತ ಇ-ರುಪಿಯ ಬಳಕೆಗೆ ಚಾಲನೆ ನೀಡಿತು.

ಅಭಿವೃದ್ಧಿಗೆ ಒತ್ತು: ಕೇಂದ್ರ ಸರ್ಕಾರವು ವಿಕಸಿತ ಭಾರತದ ಆಶಯದಡಿ ಉತ್ಪಾದನಾ ಮತ್ತು ಕೃಷಿ ವಲಯಗಳ ಅಭಿವೃದ್ಧಿಗೆ ವಿಶೇಷ ಒತ್ತು ನೀಡಿದೆ. ಕೋವಿಡ್ ನಂತರ ಆಧುನಿಕ ತಂತ್ರಜ್ಞಾನದ ಬಳಕೆ ಬಗ್ಗೆ ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ ಎಂದರು.

ನವೀಕರಿಸಬಹುದಾದ ಇಂಧನ, ಸೆಮಿಕಂಡಕ್ಟರ್, ಮೆಷಿನ್ ಲರ್ನಿಂಗ್, ಭೂವಿಜ್ಞಾನ, ಬಾಹ್ಯಾಕಾಶ ಸೇರಿದಂತೆ 13 ಉತ್ಪಾದನಾ ವಲಯಗಳ ಅಭಿವೃದ್ಧಿಗೆ ಕ್ರಮವಹಿಸಲಿದೆ ಎಂದರು.

ಡಿಜಿಟಲ್ ಕರೆನ್ಸಿಯಿಂದ ಕಡಿಮೆ ಖರ್ಚಿನಲ್ಲಿ ಪಾವತಿಯ ವೇಗ ಹೆಚ್ಚಲಿದೆ. ಆಂತರಿಕ ಮತ್ತು ಹೊರ ಭಾಗಕ್ಕೆ ಹಣ ರವಾನೆಯ ಖರ್ಚು ಕೂಡ ತಗ್ಗಲಿದೆ
ನಿರ್ಮಲಾ ಸೀತಾರಾಮನ್, ಹಣಕಾಸು ಸಚಿವೆ

ಅಜೀಂ ಪ್ರೇಮ್‌ಜಿಯಿಂದ ಪುತ್ರರಿಗೆ 1 ಕೋಟಿ ಷೇರು ಉಡುಗೊರೆ

ನವದೆಹಲಿ (ಪಿಟಿಐ): ವಿಪ್ರೊ ಸಂಸ್ಥಾಪಕ ಅಜೀಂ ಪ್ರೇಮ್‌ಜಿ ಅವರು ತನ್ನ ಪುತ್ರರಾದ ರಿಷದ್ ಪ್ರೇಮ್‌ಜಿ ಮತ್ತು ತಾರಿಕ್ ಪ್ರೇಮ್‌ಜಿ ಅವರಿಗೆ 1.02 ಕೋಟಿ ಈಕ್ವಿಟಿ ಷೇರುಗಳನ್ನು ಉಡುಗೊರೆಯಾಗಿ ನೀಡಿದ್ದಾರೆ.

ಪ್ರಸ್ತುತ ಪ್ರತಿ ಷೇರಿನ ಬೆಲೆ ₹472.9 ಇದೆ. ಇಬ್ಬರಿಗೂ ವರ್ಗಾವಣೆ ಮಾಡಿರುವ ಷೇರುಗಳ ಮೌಲ್ಯ ಸುಮಾರು ₹483 ಕೋಟಿ ಆಗಿದೆ.

ವಿಪ್ರೊ ಕಂಪನಿಯ 1,02,30,180 ಈಕ್ವಿಟಿ ಷೇರುಗಳನ್ನು (ಕಂಪನಿಯ ಷೇರು ಬಂಡವಾಳದ ಶೇ 0.20ರಷ್ಟು) ಪುತ್ರರಿಗೆ ಉಡುಗೊರೆ ರೂಪದಲ್ಲಿ ವರ್ಗಾಯಿಸಲಾಗಿದೆ ಎಂದು ಅಜೀಂ ಪ್ರೇಮ್‌ಜಿ ಅವರು ಷೇರುಪೇಟೆಗೆ ಮಾಹಿತಿ ನೀಡಿದ್ದಾರೆ.

ಪ್ರಸ್ತುತ ರಿಷದ್ ಪ್ರೇಮ್‌ಜಿ ಅವರು ವಿಪ್ರೊದ ಕಾರ್ಯ ನಿರ್ವಾಹಕ ಅಧ್ಯಕ್ಷರಾಗಿದ್ದಾರೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ₹2,223 ಕೋಟಿ ಲಾಭ

ನವದೆಹಲಿ (ಪಿಟಿಐ): ಸಾರ್ವಜನಿಕ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹2,223 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ನೇ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ₹629 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ತ್ರೈಮಾಸಿಕದಲ್ಲಿ ನಿವ್ವಳ ಲಾಭವು ಮೂರು ಪಟ್ಟು ಏರಿಕೆಯಾಗಿದೆ ಎಂದು ಬ್ಯಾಂಕ್ ಗುರುವಾರ ಷೇರುಪೇಟೆಗೆ ತಿಳಿಸಿದೆ.

ಒಟ್ಟು ವರಮಾನವು ₹25,722 ಕೋಟಿಯಿಂದ ₹29,962 ಕೋಟಿಗೆ ಏರಿಕೆಯಾಗಿದೆ. ಬ್ಯಾಂಕ್‌ನ ಬಡ್ಡಿ ಆದಾಯದಲ್ಲೂ ಹೆಚ್ಚಳವಾಗಿದೆ. ₹22,384 ಕೋಟಿಯಿಂದ ₹27,289 ಕೋಟಿಗೆ ಏರಿಕೆ ಆಗಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಎನ್‌ಪಿಎ) ಶೇ 9.76ರಿಂದ ಶೇ 6.24ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 3.30ಯಿಂದ ಶೇ 0.96ಕ್ಕೆ ಕುಗ್ಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

25-1-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1540)
ಒಂದು ವಾರದ ಡೆಲಿವರಿ	1535 (1535)
ಸೋಯಾ ಕಚ್ಚಾ	863 (868)
ಪಾಮ್ ವಾರದ ಡೆಲಿವರಿ	860 (858)
ಸೂರ್ಯಕಾಂತಿ ಎಣ್ಣೆ ಕಚ್ಚಾ	870 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹62,050 (62,350)
ಬೆಳ್ಳಿ ಕೆ.ಜಿ ₹71,300 (71,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸೆನ್ಸೆಕ್ಸ್ 359, ನಿಫ್ಟಿ 101 ಅಂಶ ಇಳಿಕೆ

ಮುಂಬೈ (ಪಿಟಿಐ): ಐ.ಟಿ ಷೇರುಗಳ ಮಾರಾಟ ಮತ್ತು ವಿದೇಶಿ ಹೂಡಿಕೆಯ ಹೊರಹರಿವಿನ ಹೆಚ್ಚಳದಿಂದಾಗಿ ಗುರುವಾರ ಷೇರುಪೇಟೆಯು ಕುಸಿತ ಕಂಡಿತು. ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 359 ಅಂಶ ಕುಸಿದು 70,700ಕ್ಕೆ ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 101 ಅಂಶ ಇಳಿಕೆ ಕಂಡು 21,352ಕ್ಕೆ ವಹಿವಾಟನ್ನು ಮುಕ್ತಾಯಗೊಳಿಸಿತು.

ಸೆನ್ಸೆಕ್ಸ್‌ನ 19 ಮತ್ತು ನಿಫ್ಟಿಯ 34 ಕಂಪನಿಗಳ ಷೇರಿನ ಮೌಲ್ಯ ಕುಸಿದಿದೆ. ಟೆಕ್ ಮಹೀಂದ್ರ ಷೇರಿನ ಮೌಲ್ಯ ಶೇ 6ಕ್ಕಿಂತ ಹೆಚ್ಚು ಇಳಿಕೆಯಾಗಿದೆ.

ಉತ್ಪಾದನಾ ವೆಚ್ಚ ಏರಿಕೆ ಖಂಡಿಸಿ ಹಾಗೂ ಪರಿಸರ ಸಂಬಂಧಿ ನಿಯಂತ್ರಣಗಳನ್ನು ವಿರೋಧಿಸಿ ವಿವಿಧ ರೈತ ಸಂಘಟನೆಗಳ ಒಕ್ಕೂಟ 'ಸಿಆರ್47' ನೇತೃತ್ವದಲ್ಲಿ ರೈತರು ಫ್ರಾನ್ಸ್‌ನ ಏಜೆನ್‌ನಲ್ಲಿ 'ಸೂಪರ್ ಯು' ಸೂಪರ್‌ಮಾರ್ಕೆಟ್ ಗೋದಾಮಿನ ಎದುರು ಟ್ರ್ಯಾಕ್ಟರ್‌ಗಳೊಂದಿಗೆ ಗುರುವಾರ ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರ

ಸ್ವಿಗ್ಗಿ, ಫ್ಲಿಪ್‌ಕಾರ್ಟ್‌ನಲ್ಲಿ ಉದ್ಯೋಗ ಕಡಿತ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಿಗ್ಗಿ ಮತ್ತು ಫ್ಲಿಪ್‌ಕಾರ್ಟ್ ಕಂಪನಿಗಳು ಉದ್ಯೋಗ ಕಡಿತಕ್ಕೆ ಮುಂದಾಗಿವೆ.

ರೆಸ್ಟೋರೆಂಟ್ ಮತ್ತು ಹೋಟೆಲ್‌ಗಳಿಂದ ಜನರ ಮನೆ ಬಾಗಿಲಿಗೆ ಆಹಾರ ತಲುಪಿಸುವ ಸ್ವಿಗ್ಗಿ ಕಂಪನಿಯು 400 ಉದ್ಯೋಗಿಗಳನ್ನು ಸೇವೆಯಿಂದ ವಜಾಗೊಳಿಸಲು ಸಿದ್ಧತೆ ನಡೆಸಿದೆ ಎಂದು ಹೇಳಲಾಗಿದೆ. ಆದರೆ, ಈ ಬಗ್ಗೆ ಕಂಪನಿಯ ವಕ್ತಾರರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಮುಂಬರುವ ವಾರಗಳಲ್ಲಿ ತಂತ್ರಜ್ಞಾನ, ಕಾಲ್ ಸೆಂಟರ್ ಮತ್ತು ಕಾರ್ಪೊರೇಟ್ ವಿಭಾಗದಲ್ಲಿ ಹಂತ ಹಂತವಾಗಿ ಉದ್ಯೋಗ ಕಡಿತವಾಗಲಿದೆ ಎಂದು ಹೇಳಲಾಗಿದೆ.

ಆರ್ಥಿಕ ಬಿಕ್ಕಟ್ಟಿನಿಂದಾಗಿ ಕಳೆದ ವರ್ಷದ ಜನವರಿಯಲ್ಲಿ ಸ್ವಿಗ್ಗಿಯು 380 ಉದ್ಯೋಗಿಗಳನ್ನು ವಜಾಗೊಳಿಸಿತ್ತು. ವೆಚ್ಚ ಕಡಿತದ ದೃಷ್ಟಿಯಿಂದ ಈ ವರ್ಷವೂ ಇಂತಹ ಕ್ರಮಕ್ಕೆ ಮುಂದಾಗಿದೆ ಎನ್ನಲಾಗಿದೆ. ಕಂಪನಿಯಲ್ಲಿ 5,500ಕ್ಕೂ ಉದ್ಯೋಗಿಗಳು ಇದ್ದಾರೆ. ಜುಲೈನಿಂದ ಸೆಪ್ಟೆಂಬರ್ ನಡುವೆ ಕಂಪನಿಯು ಆರಂಭಿಕ ಸಾರ್ವಜನಿಕ ಹೂಡಿಕೆಗೆ (ಐಪಿಒ) ನಿರ್ಧರಿಸಿದೆ. ಒಟ್ಟು ₹8 ಸಾವಿರ ಕೋಟಿ ಸಂಗ್ರಹಿಸುವ ಗುರಿ ಹೊಂದಿದೆ. ಆದರೆ, ಈ ಪ್ರಕ್ರಿಯೆ ಆರಂಭಿಸುವುದಕ್ಕೂ ಮೊದಲೇ ಉದ್ಯೋಗಿಗಳ ವಜಾಕ್ಕೆ ಮುಂದಾಗಿದೆ.

ಸಾವಿರ ಉದ್ಯೋಗಿಗಳ ನಿರ್ಗಮನ?: ಫ್ಲಿಪ್‌ಕಾರ್ಟ್‌ನಲ್ಲೂ ಶೀಘ್ರವೇ ಉದ್ಯೋಗಿಗಳ ಕಾರ್ಯಕ್ಷಮತೆ ಸಂಬಂಧಿತ ವಜಾ ಪ್ರಕ್ರಿಯೆ ನಡೆಯಲಿದೆ. ಒಂದು ಸಾವಿರ ಉದ್ಯೋಗಿಗಳು ಕಂಪನಿಯಿಂದ ನಿರ್ಗಮಿಸುವ ಸಾಧ್ಯತೆಯಿದೆ ಎಂದು 'ಪ್ರಜಾವಾಣಿ'ಗೆ ಕಂಪನಿಯ ಮೂಲಗಳು ತಿಳಿಸಿವೆ.

ಕಂಪನಿಯಲ್ಲಿ 22 ಸಾವಿರ ಉದ್ಯೋಗಿಗಳಿದ್ದಾರೆ. ಈ ಪೈಕಿ ಕೆಲಸದ ಸಾಮರ್ಥ್ಯವನ್ನು ಮಾನದಂಡವಾಗಿ ಪರಿಗಣಿಸಿ ಉದ್ಯೋಗಿಗಳನ್ನು ವಜಾಗೊಳಿಸುವ ಸಾಧ್ಯತೆ ಎಂದು ತಿಳಿಸಿವೆ. 'ಫ್ಲಿಪ್‌ಕಾರ್ಟ್‌ನಲ್ಲಿ ಉದ್ಯೋಗಿಗಳನ್ನು ವಜಾಗೊಳಿಸುತ್ತಿಲ್ಲ. ಆದರೆ, ಪ್ರತಿವರ್ಷದ ಮಾರ್ಚ್‌ನಲ್ಲಿ ಉದ್ಯೋಗಿಗಳ ಕೆಲಸದ ಮೌಲ್ಯಮಾಪನ ಪ್ರಕ್ರಿಯೆ ನಡೆಯುತ್ತದೆ. ಕಡಿಮೆ ಸಾಮರ್ಥ್ಯ ತೋರಿದವರು ಕಂಪನಿಯಿಂದ ಸಹಜವಾಗಿ ನಿರ್ಗಮಿಸುತ್ತಾರೆ' ಎಂದು ಹೇಳಿವೆ.

ಸಂಕ್ಷಿಪ್ತ ಸುದ್ದಿ

ಜಪಾನ್ ಚಂದ್ರಯಾನ ಯೋಜನೆ: ತಲೆಕೆಳಗಾದ ಲ್ಯಾಂಡರ್

ಟೋಕಿಯೊ (ಎಪಿ): ಜಪಾನ್ ಕಳುಹಿಸಿದ್ದ ಲ್ಯಾಂಡರ್ ಪೂರ್ವ ನಿಗದಿತ ಜಾಗದಲ್ಲಿಯೇ ಚಂದ್ರನನ್ನು ಸ್ಪರ್ಶಿಸುವಲ್ಲಿ ಯಶಸ್ವಿಯಾಗಿದೆ. ಆದರೆ ಅದು ಕೊನೆ ಹಂತದಲ್ಲಿ ತಲೆಕೆಳಗಾಗಿದೆ ಎಂದು ಜಪಾನ್ ಬಾಹ್ಯಾಕಾಶ ಸಂಸ್ಥೆ ಗುರುವಾರ ತಿಳಿಸಿದೆ. ಚಂದ್ರನ ಮೇಲ್ಮೈ ಪ್ರವೇಶಿಸುವ ತನ್ನ ಮೊದಲ ಯೋಜನೆಯಡಿ ಲ್ಯಾಂಡರ್ ಅನ್ನು ಅದು ಕಳುಹಿಸಿತ್ತು.

ಚಂದ್ರನ ಅಧ್ಯಯನಕ್ಕಾಗಿ ಜಪಾನ್ ಕಳುಹಿಸಿರುವ 'ಸ್ಲಿಮ್' ಲ್ಯಾಂಡರ್ ಚಂದ್ರನನ್ನು ಶನಿವಾರ ಮುಂಜಾನೆ ಸ್ಪರ್ಶಿಸಿತು.

ಆ ಮೂಲಕ ಚಂದ್ರನನ್ನು ತಲುಪಿದ ಐದನೇ ದೇಶ ಎಂಬ ಕೀರ್ತಿಗೆ ಅದು ಭಾಜನವಾಯಿತು.

ಲ್ಯಾಂಡರ್ ಇಳಿಯುವ ಸಂದರ್ಭದಲ್ಲಿ ಸೌರ ಬ್ಯಾಟರಿಯಲ್ಲಿ ಕಂಡು ಬಂದ ತೊಂದರೆಯಿಂದಾಗಿ, ಅದು ನಿಗದಿತ ವಲಯದಲ್ಲಿಯೇ ಇಳಿದಿದೆಯೇ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದು ಆರಂಭದಲ್ಲಿ ಕಷ್ಟವಾಯಿತು ಎಂದು ಸಂಸ್ಥೆಯ ಅಧಿಕಾರಿಗಳು ತಿಳಿಸಿದ್ದಾರೆ.

ರಷ್ಯಾ: ಬ್ಲಾಗರ್ ಕೊಂದ ಮಹಿಳೆಗೆ 27 ವರ್ಷ ಜೈಲು

ಟಲ್ಲಿನ್/ಎಸ್ಟೋನಿಯ (ಎಪಿ): ಪ್ರಮುಖ ಬ್ಲಾಗರ್ ಸಾವಿಗೆ ಕಾರಣವಾಗಿದ್ದ ಫಲಾಹಾರ ಮಂದಿರ ಸ್ಫೋಟದ ಆರೋಪಿಯಾಗಿದ್ದ ಮಹಿಳೆಗೆ ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್ ನ್ಯಾಯಾಲಯ ಗುರುವಾರ 27 ವರ್ಷ ದೀರ್ಘಾವಧಿಯ ಜೈಲು ಶಿಕ್ಷೆ ವಿಧಿಸಿದೆ.

ದರ್ಯಾ ಟ್ರೆಪೊವಾ (26) ಜೈಲು ಶಿಕ್ಷೆಗೊಳಗಾದ ಮಹಿಳೆಯಾಗಿದ್ದು, ಲಾಡ್ಲೆನ್ ಟಟಾರ್ಸ್ಕಿ ಎನ್ನುವ ಬ್ಲಾಗರ್ ಕೊಲೆ ಆರೋಪಕ್ಕೆ ಅವರಿಗೆ ಸೇಂಟ್ ಪೀಟರ್ಸ್‌ಬರ್ಗ್ ನ್ಯಾಯಾಲಯ ಶಿಕ್ಷೆ ವಿಧಿಸಿದೆ.

ಉಕ್ರೇನ್ ಮೇಲಿನ ದಾಳಿಯನ್ನು ಬೆಂಬಲಿಸುತ್ತಿದ್ದ ಬ್ಲಾಗರ್ ಟಟಾರ್ಸ್ಕಿಗೆ ಪ್ರತಿಮೆಯನ್ನು ಉಡುಗೊರೆಯಾಗಿ ನೀಡಲಾಗಿತ್ತು. ನಂತರ ಅದು ಸ್ಫೋಟಗೊಂಡಿತ್ತು. ದರ್ಯಾ ಟಟಾರ್ಸ್ಕಿಗೆ ಪ್ರತಿಮೆ ನೀಡಿದ್ದು ವಿಡಿಯೊದಲ್ಲಿ ಸೆರೆಯಾಗಿತ್ತು.

ಲಾಡ್ಲೆನ್ ಟಟಾರ್ಸ್ಕಿ ಸಾವು ಮತ್ತು ಇತರ 52 ಮಂದಿ ಗಾಯಾಳುಗಳಾಗುವುದಕ್ಕೆ ಕಾರಣವಾಗಿದ್ದ ದರ್ಯಾ ವಿರುದ್ಧ ಉಗ್ರ ದಾಳಿ, ಸ್ಫೋಟಕಗಳ ಅಕ್ರಮ ಸಾಗಣೆ, ನಕಲಿ ದಾಖಲೆಗಳನ್ನು ಸೃಷ್ಟಿಸಿದ ಆರೋಪಗಳಡಿ ವಿಚಾರಣೆ ನಡೆಸಲಾಗಿತ್ತು.

ಶೆಲ್ ದಾಳಿ: ಮೃತರ ಸಂಖ್ಯೆ 12ಕ್ಕೆ ಏರಿಕೆ

ಜೆರುಸಲೇಂ (ಎಪಿ): ಗಾಜಾದಲ್ಲಿ ಜನರು ಆಶ್ರಯ ಪಡೆದಿದ್ದ ಕಟ್ಟಡದ ಮೇಲೆ ನಡೆದ ಶೆಲ್ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 12ಕ್ಕೆ ಏರಿಕೆಯಾಗಿದ್ದು, 75 ಮಂದಿ ಗಾಯಗೊಂಡಿದ್ದಾರೆ ಎಂದು ಪ್ಯಾಲೆಸ್ಟೀನ್ ನಿರಾಶ್ರಿತರಿಗಾಗಿ ಕಾರ್ಯ ನಿರ್ವಹಿಸುತ್ತಿರುವ ವಿಶ್ವಸಂಸ್ಥೆಯ ಪರಿಹಾರ ಕಾರ್ಯಗಳ ಸಂಸ್ಥೆಯ (ಯುಎನ್‌ಆರ್‌ಡಬ್ಲ್ಯುಎ) ಅಧಿಕಾರಿ ಥಾಮಸ್ ವೈಟ್ ತಿಳಿಸಿದ್ದಾರೆ.

ಜನರು ಆಶ್ರಯ ಪಡೆದಿದ್ದ ಕಟ್ಟಡದ ಮೇಲೆ ಮಂಗಳವಾರ ಎರಡು ಟ್ಯಾಂಕ್ ಶೆಲ್‌ಗಳು ಅಪ್ಪಳಿಸಿದ್ದವು. ಈ ದಾಳಿಯ ಕುರಿತು ಯುಎನ್‌ಆರ್‌ಡಬ್ಲ್ಯುಎ ಇಸ್ರೇಲ್ ಅನ್ನು ನೇರವಾಗಿ ಟೀಕಿಸಿಲ್ಲ.

ತಮ್ಮ ಪಡೆಗಳು ದಾಳಿ ನಡೆಸಿಲ್ಲ ಎಂದಿರುವ ಇಸ್ರೇಲ್ ಸೇನಾಪಡೆ ಅಧಿಕಾರಿಗಳು, ಈ ಕುರಿತು ತನಿಖೆ ನಡೆಸುತ್ತಿರುದಾಗಿ ಹೇಳಿದ್ದಾರೆ. ಹಮಾಸ್ ಬಂಡುಕೋರರು ರಾಕೆಟ್ ದಾಳಿ ನಡೆಸಿರುವ ಸಾಧ್ಯತೆ ಇದೆ ಎಂದೂ ತಿಳಿಸಿದ್ದಾರೆ.

ಖಾನ್ ಯೂನಿಸ್ ನಗರದಲ್ಲಿ ಇಸ್ರೇಲ್ ಪಡೆಗಳು ದಾಳಿ ತೀವ್ರಗೊಳಿಸಿದ್ದು, ಅಲ್ಲಿನ ಎರಡು ಆಸ್ಪತ್ರೆಗಳಲ್ಲಿ ನೂರಾರು ಮಂದಿ ಸಿಲುಕಿಕೊಂಡಿದ್ದಾರೆ, ಆಸ್ಪತ್ರೆಯ ಹೊರಗೂ ಜನರು ಆಶ್ರಯ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕದನ ವಿರಾಮಕ್ಕೆ ಮನವಿ: ಗಾಜಾದಲ್ಲಿ ತಕ್ಷಣ ಕದನ ವಿರಾಮ ಘೋಷಿಸುವಂತೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಲ್ಲಿ ಮನವಿ ಮಾಡಿರುವುದಾಗಿ ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಕ್ಯಾಮರೂನ್ ತಿಳಿಸಿದ್ದಾರೆ.

ಖತಾರ್‌ಗೆ ಗುರುವಾರ ಭೇಟಿ ನೀಡಿದ್ದ ಅವರು, 'ಗಾಜಾದ ಜನರ ಸಂಕಷ್ಟ ಊಹೆಗೂ ನಿಲುಕದ್ದು, ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ನೆರವು ಒದಗಿಸುವ ಅಗತ್ಯ ಇದೆ' ಎಂದಿದ್ದಾರೆ.

'ಗಾಜಾದ ಜನರಿಗೆ ಅಗತ್ಯ ನೆರವು ಒದಗಿಸಲು ಮತ್ತು ಒತ್ತೆಯಾಳುಗಳ ಬಿಡುಗಡೆಗೆ ಮಾನವೀಯ ನೆಲೆಯಲ್ಲಿ ಕದನ ವಿರಾಮ ಘೋಷಿಸಬೇಕು' ಎಂದು ಅವರು ಒತ್ತಾಯಿಸಿದ್ದಾರೆ.



ದಕ್ಷಿಣ ಗಾಜಾದ ರಫಾ ನಗರದಲ್ಲಿ ಇಸ್ರೇಲ್ ಪಡೆಗಳ ದಾಳಿಗೆ ಕಟ್ಟಡವೊಂದು ಧ್ವಂಸಗೊಂಡಿದೆ – ಎಎಫ್‌ಪಿ ಚಿತ್ರ

'ಗಡಿ ಉದ್ವಿಗ್ನ ಸ್ಥಿತಿ ಪರಂಪರಾಗತವಾಗಿ ಉಳಿದು ಬಂದದ್ದು'

ಬೀಜಿಂಗ್ (ರಾಯಿಟರ್ಸ್): ಭಾರತ–ಚೀನಾ ಗಡಿಯಲ್ಲಿ ಉದ್ವಿಗ್ನ ಸ್ಥಿತಿ ಪರಂಪರಾಗತವಾಗಿ ಉಳಿದುಕೊಂಡು ಬಂದಿದೆಯೇ ಹೊರತು ಚೀನಾ–ಭಾರತದ ಒಟ್ಟು ಬಾಂಧವ್ಯದಿಂದ ಮೂಡಿರುವಂತಹದ್ದಲ್ಲ ಎಂದು ಚೀನಾ ರಕ್ಷಣಾ ಸಚಿವಾಲಯದ ವಕ್ತಾರವು ಒಯಿಯಾನ್ ಹೇಳಿದ್ದಾರೆ.

ಗಡಿ ಸ್ಥಿತಿಯನ್ನು ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧದ ಜೊತೆಗೆ ಭಾರತವು ತಳುಕು ಹಾಕುವುದು ಅವಿವೇಕ ಹಾಗೂ ಅನುಚಿತ ಎಂದು ಗುರುವಾರ ಅಭಿಪ್ರಾಯಪಟ್ಟಿದ್ದಾರೆ. 'ಗಡಿಯಲ್ಲಿ ಪರಿಸ್ಥಿತಿ ಶಾಂತವಾದಲ್ಲಿ, ಚೀನಾ ಕುರಿತು ಬಂಡವಾಳ ಹೂಡಿಕೆ ವಿಷಯದಲ್ಲಿ ನಾವು ಜಾರಿಗೊಳಿಸಿರುವ ಕಠಿಣ ಪರಿಶೀಲನಾ ಕ್ರಮವನ್ನು ಸಡಿಲಿಸಬಹುದು' ಎಂದು ಈ ತಿಂಗಳ ಪ್ರಾರಂಭದಲ್ಲಿ ಭಾರತದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದರು. ಇದಕ್ಕೆ ಪ್ರತಿಕ್ರಿಯಾತ್ಮಕವಾಗಿ ವು ಒಯಿಯಾನ್ ಈ ರೀತಿ ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General
ಬೆಂಗಳೂರಿನಲ್ಲಿ SLVಹೋಂ ನರ್ಸಿಂಗ್ ನಲ್ಲಿ ಕೆಲಸ ಮಾಡಲು ಹುಡುಗಿಯರು, ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು (18 ರಿಂದ 45) ಊಟ ವಸತಿಯೊಂದಿಗೆ ಟ್ರೇನಿಂಗ ಕೊಟ್ಟು ಸಂಬಳ 12,000/ ರಿಂದ 20,000/ ವರೆಗೆ ಕೊಡಲಾಗುವುದು. ಆಸಕ್ತಿ ಉಳ್ಳವರು ಕರೆಮಾಡಿ. 7019869181, 9071106371
ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930
ಫೈನಾಯಿಲ್, ಸೋಪ್ ಕಂಪನಿಗೆ ಯುವಕಯುವತಿಯರು ಬೇಕಾಗಿದ್ದಾರೆ. ವಸತಿ ವ್ಯವಸ್ಥೆಯಿದೆ. ಸಂಬಳ ರೂ.9000/—ರಿಂದ 13,000/—. ನೇರ ಭೇಟಿ ಮಾಡಿ. Mangala Hygiene Products, Anand Nagar, Mangalore. Ph: 9241738717
Domestic Helpers / Housekeeping
ಮಹಿಳಾ ಗೃಹ ಸಹಾಯಕರು ಬೇಕಾಗಿದ್ದಾರೆ. ವೇತನ ತಿಂಗಳಿಗೆ 35000, ಊಟ ವಸತಿ ಮತ್ತು ವೈದ್ಯಕೀಯ ಸೌಲಭ್ಯವಿದೆ. 9665807478

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ:9035492999/ 9663563555
ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516
ಭವಿಷ್ಯ
Astrology
★॥ಶ್ರೀಅನ್ನಪೂರ್ಣೇಶ್ವರಿ॥★ ಜ್ಯೋತಿಷ್ಯಕೇಂದ್ರ" ಸ್ತ್ರೀಪುರುಷ_ವಶೀಕರಣ, ಸಂಭೋಗ ವಶೀಕರಣ, ಸಾಲಭಾದೆ ಇನ್ನೂಯಾವುದೇ ಸಮಸ್ಯೆಗಳಿಗೆ 11ಗಂಟೆಗಳಲ್ಲಿ ಶಾಶ್ವತ ಪರಿಹಾರ. ''ರಾಘವೇಂದ್ರಭಟ್''. 8050061378

ರಿಯಲ್ ಎಸ್ಟೇಟ್ ಸೆಲ್ಲಿಂಗ್
Sites
Kempegowda Layout
KEMPEGOWDA LAYOUT BDA 1st Auction 1800 Sqft NW corner site. Block 1, Sec H. Rs. 7250 per Sqft. Genuine buyers only . Brokers excuse. 9686111709
Vishweshwariah Layout
VISHWESHWARAIAH LAYOUT 8th Block A Khata 1200 Sqft site. Near NPS West with borewell. Rs. 11000 per Sqft. Genuine buyers only . Brokers excuse. 9686111709
Koppal
ಕೊಪ್ಪಳ ಜಿಲ್ಲೆ ಕುಷ್ಟಗಿ.ತಾಲ್ಲೂಕು, ಹನುಮಸಾಗರ ಪಟ್ಟಣದಲ್ಲಿ, ರಾಜ್ಯ ಹೆದ್ದಾರಿ 59 ಕುಷ್ಟಗಿ ಮುಖ್ಯರಸ್ತೆಗೆ ಹೊಂದಿಕೊಂಡಿರುವ 6 ಸೈಟ್ ಗಳು ಮಾರಾಟಕ್ಕಿವೆ. (ಒಟ್ಟು 8400 ಚದುರ.ಅಡಿ) ಮಾಹಿತಿಗಾಗಿ ಸಂಪರ್ಕಿಸಿ: 9901594833, 8431173450.
ಇತರೆ
Medical
ಸಂಪೂರ್ಣ ಉಚಿತ ಶಿಬಿರ. ದಿನಾಂಕ 19/01/2024 ರಿಂದ 31 /01/2024 ಮಂಡಿ ನೋವು, ಬೆನ್ನು ನೋವು, ಕೀಲು ನೋವು, ವೆರಿಕೋಸ್ ವೇನ್ಸ್, ಮಾನಸಿಕ ಸಮಸ್ಯೆ, ತಲೆನೋವು, ಮೈಗ್ರೇನ್, ಭುಜದ ನೋವು,ಲಕ್ವಾ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ಯಾವುದೇ ರೀತಿ ಔಷಧಿ ಅಥವಾ ಶಸ್ತ್ರ ಚಿಕಿತ್ಸೆ ಇಲ್ಲದೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿಯಿಂದ ಚಿಕಿತ್ಸೆ ಪಡೆಯಿರಿ. ವಿಳಾಸ: ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಸ್ಟೇಷನ್ ಎದುರು, ಬೆಂಗಳೂರು. ಮೊಬೈಲ್: 9019626612. ಬೆಳಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ.

ವ್ಯಾಪಾರ
Business to Business
Home Stay
ಮನೆಯ ಸ್ವಾಹಾರ ಊಟೋಪಚಾರದೊಂದಿಗೆ ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ಸವಿಯಲು, ಹೋಂಸ್ಟೇನಲ್ಲಿ ವಿಶ್ರಾಂತಿ ಪಡೆಯಲು 2/3 ದಿನಗಳ ಪ್ರವಾಸಕ್ಕಾಗಿ ವಿಚಾರಿಸಿರಿ. ಸನ್ ಶೈನ್ ಹೋಂಸ್ಟೇ ಸಂಸ್ಥೆ ಕುದುರೆಮುಖ. 9481682498 9916910655
ಪ್ರವಾಸ
Travel
ಸುಸಜ್ಜಿತ ವ್ಯವಸ್ಥೆಗಳೊಂದಿಗೆ 24.02.2024 24.03.2024 12.04.2024 ರಿಂದ 8/12 ದಿನಗಳ ಕಾಶಿ,ಗಯಾ,ಅಯೋಧ್ಯಾ. 20.02.2024 ರಿಂದ 11 ದಿನಗಳ ಗುಜರಾತ್ ಉಜ್ಜಯಿನಿ ಮಹಾಕಾಳೇಶ್ವರ. 11.03.2024 12.04.2024 ರಿಂದ 11 ದಿನಗಳ ಅಯೋಧ್ಯಾ,ಮುಕ್ತಿನಾಥ ನೇಪಾಳ,ಕಾಶಿ. 20.03.2024 12.04.2024 ರಿಂದ 12 ದಿನಗಳ ವೈಷ್ಣೋದೇವಿ ಕಾಶ್ಮೀರ್ ಟುಲಿಪ್ ಗಾರ್ಡನ್. 17.05.2024 26.05.2024 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆಗಳು. 27.02.2024 11.03.2024 ರಿಂದ 5 ದಿನಗಳ ದುಬೈ,ಅಬುದಾಬಿ ಶಾರ್ಜಾ. 24.03.2024 25.04.2024 ರಿಂದ 7/11 ದಿನಗಳ ಸಿಂಗಾಪುರ,ಮಲೇಶಿಯಾ ಥೈಲ್ಯಾಂಡ್. 12.04.2024 25.04.2024 14.05.2024 ರಿಂದ 13/16 ದಿನಗಳ ಯುಕೆ,ಯುರೋಪ್ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅಯೋಧ್ಯಯಾತ್ರೆ, ದೆಹಲಿ ಆಗ್ರಾ ಅಲಹಾಬಾದ್ ಅಯೋಧ್ಯ ಕಾಶಿ,ಗಯಾ 27.03.2024 10 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವಲ್ಸ್, ಮಲ್ಲೇಶ್ವರಂ ಬೆಂಗಳೂರು. 9448294477
24/03/2024 ಅಯೋಧ್ಯ 12 ದಿನಗಳ ಪ್ರವಾಸ ನೇಪಾಳ ಮತ್ತು ಮುಕ್ತಿನಾಥ. 23/05/2024 ಚಾರಧಾಮ್ 14 ದಿನಗಳ ಪ್ರವಾಸ ಟ್ರೈಟ್ ಹಾಲಿಡೇಸ್ ಸಂಪರ್ಕಿಸಿ: 8088559962
22.02.2024 15.03.2024 ಅಯೋಧ್ಯಾ,ಕಾಶಿ,ಬುದ್ಧಗಯಾ ಬೈದ್ಯನಾಥ್.04.03.2024 ಸೋಮನಾಥ್,ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ ಮಹಾಕಾಳೇಶ್ವರ. 02.03.2024 17.03.2024 ಮಹಾಶಿವರಾತ್ರಿ ನೇಪಾಳ,ಮುಕ್ತಿನಾಥ ಪೋಕ್ರ,ಲುಂಬಿನಿ. 11.05.2024 23.05.2024 ಚಾರ್‌ಧಾಮ್ ಪ್ರವಾಸ ಮಧ್ಯ/ದಕ್ಷಿಣಆಂಧ್ರ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 7204173686 9686708171
9 ದಿನಗಳ ಕಾಶಿ,ಅಯೋಧ್ಯ. 13ದಿನಗಳ ಉತ್ತರಭಾರತ. 8 ದಿನಗಳ ಸಿಕ್ಕಿಂ,ಡಾರ್ಜಲಿಂಗ. 13ದಿನಗಳ ಚಾರ್‌ಧಾಮ್‌ಯಾತ್ರೆ. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್. ರಾಜಾಜಿನಗರ ಬೆಂಗಳೂರು.10 9980270467 9740228186
Holiday Package Tours
ರಾಮಕಮಲ್ ಟೂರಿಸಮ್ 8.2.2024 ಅಹೋಬಲ, ಮಂತ್ರಾಲಯ, ಶ್ರೀಶೈಲ, 22.2.2024 ಮಧುರೈ, ರಾಮೇಶ್ವರ, ಕನ್ಯಾಕುಮಾರಿ, 23.2.2024 ಪುರಿ, ಭುಬನೇಶ್ವರ, ಕೊನಾರ್ಕ್. 9481226296

ಪ್ರಜಾವಾಣಿ ಕ್ಲಾಸಿಫೈಡ್ಸ್ ರಿಯಲ್ ಎಸ್ಟೇಟ್ ಪ್ರತಿಯೊಬ್ಬರಿಗೂ ಉಪಯುಕ್ತ
ನೀವು ನಿಮ್ಮ ಮನೆ/ಸೈಟ್ ಮಾರಾಟ/ಖರೀದಿ ಮಾಡುವಾಗ ಮಾಡಬೇಕಾದ ಮೊದಲ ಕೆಲಸ
#1 ಇಲ್ಲಿ ಜಾಹೀರಾತು ನೀಡಿರಿ
ಬುಕ್ ಮಾಡಿ
www.dhclassifieds.com
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿ!
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560
+91 9886213331
080- 45557163/164

ಪ್ರಜಾವಾಣಿ
ಮಾನ್ಯ ಓದುಗರು ಮತ್ತು ಜಾಹೀರಾತುದಾರರಿಗೆ ಗಣರಾಜ್ಯೋತ್ಸವದ ಶುಭಾಶಯಗಳು
ಕ್ಲಾಸಿಫೈಡ್ ಜಾಹೀರಾತಿನ ಬುಕಿಂಗ್ ತೆರೆದಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
080-4555 7160 / 162 / 163 / 164

ಯಾವಾಗಲೂ 100% ಅಸಲಿ ಉತ್ಪನ್ನಗಳು • ಅತ್ಯಂತ ಕಡಿಮೆ ಬೆಲೆ • ಇತ್ತೀಚಿನ ಮಾಡೆಲ್‌ಗಳು • ಅತ್ಯುತ್ತಮ ಬ್ರ್ಯಾಂಡ್ • ಅತ್ಯುತ್ತಮ ಸರ್ವೀಸ್ • ಅತ್ಯುತ್ತಮ ಎಕ್ಸ್ಟೆಂಡೆಡ್ ವಾರಂಟಿ • ನೈಜ ಕೊಡುಗೆ • ನೈಜ ಬಹುಮಾನ
ಕಡಿಮೆ ಬೆಲೆಯ ಮಾರಾಟ
ಗಣರಾಜ್ಯೋತ್ಸವ ದಿನದ ಡಬಲ್ ಧಮಾಕ ಕೊಡುಗೆ!
ಗೆಲ್ಲಿರಿ ₹60 ಲಕ್ಷ* ದವರೆಗೂ ಉಚಿತ ಶಾಪಿಂಗ್
ಗೆಲ್ಲಿರಿ 14 ಕೋಟಿ* ವರೆಗೂ ಪೈ ಲಾಯಲ್ಟಿ ಪಾಯಿಂಟ್ಸ್‌ಗಳು
ಪೈ ಇಂಟರ್‌ನ್ಯಾಷನಲ್
ಪೈ ಫರ್ನಿಚರ್
ಪೈ ಮೊಬೈಲ್ಸ್
Shop In-store | Mobile App | www.paiinternational.in
7.5% INSTANT DISCOUNT* SBI card
#Min. Trxn.: ₹20,000; Max. Discount: ₹2,500 per card. Valid only on EMI Trxns. Validity: 23 Dec 2023 - 28 Jan 2024. T&C Apply.
ICICI Bank Flat 7.5% INSTANT DISCOUNT* On Debit Card EMI transactions.
HDFC BANK Paytm Up to 7.5% INSTANT DISCOUNT* On HDFC CC EMI & DC EMI. Min Trxn : ₹17,500. Max Cashback ₹2,000.
one card pine labs Up to 5% INSTANT DISCOUNT* On OneCard CC EMI. Min Trxn : ₹15,000. Max Cashback ₹7,500.
320 CARS 330 BIKES
TILL DATE GENUINELY DISTRIBUTED!
152.39 CRORE PAI LOYALTY POINTS
₹24.14 CRORE worth FREE SHOPPING
₹7.32 CRORE worth FREE GOLD
₹4.15 CRORE worth CASH PRIZES
ಮೆಗಾ ಫೆಸ್ಟಿವಲ್ ಸೇಲ್ – 2023 ಕಾರ್ ವಿಜೇತರು
Farheen Begum, P Swapna, Akshay Kumar, E Janaki, SV Zabiulla, Kalam, Arlene D'cruze, Ashok K, Rajesh, Sunil Kumar B, Bhargavi, Veeresh, Likith, Manohar, Radha L, Karthik
₹50,000 ಮೌಲ್ಯದ ಉಚಿತ ಶಾಪಿಂಗ್ ವಿಜೇತರು (MFS - 2023)
REPUBLIC DAY DEALS!
iPhone 15 Pro Just Pay ₹3,990 & Get Airpod 2 Gen worth ₹12,990
15 Pro Max Just Pay ₹13,990 & Get Airpods Pro 2 Gen worth ₹24,900
vivo X100 5G Series Up to 10% Cash back + FREE Calling Smart Watch + BoAt True wireless Buds
mi Redmi Note 13 5G Series Lowest Price Guaranteed + Surprise Gift
oppo Reno 11 5G Series Up to 10% Cash back + Complete Damage Protection* + FREE BT Boom Speaker
Airpods Pro ₹3,500* Instant Cash Back EMI Starts @ ₹1,037
Watch S9 ₹6,500* Instant Cash Back EMI Starts @ ₹1,745
No Cost EMI Available
Calling Smart Watch Special Price ₹1,199
BoAt 138 Pro Airdopes Special Price ₹1,099
164cm(65) 4K webOS UHD Smart HENRY MRP ₹74,990 Special Price ₹45,990
218cm(86) 4K UHD Smart LED SANSUI EMI Starts @ ₹11,666
FREE Laptop Bag Gaming ASUS 11th Gen Core i7, 16GB Ram, 1TB SSD, 4GB Graphics, Windows 11, MS Office H&S EMI Starts @ ₹162/Day Additional 2 Years Warranty @ ₹2,499
FREE Laptop Bag Gaming hp VICTUS R5-5600H, 16GB Ram, 512GB SSD, 4GB Graphics, Windows 11, MS Office H&S Upto ₹2,500 Cashback EMI Starts @ ₹118/Day Additional 2 Years Warranty & 3 years Antivirus worth ₹14,499 @ ₹2,499
Wireless Printer hp EMI Starts @ ₹1,650
Wildcraft Trolley worth ₹7,300 @ just ₹799 along with a Laptop*
FREE Laptop Bag DELL 12th Gen Core i5, 8+8GB Ram, 512GB SSD, Windows 11, MS Office H&S Flat ₹2,500 Cashback* EMI Starts @ ₹148/Day Additional 1 Year & JBL Earbuds worth ₹11,748 @ ₹4,098.
FREE Laptop Bag Lenovo R7-5700U, 16GB Ram, 512GB SSD, Windows 11, MS Office H&S EMI Starts @ ₹136/Day Additional 2 Years Warranty + 3 Years Premium Care + 2 Years Accidental Damage Protection @ ₹2,999
1+ 11R 5G Series Easy EMI + Lowest Price Guaranteed + Instant Cash back*
realme C67 / 11 5G Just Pay ₹299 Get Bluetooth Neck band
ಪೈ ಫರ್ನಿಚರ್
Teak Wood Queen Size Bed EMI Starts @ ₹4,099
4 Seater Dining Set EMI Starts @ ₹1,949
Corner Sofa EMI Starts @ ₹2,499
139cm(55) 4K Ultra HD Smart LED LG EMI Starts @ ₹1,999
164cm(65) 4K Ultra HD Smart LED SONY EMI Starts @ ₹2,995
Godrej 564 Ltr. Frost Free. Multi Air Flow. Customized Temperature. Side By Side Refrigerator. EMI Starts @ ₹2,525
Haier 265 Ltr. Frost Free. Inverter Compressor. Twin Energy Saving. Double Door Refrigerator. EMI Starts @ ₹1,994
Whirlpool 259 Ltr. Frost Free. 10 in 1. Convertible Freezer. Double Door Refrigerator. EMI Starts @ ₹2,940
Water Heater 46% OFF
Water Purifier 39% OFF
Kitchen Appliances 60% OFF Henry, Butterfly, Bajaj, Bosch, Havells, Maharaja, Philips, Preethi, Panasonic, Prestige, Pigeon, Vijayalaxmi, Wonderchef
8 Kg LLOYD Hygine+Steam. BLDC Inverter Motor. 1400 Revolution Per Minute. Front Loading Washing Machine. EMI Starts @ ₹2,024
8 Kg BOSCH Anti Stain. AntiWrinkle. AutoStain Removal. Front Loading Washing Machine. EMI Starts @ ₹3,084
Godrej 28 Ltr Convection Microwave Oven EMI Starts @ ₹1,125
iPhone vivo SAMSUNG oppo mi 1+ realme MacBook hp DELL Lenovo ASUS LG SONY Panasonic HENRY TCL Haier BOSCH IFB
Godrej Whirlpool LLOYD PHILIPS AO Smith BAJAJ Butterfly EUREKA FORBES FABER pureit HAVELLS Prestige Preethi Pigeon KAFF V-GUARD boAt FIREBOLTT RIVERSONG base
PRODUCT & SERVICE RELATED ENQUIRIES +91 91084 44777 SERVICE/HELPLINE: 080-42 46 43 43 10AM TO 7PM
FOLLOW US!
FREE DELIVERY FOR REFRIGERATORS, WASHING MACHINES, LED TV'S, FURNITURE
24 HOURS DELIVERY CHALLENGE* GET 100% ADDITIONAL LUCKY DRAW COUPON* IF NOT DELIVERED WITHIN 24 HOURS (Within City Limits)
WE ARE CELEBRATING 220+ OUTLETS
STORE LOCATOR
TnC: *The Finance scheme, low down-payment scheme, EMI, tenure, and credit/loan options are subject to the discretion of the respective financers or card issuing banks, and are governed by their own terms and conditions. Processing fees may be applicable for select models within specific brands. Product images are for representational purposes only; the actual product may vary from the images. *Offer is not applicable to products from Samsung, Sony, MI, iPhone, OnePlus, Realme, recharges, accessories, bulk orders, and institutional orders. *The Super Deals promotion is a limited period offer and is subject to availability. No two offers can be combined. The offer is valid until stocks last and is applicable to select models within specific brands. * Pai International reserves the right to withdraw, change, or modify the offers, prizes, prices, terms, and conditions at any time without prior notice. *Any disputes arising from these terms and conditions are subject to the jurisdiction of Bangalore. *Consumer offers are subject to the terms and conditions of the respective brands. Buyback offers are provided at the sole discretion of Pai International. *Damage protection is not applicable to iPhone and Xiaomi mobile phones. *Special terms apply to combo deals, and they are valid when purchased with the main product at the PSP. * Free standard installation is applicable to select brands and models only. Cashback, if available, is at the sole discretion of the bank, NBFC, or brand. No two cashback offers can be combined. Cashback is not applicable to Corporate Cards, Business Cards, Amazon Pay Credit Card, or Flipkart Credit Cards. NYSS 2023-24 T&Cs: Additional terms and conditions for 2023-24 apply as specified in the digital coupon. Percentage discount is based on the MRP (Maximum Retail Price). Offer is valid until stocks last. Please evaluate the scheme before making the final buy decision. Lowest Price on Selected Models Only. Offer Valid till Stocks last.

ಸ್ಪಿನ್ ಖೆಡ್ಡಾಕ್ಕೆ 'ಬಾಝ್‌ಬಾಲ್'

ಜಡೇಜ, ಅಶ್ವಿನ್ ಸ್ಪಿನ್ ಮೋಡಿಗೆ ಕುಸಿದ ಇಂಗ್ಲೆಂಡ್ • ಜೈಸ್ವಾಲ್ ಅರ್ಧಶತಕ

ಪ್ರಜಾವಾಣಿ ವಾರ್ತೆ

ವಿಕೆಟ್ ಪಡೆದ ಸಂಭ್ರಮದಲ್ಲಿ ಭಾರತ ತಂಡದ ಆರ್. ಅಶ್ವಿನ್ (ಎಡ) ರವೀಂದ್ರ ಜಡೇಜ —ಪಿಟಿಐ ಚಿತ್ರಗಳು

ಹೈದರಾಬಾದ್: ಭಾರತದ ಸ್ಪಿನ್ ಜೋಡಿ ಆರ್. ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರ 'ಜೊತೆಯಾಟ'ದ ಮುಂದೆ ಇಂಗ್ಲೆಂಡ್‌ನ ಬಾಝ್‌ಬಾಲ್ ತಂತ್ರ ನಡೆಯಲಿಲ್ಲ.

ಗುರುವಾರ ಉಪ್ಪಳದ ರಾಜೀವಗಾಂಧಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಆರಂಭವಾದ ಮೊದಲ ಟೆಸ್ಟ್ ಪಂದ್ಯದ ಪ್ರಥಮ ಇನಿಂಗ್ಸ್‌ನಲ್ಲಿ ತಲಾ ಮೂರು ವಿಕೆಟ್ ಗಳಿಸಿದ ಅಶ್ವಿನ್ ಮತ್ತು ಜಡೇಜ ಜೋಡಿಯು ಇಂಗ್ಲೆಂಡ್ ತಂಡವನ್ನು 246 ರನ್‌ಗಳಿಗೆ ನಿಯಂತ್ರಿಸಿತು. ತಂಡದ ಇನ್ನೊಬ್ಬ ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಕೂಡ ಎರಡು ವಿಕೆಟ್ ಗಳಿಸಿ ತಾವೇನೂ ಕಮ್ಮಿಯಲ್ಲ ಎಂದು ತೋರಿಸಿದರು.

ಇದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ಆತಿಥೇಯ ತಂಡವು ದಿನದಾಟದ ಮುಕ್ತಾಯಕ್ಕೆ 23 ಓವರ್‌ಗಳಲ್ಲಿ 1 ವಿಕೆಟ್‌ಗೆ 119 ರನ್ ಗಳಿಸಿತು. ಯಶಸ್ವಿ ಜೈಸ್ವಾಲ್ (ಬ್ಯಾಟಿಂಗ್ 76; 70ಎ, 4X9, 6X3) ಮತ್ತು ಶುಭಮನ್ ಗಿಲ್ (ಬ್ಯಾಟಿಂಗ್ 14; 43ಎ, 4X1) ಕ್ರೀಸ್‌ನಲ್ಲಿದ್ದಾರೆ.

ಮೊದಲ ವಿಕೆಟ್ ಜೊತೆಯಾಟದಲ್ಲಿ ಯಶಸ್ವಿ ಜತೆ 80 ರನ್ ಸೇರಿಸಿದ ರೋಹಿತ್ ಶರ್ಮಾ (24; 27ಎ, 4X3) ಅವರು ಔಟಾಗಿ ನಿರ್ಗಮಿಸಿದರು. ಆದರೆ ಯಶಸ್ವಿ ಮಾತ್ರ ತುಂಬು ಆತ್ಮವಿಶ್ವಾಸದಿಂದ ಇಂಗ್ಲೆಂಡ್ ಬೌಲರ್‌ಗಳನ್ನು ಎದುರಿಸಿದರು.

ಟಾಸ್ ಗೆದ್ದ ಇಂಗ್ಲೆಂಡ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಜ್ಯಾಕ್ ಕ್ರಾಲಿ ಮತ್ತು ಬೆನ್ ಡಕೆಟ್ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 55 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು.

ಬೌಲಿಂಗ್ ಜೊತೆಯಾಟದ ದಾಖಲೆ

ಆಫ್‌ಸ್ಪಿನ್ನರ್ ಅಶ್ವಿನ್ ಮತ್ತು ಎಡಗೈ ಸ್ಪಿನ್ನರ್ ಜಡೇಜ ಅವರು ಬೌಲಿಂಗ್ ಜೊತೆಯಾಟದಲ್ಲಿ ದಾಖಲೆ ಬರೆದರು. ಇವರಿಬ್ಬರೂ 50 ಟೆಸ್ಟ್‌ಗಳಲ್ಲಿ ಒಟ್ಟು 503 ವಿಕೆಟ್‌ಗಳನ್ನು ಗಳಿಸಿದ್ದಾರೆ. ಇದರೊಂದಿಗೆ ಅನಿಲ್ ಕುಂಬ್ಳೆ ಹಾಗೂ ಹರಭಜನ್ ಸಿಂಗ್ 54 ಟೆಸ್ಟ್‌ಗಳಲ್ಲಿ ಗಳಿಸಿದ್ದ 501 ವಿಕೆಟ್‌ಗಳ ಜೊತೆಯಾಟದ ದಾಖಲೆಯನ್ನು ಮೀರಿದ್ದಾರೆ. ವೇಗಿ ಜಹೀರ್ ಖಾನ್ ಮತ್ತು ಹರಭಜನ್ ಸಿಂಗ್ 59 ಪಂದ್ಯಗಳಲ್ಲಿ 474 ವಿಕೆಟ್ ಗಳಿಸಿದ್ದು ಮೂರನೇ ಸ್ಥಾನದಲ್ಲಿದ್ದಾರೆ.

ಆದರೆ ಇವರ ಆಟ ನಡೆದಿದ್ದು ಅಶ್ವಿನ್ ದಾಳಿಗಿಳಿಯುವವರೆಗೆ ಮಾತ್ರ. 12ನೇ ಓವರ್‌ನಲ್ಲಿ ಡಕೆಟ್ ಮತ್ತು 16ನೇ ಓವರ್‌ನಲ್ಲಿ ಕ್ರಾಲಿ ವಿಕೆಟ್‌ಗಳನ್ನು ಅಶ್ವಿನ್ ಕಬಳಿಸಿದರು. ಈ ನಡುವೆ ಜಡೇಜ ಅವರ ಕೈಚಳಕಕ್ಕೆ ಒಲೀ ಪೋಪ್ (1 ರನ್) ಪೆವಿಲಿಯನ್ ಸೇರಬೇಕಾಯಿತು.

ಅನುಭವಿ ಬ್ಯಾಟರ್ ಜೋ ರೂಟ್ (29; 60ಎ) ಆಟಕ್ಕೆ ಕುದುರಿಕೊಳ್ಳುವ ಪ್ರಯತ್ನ ಮಾಡಿದರು. ಆದರೆ ಅವರಿಗೂ ಜಡೇಜ ಎಸೆತದ ತಿರುವು ಗುರುತಿಸುವುದು ಕಷ್ಟವಾಯಿತು. ಬೂಮ್ರಾಗೆ ಕ್ಯಾಚಿತ್ತು ನಿರ್ಗಮಿಸಿದರು.

ಈ ಹಂತದಲ್ಲಿ ನಾಯಕ ಬೆನ್ ಸ್ಟೋಕ್ಸ್ ಮತ್ತು ಜಾನಿ ಬೆಸ್ಟೊ ಜೊತೆಗೂಡಿ ತಂಡಕ್ಕೆ ಚೇತರಿಕೆ ನೀಡುವ ಪ್ರಯತ್ನ ಮಾಡಿದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 61 ರನ್ ಸೇರಿಸಿದರು. ಈ ಜೊತೆಯಾಟವನ್ನು ಅಕ್ಷರ್ ಪಟೇಲ್ ಮುರಿದರು. ಅವರ ಬೌಲಿಂಗ್‌ನಲ್ಲಿ ಬೆಸ್ಟೊ (37; 58ಎ) ಔಟಾದರು.

ಇನ್ನೊಂದೆಡೆ ದಿಟ್ಟತನದಿಂದ ಬ್ಯಾಟ್ ಬೀಸಿದ ಸ್ಟೋಕ್ಸ್ ಅರ್ಧಶತಕ ದಾಟಿದರು. 88 ಎಸೆತಗಳಲ್ಲಿ 70 ರನ್ ಗಳಿಸಿದರು. ಅದರಲ್ಲಿ ಆರು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳನ್ನು ಅವರು ಸಿಡಿಸಿದರು. ಇನಿಂಗ್ಸ್‌ನಲ್ಲಿ ಕೊನೆಯವರಾಗಿ ಜಸ್‌ಪ್ರೀತ್ ಬೂಮ್ರಾಗೆ ವಿಕೆಟ್ ಒಪ್ಪಿಸಿದರು. ಉಳಿದ ಬ್ಯಾಟರ್‌ಗಳು ಅಲ್ಪ ಕಾಣಿಕೆಗಳನ್ನು ನೀಡಿದರು. ಇದರಿಂದಾಗಿ ತಂಡವು ಸಾಧಾರಣ ಮೊತ್ತ ಗಳಿಸಲು ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: **ಇಂಗ್ಲೆಂಡ್:** 64.3 ಓವರ್‌ಗಳಲ್ಲಿ 246 (ಜ್ಯಾಕ್ ಕ್ರಾಲಿ 20, ಬೆನ್ ಡಕೆಟ್ 35, ಜೋ ರೂಟ್ 29,ಜಾನಿ ಬೆಸ್ಟೊ 37, ಬೆನ್ ಸ್ಟೋಕ್ಸ್ 70, ಟಾಮ್ ಹಾರ್ಟ್ಲೀ 23, ಜಸ್‌ಪ್ರೀತ್ ಬೂಮ್ರಾ 28ಕ್ಕೆ2, ರವೀಂದ್ರ ಜಡೇಜ 88ಕ್ಕೆ3, ಆರ್. ಅಶ್ವಿನ್ 68ಕ್ಕೆ3, ಅಕ್ಷರ್ ಪಟೇಲ್ 33ಕ್ಕೆ2) **ಭಾರತ:** 23 ಓವರ್‌ಗಳಲ್ಲಿ 1 ವಿಕೆಟ್‌ಗೆ 119 (ಯಶಸ್ವಿ ಜೈಸ್ವಾಲ್ ಬ್ಯಾಟಿಂಗ್ 76, ರೋಹಿತ್ ಶರ್ಮಾ 24, ಶುಭಮನ್ ಗಿಲ್ ಬ್ಯಾಟಿಂಗ್ 14, ಜ್ಯಾಕ್ ಲೀಚ್ 24ಕ್ಕೆ1)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಎ.ಆರ್.ಟಿ. ಕೇಂದ್ರ ಕೆ.ಸಿ. ಜನರಲ್ ಆಸ್ಪತ್ರೆ
ಮಲ್ಲೇಶ್ವರಂ, ಬೆಂಗಳೂರು – 560 003, ದೂರವಾಣಿ:080–23466782
ಸಂಖ್ಯೆ : ಕೆ.ಸಿ.ಜ./ಎ.ಆರ್.ಟಿ/ಸಿಬ್ಬಂದಿ/01/2023–24 ದಿನಾಂಕ:24.01.2024
ನೇರ ಸಂದರ್ಶನದ ಪ್ರಕಟಣೆ
ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು ಇಲ್ಲಿನ ಎ.ಆರ್.ಟಿ ಕೇಂದ್ರದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳು (Medical Officer) ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ತುಂಬಲು ದಿನಾಂಕ : 30.01.2024 ರಂದು ಮಧ್ಯಾಹ್ನ 12:00ಕ್ಕೆ ನೇರ ಸಂದರ್ಶನವನ್ನು ನಿಗದಿಪಡಿಸಲಾಗಿದೆ. ಈ ಹುದ್ದೆಯ ವಿವರ ಕೆಳಕಂಡಂತಿದೆ.

ಕ್ರ. ಸಂ.	ಹುದ್ದೆಯ ಹೆಸರು	ಹುದ್ದೆಯ ಸಂಖ್ಯೆ	ವಿದ್ಯಾರ್ಹತೆ	ಮಾಸಿಕ ಸಂಭಾವನೆ
	ವೈದ್ಯಾಧಿಕಾರಿಗಳು (Medical Officer)	1	MBBS, with working knowledge of computer, MS Office, Usage of Internet and electronic bill.	72,000/-

1) ಅಭ್ಯರ್ಥಿಗಳು ವಿದ್ಯಾರ್ಹತೆಯ ಮೂಲ ಪ್ರಮಾಣ ಪತ್ರ ಮತ್ತು ಜೆರಾಕ್ಸ್ ಪ್ರತಿಯನ್ನು ಸಂದರ್ಶನದ ವೇಳೆ ಸಲ್ಲಿಸುವುದು. 2) ಅಭ್ಯರ್ಥಿಗಳ ವಯೋಮಿತಿ 70 ವರ್ಷ ಮೀರಿರಬಾರದು. 3) ಸಂದರ್ಶನದ ಸ್ಥಳ : ವೈದ್ಯಕೀಯ ಅಧೀಕ್ಷಕರ ಕಛೇರಿ, ಕೆ.ಸಿ. ಜನರಲ್ ಆಸ್ಪತ್ರೆ, ಮಲ್ಲೇಶ್ವರಂ, ಬೆಂಗಳೂರು – 560 001. ದೂ.ಸಂ. 080–23467782
ಸಹಿ/– ವೈದ್ಯಕೀಯ ಅಧೀಕ್ಷಕರು, ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು.
ವಾಸಾಸಂಇ/ವಾಪ್ರ/ಜಿಎ/3256/2022–24

ವಿರಾಟ್ ಐಸಿಸಿ ವರ್ಷದ ಕ್ರಿಕೆಟಿಗ

ದುಬೈ (ಪಿಟಿಐ): ಕಳೆದ ವರ್ಷ ತವರಿನಲ್ಲಿ ನಡೆದ ವಿಶ್ವಕಪ್ ಕ್ರಿಕೆಟ್‌ನಲ್ಲಿ ಅಮೋಘ ಪ್ರದರ್ಶನ ನೀಡಿದ ಭಾರತ ತಂಡದ ವಿರಾಟ್ ಕೊಹ್ಲಿ ಗುರುವಾರ 2023ರ ಐಸಿಸಿ ಏಕದಿನ ಕ್ರಿಕೆಟಿಗ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಹೋದ ವರ್ಷ ಏಕದಿನ ಕ್ರಿಕೆಟ್‌ನಲ್ಲಿ ಶುಭಮನ್ ಗಿಲ್ ಬಳಿಕ ಎರಡನೇ ಅತಿ ಹೆಚ್ಚು ರನ್ ಗಳಿಸಿದ ಕೊಹ್ಲಿ ಅವರಿಗೆ ಇದು ನಾಲ್ಕನೇ ಪ್ರಶಸ್ತಿಯಾಗಿದೆ. ಆರು ಶತಕಗಳು ಮತ್ತು 8 ಅರ್ಧಶತಕ ಒಳಗೊಂಡಂತೆ 1,377 ರನ್ ಗಳಿಸಿದ್ದರು. ಸಚಿನ್ ತೆಂಡೂಲ್ಕರ್ ಅವರ ಏಕದಿನ ಕ್ರಿಕೆಟ್ ಶತಕಗಳ ದಾಖಲೆಯನ್ನೂ ಕೊಹ್ಲಿ ಮೀರಿದ್ದರು. ಭಾರತವು ಫೈನಲ್ ಪ್ರವೇಶಿಸಿದ್ದ ಈ ಬಾರಿಯ ವಿಶ್ವಕಪ್ ಟೂರ್ನಿಯಲ್ಲಿ ಕೊಹ್ಲಿ 11 ಪಂದ್ಯಗಳಲ್ಲಿ ಆಡಿ ದಾಖಲೆಯ 765 ರನ್ ಗಳಿಸಿದ್ದರು. ಸರಣಿಶ್ರೇಷ್ಠ ಗೌರವಕ್ಕೆ ಪಾತ್ರರಾಗಿದ್ದರು. ಕೊಹ್ಲಿ ತಮ್ಮ ವೃತ್ತಿಜೀವನದಲ್ಲಿ ಗೆದ್ದ ಒಟ್ಟು ಏಳನೇ ವೈಯಕ್ತಿಕ ಐಸಿಸಿ ಪ್ರಶಸ್ತಿ ಇದಾಗಿದೆ.

ಈ ವರ್ಷ ಆಸ್ಟ್ರೇಲಿಯಾದ ನಾಯಕ ಪ್ಯಾಟ್ ಕಮಿನ್ಸ್ ಗ್ಯಾರಿ ಸೋಬರ್ಸ್ ಟ್ರೋಫಿ ಗೆದ್ದರೆ, ಇಂಗ್ಲೆಂಡ್ ಆಲ್‌ರೌಂಡರ್ ನ್ಯಾಟ್ ಸ್ಕಿವರ್-ಬ್ರಂಟ್ ವರ್ಷದ ಮಹಿಳಾ ಕ್ರಿಕೆಟರ್ ಪ್ರಶಸ್ತಿಗೆ ಭಾಜನರಾದರು. ಆಸ್ಟ್ರೇಲಿಯಾದ ಬ್ಯಾಟರ್ ಉಸ್ಮಾನ್ ಖ್ವಾಜಾ ವರ್ಷದ ಪುರುಷರ ಟೆಸ್ಟ್ ಕ್ರಿಕೆಟಿಗ ಪ್ರಶಸ್ತಿಗೆ ಪಾತ್ರರಾದರು. ಶ್ರೀಲಂಕಾದ ಚಾಮರಿ ಅಟಪಟ್ಟು ವರ್ಷದ ಮಹಿಳಾ ಏಕದಿನ ಕ್ರಿಕೆಟರ್ ಪ್ರಶಸ್ತಿಯನ್ನು ಗೆದ್ದಿದ್ದು, ಐಸಿಸಿ ಪ್ರಶಸ್ತಿ ಗೆದ್ದ ದೇಶದ ಮೊದಲ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ವಿನ್‌ಫೇರ್247 ಬೆಂಗಳೂರು ಚಳಿಗಾಲದ ಡರ್ಬಿ ಇಂದು

ಜಮಾರಿ–ತೆಹಾನಿ ನಡುವೆ ನೇರ ಸ್ಪರ್ಧೆ

• ರವಿಕುಮಾರ್


ಪ್ರಾಣ

ರೂಲಿಂಗ್ ಡೈನಾಸ್ಟಿ

ಸಾಯ್ಗಾನ್

ಆಗಸ್ಟ್

ಫಾಸ್ಟ್ ಪೇಸ್

ಜಮಾರಿ

ಮೇಡಮ್ ರಿಚ್

ಸ್ನೋಪಿಯರ್ಸರ್

ಸಂಥಿಂಗ್ ರಾಯಲ್

ತೆಹಾನಿ

ಬೆಂಗಳೂರು: ಗಣರಾಜ್ಯೋತ್ಸವದ ದಿನವಾದ ಶುಕ್ರವಾರ ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಬೆಂಗಳೂರು ಡರ್ಬಿ ಚಳಿಗಾಲದ ರೇಸ್ ನಡೆಯಲಿದೆ.

ಇ ಗೇಮಿಂಗ್ ಸಂಸ್ಥೆಯಾಗಿರುವ ವಿನ್‌ಫೇರ್ 247 ಟೈಟಲ್ ಪ್ರಾಯೋಜಕತ್ವದಲ್ಲಿ ಈ ರೇಸ್ ನಡೆಯಲಿದೆ. ಇದರಲ್ಲಿ ಹತ್ತು ಕುದುರೆಗಳು ಸ್ಪರ್ಧೆಯಲ್ಲಿವೆ.

ಈ ಡರ್ಬಿಯಲ್ಲಿ ಪೆಸಿ ಶ್ರಾಫ್ ತರಬೇತಿಯಲ್ಲಿ ಪಳಗಿರುವ ಜಮಾರಿ ಹಾಗೂ ಸುಲೈಮಾನ್ ಅತೋಲಾಹಿ ತರಬೇತಿಯಲ್ಲಿ ಪಳಗಿರುವ ತೆಹಾನಿ ಪ್ರಮುಖ ಸ್ಪರ್ಧಿಗಳು.

ಚಳಿಗಾಲದ 1000 ಗಿನ್ನಿಸ್ ಮತ್ತು ಓಕ್ಸ್ ರೇಸ್‌ಗಳಲ್ಲಿ ಇವೆರಡು ಕುದುರೆಗಳು ಪೈಪೋಟಿ ನಡೆಸಿದ್ದವು. ಎರಡು ಬಾರಿಯೂ ಜಮಾರಿ ಜಯಿಸಿತ್ತು. ಇಲ್ಲಿಯೂ ತನ್ನ ಜಯದ ಓಟ ಮುಂದುವರಿಸುವತ್ತ ಜಮಾರಿ ವಿಶ್ವಾಸ ಮೂಡಿಸಿದೆ.

ಚೆನ್ನೈನಲ್ಲಿ 1000 ಗಿನ್ನಿಸ್ ಮತ್ತು ಓಕ್ಸ್‌ನಲ್ಲಿ ಜಯ ಗಳಿಸಿರುವ ಸಮ್‌ಥಿಂಗ್ ರಾಯಲ್ ಮತ್ತು ಫಾಸ್ಟ್ ಪೇಸ್ ಉಳಿದ ಸ್ಥಾನಗಳಿಗಾಗಿ ಪೈಪೋಟಿ ನಡೆಸುವ ಸಾಧ್ಯತೆ ಇದೆ. ಸಂಜೆ 4.30ಕ್ಕೆ ಡರ್ಬಿ ರೇಸ್ ಆರಂಭವಾಗಲಿದೆ.

ಮುಖ್ಯಾಂಶಗಳು

- ಸ್ಪರ್ಧೆಯಲ್ಲಿವೆ ಒಟ್ಟು 10 ಕುದುರೆಗಳು
- ಸಂಜೆ 4.30ಕ್ಕೆ ಡರ್ಬಿ ರೇಸ್ ಆರಂಭ

ವಿನ್‌ಫೇರ್247 ಬೆಂಗಳೂರು ಡರ್ಬಿ ಸ್ಪರ್ಧಿಗಳ ವಿವರ

ಸಂಖ್ಯೆ	ಕುದುರೆ ಹೆಸರು	ಟ್ರೇನರ್	ಜಾಕಿ	ಕುದುರೆ ಹೊರುವ ತೂಕ(ಕೆಜಿ)	ಡ್ರಾ ಸಂಖ್ಯೆ
1	ಪ್ರಾಣ	ಪ್ರಸನ್ನಕುಮಾರ್	ವಿವೇಕ್. ಜಿ	57	4
2	ರೂಲಿಂಗ್ ಡೈನಾಸ್ಟಿ	ಪ್ರಸನ್ನಕುಮಾರ್	ಎನ್.ಎಸ್. ಪರ್ಮಾರ್	57	9
3	ಸಾಯ್ಗಾನ್	ಎ.ಗಣಪತಿ	ಇಮ್ರಾನ್ ಚಿಸ್ತಿ	57	7
4	ಆಗಸ್ಟ್	ಅರ್ಜುನ್ ಮಂಗ್ಲೋರ್ಕರ್	ಆಂಥೋಣಿ ರಾಜ್	55.5	3
5	ಫಾಸ್ಟ್ ಪೇಸ್	ಬಿ.ಪೃಥ್ವಿರಾಜ್	ವೈ.ಎಸ್.ಶ್ರೀನಾಥ್	55.5	1
6	ಜಮಾರಿ	ಪಿ.ಶ್ರಾಫ್	ಟ್ರೆವರ್ ಪಟೇಲ್	55.5	6
7	ಮೇಡಮ್ ರಿಚ್	ಬಿ.ಪೃಥ್ವಿರಾಜ್	ಸಕ್ಲೈನ್	55. 5	10
8	ಸ್ನೋಪಿಯರ್ಸರ್	ಎಸ್. ಅತೋಲಾಹಿ	ಎಫ್. ನಾರ್ಟನ್	55.5	5
9	ಸಮ್‌ಥಿಂಗ್ ರಾಯಲ್	ಜೆ.ಸೆಬಾಸ್ಟಿಯನ್	ಪಿ.ಎಸ್.ಚೌಹಾಣ್	55.5	2
10	ತೆಹಾನಿ	ಎಸ್. ಅತೋಲಾಹಿ	ಸೂರಜ್ ನರೇಡು	55.5	8

ದಾಖಲೆಯ ₹ 1.71 ಕೋಟಿ ಬಹುಮಾನ

ಬೆಂಗಳೂರು ಚಳಿಗಾಲದ ಡರ್ಬಿಯು 51ನೇ ಆವೃತ್ತಿಯಾಗಿದೆ. ಡರ್ಬಿಯ ಒಟ್ಟು ಬಹುಮಾನದ ಮೊತ್ತವು ಸುಮಾರು ₹ 1.71 ಕೋಟಿಯಾಗಿದೆ. ಗೆಲ್ಲುವ ಕುದುರೆಯ ಮಾಲೀಕರು ಅಂದಾಜು ₹ 80.72 ಲಕ್ಷ ಮತ್ತು ಟ್ರೋಫಿ ಪಡೆಯಲಿದ್ದಾರೆ. ಇದು ಚಳಿಗಾಲದ ರೇಸ್‌ಗಳಲ್ಲೇ ಗರಿಷ್ಠ ದಾಖಲೆಯ ಬಹುಮಾನವಾಗಿದೆ.

ರೇಸ್ ಪ್ರಿಯರಿಗೆ ಸ್ಪರ್ಧೆ: ರೇಸ್ ಪ್ರಿಯರಿಗೆ ಬೆಂಗಳೂರು ಟರ್ಫ್ ಕ್ಲಬ್ ಬುದ್ಧಿಕೌಶಲ ಸ್ಪರ್ಧೆಯನ್ನು ಏರ್ಪಡಿಸಿದೆ. ದಿನದ 4, 5 ಮತ್ತು 6ನೇ ರೇಸ್‌ಗಳಲ್ಲಿ ಗೆಲ್ಲುವ ಕುದುರೆಯನ್ನು ನಿಖರವಾಗಿ ಗುರುತಿಸಿದವರಿಗೆ ಮೊದಲನೇ ಬಹುಮಾನವಾಗಿ ಮಾರುತಿ ಆಲ್ಟೊ ಕೆ ಟೆನ್ ಸೇರಿದಂತೆ ಹಲವಾರು ಆಕರ್ಷಕ ಬಹುಮಾನಗಳನ್ನು ನೀಡುತ್ತಿದೆ.

ಬೆಂಗಳೂರು ರೇಸ್

ಶುಕ್ರವಾರ ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ದಿ ಗ್ಯಾಲರಿ ಟೈಮ್ 4, ಸನ್ ಫ್ಲೇರ್ 3, ಲೋನ್ ರೇಂಜರ್ 2
2ನೇ ರೇಸ್: ನೆವರ್ ಗೀವ್ ಇನ್ 5, ವಿಕ್ಟೋರಿಯಾ ದೊರೆಸಾನಿ 6, ರಾಯಲ್ ಮೈಸೂರು 3
3ನೇ ರೇಸ್: ವಫಾದಾರ್ 5, ಯಾನ್ನಿಕ್ 6, ಮಸಾಟೊ 3
4ನೇ ರೇಸ್: ಫಾಂಡ್‌ನೆಸ್ ಆಫ್ ಯೂ 3, ಟ್ರಿಪಿಟಾಕ 7, ಮಿಷಿಗನ್ ಮೆಲೋಡಿ 4
5ನೇ ರೇಸ್: ಪ್ರಿನ್ಸೆಸ್ ಜಾಸ್ಮೈನ್ 3, ಲವಿಂಗ್ ಪರ್ಲ್ 2, ಅಪೊಲೊ ಲೈಟ್ 1
6ನೇ ರೇಸ್: ಜಮಾರಿ 6, ಟೆಹಾನಿ 10, ಸಂಥಿಂಗ್ ರಾಯಲ್ 9
7ನೇ ರೇಸ್: ಸೋಫಿಯಾ 3, ಡೆವಿಲ್ಸ್ ಮ್ಯಾಜಿಕ್ 1, ಅಕ್ವಮೆಟಿಕ್ 5
8ನೇ ರೇಸ್: ಗ್ರಿಜ್ಲಿ 2, ಬ್ಲ್ಯಾಕ್‌ಸ್ಟೋನ್ 5, ಬೋಲ್ಡ್ ಆಕ್ಟ್ 1

ಉತ್ತಮ ಬೆಟ್: ವಫಾದಾರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಮಯಂಕ್ ಬಳಗಕ್ಕೆ ತ್ರಿಪುರ ಸವಾಲು ಇಂದು


ಮಯಂಕ್

ಅಗರ್ತಲಾ: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಈ ಬಾರಿಯ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಿರುವ ಮೂರು ಪಂದ್ಯಗಳಲ್ಲಿ ಒಂದು ಜಯ, ಒಂದು ಸೋಲು ಹಾಗೂ ಡ್ರಾ ಅನುಭವಿಸಿದೆ.

ಇದರಿಂದಾಗಿ ತಂಡದ ನಾಕೌಟ್ ಪ್ರವೇಶವು ತುಸು ಕಠಿಣವಾಗಿದೆ. ಇನ್ನುಳಿದಿರುವ ನಾಲ್ಕು ಪಂದ್ಯಗಳಲ್ಲಿ ಹೆಚ್ಚಿನ ಅಂತರದಲ್ಲಿ ಜಯಿಸಿದರೆ ಸಿ ಗುಂಪಿನಲ್ಲಿ ಅಗ್ರಸ್ಥಾನಕ್ಕೇರುವ ಅವಕಾಶ ಇದೆ. ಅದಕ್ಕಾಗಿ ಶುಕ್ರವಾರ ಆರಂಭವಾಗುವ ತ್ರಿಪುರ ಎದುರಿನ ಪಂದ್ಯದಲ್ಲಿ ಗೆಲುವಿನ ಹಳಿಗೆ ಮತ್ತೆ ಮರಳಬೇಕಿದೆ.

ಏಕೆಂದರೆ; ಕೊನೆಯ ಮೂರು ಪಂದ್ಯಗಳಲ್ಲಿ ಕಠಿಣ ಪೈಪೋಟಿ ಯೊಡ್ಡಬಲ್ಲ ತಮಿಳುನಾಡು, ರೈಲ್ವೆಸ್ ಹಾಗೂ ಚಂಡೀಗಡ ತಂಡಗಳನ್ನು ಎದುರಿಸಬೇಕಿದೆ. ಇದ್ದುದರಲ್ಲಿ ಅನುಭವದ ಕೊರತೆ ಇರುವ ತ್ರಿಪುರ ತಂಡವನ್ನು ದೊಡ್ಡ ಅಂತರದಿಂದ ಸೋಲಿಸಿ ಸಂಪೂರ್ಣ ಪಾಯಿಂಟ್‌ಗಳನ್ನು ಜೇಬಿಗಿಳಿಸಬೇಕಿದೆ. ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ತ್ರಿಪುರ ತಂಡವನ್ನು ಸೋಲಿಸುವುದರಿಂದ ಮೇಲೇರುವ ಅವಕಾಶ ಮಯಂಕ್ ಬಳಗಕ್ಕೆ ಇದೆ.

ಆದರೆ ಗುಜರಾತ್ ಎದುರಿನ ಸೋಲು ಮತ್ತು ತವರಿನಂಗಳದಲ್ಲಿ ಗೋವಾದ ಎದುರು ಡ್ರಾ ಪಂದ್ಯಗಳಲ್ಲಿ ಕರ್ನಾಟಕದ ಆಟವು ತೃಪ್ತಿಕರವಾಗಿರಲಿಲ್ಲ. ಅಹಮದಾಬಾದಿನಲ್ಲಿ ಅಲ್ಪಮೊತ್ತ ಗುರಿಯನ್ನು ಬೆನ್ನಟ್ಟಿಯೂ ಗೆಲುವು ಕೈಚೆಲ್ಲುವಲ್ಲಿ ಬ್ಯಾಟರ್‌ಗಳ ಲೋಪ ಕಾರಣವಾಗಿತ್ತು. ಮೈಸೂರಿನಲ್ಲಿ ಗೋವಾ ಎದುರು ಮೊದಲ ಇನಿಂಗ್ಸ್‌ನಲ್ಲಿ ಉತ್ತಮ ಮುನ್ನಡೆ ಗಳಿಸಿದ್ದರೂ ಕೊನೆಯ ದಿನದಾಟದಲ್ಲಿ ಬೌಲರ್‌ಗಳು ಗೆಲುವು ದೊರಕಿಸಿಕೊಡುವಲ್ಲಿ ವಿಫಲರಾದರು.

ಇದೀಗ ವಿದ್ವತ್ ಕಾವೇರಪ್ಪ ಭಾರತ ಎ ತಂಡದಿಂದ ರಾಜ್ಯ ತಂಡಕ್ಕೆ ಮರಳಿದ್ದಾರೆ. ಆದ್ದರಿಂದ ಶಕ್ತಿ ಹೆಚ್ಚಿದಂತಾಗಿದೆ. ಆದರೆ ಸ್ಪಿನ್ ವಿಭಾಗದಲ್ಲಿ ಅನುಭವಿಗಳಿಲ್ಲ. ಇದೇ ಋತುವಿನಲ್ಲಿ ಪದಾರ್ಪಣೆ ಮಾಡಿರುವ ರೋಹಿತ್ ಕುಮಾರ್ ಅವರಿಗೆ ಶಶಿಕುಮಾರ್ ಜೊತೆ ಕೊಡಬಹುದು. ಶುಭಾಂಗ್ ಹೆಗ್ಡೆ ಸ್ಥಾನ ಕಳೆದುಕೊಂಡಿದ್ದಾರೆ.

ಬ್ಯಾಟಿಂಗ್‌ನಲ್ಲಿಯೂ ಅನುಭವಿ ಮನೀಷ್ ಪಾಂಡೆ ಗಾಯಗೊಂಡಿದ್ದು ಈ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ. ದೇವದತ್ತ ಪಡಿಕ್ಕಲ್ ಕೂಡ ಭಾರತ ಎ ತಂಡದಲ್ಲಿ ಆಡಲು ತೆರಳಿದ್ದಾರೆ. ಕಳೆದ ಪಂದ್ಯದಲ್ಲಿ ಶತಕ ಬಾರಿಸಿರುವ ನಿಕಿನ್ ಜೋಸ್ ಹಾಗೂ ಮಯಂಕ್ ಅವರ ಮೇಲೆ ಹೆಚ್ಚು ಹೊಣೆ ಬಿದ್ದಿದೆ. ಡೇಗಾ ನಿಶ್ಚಲ್, ಶರತ್ ಶ್ರೀನಿವಾಸ್ ಅವರಿಗೆ ಮಧ್ಯಮ ಕ್ರಮಾಂಕ ಬಲಪಡಿಸುವ ಜವಾಬ್ದಾರಿ ಇದೆ. ಕೂಚ್ ಬಿಹಾರ್ ಟ್ರೋಫಿ ಟೂರ್ನಿಯ ಚಾಂಪಿಯನ್ ತಂಡದಲ್ಲಿದ್ದ ಹಾರ್ದಿಕ್ ರಾಜ್ ಅವರಿಗೆ ಪದಾರ್ಪಣೆ ಅವಕಾಶ ಸಿಗುವ ಸಾಧ್ಯತೆ ಇದೆ.

ಭಾರತ ತಂಡದಲ್ಲಿ ಆಡಿರುವ ಅನುಭವಿ ವಿಕೆಟ್ ಕೀಪರ್ ವೃದ್ಧಿಮಾನ್ ಸಹಾ ಅವರ ನಾಯಕತ್ವದ ತ್ರಿಪುರ ತಂಡವು ಈ ಟೂರ್ನಿಯಲ್ಲಿ ಆಡಿರುವ ಮೂರರಲ್ಲಿ ಒಂದು ಪಂದ್ಯವನ್ನೂ ಸೋತಿಲ್ಲ. ಮೊದಲ ಪಂದ್ಯದಲ್ಲಿ ಗೋವಾ ಎದುರು ತಂಡವು ಗೆದ್ದಿತ್ತು. ನಂತರ ತಮಿಳುನಾಡು ಮತ್ತು ಪಂಜಾಬ್‌ನಂತಹ ಉತ್ತಮ ತಂಡಗಳ ಎದುರಿನ ಪಂದ್ಯಗಳಲ್ಲಿ ಡ್ರಾ ಮಾಡಿಕೊಂಡಿತು.

ಪಂದ್ಯ ಆರಂಭ: ಬೆಳಿಗ್ಗೆ 9.30

ಮುಶೀರ್ ಶತಕ: ಭಾರತಕ್ಕೆ ಜಯ

ಬ್ಲೊಮ್‌ಫೋಂಟೀನ್ (ದಕ್ಷಿಣ ಆಫ್ರಿಕಾ), (ಪಿಟಿಐ): ಭಾರತ ತಂಡ, ಐಸಿಸಿ 19 ವರ್ಷದೊಳಗಿನವರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿ 'ಎ' ಗುಂಪಿನ ಪಂದ್ಯದಲ್ಲಿ ಗುರುವಾರ 201 ರನ್‌ಗಳಿಂದ ಐರ್ಲೆಂಡ್ ತಂಡವನ್ನು ನಿರಾಯಾಸವಾಗಿ ಸೋಲಿಸಿತು. ಪ್ರತಿಭಾನ್ವಿತ ಬ್ಯಾಟರ್ ಮುಶೀರ್ ಖಾನ್ ಆಕರ್ಷಕ ಶತಕದ ಮೂಲಕ ತಮ್ಮ ಸಾಮರ್ಥ್ಯ ಪ್ರದರ್ಶಿಸಿದರು.

ಸತತ ಎರಡನೇ ಗೆಲುವಿನ ಮೂಲಕ ಭಾರತ ಸೂಪರ್ ಸಿಕ್ಸ್‌ಗೆ ಸ್ಥಾನವನ್ನು ಬಹುತೇಕ ಖಚಿತಪಡಿಸಿಕೊಂಡಿತು. ಮುಶೀರ್ 106 ಎಸೆತಗಳಲ್ಲಿ 118 ರನ್ ಗಳಿಸಿದ್ದರಿಂದ ಭಾರತ 7 ವಿಕೆಟ್‌ಗೆ 301 ರನ್‌ಗಳ ಉತ್ತಮ ಮೊತ್ತ ಗಳಿಸಿತು. ಈ ದೊಡ್ಡ ಗುರಿಯೆದುರು ದುರ್ಬಲ ಐರ್ಲೆಂಡ್ ತಂಡ ಹೆಚ್ಚು ಹೋರಾಟ ತೋರದೇ 29.4 ಓವರುಗಳಲ್ಲಿ 100 ರನ್ನಿಗೆ ಕುಸಿಯಿತು. ಎಡಗೈ ಮಧ್ಯಮ ವೇಗಿ ನಮನ್ ತಿವಾರಿ 53 ರನ್ನಿಗೆ 4 ವಿಕೆಟ್ ಪಡೆದರೆ, ಎಡಗೈ ಸ್ಪಿನ್ನರ್ ಸೌಮಿ ಕುಮಾರ್ ಪಾಂಡೆ 3 ವಿಕೆಟ್ ಪಡೆದರು.

ಮುಶೀರ್ ಶತಕ ಗಳಿಸಿದ ದಿನವೇ ಅವರ ಅಣ್ಣ ಸರ್ಫರಾಜ್ ಸಾವಿರಾರು ಮೈಲು ದೂರದ ಅಹಮದಾಬಾದಿನಲ್ಲಿ ಭಾರತ 'ಎ' ತಂಡದ ಪರ ಇಂಗ್ಲೆಂಡ್ ಲಯನ್ಸ್ ವಿರುದ್ಧ 'ಟೆಸ್ಟ್' ಪಂದ್ಯದಲ್ಲಿ 161 ರನ್ ಗಳಿಸಿದ್ದು ವಿಶೇಷ.

ಸಂಕ್ಷಿಪ್ತ ಸ್ಕೋರುಗಳು: ಭಾರತ: 50 ಓವರುಗಳಲ್ಲಿ 7 ವಿಕೆಟ್‌ಗೆ 301 (ಮುಶೀರ್ ಖಾನ್ 118, ಉದಯ್ ಸಹಾರನ್ 75, ಒಲಿವರ್ ರಿಲಿ 55ಕ್ಕೆ3); **ಐರ್ಲೆಂಡ್:** 29.4 ಓವರುಗಳಲ್ಲಿ 100 (ನಮನ್ ತಿವಾರಿ 53ಕ್ಕೆ4, ಸೌಮಿ ಕುಮಾರ್ ಪಾಂಡೆ 21ಕ್ಕೆ3)

ಚೆಸ್: ಶ್ರೀಹರಿಗೆ ಮಣಿದ ಅಭಿಜಿತ್

ಇಂಗ್ಲೆಂಡ್‌ನ ನೈಜೆಲ್ ಶಾರ್ಟ್

ಬೆಂಗಳೂರು: ತಮಿಳುನಾಡಿನ ಐಎಂ ಎಲ್.ಆರ್.ಶ್ರೀಹರಿ ಅವರು ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯ ಒಂಬತ್ತನೇ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಅಭಿಜಿತ್ ಗುಪ್ತಾ ಅವರಿಗೆ ಸೋಲಿನ ಆಘಾತ ನೀಡಿದ್ದು 'ದಿನದ ಅನಿರೀಕ್ಷಿತ' ಎನಿಸಿತು. ಇನ್ನೊಂದೆಡೆ ರಾಷ್ಟ್ರೀಯ ಚಾಂಪಿಯನ್ ಎಸ್.ಪಿ.ಸೇತುರಾಮನ್ ಮೊದಲ ಬೋರ್ಡ್‌ನಲ್ಲಿ ಹಿರಿಯ ಗ್ರ್ಯಾಂಡ್‌ಮಾಸ್ಟರ್, ಇಂಗ್ಲೆಂಡ್‌ನ ನೈಜೆಲ್ ಶಾರ್ಟ್ ಅವರ ಜೊತೆ 33 ನಡೆಗಳಲ್ಲಿ 'ಡ್ರಾ' ಮಾಡಿಕೊಳ್ಳುವ ಮೂಲಕ ಒಂಟಿಯಾಗಿ ಅಗ್ರಸ್ಥಾನಕ್ಕೇರಿದರು.

2ನೇ ಶ್ರೇಯಾಂಕದ ಸೇತುರಾಮನ್ (ಪಿಎಸ್‌ಪಿಬಿ) 7.5 ಪಾಯಿಂಟ್ಸ್ ಗಳಿಸಿದ್ದಾರೆ. ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಬೆಂಗಳೂರು ನಗರ ಜಿಲ್ಲಾ ಚೆಸ್ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯ ಕೊನೆಯ ಸುತ್ತಿನಲ್ಲಿ ಅವರು ಶುಕ್ರವಾರ ಜಿಎಂ ದೀಪ್ತಾಯನ್ ಘೋಷ್ (ಬಂಗಾಳ) ಅವರನ್ನು ಎದುರಿಸಲಿದ್ದಾರೆ. ಫಿಡೆಯಲ್ಲಿ ಚೆಸ್ ಅಭಿವೃದ್ಧಿ ವಿಭಾಗದ ನಿರ್ದೇಶಕರೂ ಆಗಿರುವ 58 ವರ್ಷದ ಶಾರ್ಟ್ ಮತ್ತು ಇತರ ನಾಲ್ವರು ಆಟಗಾರರು ತಲಾ ಏಳು ಪಾಯಿಂಟ್ಸ್ ಶೇಖರಿಸಿ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಎಲ್.ಆರ್. ಶ್ರೀಹರಿ, ಮಿತ್ರಬಾ ಗುಹಾ (ಬಂಗಾಳ), ದೀಪ್ತಾಯನ್ ಘೋಷ್ ಮತ್ತು ಎಂ. ಶ್ಯಾಮಸುಂದರ್ (ತಮಿಳುನಾಡು) 2ನೇ ಸ್ಥಾನದಲ್ಲಿರುವ ಇತರ ನಾಲ್ವರು.

ಮೂರನೇ ಬೋರ್ಡ್‌ನಲ್ಲಿ ಮಿತ್ರಬಾ ಗುಹಾ ಮತ್ತು ಅರಣ್ಯಕ್ ಘೋಷ್ (6.5) ನಡುವಣ ಪಂದ್ಯ ಡ್ರಾ ಆಯಿತು. ಟೂರ್ನಿಯಲ್ಲಿ ಕೇರಳದ ನಿತಿನ್ ಬಾಬು (6), ದೀಪ್ತಾಯನ ಘೋಷ್ ಎದುರು ಸೋಲನುಭವಿಸಿದರು. ಕರ್ನಾಟಕದ ಜಿಎಂ ಪ್ರಣವ್ ಆನಂದ್ (6.5) ಮತ್ತು ಬಂಗಾಳದ ಜಿಎಂ ನೀಲೋತ್ಪಲ್ ದಾಸ್ (6.5) ನಡುವಣ ಪಂದ್ಯ 'ಡ್ರಾ' ಆಯಿತು.

ಕ್ವಾರ್ಟರ್‌ಗೆ ಮಹಿಳಾ ಹಾಕಿ ಫೈವ್ಸ್ ತಂಡ

ಮಸ್ಕತ್ (ಪಿಟಿಐ): ನಮೀಬಿಯಾವನ್ನು 7-2 ಗೋಲುಗಳಿಂದ ಮಣಿಸಿದ ಭಾರತ ತಂಡ, ಎಫ್‌ಐಎಚ್ ಮಹಿಳಾ ಹಾಕಿ ಫೈವ್ಸ್ ವಿಶ್ವಕಪ್‌ನಲ್ಲಿ ಗುರುವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದೆ.

ಇದು 'ಸಿ' ಗುಂಪಿನಲ್ಲಿ ಭಾರತ ತಂಡದ ಸತತ ಮೂರನೇ ಗೆಲುವಾಗಿದೆ. ಶುಕ್ರವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ 'ಡಿ' ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿರುವ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ.

ಇದಕ್ಕೂ ಮುನ್ನ ಪೋಲೆಂಡ್ ವಿರುದ್ಧ 5-4 ಗೋಲುಗಳ ಅಂತರದಲ್ಲಿ ಜಯ ಸಾಧಿಸಿದ್ದ ಭಾರತ, ನಂತರದ ಪಂದ್ಯದಲ್ಲಿ ಅಮೆರಿಕವನ್ನು 7-3ರಿಂದ ಮಣಿಸಿತ್ತು

ಮುನ್ನಡೆ ಹಂಚಿಕೊಂಡ ಗುಕೇಶ್

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ಟಾಟಾ ಸ್ಟೀಲ್ ಹತ್ತನೇ ಸುತ್ತಿನಲ್ಲಿ ಗುರುವಾರ ಅಲೆಕ್ಸಾಂಡರ್ ದೊನ್‌ಚೆಂಕೊ ಅವರನ್ನು ಸುಲಭವಾಗಿ ಸೋಲಿಸಿದರು. ಅವರು ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದುಸತ್ತಾರೋವ್ ಅವರೊಡನೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಗುಕೇಶ್ ಐದು ಗೆಲುವು, ಎರಡು ಸೋಲಿನೊಡನೆ 6.5 ಅಂಕ ಕಲೆಹಾಕಿದ್ದಾರೆ. ಅಬ್ದುಸತ್ತಾರೋವ್, ಮ್ಯಾಕ್ಸ್ ವಾರ್ಮೆರ್‌ಡಾಮ್ ಅವರನ್ನು ಪ್ರಯಾಸಪಟ್ಟು ಸೋಲಿಸಿದ್ದರಿಂದ ಗುಕೇಶ್‌ಗೆ ಒಂಟಿಯಾಗಿ ಮುನ್ನಡೆ ಸಾಧಿಸುವ ಅವಕಾಶ ತಪ್ಪಿತು.

ಟೂರ್ನಿಯಲ್ಲಿ ಇನ್ನೂ ಮೂರು ಸುತ್ತುಗಳು ಉಳಿದಿವೆ. ಭಾರತದ ಇನ್ನೊಬ್ಬ ಯುವ ಆಟಗಾರ ಆರ್. ಪ್ರಜ್ಞಾನಂದ ಮತ್ತು ಅನೀಶ್ ಗಿರಿ ತಲಾ ಆರು ಪಾಯಿಂಟ್ಸ್ ಹೊಂದಿದ್ದು, ಅಗ್ರಸ್ಥಾನದಲ್ಲಿರುವ ಆಟಗಾರರನ್ನು ನಿಕಟವಾಗಿ ಹಿಂಬಾಲಿಸಿದ್ದಾರೆ. ವಿದಿತ್ ಸಂತೋಷ್ ಗುಜರಾತಿ (5.5 ಪಾಯಿಂಟ್ಸ್) ಮೂರನೇ ಸ್ಥಾನದಲ್ಲಿದ್ದಾರೆ.

ಪ್ರಜ್ಞಾನಂದ ಮತ್ತು ಗುಜರಾತಿ ನಡುವಣ ಪಂದ್ಯ 'ಡ್ರಾ' ಆಯಿತು. ಇಯಾನ್ ನೆಪೋಮ್‌ನಿಯಾಚಿ (5.5) ಇನ್ನೊಂದು ಪಂದ್ಯದಲ್ಲಿ ವಿಶ್ವ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ (4) ಅವರನ್ನು ಸೋಲಿಸಿದರು.

ಪ್ರಿಯಾಂಶು, ಸೇನ್ ನಿರ್ಗಮನ


ಕಿರಣ್ ಜಾರ್ಜ್

ಜಕಾರ್ತಾ (ಪಿಟಿಐ): ಭಾರತದ ಲಕ್ಷ್ಯ ಸೇನ್ ಮತ್ತು ಪ್ರಿಯಾಂಶು ರಾಜಾವತ್ ಅವರು ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಸೋಲು ಅನುಭವಿಸಿ ಟೂರ್ನಿಯಿಂದ ಹೊರಬಿದ್ದಿದ್ದಾರೆ.

ಎಂಟನೇ ಶ್ರೇಯಾಂಕಿತ ಡೆನ್ಮಾರ್ಕ್‌ನ ಆಂಡರ್ಸ್ ಆಂಟೊನ್ಸೆನ್ ವಿರುದ್ಧ ಪ್ರಬಲ ಹೋರಾಟ ನಡೆಸಿದ ವಿಶ್ವ ಕ್ರಮಾಂಕದಲ್ಲಿ 19ನೇ ಸ್ಥಾನದಲ್ಲಿರುವ ಸೇನ್ 19-21, 18-21 ಅಂತರದಲ್ಲಿ ಸೋತರು.

ಕ್ವಾರ್ಟರ್‌ಗೆ ಕಿರಣ್: ಟೂರ್ನಿಯಲ್ಲಿ ಉಳಿದಿರುವ ಏಕೈಕ ಭಾರತೀಯ ಕಿರಣ್ ಜಾರ್ಜ್, ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನಲ್ಲಿ ಚೀನಾದ ಲು ಗುವಾಂಗ್ಜು ಅವರನ್ನು 21–11, 23–21, 21–18ರಿಂದ ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ

(ದಲಿತ, ಹಿಂದುಳಿದ, ಆದಿವಾಸಿ, ಅಲೆಮಾರಿ, ಅಲ್ಪಸಂಖ್ಯಾತ ಮತ್ತು ಜನಪರ ಸಂಘಟನೆಗಳು)

ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ(ರಿ.)

ಇವರ ಸಂಯುಕ್ತ ಆಶ್ರಯದಲ್ಲಿ

ಸಂವಿಧಾನ, ಸಾಮಾಜಿಕ ನ್ಯಾಯ, ಸಹಬಾಳ್ವೆ ಮತ್ತು ಸ್ವಾಭಿಮಾನದ ಸಂರಕ್ಷಣೆಗಾಗಿ

ಶೋಷಿತರ ಜಾಗೃತಿ ಸಮಾವೇಶ

ದಿನಾಂಕ: 28-01-2024 ಭಾನುವಾರ ಬೆಳಗ್ಗೆ 11 ಗಂಟೆಗೆ

ಸ್ಥಳ: ಶ್ರೀ ಮಾದಾರ ಚೆನ್ನಯ್ಯ ಪೀಠದ ಪಕ್ಕದ ಮೈದಾನ (ಬೆಂಗಳೂರು-ಪುಣೆ ಹಳೆ ರಾಷ್ಟ್ರೀಯ ಹೆದ್ದಾರಿ-04) ಚಿತ್ರದುರ್ಗ

ರಾಜ್ಯದ ಜನಪ್ರಿಯ ಮುಖ್ಯಮಂತ್ರಿಗಳಾದ

ಶ್ರೀ ಸಿದ್ದರಾಮಯ್ಯನವರು

ಮತ್ತು ಶೋಷಿತ ಸಮುದಾಯದ ಹಾಲಿ ಮಾಜಿ ಸಚಿವರು, ಸಂಸದರು, ಶಾಸಕರುಗಳು ಭಾಗವಹಿಸಲಿದ್ದಾರೆ.

ಹಕ್ಕೊತ್ತಾಯಗಳು : ಕಾಂತರಾಜ ಆಯೋಗದ ವರದಿಯನ್ನು ಜಾರಿಗೊಳಿಸಬೇಕು. | ಸದಾಶಿವ ಆಯೋಗದ ವರದಿ ಜಾರಿಗೊಳಿಸಬೇಕು. | ಈಗಾಗಲೇ ಅಗತ್ಯಕ್ಕಿಂತ ಹೆಚ್ಚು ಪ್ರಾತಿನಿಧ್ಯ ಪಡೆದಿರುವ ಜಾತಿಗಳಿಗೆ ನೀಡಲಾಗಿರುವ 10% ಇಡಬ್ಲ್ಯುಎಸ್ ಮೀಸಲಾತಿ ರದ್ದು ಮಾಡಬೇಕು. | ಮಹಿಳಾ ರಾಜಕೀಯ ಮೀಸಲಾತಿಯಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳ ಮಹಿಳೆಯರಿಗೆ ಒಳ ಮೀಸಲಾತಿ ನೀಡಬೇಕು. | ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರಿಗೆ ಮೀಸಲಾತಿ ನೀಡಬೇಕು | ಮೀಸಲಾತಿ ಪ್ರಮಾಣ ಜನಸಂಖ್ಯೆಗೆ ಅನುಗುಣವಾಗಿ ಇರಬೇಕು. | ಖಾಸಗಿ ಕ್ಷೇತ್ರದಲ್ಲಿ ಶೋಷಿತ ವರ್ಗಗಳಿಗೆ ಸೇರಿದವರ ಪ್ರಾತಿನಿಧ್ಯವನ್ನು ಖಾತರಿಪಡಿಸಿಕೊಳ್ಳಲು ಅಗತ್ಯವಿರುವ ಕಾನೂನು ರೂಪಿಸಬೇಕು.

- ಸಮಸ್ತ ಶೋಷಿತ ಸಮುದಾಯಗಳೇ ಬನ್ನಿ ಜಾಗೃತರಾಗೋಣ!!
- ಪುರೋಹಿತಶಾಹಿ ಸಮುದಾಯಗಳ ಅಧಿಕಾರದಾಟದಲ್ಲಿ ದಾಳಗಳಾಗದಿರೋಣ!!
- ಹಿಂದುಳಿದ, ದಲಿತ, ಅಲ್ಪಸಂಖ್ಯಾತ ಸಮುದಾಯಗಳಿಗೆ ರಾಜಕೀಯ-ಆರ್ಥಿಕ ಸಮಪಾಲು- ಸಮಬಾಳು ಕೇಳೋಣ!!

ಬನ್ನಿ ಭಾಗವಹಿಸಿ !!
ನಮ್ಮ ಹಕ್ಕುಗಳಿಗಾಗಿ ಹೋರಾಡೋಣ !!

HONDA

Shine 100 Wishes you a Happy Republic Day

₹ 66600/-
EX-SHOWROOM PRICE (KARNATAKA)

BOOK ONLINE NOW!
www.honda2wheelersindia.com

*Terms & conditions apply. Product shown in the picture may vary from the actual product available in the market. Accessories shown in the product are not part of the standard equipment.

Down Payment 5999* | Low ROI @ 9.99%* | 100 Pe100* | No Hypothecation* | 10% Cashback Upto ₹5000*

For dealer details, WhatsApp or missed call on 7230032200 or scan the QR Code

1. Connect earphones
2. Scan QR code
3. Enjoy the video

CLICK BOOK RELAX
Honda 2Wheelers
BOOK NOW

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda2wheelersindia.com

Honda Exclusive Authorised Dealerships: Ananda Honda - BOMMANAHALLI: 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 080-27830234, 9880417779; **City Honda - ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda - DOMLUR:** 49656565, 9342432156; **INDIRANAGAR:** 9844478636; **Dhruvdesh Honda - MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **Planet Honda - RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; **Raja Honda - KORAMANGALA:** 08067329000,9035310055; **Prime Honda - VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda - RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda - KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda - HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda - DODDABALLAPURA:** 7022620885; **NELAMANAGALA:** 080-27722333, 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda - CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda - GOWRIBIDANUR:** 9900007422/33; **SIDLAGHATTA:** 9611596113; **Century Honda - TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda - TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9448214014; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda - BIDADI:** 9945966771, 9164871007; **Springs Honda - KENGERI:** 9513771114; **Nideesh Honda - DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com

ನಿಮ್ಮ ಕುಟುಂಬಕ್ಕಾಗಿ ಹಣ ಉಳಿಸಿ ನಿಮ್ಮ ದೇಶಕ್ಕಾಗಿ ಇಂಧನ ಉಳಿಸಿ

ತೆರೆದ ಪಾತ್ರೆಯ ಅಡುಗೆಗೆ 2ಕ್ಕೂ ಹೆಚ್ಚು ಪಟ್ಟು ಸಮಯ ಬೇಕಾಗುತ್ತದೆ

ಪ್ರೆಶರ್ ಕುಕ್ಕರ್ 52% ಇಂಧನ ವೆಚ್ಚವನ್ನು ಉಳಿಸುತ್ತದೆ

ಪ್ರತಿ ದಿನ ಪ್ರೆಶರ್ ಕುಕ್ಕರ್ ಉಪಯೋಗಿಸುವುದರಿಂದ 52% ಇಂಧನ ಉಳಿತಾಯವಾಗುತ್ತದೆ

ಮುಂಬಯಿಯ ಇನ್ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್ಮೆಂಟ್ ಪ್ರಮಾಣಿಸಿರುವ ವೈಜ್ಞಾನಿಕ ಪ್ರಯೋಗಗಳಲ್ಲಿ, ಎಲ್‌ಪಿಜಿ ಗ್ಯಾಸ್ ಒಲೆಯ ಮೇಲೆ ಪ್ರೆಶರ್ ಕುಕ್ಕರಿನಲ್ಲಿ ತಯಾರಾದ ಅಡುಗೆ ತೆರೆದ ಪಾತ್ರೆಯಲ್ಲಿ ತಯಾರಾದ ಅಡುಗೆಯ ಹೋಲಿಕೆಯಲ್ಲಿ ಸರಾಸರಿ 52% ಇಂಧನ ಉಳಿಸುತ್ತದೆ.

ವಿಕಸನಶೀಲ ಅರ್ಥವ್ಯವಸ್ಥೆಯಲ್ಲಿ, ಮನೆಯ ಶಕ್ತಿಸಂಬಂಧಿ (ಎನರ್ಜಿ) ಅಗತ್ಯಗಳಲ್ಲಿ 90% ರಷ್ಟು ಅಡುಗೆಯಲ್ಲಿ ಬಳಕೆಯಾಗುತ್ತದೆ.

ತಿಂಗಳಿಗೆ ಒಂದು ಎಲ್‌ಪಿಜಿ ಸಿಲಿಂಡರ್ ಉಪಯೋಗಿಸುವ ಕುಟುಂಬವೊಂದು ತೆರೆದ ಪಾತ್ರೆಯ ಅಡುಗೆಯಿಂದ ಪ್ರೆಶರ್ ಕುಕ್ಕರಿಗೆ ಬದಲಾಯಿಸಿಕೊಂಡರೆ, ಇದರಿಂದ ವರ್ಷಕ್ಕೆ ಸುಮಾರು 6000 ರೂ. ಉಳಿತಾಯವಾಗುತ್ತದೆ.

ತಯಾರಾದ ಅಡುಗೆ	ಇಂಧನ ಉಳಿತಾಯ
ಆಲೂಗಡ್ಡೆ	34%
ಕಡಲೆ	44%
ತೊಗರಿ ಬೇಳೆ	60%
ಮಾಂಸ	65%
ಸರಾಸರಿಯಲ್ಲಿ	**52%**

ಸಾರ್ವಜನಿಕ ಹಿತಾಸಕ್ತಿಯಲ್ಲಿ ಪ್ರಕಟಿತ

ಇಂಧನ ಉಳಿತಾಯಕ್ಕಾಗಿ ಹಾಕಿನ್ಸ್ ಟೆಸ್ಟ್ ಕಿಚನ್‌ನ ಇನ್ನಷ್ಟು ಪ್ರೆಶರ್ ಕುಕ್ಕಿಂಗ್ ಸಲಹೆಗಳನ್ನು ಇಲ್ಲಿ ಪಡೆಯಿರಿ:
www.savewithpressurecookers.com

ಆಸ್ಟ್ರೇಲಿಯನ್ ಓಪನ್ ಟೆನಿಸ್ ಫೈನಲ್‌ಗೆ ಬೋಪಣ್ಣ– ಎಬ್ಡೆನ್

ರೋಹನ್ ಬೋಪಣ್ಣ

ಮೆಲ್ಬರ್ನ್ (ಪಿಟಿಐ): ಭಾರತದ ರೋಹನ್ ಬೋಪಣ್ಣ ಅವರು ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಪುರುಷರ ಡಬಲ್ಸ್ ಪ್ರಶಸ್ತಿ ಗೆಲ್ಲುವ ಮತ್ತೊಂದು ಸುವರ್ಣಾವಕಾಶ ಪಡೆದಿದ್ದಾರೆ. ಅವರು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೊತೆಗೂಡಿ ಆಸ್ಟ್ರೇಲಿಯನ್ ಓಪನ್ ಡಬಲ್ಸ್ ಸೆಮಿಫೈನಲ್ ಪಂದ್ಯದಲ್ಲಿ ಗುರುವಾರ ಥಾಮಸ್ ಮಚಾಕ್ ಮತ್ತು ಝಾಂಗ್ ಝಿಝೆನ್ ಜೋಡಿಯನ್ನು ಸೋಲಿಸಿ ಪ್ರಶಸ್ತಿ ಸುತ್ತು ತಲುಪಿದರು.

ಎರಡು ಗಂಟೆ, ಎರಡು ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ, ಎರಡನೇ ಶ್ರೇಯಾಂಕದ ಬೋಪಣ್ಣ–ಎಬ್ಡೆನ್ ಜೋಡಿ 6–3, 3–6, 7–6 (10–7) ರಿಂದ ಮಚಾಕ್ (ಜೆಕ್ ಗಣರಾಜ್ಯ)– ಝಾಂಗ್ (ಚೀನಾ) ಜೋಡಿಯನ್ನು ಸೋಲಿಸಿತು. ಮಚಾಕ್ ಮತ್ತು ಝಾಂಗ್ ಸಿಂಗಲ್ಸ್ ವಿಶ್ವ ಕ್ರಮಾಂಕದಲ್ಲಿ ಕ್ರಮವಾಗಿ 54 ಮತ್ತು 75ನೇ ಸ್ಥಾನ ಪಡೆದಿದ್ದು ಬೇಸ್‌ಲೈನ್‌ನಿಂದ ಶಕ್ತಿಶಾಲಿ ಹೊಡೆತಗಳನ್ನು ಪ್ರದರ್ಶಿಸಿ ಅನುಭವಿ ಬೋಪಣ್ಣ– ಎಬ್ಡೆನ್ ಜೋಡಿಗೆ ಹೋರಾಟ ನೀಡಿದರು. ಆದರೆ ಬೋಪಣ್ಣ ನಿರ್ಣಾಯಕ ಸಂದರ್ಭದಲ್ಲಿ ಉತ್ತಮ ಸರ್ವ್‌ಗಳ ಮೂಲಕ ಪಾಯಿಂಟ್ಸ್ ಗಳಿಸಿದರು. ಟೈಬ್ರೇಕರ್‌ನಲ್ಲೂ ಬೋಪಣ್ಣ, ಎಬ್ಡೆನ್ ಅನುಭವ ನೆರವಿಗೆ ಬಂತು.

ವಿಶ್ವ ಡಬಲ್ಸ್ ಕ್ರಮಾಂಕಪಟ್ಟಿಯಲ್ಲಿ 43 ವರ್ಷದ ಬೋಪಣ್ಣ ಅಗ್ರಸ್ಥಾನಕ್ಕೇರುವುದು ಈಗಾಗಲೇ ಖಚಿತವಾಗಿದೆ. ಸೋಮವಾರ ಹೊಸ ರ‍್ಯಾಂಕಿಂಗ್ ಪಟ್ಟಿ ಪ್ರಕಟವಾಗಲಿದೆ. ಈ ಸ್ಥಾನಕ್ಕೇರಲಿರುವ ಅತಿ ಹಿರಿಯ ವಯಸ್ಸಿನ ಆಟಗಾರ ಅವರು ಎಂಬುದು ವಿಶೇಷ. ಶನಿವಾರ ಫೈನಲ್‌ನಲ್ಲಿ ಅವರ ಎದುರಾಳಿ ಇಟಲಿಯ ಸಿಮೋನ್ ಬೊಲೆಲಿ ಮತ್ತು ಆ್ಯಂಡ್ರಿಯಾ ವಾವಸೋರಿ.

ಭಾರತ 75 ನೇ ಗಣರಾಜ್ಯೋತ್ಸವವನ್ನು ಆಚರಿಸುತ್ತಿದೆ!

ಪ್ರಶಸ್ತಿ ಸುತ್ತಿಗೆ ಸಬಲೆಂಕಾ– ಝೆಂಗ್

ಮೆಲ್ಬರ್ನ್ (ರಾಯಿಟರ್ಸ್): ಆತ್ಮವಿಶ್ವಾಸದ ಆಟ ಮುಂದುವರಿಸಿದ ಅರಿನಾ ಸಬಲೆಂಕಾ ಗುರುವಾರ ಸೆಮಿಫೈನಲ್‌ನಲ್ಲಿ ಅಮೆರಿಕದ ಕೊಕೊ ಗಾಫ್ ವಿರುದ್ಧ ನೇರ ಸೆಟ್‌ಗಳ ಗೆಲುವಿನೊಡನೆ ಸತತ ಎರಡನೇ ಬಾರಿ ಆಸ್ಟ್ರೇಲಿಯನ್ ಓಪನ್ ಮಹಿಳಾ ಸಿಂಗಲ್ಸ್ ಕಿರೀಟ ಧರಿಸುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯಿಟ್ಟರು. ಅವರು ಪ್ರಶಸ್ತಿಗಾಗಿ ಶನಿವಾರ 12ನೇ ಶ್ರೇಯಾಂಕದ ಝೆಂಗ್ ಕ್ವಿನ್‌ವೆನ್ ಅವರನ್ನು ಎದುರಿಸಲಿದ್ದಾರೆ.

ಎರಡನೇ ಶ್ರೇಯಾಂಕದ ಬೆಲಾರಸ್‌ನ ಸಬಲೆಂಕಾ 7–6 (7–2), 6–4 ರಿಂದ ನಾಲ್ಕನೇ ಶ್ರೇಯಾಂಕದ ಗಾಫ್ ವಿರುದ್ಧ ಜಯಗಳಿಸಿದರು. ಎರಡನೇ ಸೆಮಿಫೈನಲ್‌ನಲ್ಲಿ ಚೀನಾದ ಕ್ವಿನ್‌ವೆನ್ 6–4, 6–4 ರಿಂದ ಅರ್ಹತಾ ಸುತ್ತಿನಿಂದ ಬಂದಿದ್ದ ಆಟಗಾರ್ತಿ ಡಯಾನಾ ಎಸ್ಟ್ರೆಮ್‌ಸ್ಕಾ ಅವರ ಅಸಾಧಾರಣ ಯಶಸ್ಸಿನ ಓಟವನ್ನು ಅಂತ್ಯಗೊಳಿಸಿದರು.

JOS ALUKKAS
A TRADITION OF FINE JEWELLERY

ಜೋಸ್ ಆಲುಕ್ಕಾಸ್‌ನ ಹೊಚ್ಚಹೊಸ ಶೋರೂಮ್ ಬೆಂಗಳೂರು ಆರ್ ಆರ್ ನಗರದಲ್ಲಿ ಇಂದು ಉದ್ಘಾಟನೆ
ಉದ್ಘಾಟನೆ ಬೆಳಗ್ಗೆ 10.30ಕ್ಕೆ

ಉದ್ಘಾಟನಾ ವಿಶೇಷ ಆಫರ್
ಚಿನ್ನದ ನಾಣ್ಯ ಉಚಿತ
ರೂ.50,000 ಬೆಲೆಯ ಚಿನ್ನದ ಆಭರಣಗಳ ಖರೀದಿಯ ಮೇಲೆ
ಆಫರ್ ಜನವರಿ 30 ರವರೆಗೆ ಮಾತ್ರ

ಜೋಸ್ ಆಲುಕ್ಕಾಸ್ ತನ್ನ ಹೊಚ್ಚಹೊಸ ಬೆಂಗಳೂರು ಆರ್ ಆರ್ ನಗರ ಶೋರೂಂನಲ್ಲಿ ವಿಶಿಷ್ಟ ಆಭರಣ ಶಾಪಿಂಗ್ ಅನುಭವಕ್ಕೆ ನಿಮ್ಮನ್ನು ಸ್ವಾಗತಿಸುತ್ತದೆ. ಚಿನ್ನ, ವಜ್ರಗಳು, ಅಮೂಲ್ಯ ಹರಳುಗಳು, ಪ್ಲಾಟಿನಂ ಮತ್ತು ಬೆಳ್ಳಿಯ ಆಭರಣಗಳ ಅತಿದೊಡ್ಡ ಸಂಗ್ರಹದಿಂದ ಶಾಪಿಂಗ್ ಮಾಡಿ.

INAUGURATION: MUNIRATHNA NAIDU (MLA - RR NAGAR)
CHIEF GUEST: G.H.RAMACHANDRA (EX-CORPORATOR, RR NAGAR)
CELEBRITY GUEST: SAPTHAMI GOWDA (ACTRESS)
CHAIRMAN: JOS ALUKKA
MANAGING DIRECTORS: VARGHESE ALUKKA, PAUL J. ALUKKA, JOHN ALUKKA

ಪ್ಲಾಟಿನಂ ಆಭರಣಗಳಿಗೆ 7% ರಿಯಾಯಿತಿ
ವಜ್ರಗಳ ಮೇಲೆ 20% ರಿಯಾಯಿತಿ
ಖರೀದಿಗಳಿಗೆ ಉಚಿತ ಉಡುಗೊರೆಗಳು
ವಿಶೇಷ ರಿಯಾಯಿತಿಗಳು ಮದುವೆಯ ಖರೀದಿಗಳಿಗೆ
100% HUID ಆಭರಣಗಳಿಗೆ ಎಕ್ಸ್‌ಚೇಂಜ್ ಮಾಡಿಕೊಳ್ಳಿ
T&C apply

Near BEML COMPLEX, RR Nagar, Bengaluru. Ph : 88913 19111 & 88911 84222, Shop online at www.josalukkasonline.com
Also at: Old Madras Road K.R.Puram | 3rd Block Jayanagar | Dickenson Road Bengaluru | 1st Block Rajajinagar | Kanakapura Road Forum Mall | Main Road Kammanahalli | (Opening soon in HSR Layout)
KARNATAKA | TAMIL NADU | PUDUCHERRY | ANDHRA PRADESH | TELANGANA | KERALA
ಜೋಸ್ ಆಲುಕ್ಕಾಸ್ A TRADITION OF FINE JEWELLERY
Push360

ಕೆನರಾ ಬ್ಯಾಂಕ್ केनरा बैंक Canara Bank
A Government of India Undertaking
Together We Can

ನಮ್ಮ ಗಣರಾಜ್ಯ, ನಮ್ಮ ಹೆಮ್ಮೆ.
ಅತ್ಯುತ್ತಮವಾದುದಕ್ಕೆ ನೀವು ಅರ್ಹರು
75ನೇ ಗಣರಾಜ್ಯೋತ್ಸವದ ಶುಭಾಶಯಗಳು

ಅರ್ಜಿ ಸಲ್ಲಿಸಲು ಮತ್ತು ತಕ್ಷಣ ಅನುಮೋದನೆ ಪಡೆಯಲು ಸ್ಕ್ಯಾನ್ ಮಾಡಿ

ಕೆನರಾ ಗೃಹ ಸಾಲ ಬಡ್ಡಿ ದರ 8.40%
• ಶೂನ್ಯ ಪ್ರಕ್ರಿಯೆ ಮತ್ತು ಕಾಗದಪತ್ರ ಶುಲ್ಕಗಳು
• ಅತಿ ಕಡಿಮೆ ಮತ್ತು ಆಕರ್ಷಕ ಬಡ್ಡಿ ದರಗಳು

ಕೆನರಾ ವಾಹನ ಸಾಲ ಬಡ್ಡಿ ದರ 8.70%
• ಶೂನ್ಯ ಪ್ರಕ್ರಿಯೆ ಮತ್ತು ಕಾಗದಪತ್ರ ಶುಲ್ಕಗಳು
• ಅತಿ ಕಡಿಮೆ ಮತ್ತು ಆಕರ್ಷಕ ಬಡ್ಡಿ ದರಗಳು

ಕೆನರಾ ಚಿನ್ನದ ಸಾಲ
• ಪ್ರತಿ ಗ್ರಾಮ್‌ಗೆ ಕನಿಷ್ಠ ಸಾಲ
• ಆಕರ್ಷಕ ಬಡ್ಡಿ ದರ
• ಅನುಕೂಲಕರ ಪಾವತಿ
• ಅಡಚಣೆ ರಹಿತ ಕನಿಷ್ಠ ಸಮಯ
• ತ್ವರಿತ ಮಂಜೂರಾತಿ ಮತ್ತು ವಿತರಣೆ

www.canarabank.com | 1 Bank Number 1800 1030

kissan
ದೊಡ್ಡ ಪ್ಯಾಕ್ ಈಗ ಬೆಲೆ ಕೇವಲ
₹70/-
₹50/-

ಸಿನಿಮಾ ಪುರವಣಿ

ಯೋಗಿ



ಅದಿತಿ

ಹುಡುಗರ ಹುಡುಗಾಟ

ದಿಗಂತ್, ಅಚ್ಯುತ್ ಕುಮಾರ್ ಜೊತೆ ಲೂಸ್ ಮಾದ ಯೋಗಿ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ಬ್ಯಾಚುಲರ್ ಪಾರ್ಟಿ' ಸಿನಿಮಾ ಇಂದು (ಜ.26) ತೆರೆ ಕಾಣುತ್ತಿದೆ. ಸಿನಿಮಾದಲ್ಲಿ ಹುಡುಗರ ಹಾವಳಿ ಕುರಿತು, ತಮ್ಮ ಸಿನಿಪಯಣದ ಬಗ್ಗೆ ಯೋಗಿ ಮಾತಿಗೆ ಸಿಕ್ಕಿದ್ದು ಹೀಗೆ...

ವಿನಾಯಕ ಕೆ.ಎಸ್.

''ಕಿರಿಕ್ ಪಾರ್ಟಿ' ನಂತರ ಕಾಮಿಡಿ ಅಡ್ವೆಂಚರ್ ಸಿನಿಮಾ ಮಾಡಬೇಕೆಂದು ಮಾಡಿದ ಸಿನಿಮಾವಿದು. ಎರಡು ವರ್ಷದ ಪಯಣ. ಯಾವ ವಿದೇಶಿ ಸಿನಿಮಾದ ಸ್ಫೂರ್ತಿಯೂ ಈ ಸಿನಿಮಾಗಿಲ್ಲ. ಅಪ್ಪಟ ಕನ್ನಡ ನಾಡಿನ ಚಿತ್ರ. ಎಲ್ಲಿಯೂ ಅಶ್ಲೀಲವಾಗಿ, ಆಭಾಸವಾಗಿ ತೋರಿಸಿಲ್ಲ. ಥಾಯ್ಲೆಂಡ್‌ಗೆ ಕೂಡ ಹಾಡಿಗಾಗಿ, ಸನ್ನಿವೇಶಕ್ಕಾಗಿ ಹೋಗಿದ್ದಲ್ಲ. ಪ್ರೇಕ್ಷಕರಿಗೆ ಒಂದು ದೇಶಕ್ಕೆ ಹೋದ ಅನುಭವ ನೀಡುವ ಉದ್ದೇಶದಿಂದ ಅಲ್ಲಿ ಚಿತ್ರೀಕರಣ ಮಾಡಿದ್ದೇವೆ. ಪ್ರೇಕ್ಷಕರರು ನೀಡುವ ಹಣಕ್ಕೆ ತಕ್ಕ ಉತ್ಪನ್ನ ನೀಡಬೇಕೆಂದು ಗುಣಮಟ್ಟದಲ್ಲಿ ರಾಜಿ ಮಾಡಿಕೊಂಡಿಲ್ಲ'' ಎನ್ನುತ್ತಾರೆ ಚಿತ್ರದ ನಿರ್ದೇಶಕ ಅಭಿಜಿತ್ ಮಹೇಶ್.

ಪರಂವಃ ಸ್ಟುಡಿಯೋಸ್‌ನಲ್ಲಿ ಹಲವು ವರ್ಷಗಳಿಂದ ಬರಹಗಾರರಾಗಿದ್ದು, ಈಗಾಗಲೇ ಒಂದಷ್ಟು ಸಿನಿಮಾ ಬರೆದ ಅಭಿಜಿತ್ ಅವರಿಗೆ ನಿರ್ದೇಶಕನಾಗಿ ಮೊದಲ ಸಿನಿಮಾವಿದು. 'ಮನೆಮಂದಿ ಮಕ್ಕಳ ಜೊತೆ ಕುಳಿತು ನೋಡಬಹುದಾದ ರೀತಿಯ ಸಿನಿಮಾವಿದು. ಇಲ್ಲಿ ಬಳಸಿರುವ ಕಾರ್ಟೂನ್‌ಗಳು ಸೌಮ್ಯವಾಗಿವೆ. ಎಲ್ಲಿಯೂ ರಕ್ತ ತೋರಿಸಿಲ್ಲ. ಸುಮಾರಷ್ಟು ಸಿನಿಮಾ ಬರೆದ ನಂತರ ಮೊದಲನೆಯ ಸಿನಿಮಾ ಎಂಬ ಭಯವಿರುವುದಿಲ್ಲ. ಒಳ್ಳೆ ತಂಡ, ನಿರ್ಮಾಣ ಸಂಸ್ಥೆ ಜೊತೆಗಿತ್ತು. ಹೀಗಾಗಿ ಒತ್ತಡ ಇರಲಿಲ್ಲ. ಈ ಸಿನಿಮಾ ಪ್ರೇಕ್ಷಕರಿಗಾಗಿ ಮಾಡಿದ್ದು. ಅವರು ನೋಡಿ ಖುಷಿ ಪಟ್ಟರೆ ನಮ್ಮ ಪ್ರಯತ್ನ ಸಾರ್ಥಕ' ಎಂದರು ಅಭಿಜಿತ್.

ಅಭಿಜಿತ್ ಮಹೇಶ್

- **ಈ ಸಿನಿಮಾದಲ್ಲಿ ನಿಮ್ಮ ಪಾತ್ರವೇನು?**

ಬ್ಯಾಚುಲರ್ ಹುಡುಗನ ಪಾತ್ರ. ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ವ್ಯಕ್ತಿ. ಜೀವನದಲ್ಲಿ ಪ್ರೇಮ ವಿಫಲವಾಗಿ ಹುಡುಗಿಯರನ್ನು ಕಂಡರೆ ಆಗುತ್ತಿರುವುದಿಲ್ಲ. 'ನಿನಗೆ ನನಗಿಂತ ಒಳ್ಳೆ ಹುಡುಗಿ ಸಿಗುತ್ತಾಳೆ ಬಿಡು' ಎಂದು ಯಾಮಾರಿಸಿ ಹೋದ ಹುಡುಗಿಯಿಂದ ನೊಂದಿರುತ್ತಾನೆ. ಹೀಗಾಗಿ ಹುಡುಗಿಯರಿಂದ ದೂರ ಇರುತ್ತಾನೆ. ಜೊತೆಗೆ ಸಿಕ್ಕಾಪಟ್ಟೆ ತಲೆಹರಟೆ ಪಾತ್ರ. ಒಟ್ಟಿನಲ್ಲಿ ನಗಿಸುವ ಪಾತ್ರ.

- **ಚಿತ್ರದ ಟ್ರೇಲರ್‌ನಲ್ಲಿ 'ಹ್ಯಾಂಗೋವರ್' ಹೆಚ್ಚಾಗಿ ಇದೆ. ಈ ಸಿನಿಮಾದ ಚಿತ್ರೀಕರಣದ ಅನುಭವ ಹೇಗಿತ್ತು?**

ಥಾಯ್ಲೆಂಡ್‌ನಲ್ಲಿ 15 ದಿನ ಚಿತ್ರೀಕರಣ ಬಹಳ ಮಜವಾಗಿತ್ತು. ದಿಗಂತ್, ಅಚ್ಯುತಣ್ಣ ಎಲ್ಲರೂ ಒಟ್ಟಿಗೆ ಇದ್ದೆವು. ಅಲ್ಲಿ ಬಹುತೇಕ ಸಿನಿಮಾಗಳು ಚಿತ್ರೀಕರಣಗೊಳ್ಳುವ ಮಾಮೂಲಿ ಸ್ಥಳಗಳಲ್ಲಿ ಚಿತ್ರೀಕರಣ ಮಾಡಲಿಲ್ಲ. ಬದಲಿಗೆ ಹೊಸ ಜಾಗಗಳಲ್ಲಿ ಶೂಟಿಂಗ್ ನಡೆದಿದೆ. 'ಹುಡುಗರು' ಚಿತ್ರದ ನಂತರ ಮಾಡಿರುವ ಒಂದು ಪಕ್ಕಾ ಫ್ಯಾಮಿಲಿ ಎಂಟರ್‌ಟೈನಿಂಗ್ ಸಿನಿಮಾ. ಇಡೀ ಕುಟುಂಬ ಯಾವುದೇ ಮುಜುಗರವಿಲ್ಲದೆ ನೋಡಬಹುದು. ಅಸಹ್ಯಪಡುವಂತಹ ಡೈಲಾಗ್‌ಗಳು, ಸನ್ನಿವೇಶಗಳು ಇಲ್ಲ. ಪೂರ್ತಿ ಸಿನಿಮಾ ಹಾಸ್ಯಮಯವಾಗಿದೆ.

- **ನಿಮ್ಮ 50ನೇ ಚಿತ್ರ ಯಾವ ಹಂತದಲ್ಲಿದೆ?**

'ರೋಜಿ' ಚಿತ್ರದ ಚಿತ್ರೀಕರಣ ಪ್ರಾರಂಭಗೊಂಡಿದೆ. ಶ್ರೀನಗರ ಕಿಟ್ಟಿ ಮೊದಲಾದವರ ದೃಶ್ಯಗಳು ಚಿತ್ರೀಕರಣಗೊಳ್ಳುತ್ತಿವೆ. 'ಬ್ಯಾಚುಲರ್..' ಪ್ರಚಾರದಲ್ಲಿ ತೊಡಗಿರುವುದರಿಂದ ನನ್ನ ಭಾಗ ಇನ್ನೂ ಪ್ರಾರಂಭಗೊಂಡಿಲ್ಲ. ಮಾರ್ಚ್‌ನಲ್ಲಿ 'ರೋಜಿ' ತಂಡ ಸೇರಿಕೊಳ್ಳುತ್ತೇನೆ.

- **ಇಲ್ಲಿಯತನಕ ಸಿನಿಪಯಣ ಹೇಗಿತ್ತು?**

ಒಂದು ರೀತಿ ಚೆನ್ನಾಗಿತ್ತು. ತುಂಬ ಖುಷಿಯಿದೆ. ಕೆಲವು ಸಂದರ್ಭಗಳಲ್ಲಿ ಬೇಸರವೂ ಆಗಿದೆ. ಇಂಥ ಕೆಲ ಸಂದರ್ಭಗಳನ್ನು ಬಹಿರಂಗಪಡಿಸಿದ್ದೇನೆ. ಪ್ರತಿ ಸಿನಿಮಾವೂ ಭಿನ್ನ ಅನುಭವ. ಎಲ್ಲವೂ ನಾವು ಅಂದುಕೊಂಡಂತೆಯೇ ಆಗುವುದಿಲ್ಲ. ಪ್ರತಿ ಸಿನಿಮಾವನ್ನು ಗೆಲ್ಲಬೇಕೆಂಬ ಛಲದೊಂದಿಗೆ ಮಾಡಿರುತ್ತೇವೆ. ಸರಿಯಾಗಿ ಬಿಡುಗಡೆಯಾಗದಿರುವುದು, ಪ್ರಚಾರದ ಕೊರತೆ, ನಮ್ಮ ಸಮಯ ಸರಿ ಇಲ್ಲದಿರುವಿಕೆಯಿಂದ ಒಳ್ಳೆ ಸಿನಿಮಾ ಸೋತಿದ್ದೂ ಇದೆ. ನಾವು ಸಿನಿಮಾ ಚೆನ್ನಾಗಿದೆ ಎಂದುಕೊಂಡಿರುತ್ತೇವೆ. ಆದರೆ ಪ್ರೇಕ್ಷಕರಿಗೆ ಅದು ಇಷ್ಟವಾಗಿರುವುದಿಲ್ಲ. ಎಲ್ಲವೂ ಪ್ರೇಕ್ಷಕರ ಕೈಯಲ್ಲಿದೆ. ನಾವು ನಮ್ಮ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತ ಹೋಗಬೇಕಷ್ಟೆ.

- **ನಿಮ್ಮ ಮುಂದಿನ ಯೋಜನೆಗಳ ಬಗ್ಗೆ ಹೇಳಬಹುದೇ?**

'ರೋಜಿ' ಚಿತ್ರೀಕರಣ ಪ್ರಾರಂಭವಾಗಿದೆ. 'ಸಿದ್ಲಿಂಗು–2' ಸಿನಿಮಾ ಪ್ರಾರಂಭವಾಗಲಿದೆ. 'ಕಂಸ' ಎನ್ನುವ ಸಿನಿಮಾವನ್ನು ನಮ್ಮದೇ ನಿರ್ಮಾಣ ಸಂಸ್ಥೆಯಿಂದ ಮಾಡಬೇಕಿತ್ತು. ಕಾರಣಾಂತರಗಳಿಂದ ತಡವಾಯ್ತು. ಈಗ ಅದರ ಕೆಲಸ ಕೂಡ ಶುರುವಾಗಿದೆ. ಇದರ ಹೊರತಾಗಿ ಕೆಲವು ಕಥೆಗಳನ್ನು ಕೇಳಿರುವೆ. ಕೆಲಸ ನಿರಂತರವಾಗಿದೆ. ❖

> ಚಿತ್ರರಂಗದಲ್ಲಿ ನಾವಿಷ್ಟು ಸಕ್ರಿಯರಾಗಿ ಇರುತ್ತೇವೆ. ಏಕೆ ಯಾರೂ ಇಂತಹ ಕಥೆಗಳನ್ನು ನಮ್ಮ ಬಳಿ ತರುವುದಿಲ್ಲ ಎನ್ನುವ ಕೊರಗು ಇತ್ತು. ಅದು 'ಅಲೆಕ್ಸಾ'ದಿಂದ ನೀಗಿದೆ.
> –**ಅದಿತಿ,** ನಟಿ

'ಅಲೆಕ್ಸಾ'ದಲ್ಲಿ ಅದಿತಿ ಆ್ಯಕ್ಷನ್

ಅಭಿಲಾಷ್ ಪಿ.ಎಸ್.

ಗ್ಲ್ಯಾಮರಸ್ ಪಾತ್ರಗಳಲ್ಲಿ ಮಿಂಚಿರುವ 'ಚಂದನವನದ ಮಹಾಲಕ್ಷ್ಮಿ' ಅದಿತಿ ಪ್ರಭುದೇವ ಮೊದಲ ಬಾರಿಗೆ ಔಟ್ ಆ್ಯಂಡ್ ಔಟ್ ಆ್ಯಕ್ಷನ್ ಸಿನಿಮಾವೊಂದರಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅದಿತಿ ನಟನೆಯ 'ಅಲೆಕ್ಸಾ' ಇಂದು(ಜ.26) ತೆರೆಕಂಡಿದೆ. ಸ್ಯಾಂಡಲ್‌ವುಡ್‌ನಲ್ಲಿ ಅತಿ ಹೆಚ್ಚು ಸಿನಿಬ್ಯಾಂಕ್ ಹೊಂದಿರುವವರಲ್ಲಿ ಮುಂಚೂಣಿಯಲ್ಲಿದ್ದ ಅದಿತಿ, ಸದ್ಯ ಅಮ್ಮನಾಗುವ ಖುಷಿಯಲ್ಲಿದ್ದಾರೆ. ಚಿತ್ರರಂಗದಿಂದ ಸಣ್ಣ ಬ್ರೇಕ್ ತೆಗೆದುಕೊಂಡಿರುವ ಅವರು ಹೊಸ ನಿರೀಕ್ಷೆಗಳು, ಶೂಟಿಂಗ್ ಅನುಭವಗಳನ್ನು 'ಸಿನಿಮಾ ಪುರವಣಿ' ಜೊತೆ ಹಂಚಿಕೊಂಡರು.

'ಹೀರೊಗಳು ಸಾಹಸ ದೃಶ್ಯಗಳಲ್ಲಿ ನಟಿಸಿರುವುದನ್ನು ನೋಡಿದ್ದೇವೆ. ಅದನ್ನು ಆನಂದಿಸಿದ್ದೇವೆ. ಜೊತೆಗೆ ನಾಯಕಿಯರೂ ಆ್ಯಕ್ಷನ್ ದೃಶ್ಯಗಳಲ್ಲಿ ಮಿಂಚಿರುವುದರ ಉದಾಹರಣೆ ಇದೆ. 'ಅಲೆಕ್ಸಾ' ನನಗೆ ಹೊಸ ಅನುಭವ ನೀಡಿದೆ. ಇದು ಕಂಪ್ಲೀಟ್ ಆ್ಯಕ್ಷನ್ ಸಿನಿಮಾ. ಇಂತಹ ಜಾನರ್‌ನಲ್ಲಿ ನಾನು ನಟಿಸಿರುವುದು ಮೊದಲ ಬಾರಿ. ಈ ಚಿತ್ರದಲ್ಲಿ ಇನ್ವೆಸ್ಟಿಗೇಷನ್ ಪೊಲೀಸ್ ಆಫೀಸರ್ ಆಗಿ 'ಅಲೆಕ್ಸಾ' ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನನಗೆ ನಿಜಜೀವನದಲ್ಲಿ ಪೊಲೀಸ್ ಅಧಿಕಾರಿಯಾಗಬೇಕೆಂಬ ಆಸೆಯಿತ್ತು. ನಿರ್ದೇಶಕರು ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿ ಪಾತ್ರ ಎಂದ ತಕ್ಷಣ ಒಪ್ಪಿಕೊಂಡೆ. ನಿರ್ದೇಶಕ ಜೀವ ಅವರೂ ಸಾಹಸ ದೃಶ್ಯಗಳನ್ನು ಸಿನಿಮಾದಲ್ಲಿ ಸುಮ್ಮನೆ ತೂರಿಸಿಲ್ಲ. ಒಟ್ಟು ಐದು ಆ್ಯಕ್ಷನ್ ಸೀಕ್ವೆನ್ಸ್ ಈ ಸಿನಿಮಾದಲ್ಲಿವೆ. ರವಿವರ್ಮ, ಮಾಸ್ ಮಾದ ಹಾಗೂ ವಿನೋದ್ ಹೀಗೆ ಮೂವರು ಸ್ಟಂಟ್ ಮಾಸ್ಟರ್ಸ್ ತರಬೇತಿ ನೀಡಿದ್ದಾರೆ. ಹೀಗಾಗಿ ಎಲ್ಲ ಫೈಟ್ಸ್ ಭಿನ್ನವಾಗಿ ಮೂಡಿಬಂದಿವೆ. ತೆರೆಯಲ್ಲಿ ಫೈಟ್ಸ್ ನೋಡಿ ಖುಷಿ ಪಡುತ್ತಿದ್ದ ನನಗೆ ಇದರ ಹಿಂದಿರುವ ಕಷ್ಟ ಗೊತ್ತಾಗಿದ್ದೇ ಈ ಸಿನಿಮಾದಲ್ಲಿ. ಕ್ಲೈಮ್ಯಾಕ್ಸ್‌ನಲ್ಲಿ ಡ್ಯೂಪ್ ಕರೆಸಿದರೂ, ಎಲ್ಲೂ ಡ್ಯೂಪ್ ಬಳಸದೆ ನಾನು ಈ ಸಿನಿಮಾದಲ್ಲಿ ನಟಿಸಿದ್ದೇನೆ. ಜನ ಈ ಸಿನಿಮಾ ನೋಡಿ ಖುಷಿ ಪಡುತ್ತಾರೆ ಎನ್ನುವ ನಂಬಿಕೆ ನನಗಿದೆ' ಎಂದು ಸಿನಿಮಾ ಅನುಭವ ಹಂಚಿಕೊಂಡರು ಅದಿತಿ. ❖

ಬರಲಿವೆ ಸಾಲು ಸಾಲು ಸಿನಿಮಾಗಳು

ಕಳೆದ ಎರಡು ಮೂರು ವರ್ಷಗಳಲ್ಲಿ ಅತಿ ಹೆಚ್ಚು ಸಿನಿಬ್ಯಾಂಕ್ ಹೊಂದಿದ್ದ ನಟಿಯರ ಪೈಕಿ ಅದಿತಿ ಕೂಡ ಒಬ್ಬರಾಗಿದ್ದರು. ಎಂ.ಸಿ. ವಿಜಯ್ ಪ್ರಸಾದ್ ನಿರ್ದೇಶನದ 'ತೋತಾಪುರಿ' ಸರಣಿ, ಗೋಲ್ಡನ್ ಸ್ಟಾರ್ ಗಣೇಶ್ ಅವರ ಜೊತೆ 'ತ್ರಿಬಲ್ ರೈಡಿಂಗ್', 'ಆನ', 'Once upon a time in ಜಮಾಲಿಗುಡ್ಡ' ಹೀಗೆ ಅದಿತಿ ಅವರ ಸಾಲು ಸಾಲು ಸಿನಿಮಾಗಳು ಕಳೆದೆರಡು ವರ್ಷದಲ್ಲಿ ಬಿಡುಗಡೆ ಕಂಡಿವೆ. 'ಅದೊಂದಿತ್ತು ಕಾಲ', 'ಮಾಫಿಯಾ', 'ಮ್ಯಾಟ್ನಿ', 'ಛೂ ಮಂತರ್' ಸಿನಿಮಾಗಳು ಈ ವರ್ಷ ಬಿಡುಗಡೆ ಆಗಲಿವೆ.

ಗರ್ಭಿಣಿಯಾಗಿಯೂ ಶೂಟಿಂಗ್

'ಗರ್ಭಿಣಿಯಾದ ಮೊದಲ ಮೂರು ತಿಂಗಳು ನಾನು ಚಿತ್ರೀಕರಣದಲ್ಲಿ ಭಾಗವಹಿಸಿದ್ದೆ! 'ಛೂ ಮಂತರ್' ಸಿನಿಮಾ ಹಾಡಿನ ಶೂಟಿಂಗ್ ಆವಾಗ ಪೂರ್ಣಗೊಳಿಸಿದ್ದೆ. ನಾನು ಇದನ್ನು ಎಲ್ಲೂ ಹೇಳಿಕೊಂಡಿರಲಿಲ್ಲ. ಇಲ್ಲಿಯವರೆಗೂ ನಾಜೂಕಾಗಿರಬೇಕು ಎಂದು ಬಯಸಿದವಳು ನಾನಲ್ಲ. ಖುಷಿ ಖುಷಿಯಾಗಿದ್ದೇನೆ. ಮದುವೆ ಆದಮೇಲೂ ನಿರಂತರವಾಗಿ ಸಿನಿಮಾಗಳನ್ನು ಮಾಡುತ್ತಲೇ ಬಂದೆ. ಕುಟುಂಬಕ್ಕೆ ಸಮಯ ನೀಡಲಾಗಲಿಲ್ಲ. ಇದೀಗ ಕೊಂಚ ಬ್ರೇಕ್ ತೆಗೆದುಕೊಂಡಿದ್ದೇನೆ. ಕುಟುಂಬಕ್ಕೆ ಸಮಯ ನೀಡುತ್ತಿದ್ದೇನೆ. ಇನ್ನು ಆರೇಳು ತಿಂಗಳು ಬಿಡುವು ಪಡೆದುಕೊಳ್ಳುತ್ತೇನೆ. ಮಗುವಾದ ಬಳಿಕ ಒಂದಿಷ್ಟು ಬದಲಾವಣೆಗಳು ಸಹಜವಾಗಿಯೇ ಆಗುತ್ತವೆ. ಹೀಗಾಗಿ ನಂತರದಲ್ಲಿ ಮಾನಸಿಕವಾಗಿ, ದೈಹಿಕವಾಗಿ ಸಿನಿಮಾಗೆ ಸಿದ್ಧವಾಗಬೇಕು. ಒಳ್ಳೆಯ ಪಾತ್ರಗಳು ಬಂದರೆ ಮತ್ತೆ ಸಕ್ರಿಯವಾಗುವೆ' ಎನ್ನುತ್ತಾರೆ ಅದಿತಿ.

ಬರ್ತಿದ್ದಾನೆ 'ರಂಗನಾಯಕ'

ಸಿನಿಮಾ ಜೊತೆಗೆ ಸದ್ಯ ರಾಜಕೀಯದಲ್ಲಿ ಸಕ್ರಿಯರಾಗಿರುವ ನಟ ಜಗ್ಗೇಶ್ ಅಭಿನಯದ ಹೊಸ ಚಿತ್ರದ ಬಿಡುಗಡೆಗೆ ದಿನಾಂಕ ನಿಗದಿಯಾಗಿದೆ. 'ಮಠ' ಹಾಗೂ 'ಎದ್ದೇಳು ಮಂಜುನಾಥ' ಸಿನಿಮಾದ ಜೋಡಿ ಮತ್ತೊಮ್ಮೆ ತೆರೆ ಮೇಲೆ ಮೋಡಿ ಮಾಡಲಿದೆ.

'ರಾಘವೇಂದ್ರ ಸ್ಟೋರ್ಸ್' ಹಾಗೂ 'ತೋತಾಪುರಿ' ಸರಣಿ ಸಿನಿಮಾಗಳ ಬಳಿಕ ಪ್ರೇಕ್ಷಕರನ್ನು ಮತ್ತೊಮ್ಮೆ ನಗಿಸಲು ಬರುತ್ತಿದ್ದಾರೆ ನವರಸನಾಯಕ. 'ಮಠ' ಹಾಗೂ 'ಎದ್ದೇಳು ಮಂಜುನಾಥ' ಸಿನಿಮಾ ನಿರ್ದೇಶಕ ಗುರುಪ್ರಸಾದ್ ಮಗದೊಮ್ಮೆ ಜಗ್ಗೇಶ್‌ಗೆ ಆ್ಯಕ್ಷನ್ ಕಟ್ ಹೇಳಿರುವ ಸಿನಿಮಾ 'ರಂಗನಾಯಕ' ಮಾರ್ಚ್ 8ರಂದು ಬಿಡುಗಡೆಯಾಗಲಿದೆ. 2006ರಲ್ಲಿ 'ಮಠ' ಸಿನಿಮಾ ಹಾಗೂ 2009ರಲ್ಲಿ 'ಎದ್ದೇಳು ಮಂಜುನಾಥ' ಬಿಡುಗಡೆಯಾಗಿತ್ತು. ಇದಾಗಿ 15 ವರ್ಷಗಳ ಬಳಿಕ ಗುರುಪ್ರಸಾದ್–ಜಗ್ಗೇಶ್ ಜೋಡಿ ಒಂದಾಗಿ ಬರುತ್ತಿದೆ. ಸಿನಿಮಾ ಸೆಟ್ಟೇರಿ ಹಲವು ವರ್ಷಗಳೇ ಕಳೆದಿದ್ದು, ನಾನಾ ಕಾರಣಗಳಿಂದ ಚಿತ್ರೀಕರಣ, ಸಿನಿಮಾ ಬಿಡುಗಡೆ ವಿಳಂಬವಾಗಿತ್ತು.

'ನಮ್ಮ ಎರಡು ಸಿನಿಮಾ ನೋಡಿ ಆನಂದಿಸಿ ಮತ್ತೆ ನಮ್ಮಿಬ್ಬರ ಚಿತ್ರ ನೋಡಬೇಕೆಂದು ಆಶಿಸಿದ್ದೀರಿ. 15 ವರ್ಷಗಳ ಬಳಿಕ ಯಾವುದೇ ಮ್ಯಾಜಿಕ್ ಇಲ್ಲದ, ಯಾವುದೇ ಲಾಜಿಕ್ ಇಲ್ಲದ ಕೇವಲ ನಗೆಯ ಗಲಭೆ ಎಬ್ಬಿಸಲಿದ್ದೇವೆ. ನಿಮ್ಮನ್ನು ನಗೆಗಡಲಲ್ಲಿ ತೇಲಿಸಬೇಕೆಂದು ಇಬ್ಬರು ಹಟತೊಟ್ಟು ಚಿತ್ರಿಸಿದ್ದೇವೆ' ಎಂದು 'ರಂಗನಾಯಕನ' ಬಗ್ಗೆ ನಿರೀಕ್ಷೆ ಹುಟ್ಟಿಸಿದ್ದಾರೆ. ❖



ರಂಗನಾಯಕ

ಏನ್ಮಾಡ್ತಿದ್ದಾರೆ 'ಪಂಡಿತ್'?

ವರ್ಷದ ದ್ವಿತೀಯಾರ್ಧದಲ್ಲಿ 'ಸಲಾರ್'–2' ಸೆಟ್ಟೇರುವ ಸಾಧ್ಯತೆ

ಪ್ರಶಾಂತ್ ನೀಲ್ ನಿರ್ದೇಶನದ 'ಸಲಾರ್' ಸಿನಿಮಾ ಮೂಲಕ ಪ್ಯಾನ್ ಇಂಡಿಯಾ ಮಟ್ಟದಲ್ಲಿ 'ಪಂಡಿತ್' ಆಗಿ ಗುರುತಿಸಿಕೊಂಡಿರುವ ಚಂದನವನದ 'ಗುಲ್ಟು' ಖ್ಯಾತಿಯ ನವೀನ್ ಶಂಕರ್, ಇದೀಗ 'ಸಲಾರ್–2'ಗೆ ಸಜ್ಜಾಗುತ್ತಿದ್ದಾರೆ. ಕಳೆದ ವರ್ಷ ನಾಲ್ಕು ಬ್ಯಾಕ್ ಟು ಬ್ಯಾಕ್ ಸಿನಿಮಾಗಳಲ್ಲಿ ಕಾಣಿಸಿಕೊಂಡ ಅವರು, ಚಿತ್ರೀಕರಣದ ನಡುವಿನ ಕೊಂಚ ಬ್ರೇಕ್‌ನಲ್ಲಿ ತಮ್ಮ ಓದುವ ಹವ್ಯಾಸವನ್ನು ಮತ್ತೆ ಶುರುಮಾಡಿದ್ದಾರೆ. ಈ ನಡುವೆ 'ಸಿನಿಮಾ ಪುರವಣಿ' ಜೊತೆಗೆ ಮಾತಿಗೆ ಸಿಕ್ಕರು ನವೀನ್...

ಯಾವ ಸಿನಿಮಾದಲ್ಲಿ ತೊಡಗಿಸಿಕೊಂಡಿದ್ದೀರಿ?

'ಸದ್ಯಕ್ಕೆ ಸುಮನ್ ಕುಮಾರ್ ನಿರ್ದೇಶನದ 'ಕಿರಿಕೆಟ್–11' ಶೂಟಿಂಗ್ ಆರಂಭವಾಗಿದೆ. ಇನ್ನೊಂದು ಸಬ್ಜೆಕ್ಟ್ ಅಂತಿಮವಾಗಿದೆ. ಹೊಸ ತಂಡವಿದು. ಇದರ ಶೀರ್ಷಿಕೆ ಇನ್ನಷ್ಟೇ ನಿಗದಿಯಾಗಬೇಕಿದೆ. ಜೊತೆಗೆ 'ಗುಲ್ಟು' ಸಿನಿಮಾ ಖ್ಯಾತಿಯ ನಿರ್ದೇಶಕ ಜನಾರ್ದನ್ ಚಿಕ್ಕಣ್ಣ ಅವರೊಂದಿಗೆ ಮತ್ತೊಂದು ಸಿನಿಮಾ ಮಾಡುತ್ತಿದ್ದೇನೆ. ಹೊಂಬಾಳೆ ಫಿಲ್ಮ್ಸ್‌ನ 'ಸಲಾರ್' ಚಿತ್ರದ ಎರಡನೇ ಭಾಗದ ಚಿತ್ರೀಕರಣ ಇದೇ ವರ್ಷದ ದ್ವಿತೀಯಾರ್ಧದಲ್ಲಿ ನಡೆಯುವ ಸಾಧ್ಯತೆ ಇದೆ. ಸುಮಾರು ಕಥೆಗಳು ಬರುತ್ತಿವೆ. ಇವೆಲ್ಲದರ ನಡುವೆ ಕೊಂಚ ಬ್ರೇಕ್ ಸಿಕ್ಕಿದ್ದು, ನನ್ನ ಹವ್ಯಾಸವಾದ ಓದಿನ ಕಡೆಗೆ ಮತ್ತೆ ಗಮನಹರಿಸಿದ್ದೇನೆ. ❖

ನಾಯಕನೇ? ಖಳನಾಯಕನೇ?

'ಸಲಾರ್' ಆದ ಬಳಿಕ ನೆಗೆಟಿವ್ ಶೇಡ್ಸ್ ಇರುವ ಪಾತ್ರಗಳು ಹೆಚ್ಚು ಬರುತ್ತಿವೆಯೇ ಎಂಬ ಪ್ರಶ್ನೆಗೆ, 'ಹೊಯ್ಸಳ ಸಿನಿಮಾ ಬಿಡುಗಡೆಯಾದ ಬಳಿಕ ನನಗೆ ಕೇವಲ ವಿಲನ್ ಪಾತ್ರಗಳೇ ಬರಲಿವೆಯೇ ಎನ್ನುವ ಪ್ರಶ್ನೆಗಳಿದ್ದವು. ಆದರೆ ಆ ರೀತಿ ಆಗಲಿಲ್ಲ. ವಿಲನ್ ಪಾತ್ರಕ್ಕೆ ಆಫರ್‌ಗಳು ಬಂದಿರುವುದು ಕಮ್ಮಿ. ಬಂದಿರುವುದೆಲ್ಲ ಹೀರೊ ಪಾತ್ರಗಳೇ. ಸಮಸ್ಯೆ ಏನಿತ್ತೆಂದರೆ ಆ ಕಥೆಗಳಲ್ಲಿ ಹೀರೊಗೆ ಇರುವ ಗುಣಲಕ್ಷಣಗಳು ವಿಲನ್‌ಗೆ ಇರುವಂತಿದ್ದವು. ತುಂಬಾ ರಗಡ್ ಪಾತ್ರಗಳು, ಹಿಂಸಾತ್ಮಕ ಮನಃಸ್ಥಿತಿಯ ಪಾತ್ರಗಳವು. ಹೀಗಾಗಿ ನನಗೆ ಇಷ್ಟವಾದ ಕಥೆಗಳನ್ನಷ್ಟೇ ಒಪ್ಪಿಕೊಳ್ಳುತ್ತಿದ್ದೇನೆ' ಎಂದರು ನವೀನ್.

ಯಾರೀ 'ಪಂಡಿತ್'?

'ಸಲಾರ್' ಮೊದಲನೇ ಭಾಗ ನನ್ನ ಪಾತ್ರಕ್ಕೆ ಪ್ರವೇಶಿಕೆಯಷ್ಟೇ. ಇದರ ವಿಸ್ತರಣೆಯನ್ನು ಎರಡನೇ ಭಾಗದಲ್ಲಿ ಕಾಣಬಹುದು. 'ಪಂಡಿತ್' ಪಾತ್ರದ ಪವರ್ ಈ ಭಾಗದಲ್ಲಿ ಕಾಣಿಸಿಕೊಳ್ಳಲಿದೆ. 'ಪಂಡಿತ್' ಈ ರೀತಿ ಇರುತ್ತಾನೆ ಎನ್ನುವ ಸುಳಿವಷ್ಟೇ ಮೊದಲ ಭಾಗದಲ್ಲಿದ್ದು, ಆತ ಏನು ಮಾಡುತ್ತಾನೆ ಎನ್ನುವುದು ಮುಂದಿನ ಭಾಗದಲ್ಲಿ ತಿಳಿಯಲಿದೆ.

ಶರತ್–ನಿಸರ್ಗ ಜೋಡಿಗೆ 'ಶಭ್ಬಾಷ್'

ರುದ್ರಶಿವ ನಿರ್ದೇಶನದ. ಶರತ್ ಹಾಗೂ ನಿಸರ್ಗ ನಟಿಸುತ್ತಿರುವ ಹೊಸ ಸಿನಿಮಾ 'ಶಭ್ಬಾಷ್'ನ ಮುಹೂರ್ತ ಇತ್ತೀಚೆಗೆ ಬೆಂಗಳೂರಿನ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ನಡೆಯಿತು.

ನಿರ್ದೇಶಕ ಓಂ ಸಾಯಿಪ್ರಕಾಶ್ ಅವರು ತಮ್ಮ ಗರಡಿಯಲ್ಲಿ ಬೆಳೆದ ರುದ್ರಶಿವ ಅವರ ಈ ಚಿತ್ರಕ್ಕೆ ಕ್ಲ್ಯಾಪ್ ಮಾಡಿದರು. ಮುಹೂರ್ತದ ದಿನದಂದೇ ಚಿತ್ರದ ಫಸ್ಟ್‌ಲುಕ್ ಕೂಡ ಅನಾವರಣಗೊಂಡಿತು. 'ಸಾಮಾನ್ಯವಾಗಿ ಮಹತ್ತರವಾದುದನ್ನು ಸಾಧಿಸಿದಾಗ, ಮೆಚ್ಚುವಂತೆ ನಡೆದುಕೊಂಡಾಗ 'ಶಭ್ಬಾಷ್' ಎಂದು ಜನ ಮೆಚ್ಚಿಕೊಳ್ಳುತ್ತಾರೆ. ಹಾಗಾದರೆ, ಈ ಸಿನಿಮಾ ನಾಯಕ ಶಭ್ಬಾಷ್ ಅನ್ನಿಸಿಕೊಳ್ಳುವಂತಹ ಯಾವ ಕೆಲಸ ಮಾಡುತ್ತಾನೆ? ಯಾವ ರೀತಿಯ ಕಥೆ ಇದರ ಸುತ್ತ ಚಲಿಸುತ್ತದೆಂಬುದು ಈ ಸಿನಿಮಾ ಜೀವಾಳ. 'ಹೊಡಿರೋ ಸೆಲ್ಯೂಟ್' ಎಂಬ ಅಡಿಬರಹ ಹೊಂದಿರುವ ಈ ಚಿತ್ರ ಆ್ಯಕ್ಷನ್ ಡ್ರಾಮಾ ಹೊಂದಿದೆ' ಎಂದರು ರುದ್ರಶಿವ.

ಏಸ್ 22 ಬ್ಯಾನರಿನಡಿಯಲ್ಲಿ ಪವೀಂದ್ರ ಮುತ್ತಪ್ಪ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಈ ಚಿತ್ರದಲ್ಲಿ ಶರತ್ ನಾಯಕನಾಗಿ ನಟಿಸಿದ್ದು, ನಿಸರ್ಗ ನಾಯಕಿಯಾಗಿದ್ದಾರೆ. ಈಗಾಗಲೇ 'ಕ' ಮತ್ತು 'ಮಳೆಬಿಲ್ಲು' ಎಂಬೆರಡು ಸಿನಿಮಾಗಳಲ್ಲಿ ನಾಯಕರಾಗಿ ನಟಿಸಿರುವ ಶರತ್, ಹಲವು ವರ್ಷಗಳ ಬಳಿಕ 'ಶಭ್ಬಾಷ್' ಮೂಲಕ ತೆರೆಗೆ ಮರಳುತ್ತಿದ್ದಾರೆ. ಚಿತ್ರತಂಡವು ಮೊದಲ ಹಂತದಲ್ಲಿ ಬೆಂಗಳೂರಿನ ಸುತ್ತಮುತ್ತಲ ಪ್ರದೇಶಗಳಲ್ಲಿ ಹದಿನೈದು ದಿನಗಳ ಕಾಲ ಚಿತ್ರೀಕರಣ ನಡೆಸಲಿದ್ದು, ನಂತರ ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು ಭಾಗದಲ್ಲಿ ಚಿತ್ರೀಕರಣ ನಡೆಸಲು ಯೋಜನೆ ಹಾಕಿಕೊಂಡಿದೆ. ಚಿತ್ರೀಕರಣ ಆರಂಭಕ್ಕೂ ಮುನ್ನವೇ ಚಿತ್ರತಂಡ ಆರು ಹಾಡುಗಳನ್ನು ಸಿದ್ಧಪಡಿಸಿಕೊಂಡಿದೆ. ಹಾಡುಗಳಿಗೆ ಮ್ಯಾಡಿ ಸಂಗೀತ ಸಂಯೋಜನೆ ಮಾಡಿದ್ದು, ಆಂಜನೇಯನ ಕುರಿತಾದ ಒಂದು ಹಾಡಿಗೆ ಶಂಕರ್ ಮಹಾದೇವನ್ ಧ್ವನಿಯಾಗಿದ್ದಾರೆ. ❖

ಶರತ್
ನಿಸರ್ಗ

ಕಡಿಮೆ ತೆರೆ ಅವಧಿ ಇದು ಅಶ್ವಿನ್ ಪರಿಧಿ

ಅಶ್ವಿನ್ ಹಾಸನ

ಎ.ಪಿ.ಎಸ್.

ಐ.ಟಿ ಕೆಲಸ ತೊರೆದು ಬಣ್ಣದ ಲೋಕದ ಕನಸು ಕಟ್ಟಿಕೊಂಡು ಕಿರುತೆರೆ ಮೂಲಕ ಬೆಳ್ಳಿತೆರೆಗೆ ಕಾಲಿಟ್ಟ ನಟ ಅಶ್ವಿನ್ ಹಾಸನ ಅವರ ಸಿನಿಪಯಣವನ್ನೊಮ್ಮೆ ಅವಲೋಕಿಸಿದರೆ ಸಹಜವಾಗಿಯೇ ಪ್ರಶ್ನೆಯೊಂದು ಮೂಡುತ್ತದೆ: 'ಸಾಮರ್ಥ್ಯವುಳ್ಳ ಕಲಾವಿದನೊಬ್ಬನ ಸಿನಿಮಾ ಸಂಖ್ಯೆ ಹೆಚ್ಚುತ್ತಿದೆ. ಆದರೆ, ಅವುಗಳಲ್ಲಿ ತೆರೆ ಮೇಲೆ ಕಾಣಿಸಿಕೊಳ್ಳುವ ಅವಧಿ ಇಷ್ಟು ಕಡಿಮೆಯೇ?'. ಅಶ್ವಿನ್ ಕೈಯಲ್ಲೀಗ ಸುಮಾರು 15 ಸಿನಿಮಾಗಳಿವೆ. ವಿಪರ್ಯಾಸ ಏನೆಂದರೆ, ಬಹುತೇಕ ಎಲ್ಲ ಸಿನಿಮಾಗಳಲ್ಲೂ ಅವರಿಗೆ ಸಿಗುವುದು ಮೂರ್ನಾಲ್ಕು ದೃಶ್ಯಗಳಷ್ಟೇ! ಇವೇ ಪ್ರಶ್ನೆಗಳನ್ನು ಅವರೆದುರಿಗೇ ಇಟ್ಟಾಗ ಅಶ್ವಿನ್ ಮನ ಬಿಚ್ಚಿ ಮಾತಿಗಿಳಿದರು.

'ನಾನು ಆಡುತ್ತಿರುವ ಮಾತು ವಾಸ್ತವದ್ದು. ಈಗ ಪೂರ್ಣಾವಧಿ ನಟನಾಗಿದ್ದೇನೆ. ಇದುವೇ ನನ್ನ ಆದಾಯದ ಮೂಲ. ಹೀಗಾಗಿ ಬಂದ ಪಾತ್ರಗಳನ್ನೆಲ್ಲಾ ಒಪ್ಪಿಕೊಳ್ಳುತ್ತಿದ್ದೇನೆ. ಹೀಗೆ ಮಾಡಿ ತಪ್ಪು ಮಾಡುತ್ತಿದ್ದೇನೆಯೇ ಎನ್ನುವ ಪ್ರಶ್ನೆಯನ್ನೂ ಕೇಳಿಕೊಳ್ಳುತ್ತಿದ್ದೇನೆ. 'ಸಲಾರ್'ನಲ್ಲಿ ಕೇವಲ ಒಂದು ದೃಶ್ಯ, ಮುಂದೆ ಬಿಡುಗಡೆಯಾಗಲಿರುವ 'ಬಘೀರ'ದಲ್ಲಿ ಮೂರು ದೃಶ್ಯಗಳಿವೆ, 'ಭೈರತಿ ರಣಗಲ್'ನಲ್ಲಿ ನಾಲ್ಕು ದೃಶ್ಯಗಳಿವೆ...ಈ ಹಿನ್ನೆಲೆಯಲ್ಲಿ ಈಗ ನೀವು ಕೇಳಿರುವ ಪ್ರಶ್ನೆಯನ್ನು ಪ್ರತಿನಿತ್ಯ ನನ್ನನ್ನು ನಾನೇ ಕೇಳಿಕೊಳ್ಳುತ್ತಿರುತ್ತೇನೆ. ಈ ಸಂದರ್ಭದಲ್ಲಿ ಗೊಂದಲವೂ ನನ್ನೊಳಗಿದೆ. ಸಿನಿಮಾ ಕ್ಷೇತ್ರದಲ್ಲಿ ಸತತವಾಗಿ ಸಿನಿಮಾಗಳನ್ನು ಮಾಡುತ್ತಿರುವುದು ಒಳ್ಳೆಯದೋ ಅಥವಾ ಸಿನಿಮಾ ಆಯ್ಕೆ ವಿಚಾರದಲ್ಲಿ ಕಠಿಣ ಮಾನದಂಡಗಳನ್ನು ಹಾಕಿಕೊಳ್ಳುವುದು ಒಳ್ಳೆಯದೋ ಎನ್ನುವ ಗೊಂದಲ ಅದು. ಎರಡನೆಯದನ್ನು ಆಯ್ದುಕೊಳ್ಳಲು ಬೇರೆ ಆದಾಯದ ಮೂಲ ಅಥವಾ ಸಿನಿಮಾ ಹಿನ್ನೆಲೆ ಇರಬೇಕು. ಈ ಆಯ್ಕೆ ಮಾಡಿಕೊಂಡರೆ ನಮ್ಮನ್ನು ಮರೆಯುವವರು ಹೆಚ್ಚಾಗುತ್ತಾರೆ. ಎಲ್ಲ ಪಾತ್ರಗಳನ್ನು ಮಾಡುವ ನನ್ನ ನಿರ್ಧಾರದ ಹಿಂದೆ ಒಂದು ಕಾರಣವಿದೆ. ನನಗೆ ಸಿಕ್ಕ ತೆರೆ ಅವಧಿಯಲ್ಲಿ ನನ್ನ ಪಾತ್ರಕ್ಕೆ ನಾನು ನ್ಯಾಯ ಒದಗಿಸಿದ್ದೇನೆ. ನನ್ನ ನಟನೆಯ ಸಾಮರ್ಥ್ಯವನ್ನು ಪ್ರದರ್ಶಿಸಿದ್ದೇನೆ. ಹೊಸ ಹೊಸ ತಂಡದ ಪರಿಚಯವಾಗುತ್ತದೆ ಎನ್ನುವುದೇ ಸದ್ಯ ನನ್ನ ಸಿನಿಮಾ ಆಯ್ಕೆಗಳ ಹಿಂದೆ ಇರುವ ಉದ್ದೇಶ' ಎನ್ನುತ್ತಾ ತಮ್ಮೊಳಗಿನ ಗೊಂದಲವನ್ನು ಬಿಚ್ಚಿಟ್ಟರು.

'ಬಘೀರ ಸಿನಿಮಾದ ಶೂಟಿಂಗ್‌ನಲ್ಲಿರುವಾಗ 'ಭೈರತಿ ರಣಗಲ್'ನ ಆಫರ್ ಬಂದಿತ್ತು. ಇದರಲ್ಲಿಯೂ ಪೊಲೀಸ್ ಪಾತ್ರ. ಇಲ್ಲಿಯವರೆಗಿನ 85 ಸಿನಿಮಾಗಳಲ್ಲಿ 20 ಸಿನಿಮಾಗಳಲ್ಲಿ ಪೊಲೀಸ್ ಪಾತ್ರ ಮಾಡಿದ್ದೇನೆ. ಪದೇ ಪದೇ ಪೊಲೀಸ್ ಪಾತ್ರ ಸಿಗುತ್ತಿದೆ ಎಂದು ತಿರಸ್ಕರಿಸಲೇ? ಅಥವಾ ಶಿವಣ್ಣನ ಜೊತೆ, ನಿರ್ದೇಶಕ ನರ್ತನ್ ಅವರ ಜೊತೆ ಕೆಲಸ ಮಾಡುವ ಚೊಚ್ಚಲ ಅವಕಾಶ ಸಿಗುತ್ತಿದೆ ಎಂದು ಸ್ವೀಕರಿಸಲೇ ಎನ್ನುವ ಪ್ರಶ್ನೆ ಮೂಡಿತು. ಇಂತಹ ಗೊಂದಲದಲ್ಲೇ ಇಲ್ಲಿಯವರೆಗೂ ಸಿನಿಮಾ ಮಾಡುತ್ತಾ ಬಂದಿದ್ದೇನೆ. ನನಗೆ ಆದಾಯ ಬರುತ್ತದೆ, ಹೊಸಬರ ಪರಿಚಯವಾಗುತ್ತದೆ ಎನ್ನುವ ಕಾರಣದಿಂದಲೇ ಸಿನಿಮಾ ಮಾಡುತ್ತಿದ್ದೇನೆ. 'ಸಲಾರ್'ನಲ್ಲಿ ಎರಡು ನಿಮಿಷ ನಟನೆ ಮಾಡಿದ್ದೇನೆ. ಪ್ರಶಾಂತ್ ನೀಲ್ ಅವರಿಗೇನೂ ಕಲಾವಿದರ ಕೊರತೆ ಇರಲಿಲ್ಲ. ಅಶ್ವಿನ್ ನಮ್ಮ ಹುಡುಗ ಎಂದು ಅವರು ಕರೆದರು. ಇದಕ್ಕೆ ತಲೆಬಾಗುತ್ತೇನೆ. ಹೊಂಬಾಳೆಯಡಿ ನಾನು ಹಲವು ಸಿನಿಮಾ ಮಾಡಿದ್ದೇನೆ. ಹೀಗೆ ಮುಂದೊಂದು ದಿನ ಇದೇ ಸಿನಿಮಾಗಳ ನಿರ್ದೇಶಕರು ನನಗೊಂದು ದೊಡ್ಡ ಪಾತ್ರ ನೀಡಬಹುದು ಎನ್ನುವ ಭರವಸೆ ಇಟ್ಟುಕೊಂಡೇ ಮುಂದುವರಿಯುತ್ತಿದ್ದೇನೆ. ಯಾರನ್ನೂ ನಾನು ತಿರಸ್ಕರಿಸುತ್ತಿಲ್ಲ. ನಾನು ನಟಿಸಿದ ಸಿನಿಮಾವೊಂದು ಗೆಲ್ಲಬೇಕು ಜೊತೆಗೆ ನನ್ನ ಪಾತ್ರವೂ ಗೆದ್ದರಷ್ಟೇ, ನನ್ನೊಳಗಿನ ಗೊಂದಲಕ್ಕೆ ತೆರೆ ಬೀಳಲಿದೆ. ಆ ನಂತರ ನಾನು ಸಿನಿಮಾಗಳನ್ನು ಆಯ್ದುಕೊಳ್ಳುವ ಹಂತಕ್ಕೆ ಬರಲಿದ್ದೇನೆ. ಒಂದು ಸಮಾಧಾನ ಎಂದರೆ ನಾನು ಗೆದ್ದಿಲ್ಲವಾದರೂ ರೇಸ್‌ನಲ್ಲಿ ಇದ್ದೇನೆ, ಟ್ರ್ಯಾಕ್‌ನಲ್ಲಿ ಇದ್ದೇನೆ. ಕೆಲವು ನಿರ್ಧಾರಗಳು ತಪ್ಪು ಎಂದು ನನಗೆ ತಿಳಿದಿದೆ. ಆದರೆ ಬೇರೆ ದಾರಿ ಇಲ್ಲ. ಈ ಹಂತದಲ್ಲಿ ನಾನು ಚ್ಯೂಸಿಯಾದರೆ ರೇಸ್‌ನಿಂದಲೇ ಹೊರಗುಳಿಯುತ್ತೇನೋ ಎನ್ನುವ ಭಯವೂ ಇದೆ' ಎನ್ನುತ್ತಾರೆ ಅಶ್ವಿನ್.

'ಮೂರು ವರ್ಷಗಳ ಹಿಂದೆ ಎಲ್ಲ ಕಡೆ ಫೋಟೊ ಹಿಡಿದು ಅವಕಾಶಕ್ಕಾಗಿ ತಿರುಗಾಡುತ್ತಿದ್ದೆ. ಇದೀಗ ಸಿನಿಮಾ ಕ್ಷೇತ್ರವೇ ನನ್ನನ್ನು ಗುರುತಿಸುತ್ತಿದೆ. ನನಗೆ ಒಳ್ಳೆಯ ನಟನಾಗಬೇಕು ಎಂಬ ಆಸೆಯಷ್ಟೇ ಇದೆ. ಈ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇನೆ' ಎಂದರು. ❖

ಅಶ್ವಿನ್ ಕೈಯಲ್ಲಿರುವ ಪ್ರಾಜೆಕ್ಟ್‌ಗಳು ಎಷ್ಟು?

'ಇಂದು(ಜ.26)ಬಿಡುಗಡೆಯಾಗಲಿರುವ 'ಕೇಸ್ ಆಫ್ ಕೊಂಡಾಣ' ಸಿನಿಮಾದಲ್ಲಿ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದು, ಹೆಚ್ಚಿನ ಸ್ಕ್ರೀನ್ ಸ್ಪೇಸ್ ಸಿಕ್ಕಿದೆ. ಮಲಯಾಳಂನಲ್ಲಿ ಆರಂಭವಾದ 'ಸನ್ನಿಧಾನಂ ಪೋಸ್ಟ್ ಆಫೀಸ್' ಸಿನಿಮಾ, ತಮಿಳು ಸಿನಿಮಾವಾಗಿ ಬದಲಾಗಿದೆ. ಈ ಸಿನಿಮಾ ತಮಿಳಿನಲ್ಲೇ ಬಿಡುಗಡೆಯಾಗಲಿದೆ. ಇದರಲ್ಲಿ ನನ್ನ ಪಾತ್ರದ ಶೂಟಿಂಗ್ ಪೂರ್ಣಗೊಂಡಿದೆ. ಜೊತೆಗೆ 'KD', 'ರಾಯಲ್', 'ಅಪಾಯವಿದೆ ಎಚ್ಚರಿಕೆ', 'ಅಮೃತಾಂಜನ್', 'ಸಂಭವಾಮಿ ಯುಗೇ ಯುಗೇ', 'ವಿಕಾಸಪರ್ವ', 'ಟೆರರ್', 'ಕತ್ತಿ', 'ನಾಟ್ ಔಟ್', 'ನೈಟ್ ಕರ್ಫ್ಯೂ', 'ಗ್ರೇ ಗೇಮ್ಸ್', 'ಇದೆಂತಾ ಮಾರಾಯ', 'ಕ್ರೀಂ' ಹೀಗೆ ಪಟ್ಟಿ ಬೆಳೆಯುತ್ತಿದೆ.

'ಚೀತಾ' ಓಟ ಜೋರು

ಪ್ರಜ್ವಲ್ ದೇವರಾಜ್, ಮೇಘಾ ಶೆಟ್ಟಿ ಜೊತೆಯಾಗಿ ನಟಿಸುತ್ತಿರುವ 'ಚೀತಾ' ಚಿತ್ರದ ಚಿತ್ರೀಕರಣ ಭರದಿಂದ ಸಾಗಿದೆ. ರಾಜಲಕ್ಷ್ಮಿ ಎಂಟರ್‌ಟೈನ್‌ಮೆಂಟ್ ಲಾಂಛನದಲ್ಲಿ ಪ್ರತಿಭಾ ನರೇಶ್ ನಿರ್ಮಿಸುತ್ತಿರುವ ಚಿತ್ರಕ್ಕೆ ನೃತ್ಯ ನಿರ್ದೇಶಕ ರಾಜ ಕಲ್ಮೈ ಕುಮಾರ್ ಅವರ ನಿರ್ದೇಶನವಿದೆ.

'ಚೀತಾ' ಸಿನಿಮಾ ಚಿತ್ರೀಕರಣಕ್ಕೆ ಬೆಂಗಳೂರಿನ ಎಚ್.ಎಂ. ಟಿ. ಫ್ಯಾಕ್ಟರಿ ಆವರಣದಲ್ಲಿ ಬೃಹತ್ ಮಾರ್ಕೆಟ್ ಸೆಟ್ ಹಾಕಲಾಗಿದ್ದು, ದಿನ ನಿತ್ಯ ಸುಮಾರು 200 ಜನ ಶೂಟಿಂಗ್‌ನಲ್ಲಿ ಭಾಗಿಯಾಗಿದ್ದಾರೆ.

'ಕಳೆದ 23 ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಡ್ಯಾನ್ಸರ್ ಆಗಿ, ಡ್ಯಾನ್ಸ್ ಮಾಸ್ಟರ್ ಆಗಿ ಕಾರ್ಯನಿರ್ವಹಿಸಿದ್ದೇನೆ. ನಾನು ಮೊದಲು ನೃತ್ಯ ನಿರ್ದೇಶಕನಾಗಿ ಕಾರ್ಯ ನಿರ್ವಹಿಸಿದ್ದು ಪ್ರಜ್ವಲ್ ಅವರ ಜೊತೆ. ಈಗ ನನ್ನ ಮೊದಲ ನಿರ್ದೇಶನದ ಚಿತ್ರಕ್ಕೂ ಅವರೆ ನಾಯಕ. 'ಚೀತಾ', ಮಾರ್ಕೆಟ್‌ನಲ್ಲಿ ನಡೆಯುವ ಕಥೆ. ಮಾರುಕಟ್ಟೆಯಲ್ಲೇ ಹುಟ್ಟಿಬೆಳೆದ ಹುಡುಗನೊಬ್ಬನ ಕಥೆಯೂ ಹೌದು. ಪ್ರಜ್ವಲ್ ಈ ಚಿತ್ರದಲ್ಲಿ ಮಾರುಕಟ್ಟೆಯಲ್ಲಿ ನಡೆಯುವ ಅವ್ಯವಹಾರಗಳ ವಿರುದ್ಧ ಹೋರಾಟ ಮಾಡುವ ಹೋರಾಟಗಾರನ ಪಾತ್ರ ಮಾಡಿದ್ದಾರೆ. ಅಲ್ಲೇ ಬೆಳೆದು ಅಲ್ಲೇ ಇರುವ ಆ ಹುಡುಗನ ಕಂಡರೆ ಅಲ್ಲಿನ ಜನರಿಗೆ ಅಚ್ಚುಮೆಚ್ಚು. ಈಗಿನ ಜನರಿಗೆ ಬೇಕಾಗುವ ಎಲ್ಲಾ ರೀತಿಯ ಅಂಶಗಳು ಈ ಚಿತ್ರದಲ್ಲಿವೆ. ಕಲಾ ನಿರ್ದೇಶಕ ಶಿವಕುಮಾರ್ ಮಾರುಕಟ್ಟೆಯ ಬೃಹತ್ ಸೆಟ್ ಹಾಕಿದ್ದಾರೆ. ಸುಮಾರು ಎರಡು ತಿಂಗಳ ಕಾಲ ಇನ್ನೂರಕ್ಕೂ ಅಧಿಕ ಜನರ ಪರಿಶ್ರಮದಲ್ಲಿ ಈ ಅದ್ದೂರಿ ಸೆಟ್ ನಿರ್ಮಾಣವಾಗಿದೆ. ಹೆಚ್ಚಿನ ಚಿತ್ರೀಕರಣ ಇದೇ ಜಾಗದಲ್ಲಿ ನಡೆಯುತ್ತದೆ. ಒಂದು ವಾರ ಮಾತ್ರ ಮೈಸೂರಿನಲ್ಲಿ ಚಿತ್ರೀಕರಣ ಮಾಡಲಿದ್ದೇವೆ. ನೃತ್ಯ ನಿರ್ದೇಶಕ ಚಿನ್ನಿಪ್ರಕಾಶ್ ಅವರು ನಮ್ಮ ಚಿತ್ರದ ಪ್ರಮುಖಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಗುರು ಜಗ್ಗೇಶ್, ಶೃತಿ ಹರಿಹರನ್, ರಂಗಾಯಣ ರಘು, ಶಿವರಾಜ್ ಕೆ.ಆರ್. ಪೇಟೆ, ಸಿದ್ದಿಂಗು ಶ್ರೀಧರ್, ಟೆನ್ನಿಸ್ ಕೃಷ್ಣ, 'ವಾಮನ' ಚಿತ್ರದ ನಿರ್ದೇಶಕ ಶಂಕರ್ ಮುಂತಾದವರು ತಾರಾಬಳಗದಲ್ಲಿದ್ದಾರೆ' ಎಂದರು ನಿರ್ದೇಶಕ ರಾಜ ಕಲ್ಮೈ. 'ಮಾರ್ಕೆಟ್‌ನಲ್ಲಿ ಎಲ್ಲಾ ಕೆಲಸಗಳು ವೇಗವಾಗಿ ನಡೆಯುತ್ತಿರುತ್ತವೆ. ನನ್ನ ಪಾತ್ರ ಕೂಡ ಅದೇ ರೀತಿ. ಹಾಗಾಗಿ ಚಿತ್ರಕ್ಕೆ 'ಚೀತಾ' ಎಂದು ಹೆಸರಿಡಲಾಗಿದೆ' ಎನ್ನುತ್ತಾರೆ ಪ್ರಜ್ವಲ್ ದೇವರಾಜ್. ❖

ಚೀತಾ
ಪ್ರಜ್ವಲ್ ದೇವರಾಜ್,
ಮೇಘಾ ಶೆಟ್ಟಿ

ತಪಸ್ವಿನಿ ಮೆಚ್ಚಿದ ಗಜರಾಮ

ರಿಷಬ್ ಶೆಟ್ಟಿ ನಟನೆಯ 'ಹರಿಕಥೆ ಅಲ್ಲ ಗಿರಿಕಥೆ' ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟ ವಿರಾಜಪೇಟೆ ಮೂಲದ ತಪಸ್ವಿನಿ ಪೂಣಚ್ಚ ಸದ್ಯ ತಮ್ಮ ಎರಡನೇ ಸಿನಿಮಾ 'ಗಜರಾಮ'ನ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ.

ಸುನಿಲ್ ಕುಮಾರ್ ನಿರ್ದೇಶನದ ಈ ಸಿನಿಮಾದ ಟೀಸರ್ ಇತ್ತೀಚೆಗೆ ತೆರೆಕಂಡಿದೆ. 'ಬಿಚ್ಚುಗತ್ತಿ' ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟ ಮ್ಯಾಸಿವ್ ಸ್ಟಾರ್ ರಾಜವರ್ಧನ್ ನಾಯಕನಾಗಿ ಇಲ್ಲಿ ನಟಿಸಿದ್ದು, ಅವರಿಗೆ ತಪಸ್ವಿನಿ ಜೋಡಿಯಾಗಿದ್ದಾರೆ. 'ಸಿನಿಮಾದಲ್ಲಿ ಒಳ್ಳೆಯ ಕಂಟೆಂಟ್ ಇದೆ. ಎಲ್ಲ ಕಮರ್ಷಿಯಲ್ ಅಂಶಗಳನ್ನು ಸಿನಿಮಾ ಹೊಂದಿದ್ದು, ನನ್ನನ್ನು ನಾನು ತೆರೆಯ ಮೇಲೆ ನೋಡಿ ಖುಷಿಪಟ್ಟಿದ್ದೇನೆ' ಎಂದರು ರಾಜವರ್ಧನ್.

'ಸಿನಿಮಾದಲ್ಲಿ ಆ್ಯಕ್ಷನ್, ಸೆಂಟಿಮೆಂಟ್, ಲವ್ ಎಲ್ಲವೂ ಇವೆ. ಮೂರು ಶೇಡ್‌ಗಳಲ್ಲಿ ನಾಯಕ ಇಲ್ಲಿ ಕಾಣಿಸಿಕೊಳ್ಳುತ್ತಾರೆ. ಇದರಲ್ಲಿ ಒಂದು ಪೈಲ್ವಾನ್ ಪಾತ್ರ. ಹೀಗಾಗಿ ಚಿತ್ರದ ಸಂಗೀತ ಮತ್ತು ಹಾಡುಗಳನ್ನು ಭಿನ್ನವಾಗಿ ಮಾಡಿದ್ದೇವೆ' ಎನ್ನುತ್ತಾರೆ ಸಂಗೀತ ನಿರ್ದೇಶಕ ಮನೋಮೂರ್ತಿ.

'ನನ್ನ ಎರಡನೇ ಸಿನಿಮಾವಿದು. ಚಿತ್ರರಂಗಕ್ಕೆ ನಾನು ಹೊಸಬಳು. ರಿಷಬ್ ಅವರ ಜೊತೆ ತೆರೆಹಂಚಿಕೊಂಡು ಈ ಕ್ಷೇತ್ರಕ್ಕೆ ಹೆಜ್ಜೆ ಇಟ್ಟ ನಾನು ಲಕ್ಕಿ. 'ಗಜರಾಮ' ಸಿನಿಮಾದ ಕಥೆ ಪ್ರೇಕ್ಷಕರನ್ನು ಸೆಳೆಯುವಂತಿದೆ' ಎಂದು ಅನುಭವ ಹಂಚಿಕೊಂಡರು ತಪಸ್ವಿನಿ. ಆ್ಯಕ್ಷನ್ ಅಂಶಗಳಿಂದ ಕೂಡಿರುವ ಟೀಸರ್‌ನಲ್ಲಿ ಪ್ರೇಮಕಥೆಯನ್ನು ಅನಾವರಣ ಮಾಡಲಾಗಿದೆ. ಭರ್ಜರಿ ಆ್ಯಕ್ಷನ್ಸ್ ಮೂಲಕ ರಾಜವರ್ಧನ್ ರಗಡ್ ಲುಕ್‌ನಲ್ಲಿ ಇಲ್ಲಿ ಕಾಣಿಸಿಕೊಂಡಿದ್ದಾರೆ. ಪೊಲೀಸ್ ಪಾತ್ರದಲ್ಲಿ ದೀಪಕ್ ನಟಿಸಿದ್ದಾರೆ. ಕಬೀರ್ ಸಿಂಗ್ ಖಳನಾಯಕನ ಪಾತ್ರ ಮಾಡುತ್ತಿದ್ದಾರೆ. ನಿರ್ದೇಶಕ ಸುನಿಲ್ ಕುಮಾರ್‌ಗೆ ಇದು ಚೊಚ್ಚಲ ಸಿನಿಮಾ. ಚಿತ್ರಕ್ಕೆ ಕೆ.ಎಸ್. ಚಂದ್ರಶೇಖರ್ ಛಾಯಾಚಿತ್ರಗ್ರಹಣವಿದ್ದು, ಜ್ಞಾನೇಶ್ ಬಿ. ಮಠದ್ ಸಂಕಲನ, ಧನಂಜಯ್ ಅವರ ಕೊರಿಯೋಗ್ರಾಫಿ, ಚಿನ್ಮಯ್ ಭಾವಿಕೆರೆ, ಜಯಂತ ಕಾಯ್ಕಿಣಿ ಅವರ ಸಾಹಿತ್ಯವಿದೆ. ಲೈಫ್ ಲೈನ್ ಫಿಲ್ಮ್ ಪ್ರೊಡಕ್ಷನ್ ಅಡಿಯಲ್ಲಿ ನರಸಿಂಹಮೂರ್ತಿ 'ಗಜರಾಮ' ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರೆ. ❖

ರಾಜವರ್ಧನ್

ತಪಸ್ವಿನಿ

'ವಿಐಪಿ'ಯಾದ ವಸಿಷ್ಠ ಸಿಂಹ

ವಿಐಪಿ
ವಸಿಷ್ಠ ಸಿಂಹ

'ಟಗರು' ಸಿನಿಮಾದಲ್ಲಿ ತಮ್ಮ ಅಭಿನಯ ಹಾಗೂ ಕಂಚಿನ ಕಂಠದ ಮೂಲಕ ಪ್ರೇಕ್ಷಕರನ್ನು ಸೆಳೆದ ನಟ ವಸಿಷ್ಠ ಸಿಂಹ 'ವಿಐಪಿ'ಯಾಗಿ ತೆರೆ ಮೇಲೆ ಬರಲು ಸಜ್ಜಾಗಿದ್ದಾರೆ. ಇತ್ತೀಚೆಗೆ ವಸಿಷ್ಠ ನಟನೆಯ ಹೊಸ ಸಿನಿಮಾದ ಶೀರ್ಷಿಕೆ ಘೋಷಣೆಯಾಗಿದೆ. ಕಲಾ ಸೃಷ್ಟಿ ಪ್ರೊಡಕ್ಷನ್ಸ್ ನಿರ್ಮಾಣದ, ಬ್ರಹ್ಮ ನಿರ್ದೇಶನದ ಈ ಚಿತ್ರ ವಿಭಿನ್ನ ಕಥಾಹಂದರ ಹೊಂದಿದೆ. ವಸಿಷ್ಠ ಸಿಂಹ ಅವರು ಈ ಚಿತ್ರದಿಂದ 'ರಾಯಲ್ ಸ್ಟಾರ್' ಆಗಿ ಮಿಂಚಲಿದ್ದಾರೆ ಎಂದಿದೆ ಚಿತ್ರತಂಡ. ಬೆಂಗಳೂರಿನ ಸುತ್ತಮುತ್ತ ಚಿತ್ರದ ಚಿತ್ರೀಕರಣ ಅದ್ದೂರಿಯಾಗಿ ಬಿರುಸಿನಿಂದ ಸಾಗಿದೆ. ಕೊಡಗು, ಸಕಲೇಶಪುರದಲ್ಲೂ ಚಿತ್ರೀಕರಣ ನಡೆಯಲಿದೆ ಎಂದು ತಂಡ ಮಾಹಿತಿ ನೀಡಿದೆ. ನಿರ್ದೇಶಕ ಬ್ರಹ್ಮ ಈ ಹಿಂದೆ ರಾಗಿಣಿ ದ್ವಿವೇದಿ ನಟನೆಯ 'ಸಾರಿ ಕರ್ಮ ರಿಟರ್ನ್ಸ್' ಚಿತ್ರ ನಿರ್ದೇಶಿಸಿದ್ದರು.

ಕ್ರೈಮ್ ಥ್ರಿಲ್ಲರ್ ಹಾಗೂ ಸೇಡಿನ ಕಥಾಹಂದರ ಹೊಂದಿರುವ ಈ ಚಿತ್ರ ನಾನ್ ಲೀನಿಯರ್ ಸ್ಕ್ರೀನ್ ಪ್ಲೇ ಹೊಂದಿದೆ. ಮೋಹನ್ ಕುಮಾರ್ 'ವಿಐಪಿ' ಚಿತ್ರಕ್ಕೆ ಕಥೆ ಬರೆದಿದ್ದು, ರಾಜೀವ್ ಗಣೇಶನ್ ಚಿತ್ರಕಥೆ ಬರೆದು ಛಾಯಾಗ್ರಾಹಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಹರ್ಷವರ್ಧನ್ ರಾಜ್ ಸಂಗೀತ ನಿರ್ದೇಶನ, ಸತೀಶ್ ಚಂದ್ರಯ್ಯ ಸಂಕಲನ ಹಾಗೂ ಕೆಜಿಎಫ್ ಖ್ಯಾತಿಯ ವಿಕ್ರಮ್ ಮೋರ್ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಖ್ಯಾತ ಕಲಾವಿದರು ಚಿತ್ರದಲ್ಲಿ ನಟಿಸುತ್ತಿದ್ದು, ಶೀಘ್ರದಲ್ಲೇ ಹೆಚ್ಚಿನ ಮಾಹಿತಿ ನೀಡುವುದಾಗಿ ಕಾರ್ಯಕಾರಿ ನಿರ್ಮಾಪಕ ಅಫ್ಜಲ್ ತಿಳಿಸಿದ್ದಾರೆ. ❖

ಇವಳೇ 'ಶಾಖಾಹಾರಿ'ಯ ಸೌಗಂಧಿಕ...

ವಿಭಿನ್ನ ಶೀರ್ಷಿಕೆಯಿಂದಲೇ ಪ್ರೇಕ್ಷಕರನ್ನು ಸೆಳೆದಿರುವ, ರಂಗಾಯಣ ರಘು ಮುಖ್ಯಭೂಮಿಕೆಯಲ್ಲಿ ನಟಿಸಿರುವ 'ಶಾಖಾಹಾರಿ' ಸಿನಿಮಾದ ಮೊದಲ ಹಾಡು ಬಿಡುಗಡೆಯಾಗಿದೆ. ಮಲೆನಾಡಿನ ಸೊಗಡಿನ ಥ್ರಿಲ್ಲರ್ ಕಥಾಹಂದರದ ಈ ಸಿನಿಮಾಗೆ ಸಂದೀಪ್ ಸುಂಕದ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಕಿರುಚಿತ್ರಗಳನ್ನು ನಿರ್ದೇಶಿಸಿ ಅನುಭವವಿರುವ ಸಂದೀಪ್ 'ಶಾಖಾಹಾರಿ' ಸಿನಿಮಾ ಮೂಲಕ ನಿರ್ದೇಶಕನಾಗಿ ಚಂದನವನಕ್ಕೆ ಕಾಲಿಟ್ಟಿದ್ದಾರೆ. ಸದ್ಯ ಬಿಡುಗಡೆಯಾಗಿರುವ 'ಸೌಗಂಧಿಕ' ಎಂಬ ಮೆಲೋಡಿ ಹಾಡಿಗೆ ನಿರ್ದೇಶಕ ಸಂದೀಪ್ ಸಾಹಿತ್ಯ ಬರೆದಿದ್ದು, ಸಿದ್ಧಾರ್ಥ್ ಬೆಳ್ಮಣ್ಣು ಹಾಗೂ ಐಶ್ವರ್ಯ ರಂಗರಾಜನ್ ಧ್ವನಿಯಾಗಿದ್ದಾರೆ. ಮಯೂರ್ ಅಂಬೆಕಲ್ಲು ಸಂಗೀತದ ಇಂಪು ಹಾಡಿಗಿದೆ. ಯುವ ಪ್ರೇಮಿಗಳ ನಡುವಿನ ಈ ಹಾಡಿನಲ್ಲಿ ವಿನಯ್ ಯು.ಜೆ. ಹಾಗೂ ನಿಧಿ ಹೆಗಡೆ ನಟಿಸಿದ್ದಾರೆ.

ಸಿನಿಮಾದಲ್ಲಿ ಬಾಣಸಿಗನ ಪಾತ್ರದಲ್ಲಿ ರಂಗಾಯಣ ರಘು, ಪೊಲೀಸ್ ಅಧಿಕಾರಿಯಾಗಿ ಗೋಪಾಲಕೃಷ್ಣ ದೇಶಪಾಂಡೆ ಬಣ್ಣ ಹಚ್ಚಿದ್ದಾರೆ. ಸುಜಯ್ ಶಾಸ್ತ್ರಿ ಈ ಸಿನಿಮಾದ ಒಂದು ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಪ್ರತಿಮಾ ನಾಯಕ್, ಹರಿಣಿ, ವಿನಯ್ ಯು.ಜೆ., ಶ್ರೀಹರ್ಷ ಗೋಭಟ್ಟ ಮತ್ತಿತರರು ತಾರಾಬಳಗದಲ್ಲಿದ್ದಾರೆ. ರಾಜೇಶ್ ಕೀಳಂಬಿ ಮತ್ತು ರಂಜಿನಿ ಪ್ರಸನ್ನ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದು, ವಿಶ್ವಜಿತ್ ರಾವ್ ಛಾಯಾಚಿತ್ರಗ್ರಹಣ, ಶಶಾಂಕ್ ನಾರಾಯಣ ಸಂಕಲನ, ಮಯೂರ್ ಅಂಬೆಕಲ್ಲು ಸಂಗೀತ ಸಿನಿಮಾಗಿದೆ. ಮಲೆನಾಡಿನಲ್ಲೇ ಇಡೀ ಸಿನಿಮಾದ ಚಿತ್ರೀಕರಣ ನಡೆದಿದ್ದು, ಇಲ್ಲಿನವರೇ ಈ ಸಿನಿಮಾಗೆ ಕೆಲಸ ಮಾಡಿರುವುದು ವಿಶೇಷ. ಈಗಾಗಲೇ ಸಿನಿಮಾದ ಶೂಟಿಂಗ್ ಪೂರ್ಣಗೊಂಡಿದೆ. ಫೆಬ್ರುವರಿ ತಿಂಗಳಲ್ಲಿ ಸಿನಿಮಾ ರಿಲೀಸ್‌ಗೆ ಸಿದ್ಧತೆ ನಡೆಸಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಕೆಲಸ ಆರಂಭಿಸಿದೆ. ಈ ಸಿನಿಮಾವನ್ನು ಕೆ.ಆರ್.ಜಿ ಸ್ಟುಡಿಯೋಸ್ ವಿತರಣೆ ಮಾಡಲಿದೆ. ❖

ಶಾಖಾಹಾರಿ
ವಿನಯ್ ಯು.ಜೆ.,
ನಿಧಿ ಹೆಗಡೆ

ಮಲ್ಲಿಕಾ

ನಟ ಚಿಕ್ಕಣ್ಣ ನಾಯಕರಾಗಿ ನಟಿಸಿರುವ ಚೊಚ್ಚಲ ಚಿತ್ರ ‘ಉಪಾಧ್ಯಕ್ಷ’ದ ಮೂಲಕ ತಮ್ಮ ಚಂದನವನದ ಪಯಣ ಆರಂಭಿಸಿದ್ದಾರೆ ನಟಿ ಮಲ್ಲಿಕಾ ಟಿ. ವಸುಪಾಲ್. ಕಿರುತೆರೆಯಲ್ಲಿ ‘ಹಿಟ್ಲರ್ ಕಲ್ಯಾಣ’ ಎಂಬ ಧಾರಾವಾಹಿಯಲ್ಲಿ ಲೀಲಾ ಪಾತ್ರದಲ್ಲಿ ಮಿಂಚಿದ ದಾವಣಗೆರೆಯ ಈ ಚೆಲುವೆ, ಬಾಲ್ಯದಿಂದಲೇ ಹೀರೊಯಿನ್ ಆಗುವ ಗುಂಗಿನಲ್ಲಿ ದಿನ ಕಳೆದವರು. ಕನಸು ನನಸಾದ ಕ್ಷಣದಲ್ಲಿ ‘ಸಿನಿಮಾ ಪುರವಣಿ’ ಜೊತೆಗೆ ನೆನಪುಗಳ ಬುತ್ತಿ ಬಿಚ್ಚಿಟ್ಟರು ಮಲ್ಲಿಕಾ...

‘ಉಪಾಧ್ಯಕ್ಷ’ನಾದ ಚಿಕ್ಕಣ್ಣನ ಕೈಹಿಡಿದ ‘ಹಿಟ್ಲರ್’ ರಾಣಿ

ಎ.ಪಿ.ಎಸ್.

‘ನಾನು ದಾವಣಗೆರೆಯವಳು. ಶಿಕ್ಷಣವೂ ಅಲ್ಲೇ. ಸಿವಿಲ್ ಎಂಜಿನಿಯರ್ ಪದವೀಧರೆ ನಾನು. 2020ರಲ್ಲಿ ಎಂಜಿನಿಯರಿಂಗ್ ಪೂರ್ಣಗೊಳಿಸಿದ್ದೆ. ಶಿಕ್ಷಣ ಮುಗಿಸಿದ ಬಳಿಕ ಮೂರು ಧಾರಾವಾಹಿಗಳಿಗೆ ಆಡಿಷನ್ ನೀಡಿದ್ದೆ. ಇದರಲ್ಲಿ ‘ಹಿಟ್ಲರ್ ಕಲ್ಯಾಣ’ಕ್ಕೆ ನನ್ನನ್ನು ಆಯ್ಕೆ ಮಾಡಿದರು. ಇದಾಗಿ ಎಂಟು ತಿಂಗಳಲ್ಲೇ ‘ಉಪಾಧ್ಯಕ್ಷ’ ಸಿನಿಮಾದಲ್ಲಿ ನಟಿಸಲು ಅವಕಾಶ ಸಿಕ್ಕಿತು’ ಎನ್ನುತ್ತಾರೆ ಮಲ್ಲೈಕಾ.

ನಟನೆಯ ಆಸಕ್ತಿ ಕುರಿತು ಮಾತಿಗಿಳಿದ ಮಲ್ಲೈಕಾ, ‘ನಟನೆಯ ಬಗ್ಗೆ ನನಗೆ ಯಾವುದೇ ಜ್ಞಾನ ಇರಲಿಲ್ಲ. ಆದರೆ ನಟಿಯಾಗಬೇಕು ಎಂಬ ಆಸೆ ಬಾಲ್ಯದಿಂದಲೇ ಇತ್ತು. ಹೀರೊಯಿನ್ ಆಗಬೇಕು ಎಂದು ಮನಸ್ಸಿನಲ್ಲೇ ಫಿಕ್ಸ್ ಆಗಿದ್ದೆ. ಆ ಕ್ಷೇತ್ರದ ಬಗ್ಗೆ ಕಿಂಚಿತ್ತೂ ಗೊತ್ತಿಲ್ಲದೇ ಇದ್ದರೂ ಆಸೆ ಹೆಮ್ಮರದಂತೆ ಬೆಳೆಯುತ್ತಿತ್ತು. ಟಿ.ವಿಯಲ್ಲಿ ನಾಯಕಿಯರನ್ನು ನೋಡಿದಾಗ ನಾನೂ ಅದೇ ರೀತಿ ನಟಿಸಬೇಕು ಎಂದುಕೊಳ್ಳುತ್ತಿದ್ದೆ. ಎಲ್ಲ ಅವಾರ್ಡ್ ಕಾರ್ಯಕ್ರಮಗಳನ್ನು ನೋಡುತ್ತಿದ್ದೆ. ನನಗೆ ರಂಗಭೂಮಿಯ ಹಿನ್ನೆಲೆಯೂ ಇಲ್ಲ. ನೃತ್ಯದಲ್ಲಿ ಆಸಕ್ತಿ ಇದೆ. ಹೀಗಿದ್ದ ನನಗೆ ನೇರವಾಗಿ ಧಾರಾವಾಹಿಯಲ್ಲಿ ನಟಿಸುವ ಅವಕಾಶ ದೊರಕಿತು. ಇದು ನನ್ನ ಜೀವನದ ದೊಡ್ಡ ತಿರುವು. ಅಲ್ಲಿಂದ ಹೊಸ ಕ್ಷೇತ್ರದ ಪರಿಚಯವಾಯಿತು. ಇದೀಗ ಕಿರುತೆರೆಯಿಂದ ಬೆಳ್ಳಿತೆರೆಗೆ; ಮತ್ತೊಂದು ತಿರುವು’ ಎಂದರು.

‘ಮೊದಲಿನಿಂದಲೂ ಸಿನಿಮಾಗಳ ಬಗ್ಗೆ ಆಸಕ್ತಿ ಹೆಚ್ಚು. ಅಪ್ಪ-ಅಮ್ಮನ ಜೊತೆ ಹಲವು ಸಿನಿಮಾಗಳಿಗೆ ಹೋಗಿದ್ದೇನೆ. ಎಂತಹ ಕಾಕತಾಳೀಯ ನೋಡಿ. 2004ರಲ್ಲಿ ‘ಅಧ್ಯಕ್ಷ’ ಸಿನಿಮಾ ತೆರೆಕಂಡಿತ್ತು. ಆವಾಗ ನಾನಿನ್ನೂ 9-10ನೇ ಕ್ಲಾಸ್. ಇದೀಗ 2024ರಲ್ಲಿ ‘ಉಪಾಧ್ಯಕ್ಷ’ ತೆರೆಕಾಣುತ್ತಿದೆ. ‘ಅಧ್ಯಕ್ಷ’ ಸಿನಿಮಾ ನೋಡಿ ಖುಷಿ ಪಟ್ಟ ನಾನು ‘ಉಪಾಧ್ಯಕ್ಷ’ನಿಗೆ ಜೋಡಿಯಾಗಿದ್ದೇನೆ. ಧಾರಾವಾಹಿಯ ಅನುಭವ ಸಿನಿಮಾಗೂ ಸಹಾಯವಾಗಿದೆ. ಒಂದು ಭದ್ರ ವೇದಿಕೆ ಧಾರಾವಾಹಿಯಿಂದ ದೊರೆಯಿತು. ಧಾರಾವಾಹಿ ಮಾಡಿದ ಅನುಭವದಲ್ಲಿ ಸಿನಿಮಾದಲ್ಲಿ ನಟಿಸುವುದು ಸುಲಭವಾಗುತ್ತದೆ’ ಎಂದರು.

ಸಿನಿಮಾದತ್ತಲೇ ಒಲವು: ‘Go with the flow.. ಅನ್ನುತ್ತಾರಲ್ಲೇ ಅದನ್ನೇ ಅನುಸರಿಸಿಕೊಂಡು ಬಂದವಳು ನಾನು. ನನಗೆ ನಟಿಯಾಗಬೇಕು ಎಂಬ ಕನಸಷ್ಟೇ ಇತ್ತು. ಸಿನಿಮಾ ಮೇಲೆ ನನಗೆ ಒಲವು ಜಾಸ್ತಿ. ಕನ್ನಡ ಸಿನಿಮಾಗಳಲ್ಲಿ ನಟಿಸುವತ್ತಲೇ ನನ್ನ ಚಿತ್ತವಿದೆ. ಎಷ್ಟೋ ಜನ ನನ್ನ ಹೆಸರು ನೋಡಿ, ನಾನು ಕನ್ನಡದವಳೇ ಅಲ್ಲ ಎಂದುಕೊಂಡಿದ್ದಾರೆ. ನಾನು ಅಪ್ಪಟ ಕನ್ನಡತಿ’ ಎನ್ನುತ್ತಾರೆ ಮಲ್ಲೈಕಾ.

ಚಿಕ್ಕಣ್ಣನ ಜೊತೆ ನಟನೆಯ ಅನುಭವ ಹಂಚಿಕೊಂಡ ಮಲ್ಲೈಕಾ, ‘ನಮ್ಮಿಬ್ಬರ ಕೆಮೆಸ್ಟ್ರಿ ಅದ್ಭುತವಾಗಿತ್ತು. ಶೂಟಿಂಗ್ ವೇಳೆ ಹಲವು ದೃಶ್ಯಗಳನ್ನು ಒಂದೇ ಟೇಕ್‌ನಲ್ಲಿ ಮುಗಿಸಿದ್ದೇವೆ. ಎಷ್ಟೋ ಜನ ಏನೂ ಇಲ್ಲದೆ ದುರಹಂಕಾರ ತೋರಿಸುತ್ತಾರೆ. ಆದರೆ ಚಿಕ್ಕಣ್ಣ ಅವರು ಬಹಳ ಸರಳ, ಮೃದು ವ್ಯಕ್ತಿತ್ವದವರು. ಹೀಗಾಗಿಯೇ ಅವರು ಇಷ್ಟು ಜನರ ಪ್ರೀತಿಯನ್ನು ಸಂಪಾದಿಸಿದ್ದಾರೆ. ಅವರ ಜೊತೆ ನಟಿಸಿರುವ ಹೆಮ್ಮೆ ನನಗಿದೆ’ ಎನ್ನುತ್ತಾರೆ.

ಅಪ್ಪನ ಮುದ್ದಿನ ಮಗಳು

‘ಉಪಾಧ್ಯಕ್ಷ’ ಸಿನಿಮಾದಲ್ಲಿ ಅಪ್ಪನ ಮುದ್ದಿನ ಮಗಳಾಗಿ ನಾನು ಕಾಣಿಸಿಕೊಂಡಿದ್ದೇನೆ. ನನ್ನ ಪಾತ್ರದ ಹೆಸರು ‘ಅಂಜಲಿ’. ಆಕೆಗೆ ಸಿನಿಮಾ ಅಂದರೆ ಹುಚ್ಚು. ಆ ಹೀರೊ ಇಷ್ಟ, ನಾನು ಮದುವೆ ಆಗುವ ಹುಡುಗ ಈ ಹೀರೊ ರೀತಿ ಇರಬೇಕು ಎಂದು ಕನಸು ಕಾಣುವಾಕೆ. ಮುದ್ದಾದ ಹುಡುಗಿ ಈಕೆ. ನನ್ನ ನಿಜಜೀವನದ ಕೆಲವು ಅಂಶ ಈ ‘ಅಂಜಲಿ’ಗಿದೆ ಎನ್ನುತ್ತಾರೆ ಮಲ್ಲೈಕಾ.

‘ರಣಾಕ್ಷ’ನ ಹಾಡಿನ ಝಲಕ್...

‘ಮರೆಯದೆ ಕ್ಷಮಿಸು’ ಎಂಬ ಚಿತ್ರ ನಿರ್ದೇಶಿಸಿದ್ದ ಕೆ.ರಾಘವ ನಿರ್ದೇಶನವಿರುವ ‘ರಣಾಕ್ಷ’ ಚಿತ್ರದ ಹಾಡುಗಳ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸಾಹಿತಿ ವಿ. ನಾಗೇಂದ್ರ ಪ್ರಸಾದ್ ಟೀಸರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

‘ಕಾಮಿಡಿ ಕಿಲಾಡಿಗಳು’ ಖ್ಯಾತಿಯ ಸೀರುಂಡೆ ರಘು, ರಕ್ಷಾ ಹನುಮಂತು ಹಾಗೂ ರೋಹಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ‘ಮೊದಲೆಲ್ಲಾ ಸಿನಿಮಾಗಳು ಹೆಚ್ಚು ಇರಲಿಲ್ಲ , ಹಾಡುಗಳು ಕೂಡ ಕಮ್ಮಿ ಇತ್ತು. ಪದೇ ಪದೇ ಅದೇ ಹಾಡನ್ನು ಆಕಾಶವಾಣಿ ಹಾಗೂ ಸಮಾರಂಭಗಳಲ್ಲಿ ಕೇಳಿದಾಗ ಸದಾ ನೆನಪಿಗೆ ಬರುತ್ತಿತ್ತು. ಈಗ ವರ್ಷಕ್ಕೆ ಸುಮಾರು 300 ಚಿತ್ರಗಳು ಬರುತ್ತಿವೆ. ಎಷ್ಟು ಹಾಡುಗಳು ಬಂದಿರಬೇಕು ಯೋಚಿಸಿ. ಈ ಚಿತ್ರದ ಮೂರು ಹಾಡುಗಳು ಹೊಸತನದ ಸದ್ದನ್ನ ಮೂಡಿಸುತ್ತದೆ. ಸಂಗೀತ ನಿರ್ದೇಶಕ ವಿಶಾಲ್ ಅಲಾಪ್ ಕೆಲಸ ಸೊಗಸಾಗಿದೆ’ ಎಂದರು ನಾಗೇಂದ್ರ ಪ್ರಸಾದ್.

‘‘ರಣಾಕ್ಷ’ ಎಂದರೆ ಹದ್ದಿನಂತೆ ಕಣ್ಣಿಟ್ಟು ಕಾಯುವವನು ಎಂದರ್ಥ, ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಜೊತೆಗೆ ಮಾಸ್ ಚಿತ್ರ. ಮೊದಲ ಸಲ ನಟ ರಘು ಕಾಮಿಡಿ ಬಿಟ್ಟು, ಕ್ಲಾಸ್, ಮಾಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಾಯಕಿ ರಕ್ಷಾ ಪಾತ್ರ ವಿಶೇಷವಾಗಿದೆ. ಇಡೀ ಕಥೆ ಹುಡುಗಿ ಮೇಲೆ ನಿಂತಿರುತ್ತೆ. ಸಕಲೇಶಪುರ, ಹೊನ್ನಾವರ, ಮೂಡಬಿದಿರೆ, ಕಾರ್ಕಳ ಸುತ್ತಮುತ್ತ ಶೂಟಿಂಗ್ ನಡೆಸಿದ್ದೇವೆ’ ಎಂದರು ನಿರ್ದೇಶಕರು.

ಎಚ್.ಎಸ್.ರಾಮು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಚಿತ್ರದಲ್ಲಿ 3 ಹಾಡು, 3 ಸಾಹಸ ದೃಶ್ಯಗಳಿದ್ದು, ವಿಶಾಲ್ ಆಲಾಪ್ ಸಂಗೀತ, ದೀಪಕ್ ಕುಮಾರ್ ಛಾಯಾಗ್ರಹಣವಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು, ಫೆಬ್ರುವರಿಯಲ್ಲಿ ಚಿತ್ರವನ್ನು ತೆರೆಗೆ ತರಲು ತಂಡ ಆಲೋಚಿಸಿದೆ.

ರಕ್ಷಾ, ರಘು, ರೋಹಿ

‘ಜಸ್ಟ್ ಪಾಸ್’ ಆದವರ ಕಥೆ!

ಈ ಹಿಂದೆ ‘ದೊಡ್ಡಹಟ್ಟಿ ಬೋರೇಗೌಡ’ ಎಂಬ ಸಿನಿಮಾ ಮಾಡಿ ಚಂದನವನದಲ್ಲಿ ಗುರುತಿಸಿಕೊಂಡಿರುವ ನಿರ್ದೇಶಕ ಕೆ.ಎಂ.ರಘು ನಿರ್ದೇಶನದ ‘ಜಸ್ಟ್ ಪಾಸ್’ ಚಿತ್ರದ ಹಾಡೊಂದನ್ನು ಶಾಸಕ ಪ್ರದೀಪ್ ಈಶ್ವರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

ರಾಯ್ಸ್ ಎಂಟರ್‌ಟೈನ್ಮೆಂಟ್ ಲಾಂಛನದಲ್ಲಿ ಕೆ.ವಿ.ಶಶಿಧರ್ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಶ್ರೀ ನಾಯಕ. ಪ್ರಣತಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ರಂಗಾಯಣ ರಘು, ಸಾಧುಕೋಕಿಲ, ಪ್ರಕಾಶ್ ತುಮಿನಾಡು, ದೀಪಕ್ ರೈ, ದಾನಪ್ಪ, ಗೋವಿಂದೇಗೌಡ ಸೇರಿದಂತೆ ದೊಡ್ಡ ತಾರಾಬಳಗವೇ ಈ ಚಿತ್ರದಲ್ಲಿದೆ.

‘ಜಸ್ಟ್ ಪಾಸ್ ಆದವರಿಗಾಗಿಯೇ ಒಂದು ಕಾಲೇಜು ಎಂಬ ಸಿನಿಮಾದ ಪರಿಕಲ್ಪನೆ ಸೊಗಸಾಗಿದೆ. ಹಾಡುಗಳು ಕೂಡ ಅರ್ಥಪೂರ್ಣವಾಗಿವೆ. ನಮ್ಮ ಪರಿಶ್ರಮ ಅಕಾಡೆಮಿ ಕೂಡ ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಕೆಲಸ ಮಾಡುತ್ತಿದೆ. ಇಂತಹ ಸಿನಿಮಾಗಳು ಹೆಚ್ಚು ಹೆಚ್ಚು ಬರಬೇಕು’ ಎಂದರು ಪ್ರದೀಪ್ ಈಶ್ವರ್.

ಚಿತ್ರಕ್ಕೆ ಹರ್ಷವರ್ಧನ್ ರಾಜ್ ಸಂಗೀತ, ಸುಜಯ್ ಕುಮಾರ್ ಛಾಯಾಚಿತ್ರಗ್ರಹಣವಿದೆ. ಫೆಬ್ರುವರಿಯಲ್ಲಿ ಸಿನಿಮಾ ಬಿಡುಗಡೆಗೆ ಚಿತ್ರತಂಡ ನಿರ್ಧರಿಸಿದೆ.

ಪ್ರಣತಿ

ನೈನಾ

‘ಪ್ರಣಯ’ ಪಕ್ಷಿಗಳಾದ ರಾಜವರ್ಧನ್–ನೈನಾ

ಈ ಹಿಂದೆ ‘ಬಿಚ್ಚುಗತ್ತಿ’ ಸಿನಿಮಾದಲ್ಲಿ ನಟಿಸಿದ್ದ ನಟ ರಾಜವರ್ಧನ್, ನೈನಾ ಗಂಗೂಲಿ ಜೋಡಿಯಾಗಿ ನಟಿಸಿರುವ ‘ಪ್ರಣಯಂ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ‘ಪಲ್ಲಕ್ಕಿ’, ‘ಗಣಪ’, ‘ಪಾರಿಜಾತ’ದಂಥ ಚಿತ್ರಗಳನ್ನು ನೀಡಿದ ಪರಮೇಶ್ ಚಿತ್ರಕ್ಕೆ ಬಂಡವಾಳ ಹೂಡಿದ್ದು, ಎಸ್. ದತ್ತಾತ್ರೇಯ ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ಪರಮೇಶ್ ತುಂಬಾ ಉತ್ಸಾಹವಿರುವಂತಹ ನಿರ್ಮಾಪಕ. ಮನೋಮೂರ್ತಿ ಹಾಗೂ ನಮ್ಮ ದಾಂಪತ್ಯಕ್ಕೆ 17 ವರ್ಷವಾಯ್ತು. ಆಗಿನ ಕುತೂಹಲ, ಚಡಪಡಿಕೆ ಈಗಲೂ ಇದೆ’ ಎಂದು ತಂಡಕ್ಕೆ ಶುಭ ಹಾರೈಸಿದರು ಜಯಂತ್ ಕಾಯ್ಕಿಣಿ.

‘ನಾನು ಈವರೆಗೆ 9 ಸಿನಿಮಾ ಮಾಡಿದ್ದೇನೆ. ಆದರೂ ಗಾಂಧಿನಗರದಲ್ಲಿ ನಿರ್ಮಾಪಕರಿಗೆ ನೆಲೆಯೆ ಇಲ್ಲದಾಗಿದೆ. ನಮ್ಮದು ತುಂಬಾ ಕ್ರಿಟಿಕಲ್ ಫೀಲ್ಡ್. ಈಗ ಸಿನಿಮಾ ಹೇಗೋ ಮಾಡಿಬಿಡಬಹುದು. ರಿಲೀಸ್ ಮಾಡೋದು ತುಂಬಾ ಕಷ್ಟ. ಬಿಡುಗಡೆ ದಿನಾಂಕ ಘೋಷಣೆ ಮಾಡಲು ಭಯವಾಗುತ್ತದೆ. ಬಿಡುಗಡೆಗೆ ಸಾಕಷ್ಟು ಹಣಬೇಕು. 3 ಸಲ ಈ ಚಿತ್ರ ತೆರೆಗೆ ತರಲು ಯತ್ನಿಸಿ ಹಿಂದೆ ಸರಿದಿರುವೆ. ಈಸಲ ಧೈರ್ಯದಿಂದ ಮುನ್ನುಗ್ಗುತ್ತಿದ್ದೇವೆ’ ಎಂದು ಸಂಕಷ್ಟತೋಡಿಕೊಂಡರು ನಿರ್ಮಾಪಕರು.

ಫೆಬ್ರುವರಿ 9ಕ್ಕೆ ರಾಜ್ಯಾದ್ಯಂತ ತೆರೆಕಾಣುತ್ತಿದೆ. ಚಿತ್ರದಲ್ಲಿ 5 ಹಾಡುಗಳಿದ್ದು, ಮನೋಮೂರ್ತಿ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ. ಜಯಂತ್ ಕಾಯ್ಕಿಣಿ ಅವರು ಮೂರು ಹಾಡುಗಳನ್ನು ಬರೆದಿದ್ದಾರೆ. ವಿ.ನಾಗೇಶ್ ಆಚಾರ್ಯ ಛಾಯಾಚಿತ್ರಗ್ರಹಣವಿದೆ.

ಬರ್ತಿದ್ದಾನೆ ‘ಆರಾಮ್ ಅರವಿಂದ ಸ್ವಾಮಿ’

ಆರಾಮ್ ಅರವಿಂದ್ ಸ್ವಾಮಿ
ಅನೀಶ್

ಅಭಿಷೇಕ್ ಶೆಟ್ಟಿ ಹಾಗೂ ಅನೀಶ್ ತೇಜೇಶ್ವರ್ ಕಾಂಬಿನೇಷ್‌ನಲ್ಲಿ ಮೂಡಿಬರುತ್ತಿರುವ ‘ಆರಾಮ್ ಅರವಿಂದ್ ಸ್ವಾಮಿ’ ಸಿನಿಮಾ ಮಾರ್ಚ್ ಮೊದಲ ವಾರದಲ್ಲಿ ಬಿಡುಗಡೆಯಾಗುವ ಸಾಧ್ಯತೆ ಇದೆ.

‘ನಮ್ ಗಣಿ ಬಿಕಾಂ ಪಾಸ್, ‘ಗಜಾನನ ಅಂಡ್ ಗ್ಯಾಂಗ್’ ಸಿನಿಮಾಗಳ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಗುರುತಿಸಿಕೊಂಡಿರುವ ಅಭಿಷೇಕ್ ಶೆಟ್ಟಿ ಆ್ಯಕ್ಷನ್ ಕಟ್ ಹೇಳುತ್ತಿರುವ ಮೂರನೇ ಸಿನಿಮಾ ಇದಾಗಿದೆ. ಇತ್ತೀಚೆಗೆ ಸಿನಿಮಾದ ಟೈಟಲ್ ಹಾಡು ಬಿಡುಗಡೆಯಾಗಿದ್ದು, ಪ್ರೇಕ್ಷಕರನ್ನು ಸೆಳೆಯುತ್ತಿದೆ. ನಟ ಅನೀಶ್ ತೇಜೇಶ್ವರ್, ‘ನಮ್ ಏರಿಯಾಲಿ ಒಂದ್ ದಿನ’, ‘ಪೊಲೀಸ್ ಕ್ವಾಟ್ರಸ್’, ‘ಅಕಿರ’, ‘ವಾಸು ನಾನ್ ಪಕ್ಕಾ ಕಮರ್ಷಿಯಲ್’, ‘ರಾಮಾರ್ಜುನ’ ಹೀಗೆ ಪ್ರತಿ ಸಿನಿಮಾದಲ್ಲೂ ಭಿನ್ನ ಪಾತ್ರಗಳ ಮೂಲಕ ಗಾಂಧಿನಗರದಲ್ಲಿ ಸದ್ದು ಮಾಡಿದವರು. ರೊಮ್ಯಾಂಟಿಕ್ ಕಾಮಿಡಿ ಜಾನರ್‌ನ ಈ ಸಿನಿಮಾದಲ್ಲಿ ಅವರಿಗೆ ಜೋಡಿಯಾಗಿ ಮಿಲನ ನಾಗರಾಜ್ ಹಾಗೂ ಹೃತಿಕಾ ಶ್ರೀನಿವಾಸ್ ನಟಿಸಿದ್ದಾರೆ.

‘ಆರಾಮ್ ಅರವಿಂದ ಸ್ವಾಮಿ’ ಟೈಟಲ್ ಟ್ರ್ಯಾಕ್‌ಗೆ ನಾಗಾರ್ಜುನ್ ಶರ್ಮಾ ಸಾಹಿತ್ಯವಿದ್ದು, ನಿಶಾನ್ ರೈ ಧ್ವನಿಯಾಗಿದ್ದಾರೆ. ಅರ್ಜುನ್ ಜನ್ಯ ಸಂಗೀತ ಈ ಹಾಡಿಗಿದೆ. ನಾಯಕನ ಗುಣವನ್ನು ವರ್ಣಿಸುವ ಈ ಹಾಡಿಗೆ, ಬಾಬಾ ಭಾಸ್ಕರ್ ಮಾಸ್ಟರ್ ನೃತ್ಯ ನಿರ್ದೇಶನದಲ್ಲಿ ಅನೀಶ್ ಮನ ಸೆಳೆಯುವ ನೃತ್ಯ ಮಾಡಿದ್ದಾರೆ. ಶ್ರೀಕಾಂತ್ ಪ್ರಸನ್ನ ಹಾಗೂ ಪ್ರಶಾಂತ್ ರೆಡ್ಡಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ವೈವಿಬಿ ಶಿವಸಾಗರ್ ಛಾಯಾಚಿತ್ರಗ್ರಹಣ, ಉಮೇಶ್ ಆರ್.ಬಿ. ಸಂಕಲನ ಚಿತ್ರಕ್ಕಿದೆ.

‘ಉಸಿರು’ ಹಿಡಿದ ತಿಲಕ್

ಪ್ರಿಯಾ ಹೆಗ್ಡೆ

ನಟ ತಿಲಕ್, ಪ್ರಿಯಾ ಹೆಗ್ಡೆ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿರುವ ‘ಉಸಿರು’ ಚಿತ್ರದ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಆರ್.ಎಸ್.ಪಿ.ಪ್ರೊಡಕ್ಷನ್ಸ್ ಮೂಲಕ ಲಕ್ಷ್ಮಿ ಹರೀಶ್ ಅವರು ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಪ್ರಭಾಕರ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

‘ಈಗಾಗಲೇ ಒಂದೆರಡು ತಮಿಳು ಸಿನಿಮಾಗಳಿಗೆ ಸಹನಿರ್ದೇಶಕನಾಗಿ ಕೆಲಸ ಮಾಡಿದ್ದು, ಈ ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕನಾಗುತ್ತಿದ್ದೇನೆ. ಓರ್ವ ಬೇಜವಾಬ್ದಾರಿ ಪೊಲೀಸ್ ಅಧಿಕಾರಿ ತನ್ನ ಹೆಂಡತಿಗೆ ಅನಾಮಿಕ ವ್ಯಕ್ತಿಯಿಂದ ಪ್ರಾಣಕ್ಕೆ ಆಪತ್ತು ಬಂದಾಗ ಆಕೆಯನ್ನು ಕಾಪಾಡಿಕೊಳ್ಳುತ್ತಾನೆ, ತನ್ನ ತಾಯಿಯನ್ನು ಕೊಂದವರ ಮೇಲೆ ಹೇಗೆ ಪ್ರತೀಕಾರ ತೀರಿಸಿಕೊಳ್ಳುತ್ತಾನೆ ಎಂಬುದು ಚಿತ್ರದ ಕಥೆ. ಶೀಘ್ರದಲ್ಲಿ ಮಡಿಕೇರಿಯಲ್ಲಿ ಚಿತ್ರೀಕರಣ ಪ್ರಾರಂಭಿಸುತ್ತೇವೆ’ ಎಂದರು ನಿರ್ದೇಶಕರು.

‘ಇದೊಂದು ಸೈಕೋ ಥ್ರಿಲ್ಲರ್ ಕಥಾಹಂದರ ಇರುವ ಚಿತ್ರವಾಗಿದ್ದು, ‘ಉಸಿರು’ ಶೀರ್ಷಿಕೆ ನಮ್ಮ ಕಥೆಗೆ ಸೂಕ್ತವಾಗಿದೆ. ತಿಲಕ್ ಒಬ್ಬ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ನಟಿಸುತ್ತಿದ್ದಾರೆ. ರಘು ರಮಣಕೊಪ್ಪ, ರಂಗಾಯಣ ರಘು ನಟಿಸುತ್ತಿದ್ದಾರೆ. ಮುಖ್ಯವಾಗಿ 9 ಪಾತ್ರಗಳ ಮೇಲೆ ಚಿತ್ರದ ಕಥೆ ಸಾಗುತ್ತದೆ’ ಎಂದು ಅವರು ತಿಳಿಸಿದರು.

ಆರ್‌ಎಸ್‌ಜಿ ನಾರಾಯಣ ಸಂಗೀತ, ಹರೀಶ್ ಕೊಮ್ಮೆ ಸಂಕಲನ ಚಿತ್ರಕ್ಕಿದೆ.

ಕೋಳಿ ಪಂದ್ಯದ ‘ಧರಣಿ’

ಈ ಹಿಂದೆ ‘ಅನಂತು ವರ್ಸಸ್ ನುಸ್ರತ್’ ಸಿನಿಮಾ ನಿರ್ದೇಶಿಸಿದ್ದ ಸುಧೀರ್ ಶ್ಯಾನುಭೋಗ್ ‘ಧರಣಿ’ ಕುಳಿತಿದ್ದಾರೆ. ಅವರ ಈ ಹೊಸ ಚಿತ್ರದ ಪೋಸ್ಟರ್ ಇತ್ತೀಗಷ್ಟೇ ಬಿಡುಗಡೆಗೊಂಡಿದೆ.

‘ಅನವಶ್ಯ ಫೈಟ್‌ಗಳನ್ನು ತುರುಕಲು ಇಷ್ಟವಿಲ್ಲ. ಈ ಚಿತ್ರದಲ್ಲಿ ಸನ್ನಿವೇಶಗಳಿಗೆ ತಕ್ಕಂತೆ ಐದು ಫೈಟ್‌ಗಳಿವೆ ಮತ್ತು ಒಂದಕ್ಕಿಂತ ಒಂದು ಬೇರೆ ರೂಪದಲ್ಲಿವೆ’ ಎನ್ನುತ್ತಾರೆ ನಿರ್ದೇಶಕರು.

ಮನೋಜ್ ಚಿತ್ರದ ನಾಯಕ. ಎ ಕ್ಯೂಬ್ ಫಿಲ್ಮ್ಸ್ ಲಾಂಛನದಲ್ಲಿ ತಯಾರಾಗುತ್ತಿರುವ ಚಿತ್ರಕ್ಕೆ ಶಶಾಂಕ್ ಶೇಷಗಿರಿ ಸಂಗೀತ ಸಂಯೋಜನೆ ಮಾಡಿದ್ದಾರೆ. ಅರುಣ್ ಸುರೇಶ್ ಛಾಯಾಚಿತ್ರಗ್ರಹಣವಿರುವ ಈ ಚಿತ್ರದಲ್ಲಿ ಮನೋಜ್‌ಗೆ ನಾಯಕಿಯಾಗಿ ಹೊಸ ಪ್ರತಿಭೆ ರವೀಕ್ಷಾ ಶೆಟ್ಟಿ ಅಭಿನಯಿಸುತ್ತಿದ್ದಾರೆ.

‘ಪಾತ್ರಗಳೇ ನನ್ನನ್ನು ಆಯ್ಕೆ ಮಾಡಿಕೊಳ್ಳುತ್ತಿವೆ’

ತಮ್ಮ 50ನೇ ಸಿನಿಮಾದಲ್ಲಿ ಇನ್‌ಸ್ಪೆಕ್ಟರ್ ‘ಸೀತಾರಾಮ್ ಬಿನೋಯ್’ ಆಗಿ ಗಮನಸೆಳೆದಿದ್ದ ನಟ ವಿಜಯ ರಾಘವೇಂದ್ರ ಅವರು ‘ಕೇಸ್ ಆಫ್ ಕೊಂಡಾಣ’ದಲ್ಲಿ ‘ವಿಲ್ಲನ್’ ಆಗಿ ಕಾಣಿಸಿಕೊಂಡಿದ್ದಾರೆ. ಇಂದು(ಜ.26) ಈ ಸಿನಿಮಾ ತೆರೆಕಂಡಿದೆ. ಪಾತ್ರದ ವಿಚಾರದಲ್ಲಿ ತಮ್ಮನ್ನು ತಾವು ಪ್ರಯೋಗಗಳಿಗೆ ಒಡ್ಡಿಕೊಳ್ಳುತ್ತಿರುವುದರ ಕುರಿತು ವಿಜಯ ರಾಘವೇಂದ್ರ ಅವರಿಲ್ಲಿ ಮಾತನಾಡಿದ್ದಾರೆ.

ವಿಜಯ್ ರಾಘವೇಂದ್ರ

ಎ.ಪಿ.ಎಸ್

●‘ಸೀತಾರಾಮ್ ಬಿನೋಯ್’ ಯಶಸ್ಸೇ ಈ ಭಾಗಕ್ಕೆ ಕಾರಣವೇ?

ಖಂಡಿತವಾಗಿಯೂ. ಅದರ ಯಶಸ್ಸೇ ಈ ಸಿನಿಮಾವಾಗಲು ಧೈರ್ಯ ಕೊಟ್ಟಿತು. ‘ಸೀತಾರಾಮ್..’ ನನ್ನ 50ನೇ ಸಿನಿಮಾ. ಮೊದಲು ಈ ಸಿನಿಮಾ ಕಿರುತೆರೆಯಲ್ಲಿ ಪ್ರಸಾರವಾಯಿತು. ನಂತರ ಚಿತ್ರಮಂದಿರಗಳಲ್ಲಿ ಬಿಡುಗಡೆಗೊಂಡಿತು. ಇದಾದ ಬಳಿಕ ಒಟಿಟಿಯಲ್ಲಿ ತೆರೆಕಂಡು ಅನೇಕರನ್ನು ತಲುಪಿತು. ಅಂದು ‘ಸೀತಾರಾಮ್ ಬಿನೋಯ್’ ಸಿನಿಮಾ ಮಾಡಿದ್ದೆ, ಒಟಿಟಿಗೆಂದು. ಕೋವಿಡ್ ಲಾಕ್‌ಡೌನ್ ತೆರವಾದ ಕೂಡಲೇ ಸುಮಾರು ಮೂರು ವಾರಗಳಲ್ಲಿ ಶಿವಮೊಗ್ಗ, ತೀರ್ಥಹಳ್ಳಿ ಸುತ್ತಮುತ್ತ ಈ ಸಿನಿಮಾದ ಚಿತ್ರೀಕರಣ ನಡೆಸಿದ್ದೆವು. ಚಿತ್ರಮಂದಿರಗಳಲ್ಲಿ ಅಂದು ಶೇ 50ರಷ್ಟು ಮಾತ್ರ ಸೀಟುಗಳ ಭರ್ತಿಗೆ ಅವಕಾಶವಿತ್ತು. ಈ ಜಂಜಾಟವೇ ಬೇಡ ಎಂದು ಒಟಿಟಿಯಲ್ಲಷ್ಟೇ ಬಿಡುಗಡೆಗೆ ನಿರ್ಧರಿಸಿದ್ದೆವು. ಬಳಿಕ ಈ ಸಿನಿಮಾವನ್ನು ಜನ ಹೇಗೆ ಮೆಚ್ಚಿಕೊಂಡರು ಎನ್ನುವುದು ನಿಮಗೆ ತಿಳಿದಿದೆ.

●‘ಸೀತಾರಾಮ್’ ಪಾತ್ರ ಈ ಸಿನಿಮಾ ಮೇಲೆ ಹೇಗೆ ಪ್ರಭಾವ ಬೀರಿದೆ?

‘ಸೀತಾರಾಮ್’ ಒಬ್ಬ ತನ್ನನ್ನು ತಾನು ಎಂತಹ ಸಂದರ್ಭದಲ್ಲೂ ನಿಯಂತ್ರಣದಲ್ಲಿ ಇಟ್ಟುಕೊಳ್ಳಬಲ್ಲ, ಪ್ರಬುದ್ಧತೆ ಇರುವ ಪಾತ್ರ. ಅನುಭವಗಳನ್ನು ಪಡೆದು ಇನ್ನೊಂದು ಕಡೆ ನಿಯುಕ್ತಿಗೊಳ್ಳುವ ಪಾತ್ರವದು. ಅದೇ ‘ಕೇಸ್ ಆಫ್ ಕೊಂಡಾಣ’ದ ‘ವಿಲ್ಲನ್’, ಸೀತಾರಾಮ್‌ಗಿಂತ ಭಿನ್ನವಾಗಿದ್ದಾನೆ. ಆತ ಹೆಚ್ಚು ಇಂಪಲ್ಸಿವ್. ಕೋಪಿಷ್ಟ, ನಿರ್ಧಾರಗಳಲ್ಲಿ ಆತುರವನ್ನು ಈತನಲ್ಲಿ ಕಾಣಬಹುದು. ಜೀವನದಲ್ಲಿ ಹೆಚ್ಚಿನ ಆಸೆ ಇರುವಾತ. ಈ ಎರಡೂ ಸಿನಿಮಾಗಳಿಗೆ ಯಾವುದೇ ಸಂಬಂಧವಿಲ್ಲ. ‘ಕೇಸ್ ಆಫ್ ಕೊಂಡಾಣ’ ಒಂದು ಪ್ರತ್ಯೇಕ ಸಿನಿಮಾ. ಬೇರೆಯದೇ ಕಥೆ. ಬೇರೇಯದೇ ಪಾತ್ರಗಳು ಇಲ್ಲಿವೆ. ಇದೊಂದು ಹೈಪರ್‌ಲಿಂಕ್ ಇನ್ವೆಸ್ಟಿಗೇಷನ್ ಸಿನಿಮಾವಾಗಿದ್ದು, ಹಲವು ಕಥೆಗಳ ಪಯಣವಿದು.

● ವಿಜಯ ರಾಘವೇಂದ್ರ ಪ್ರಯೋಗಳಿಗೆ ಒಡ್ಡಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ...

ಎಲ್ಲರೂ ಏನಂದುಕೊಂಡಿದ್ದಾರೆ ಎಂದರೆ ನಾನು ಆ ಪಾತ್ರಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ ಎಂದು. ಆದರೆ ವಾಸ್ತವದಲ್ಲಿ ಆ ಪಾತ್ರಗಳು ನನ್ನನ್ನು ಆಯ್ಕೆ ಮಾಡಿಕೊಂಡಿವೆ. ‘ಈ ಪಾತ್ರವನ್ನು ವಿಜಯ ರಾಘವೇಂದ್ರ ಅವರು ನಿಭಾಯಿಸಬಹುದು’ ಅಥವಾ ‘ಈ ಪಾತ್ರವನ್ನು ವಿಜಯ ರಾಘವೇಂದ್ರ ಅವರೇ ಮಾಡಬೇಕು’ ಎನ್ನುವ ಅನಿಸಿಕೆ ನಿರ್ದೇಶಕರಿಗೆ, ನಿರ್ಮಾಪಕರಿಗೆ ಇದೆ. ಇದು ನನಗೆ ಬಹಳ ದೊಡ್ಡ ಖುಷಿ ನೀಡುವ ವಿಷಯ. ಈ ಬದಲಾವಣೆ ಆರಂಭವಾಗಿದ್ದು ‘ಶಿವಯೋಗಿ ಶ್ರೀಪುಟ್ಟಯ್ಯಜ್ಜ’ ಸಿನಿಮಾದಿಂದ ಎಂದುಕೊಳ್ಳುತ್ತೇನೆ. ಅದಾದ ಬಳಿಕ ‘ಮಾಲ್ಗುಡಿ ಡೇಸ್’ ಸಿನಿಮಾ ಕೊಟ್ಟರು. ಅದರಲ್ಲಿ 65–70 ವರ್ಷದ ಹಿರಿಯನಾಗಿ ಕಾಣಿಸಿಕೊಂಡೆ. ಇವೆಲ್ಲ ಆದ ಬಳಿಕ ಭಿನ್ನ ಭಿನ್ನವಾದ ಕಥೆಗಳು, ಪಾತ್ರಗಳು ನನ್ನನ್ನು ಹುಡುಕಿಕೊಂಡು ಬರುತ್ತಿವೆ.

‘ಸೀತಾರಾಮ್ ಬಿನೋಯ್’ ಮತ್ತೊಂದು ತಿರುವು ನೀಡಿತು. ‘ಈ ಪಾತ್ರ ಮಾಡಿದರೆ ವಿಜಯ ರಾಘವೇಂದ್ರ ಮಾಡಬೇಕು’ ಎಂದು ಜನ ಹೇಳುವ ಸಿನಿಮಾ ಮಾಡಬೇಕು ಎನ್ನುವ ಆಸೆಯಿತ್ತು. ಈ ರೀತಿ ಪಾತ್ರ ‘ಸೀತಾರಾಮ್..’ನಲ್ಲಿ ಸಿಕ್ಕಿತು.

ನಾನೊಬ್ಬ ರಂಗ ಕಲಾವಿದ, ಗಿಫ್ಟೆಟ್ ಆ್ಯಕ್ಟರ್, ಬಾರ್ನ್ ಆಕ್ಟರ್ ಆಗದೇ ಇರಬಹುದು. ಆದರೆ ಖಂಡಿತವಾಗಿಯೂ ನಾನೊಬ್ಬ ನಿರ್ದೇಶಕರ ಕಲಾವಿದ. ನಿರ್ದೇಶಕರಿಗೆ ಏನು ಬೇಕು ಎನ್ನುವುದನ್ನು ಅರ್ಥಮಾಡಿಕೊಳ್ಳುತ್ತೇನೆ. ಅವರು ನನ್ನಲ್ಲಿಟ್ಟಿರುವ ನಂಬಿಕೆಯೇ ನನಗೆ ವಿಶ್ವಾಸ. ಅವರ ಹೆಗಲ ಮೇಲೆ ಕೈಯಿಟ್ಟು ಪ್ರತಿ ಪಾತ್ರವನ್ನು ನಿಭಾಯಿಸಲು ಪ್ರಯತ್ನಪಡುತ್ತೇನೆ.

●‘ಕೇಸ್ ಆಫ್ ಕೊಂಡಾಣ’ದ ಆರಂಭಿಕ ಹೆಜ್ಜೆಗಳು..

ನನಗೆ ಈ ದೇವಿಪ್ರಸಾದ್ ಶೆಟ್ಟಿ ಅವರ ತಂಡ ಬಹಳ ಇಷ್ಟ. ಬಹಳ ಪ್ರಾಮಾಣಿಕವಾಗಿ ದುಡಿಯುವ, ಕಷ್ಟಪಡುವ ತಂಡ. ನನಗೋಸ್ಕರ ಸಿನಿಮಾ ಮಾಡಬೇಕು ಎನ್ನುವ ಆಸೆ ಹೊತ್ತ ತಂಡವಿದು. ಇದಕ್ಕಿಂತ ಇನ್ನೇನು ಬೇಕು. ಈ ವಿಜಯ ರಾಘವೇಂದ್ರ ಅವರಿಗೆ ಬಲು ಇಷ್ಟ. ಎಲ್ಲರೂ ನನ್ನನ್ನು ‘ಚಿನ್ನಾರಿಮುತ್ತ’ ಎಂದು ಗುರುತಿಸುತ್ತಾರೆ. ಆದರೆ ಅದರ ಹೊರಗಡೆ ಇರುವ ನನ್ನ ನಟನೆಯ ಸಾಮರ್ಥ್ಯವನ್ನು ಗುರುತಿಸುವ ತಂಡವಿದು. ಹೀಗೆ ಈ ಸಿನಿಮಾ ಆರಂಭವಾಯಿತು. ಆರಂಭಿಕ ಹಂತದಲ್ಲಿ ‘ಕೇಸ್ ಆಫ್ ಕೊಂಡಾಣ’ ನಮ್ಮ ಯೋಜನೆಯಾಗಿರಲಿಲ್ಲ. ಬೇರೊಂದು ಪ್ರಾಜೆಕ್ಟ್ ಮಾಡುವುದಕ್ಕೆ ಮುಂದಾಗಿದ್ದೆವು. ಅದು ಬಹಳ ದೊಡ್ಡ ಯೋಜನೆ. ಈಗ ಇದೇ ತಂಡದ ಜೊತೆಗೂಡಿ ಈ ಬೃಹತ್ ಪ್ರಾಜೆಕ್ಟ್ ಆರಂಭಿಸಲಿದ್ದೇನೆ. ಈ ತಂಡ, ಮೊದಲ ಸಿನಿಮಾಗಿಂತಲೂ ಇನ್ನೊಂದು ಹಂತಕ್ಕೆ ಹೆಜ್ಜೆ ಇಡಬೇಕು ಎನ್ನುವ ತುಡಿತ ಹೊಂದಿದೆ.

ದೇವಿಪ್ರಸಾದ್ ಶೆಟ್ಟಿ ಅವರ ಜೊತೆಗೆ ಇದು ನನ್ನ ಎರಡನೇ ಸಿನಿಮಾ. ಸಾಮಾನ್ಯವಾಗಿ ನಿರ್ದೇಶಕರು ‘ಹೀಗೊಂದು ಕಥೆ ಇದೆ. ಮೊದಲು ಶೂಟಿಂಗ್ ಮುಗಿಸೋಣ’ ಎನ್ನುವವರು. ಆದರೆ ದೇವಿಪ್ರಸಾದ್ ಶೆಟ್ಟಿ ಅವರು ಬಿಡುಗಡೆಯನ್ನು ತಲೆಯಲ್ಲಿಟ್ಟುಕೊಂಡು ಹೆಜ್ಜೆ ಇಡುವವರು. ಸಿನಿಮಾ ರಿಲೀಸ್ ಆಗಿದೆ ಎಂದುಕೊಂಡೇ ಮುಂದುವರಿಯುವವರು. ಪ್ರಸ್ತುತ, ಪ್ರೇಕ್ಷಕರನ್ನು ಚಿತ್ರಮಂದಿರಗಳಿಗೆ ಸೆಳೆಯುವುದೇ ಸವಾಲಾಗಿದೆ. ಇವನ್ನೆಲ್ಲ ಮನಸ್ಸಿನಲ್ಲಿ ಇಟ್ಟುಕೊಂಡು, ಸಿನಿಮಾವನ್ನು ಅರ್ಥ ಮಾಡಿಕೊಂಡಿರುವ ವ್ಯಕ್ತಿ.

● ಮುಂದೆ ಬಿಡುಗಡೆಗೆ ಸಜ್ಜಾಗಿರುವ ಸಿನಿಮಾಗಳು..

‘ಜೋಗ್ 101’ ಹಾಗೂ ಗೋವಾ ಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡ, ಒಳ್ಳೆಯ ಪ್ರಶಂಸೆ ಪಡೆದಿರುವ ‘ಗ್ರೇ ಗೇಮ್ಸ್’ ಬಿಡುಗಡೆಗೆ ಸಿದ್ಧವಿದೆ. ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಇವುಗಳು ಬಿಡುಗಡೆಯಾಗಬಹುದು. ❖

ವಿನಿತಾ ನಾಯರ್

ಬದುಕಿನ ‘ತಿರುವು’ಗಳ ಕಥನ

ಸಾಕಷ್ಟು ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿರುವ ಕೆವಿನ್.ಎಂ ಆ್ಯಕ್ಷನ್–ಕಟ್ ಹೇಳಲು ಸಿದ್ಧರಾಗಿದ್ದಾರೆ. ಅವರ ನಿರ್ದೇಶನದ ಮೊದಲ ಚಿತ್ರ ‘ತಿರುವು’ ಇತ್ತೀಚೆಗಷ್ಟೇ ಪ್ರಾರಂಭಗೊಂಡಿದೆ. ಸಲ್ಗರ್ ಫಿಲ್ಮ್ಸ್ ಅಡಿಯಲ್ಲಿ ಶಿವಮೊಗ್ಗದ ಪ್ರತಿಮಾ ಬಸವರಾಜ ಸಲ್ಗರ್ ಬಂಡವಾಳ ಹೂಡುತ್ತಿದ್ದಾರೆ. ಚಿತ್ರರಂಗಕ್ಕೆ ಹೊಸಬರಾದ ಬಸವರಾಜ.ಎ.ಎಸ್ ನಾಯಕ ಮತ್ತು ವಿನಿತಾ ನಾಯರ್ ಜೋಡಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

‘ಚಿತ್ರದ ಶೀರ್ಷಿಕೆ ಹೇಳುವಂತೆ ಹಳ್ಳಿಯಲ್ಲಿದ್ದ ಯುವ ದಂಪತಿ ಸಣ್ಣದೊಂದು ಕನಸು ಕಟ್ಟಿಕೊಂಡು ಪಟ್ಟಣಕ್ಕೆ ಬರುತ್ತಾರೆ. ಇಲ್ಲಿಗೆ ಬಂದಾಗ ತಮಗೆ ಅರಿವಿಲ್ಲದಂತೆ ತೊಂದರೆಗೆ ಸಿಲುಕುತ್ತಾರೆ. ಇವರ ಸಹಾಯಕ್ಕೆ ಒಬ್ಬರು ಬರುತ್ತಾರೆ. ಅವರು ಯಾರು? ಯಾವ ಕಾರಣಕ್ಕೆ ಕಷ್ಟ ಒದಗಿ ಬರುತ್ತದೆ? ಕೊನೆಗೆ ಸಂಕಷ್ಟದಿಂದ ಹೊರಗೆ ಬರುತ್ತಾರಾ? ತಾವು ಕಂಡಂಥ ಕನಸನ್ನು ನನಸು ಮಾಡಿಕೊಳ್ಳುತ್ತಾರಾ? ಎಂಬುದನ್ನು ಅರ್ಥಪೂರ್ಣ ಸನ್ನಿವೇಶಗಳೊಂದಿಗೆ ತೋರಿಸಲಾಗುತ್ತಿದೆ’ ಎನ್ನುತ್ತಾರೆ ನಿರ್ದೇಶಕರು. ಯಶವಂತರಾಜ್‌ಕುಮಾರ್, ಕಾವ್ಯ, ದೀಕ್ಷಿತಾ ನಂಜಪ್ಪ ಮುಂತಾದವರು ಚಿತ್ರದಲ್ಲಿದ್ದಾರೆ. ರಾಜೇಶ್ ಛಾಯಾಗ್ರಹಣವಿದೆ. ಬೆಂಗಳೂರು ಸುತ್ತಮುತ್ತ ಒಂದೇ ಹಂತದಲ್ಲಿ ಇಪ್ಪತ್ತು ದಿನಗಳ ಕಾಲ ಚಿತ್ರೀಕರಣ ನಡೆಸಲು ತಂಡ ಯೋಜನೆ ಹಾಕಿಕೊಂಡಿದೆ. ❖

‘ಧೈರ್ಯಂ...’ಗೆ ಪ.ರಂಜಿತ್ ಬಲ

ಎ.ಆರ್.ಸಾಯಿರಾಮ್ ಕಥೆ,ಚಿತ್ರಕಥೆ, ಸಂಭಾಷಣೆ ಹಾಗೂ ಗೀತರಚನೆ ಮಾಡಿ ಆ್ಯಕ್ಷನ್ ಕಟ್ ಹೇಳಿರುವ ‘ಧೈರ್ಯಂ ಸರ್ವತ್ರ ಸಾಧನಂ’ ಚಿತ್ರದ ಟೀಸರ್ ಅನ್ನು ನಟ ವಸಿಷ್ಠ ಸಿಂಹ ಇತ್ತೀಚೆಗಷ್ಟೇ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ತಮಿಳಿನ ಹೆಸರಾಂತ ನಿರ್ದೇಶಕ ಪ.ರಂಜಿತ್ ಕೂಡ ಟೀಸರ್ ಅನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಬಿಡುಗಡೆಗೊಳಿಸಿ ತಂಡದ ಜೊತೆಗೆ ನಿಂತಿದ್ದಾರೆ.

‘ಒಂದು ದೃಶ್ಯದಲ್ಲಿ ಮಲಗಿರುವ ವ್ಯಕ್ತಿಯ ಮೇಲೆ, ಒಬ್ಬರ ಮೇಲೊಬ್ಬರು ಒಟ್ಟು ಮೂರು ಜನ ನಿಂತಿರುವುದು ಕುತೂಹಲ ಕೆರಳಿಸಿದೆ. ಒಳ್ಳೆ ಸಂದೇಶದೊಂದಿಗೆ ಸಮಾಜದಲ್ಲಿ ನಡೆದಿರುವ ವಿಷಯಗಳನ್ನು ಪರದೆ ಮೇಲೆ ತೋರಿಸುವ ಯತ್ನ ಈ ಚಿತ್ರದಲ್ಲಿ ಕಾಣಿಸುತ್ತಿದೆ’ ಎಂದರು ವಸಿಷ್ಠ ಸಿಂಹ.

‘ಇದು ಶೋಷಿತರ ಸಿನಿಮಾ. ಬಡವ, ಶ್ರೀಮಂತನ ಕುರಿತು, ಅಪ್ಪ–ಮಗನ ಬಾಂಧ್ಯವದ ಬಗೆಗಿನ ಕಥೆ’ ಎಂದರು ನಿರ್ದೇಶಕರು. ಎ.ಪಿ.ಪ್ರೊಡಕ್ಷನ್ ಅಡಿಯಲ್ಲಿ ಉದ್ಯಮಿ ಆನಂದ್ ಬಾಬು. ಜಿ ನಿರ್ಮಾಣ ಮಾಡಿದ್ದಾರೆ. ನಾಯಕನಾಗಿ ವಿವಾನ್.ಕೆ.ಕೆ, ನಾಯಕಿಯಾಗಿ ಅನುಷಾರೈ ಕಾಣಿಸಿಕೊಂಡಿದ್ದಾರೆ. ಯಶ್ ಶೆಟ್ಟಿ, ಬಲರಾಜವಾಡಿ, ಚಕ್ರವರ್ತಿ ಚಂದ್ರಚೂಡ್ ಮೊದಲಾದವರು ತಾರಾಗಣದಲ್ಲಿದ್ದಾರೆ.

ಹೃದಯಶಿವ, ಕಿನ್ನಾಳ್‌ರಾಜ್, ಅರಸು ಅಂತಾರೆ ಸಾಹಿತ್ಯದ ಐದು ಹಾಡುಗಳಿಗೆ ಜ್ಯೂಡಾಸ್ಯಾಂಡಿ ಸಂಗೀತ ಸಂಯೋಜಿಸಿದ್ದಾರೆ. ಭಾರತದ ಎಲ್ಲಾ ಭಾಷೆಯ ಸೂಪರ್ ಹಿಟ್ ಚಿತ್ರಗಳಿಗೆ ಕೆಲಸ ಮಾಡಿರುವ ರವಿಕುಮಾರ್ ಸನಾ ಛಾಯಾಗ್ರಹಣ, ಶ್ರೀಕಾಂತ್ ಸಂಕಲನ ಚಿತ್ರಕ್ಕಿದೆ. ತುಮಕೂರು, ಕೊರಟಗೆರೆ, ದೇವರಾಯನದುರ್ಗಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ❖

‘ಧೈರ್ಯಂ...’ ಚಿತ್ರದ ಒಂದು ದೃಶ್ಯ

ರೈಲ್ವೆ ಜಾಗೃತಿ ಸಾಕ್ಷ್ಯಚಿತ್ರಗಳು

ಸಿನಿಮಾಸಕ್ತ ವಿನೋದ್ ರಾಜೇಂದ್ರನ್ ನೈರುತ್ಯ ರೈಲ್ವೆಗಾಗಿ ಈತನಕ 13 ಅನಿಮೇಟೆಡ್ ಜಾಹೀರಾತುಗಳು ಮತ್ತು ಆರು ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿದ್ದಾರೆ. ರೈಲ್ವೆ ಮತ್ತು ಗ್ರಾಹಕರ ನಡುವೆ ಬಾಂಧವ್ಯ ಬೆಸೆಯುವ, ಜಾಗೃತಿ ಮೂಡಿಸುವ ಈ ವಿಭಿನ್ನ ಸಾಕ್ಷ್ಯಚಿತ್ರಗಳು ಗುಣಮಟ್ಟ, ವಿಷಯದಿಂದಲೂ ಗಮನ ಸೆಳೆಯುವಂತಿವೆ.

‘ರೈಲ್ವೆ ಕುರಿತಾಗಿ ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಯತ್ನದ ಭಾಗವೇ ಈ ಸಾಕ್ಷ್ಯಚಿತ್ರಗಳು. ರೈಲ್ವೆ ಇಲಾಖೆಯ ಟೆಂಡರ್‌ನಲ್ಲಿ ಈ ಕೆಲಸ ಲಭಿಸಿದ್ದು. ನಾನು ಸೈಕಾಲಜಿಯಲ್ಲಿ ಸ್ನಾತಕೋತ್ತರ ಪದವಿ ಮುಗಿಸಿ ಆಸಕ್ತಿಯಿಂದ ಸಿನಿಮಾದತ್ತ ಹೊರಳಿದೆ. ಅನಿಮೇಷನ್ ಕಲಿತೆ. ಮಲ್ಟಿಮಿಡಿಯಾ ವಿಷಯದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದೆ’ ಎನ್ನುತ್ತಾರೆ ವಿನೋದ್.

‘ಲೇಪಾಕ್ಷಿ’ ಕುರಿತಾಗಿನ ಇವರ ಸಾಕ್ಷ್ಯಚಿತ್ರ 11 ಭಾಷೆಗಳಿಗೆ ಡಬ್ ಆಗಿ ಗಿನ್ನೆಸ್ ದಾಖಲೆ ಬರೆದಿದೆ. ಎಂಟು ವರ್ಷದಿಂದ ಇವರು ಕಿರುಚಿತ್ರ, ಸಾಕ್ಷ್ಯಚಿತ್ರ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ‘ಚೇಂಜ್’, ‘ಅರಂಗೇಟ್ರಂ’ ಕಿರುಚಿತ್ರಗಳಿಗೆ ಅಂತರರಾಷ್ಟ್ರೀಯ ಕಿರುಚಿತ್ರೋತ್ಸವಗಳಲ್ಲಿ ಬಹುಮಾನ ಲಭಿಸಿದೆ. ರೈಲ್ವೆಗಾಗಿ ನಿರ್ಮಿಸಿದ ‘ಪಾಯಿಂಟ್ಸ್‌ಮನ್’ ಸಾಕ್ಷ್ಯಚಿತ್ರ ಕೂಡ ಪ್ರಶಸ್ತಿ ಗಳಿಸಿದೆ.

‘ಗೌರಿಬಿದನೂರಿನ ಗಡಿನಾಡ ಗ್ರಾಮ ನನ್ನದು. ಸಿನಿಮಾ ಕನಸಿನೊಂದಿಗೆ ಓದಿದ ಕ್ಷೇತ್ರ ಬಿಟ್ಟು ಇತ್ತ ಹೊರಳಿದೆ. ಕಳೆದ ಒಂದು ವರ್ಷದಿಂದ ರೈಲ್ವೆಯೊಂದಿಗೆ ಕೆಲಸ ಮಾಡುತ್ತಿರುವೆ. ಸಿನಿಮಾ ಮಾಡುವ ಕನಸಿದೆ. ಅದಕ್ಕಾಗಿ ಸಿದ್ಧತೆ ನಡೆಸಿರುವೆ’ ಎಂದು ಕನಸು ಹಂಚಿಕೊಂಡರು ವಿನೋದ್. ❖



ಕಿರುಚಿತ್ರದ ಪೋಸ್ಟರ್

ವಿನೋದ್ ರಾಜೇಂದ್ರನ್



‘ದಿ ಫಸ್ಟ್ ಜರ್ನಿ’ ಕಿರುಚಿತ್ರದ ಪೋಸ್ಟರ್

ರಿಷಿಕಾ

ಪುರುಷೋತ್ತಮನ ಕಥೆ ಹೆಣೆದ ದೇವ್‌ದಾಸ್ ಕಾಪಿಕಾಡ್

ತುಳುವಿನಲ್ಲಿ ಒಂಬತ್ತು ಸಿನಿಮಾಗಳನ್ನು ನಿರ್ದೇಶಿಸಿರುವ ನಟ ದೇವ್‌ದಾಸ್ ಕಾಪಿಕಾಡ್ ಕನ್ನಡದಲ್ಲಿ ಚೊಚ್ಚಲ ಸಿನಿಮಾ ನಿರ್ದೇಶನ ಮಾಡಿದ್ದಾರೆ. ಇವರು ಆ್ಯಕ್ಷನ್ ಕಟ್ ಹೇಳಿರುವ ‘ಪುರುಷೋತ್ತಮನ ಪ್ರಸಂಗ’ ಸಿನಿಮಾ ಫೆಬ್ರುವರಿಯಲ್ಲಿ ತೆರೆಗೆ ಬರಲಿದೆ.

ರಾಷ್ಟ್ರ ಕೂಟ ಪಿಕ್ಚರ್ಸ್ ಲಾಂಛನದಲ್ಲಿ ವಿ. ರವಿ ಕುಮಾರ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ‘ಇದು ಕೌಟುಂಬಿಕ ಕಥಾಹಂದರ ಹೊಂದಿರುವ ನೈಜ ಘಟನೆ ಆಧಾರಿತ ಚಿತ್ರ. ‘ಪುರುಷೋತ್ತಮ’ನ ಪಾತ್ರದಲ್ಲಿ ಅಜಯ್ ಅಭಿನಯಿಸಿದ್ದಾರೆ. ರಿಷಿಕಾ ನಾಯ್ಕ್ ಈ ಚಿತ್ರದ ನಾಯಕಿ. ನವೀನ್ ಡಿ. ಪಡೀಲ್, ಅರವಿಂದ್ ಬೋಳಾರ್, ಭೋಜರಾಜ್ ವಾಮಂಜೂರು ಮುಂತಾದ ಕಲಾವಿದರು ಅಭಿನಯಿಸಿದ್ದಾರೆ. ನಾನು ಕೂಡ ನಟಿಸಿದ್ದೇನೆ. ನನ್ನ ಮಗ ಅರ್ಜುನ್ ಸಹ ನಿರ್ದೇಶನ ಮಾಡಿದ್ದಾರೆ’ ಎಂದು ಚಿತ್ರದ ಬಗ್ಗೆ ದೇವ್‌ದಾಸ್ ಕಾಪಿಕಾಡ್ ವಿವರಿಸಿದರು.

ನಕುಲ್ ಅಭಯಂಕರ್ ಅವರ ಸಂಗೀತ ನಿರ್ದೇಶನದಲ್ಲಿ ಚಿತ್ರದ ನಾಲ್ಕು ಹಾಡುಗಳು ಮೂಡಿಬಂದಿದ್ದು, ಜಯಂತ ಕಾಯ್ಕಿಣಿ, ದೊಡ್ಡರಂಗೇಗೌಡ, ವಿ.ನಾಗೇಂದ್ರ ಪ್ರಸಾದ್ ಹಾಗೂ ದೇವ್‌ದಾಸ್ ಕಾಪಿಕಾಡ್ ಹಾಡುಗಳನ್ನು ಬರೆದಿದ್ದಾರೆ. ಮಂಗಳೂರು ಹಾಗೂ ದುಬೈನಲ್ಲಿ ಚಿತ್ರದ ಚಿತ್ರೀಕರಣ ನಡೆದಿದೆ. ❖

ದೇವದಾಸ್ ಕಾಪಿಕಾಡ್

ಅಜಯ್

ಆಚೀಚಿನ ಸಿನಿ ಹನಿ

ಕತ್ರಿನಾಗೆ ಖಳನಟಿಯಾಗುವ ಬಯಕೆ

ನಟಿ ಕತ್ರಿನಾ ಕೈಫ್ ‘ಮೆರ್ರಿ ಕ್ರಿಸ್‌ಮಸ್’ ಹಿಂದಿ ಹಾಗೂ ತಮಿಳು ಸಿನಿಮಾದಲ್ಲಿ ಅಭಿನಯಿಸಿದ ಮೇಲೆ ನಟನೆಯ ವಿಷಯದಲ್ಲಿ ಹೆಚ್ಚು ವೈವಿಧ್ಯ ಬಯಸುತ್ತಿದ್ದಾರೆ.

‘ನಟಿಯಾಗಿ ಒಂದಿಷ್ಟು ವರ್ಷಗಳ ಕಾಲ ಕೆಲಸ ಮಾಡಿದ ಮೇಲೆ ಆತ್ಮವಿಶ್ವಾಸ ಮೂಡುತ್ತದೆ. ಹೀಗೆ ಆದಾಗ ಆಯ್ಕೆಯ ವಿಷಯದಲ್ಲಿ ಇನ್ನಷ್ಟು ಮುಕ್ತವಾಗಿ ಆಲೋಚನೆ ಮಾಡಬಹುದು. ನಮ್ಮ ಹೃದಯ ಯಾವುದನ್ನು ಬಯಸುತ್ತದೆ ಎಂದು ಸ್ಪಷ್ಟವಾಗಿ ಹೇಳಬಹುದು. ಇದನ್ನು ಸ್ವಾತಂತ್ರ್ಯ ಎನ್ನುವುದಕ್ಕಿಂತ ವಿಶ್ವಾಸ ಎಂದು ಕರೆಯಲು ಇಷ್ಟಪಡುತ್ತೇನೆ’– ಪಾತ್ರ ವೈವಿಧ್ಯದ ವಿಷಯವಾಗಿ ಕತ್ರಿನಾ ಮುನ್ನುಡಿ ಇದು.

ಅವರಿಗೆ ನಾಯಕಿಯಾಗಿ ಪಾತ್ರಗಳನ್ನು ನಿರ್ವಹಿಸಿದ ಅನುಭವ ದೊಡ್ಡ ಮಟ್ಟದಲ್ಲಿ ಸಿಕ್ಕಿದೆ. ನೃತ್ಯ, ರೊಮ್ಯಾನ್ಸ್, ಜಾಸೂಸಿ ಎಲ್ಲ ಸ್ವರೂಪದಲ್ಲಿ ಕಾಣಿಸಿಕೊಂಡಿರುವುದಕ್ಕೆ ತೃಪ್ತಿ ಕೂಡ ಇದೆ. ಆದರೆ, ಖಳನಟಿಯಾಗಿ ಅಭಿನಯಿಸಬೇಕು ಎನ್ನುವುದು ಅವರ ಸದ್ಯದ ಬಯಕೆ. ಅಂತಹ ಪಾತ್ರಕ್ಕೆ ಯಾರಾದರೂ ಕರೆಯಲಿ ಎಂದು ಅವರು ಕುತೂಹಲಿಯಾಗಿದ್ದಾರೆ. ಅಷ್ಟೇ ಅಲ್ಲ, ಪೀರಿಯೆಡ್ ಸಿನಿಮಾಗಳಲ್ಲಿ ನಟಿಸುವ ಆಸೆಯೂ ಅವರಿಗೆ ಇದೆ. ❖

ಕತ್ರಿನಾ ಕೈಫ್

ಒಟಿಟಿಯಲ್ಲಿ ಬರುತ್ತಿದೆ ‘ಅನಿಮಲ್’

ರಂಬೀರ್ ಕಪೂರ್ ಅಭಿನಯಿಸಿ, ಸಂದೀಪ್ ರೆಡ್ಡಿ ವಂಗಾ ನಿರ್ದೇಶಿಸಿರುವ ‘ಅನಿಮಲ್’ ಹಿಂದಿ ಸಿನಿಮಾ ಗಣರಾಜ್ಯೋತ್ಸವದ ದಿನ ಒಟಿಟಿಯಲ್ಲಿ ತೆರೆಕಾಣಲಿದೆ.

‘ನೆಟ್‌ಫ್ಲಿಕ್ಸ್’ನಲ್ಲಿ ಮೂರು ತಾಸು 29 ನಿಮಿಷ ಅವಧಿಯ ಸಿನಿಮಾ ಪ್ರದರ್ಶಿತವಾಗಲಿದೆ. ಚಿತ್ರಮಂದಿರಗಳಲ್ಲಿ ತೆರೆಕಂಡ ಚಿತ್ರಕ್ಕಿಂತ ಇದು ಸುದೀರ್ಘಾವಧಿ. ನಾಯಕಿ ರಶ್ಮಿಕಾ ಮಂದಣ್ಣ ಅಭಿನಯಿಸಿದ್ದ ಒಂದು ಭಾಗವನ್ನು ಕತ್ತರಿಸಲಾಗಿತ್ತು. ಅದು ಒಟಿಟಿ ಆವೃತ್ತಿಯಲ್ಲಿ ಇರಲಿದೆ ಎಂದು ನಿರ್ದೇಶಕ ಸಂದೀಪ್ ರೆಡ್ಡಿ ತಿಳಿಸಿದ್ದಾರೆ.

ಪುರುಷಾಹಂಕಾರದ ವಿಜೃಂಭಣೆಯ ಸಿನಿಮಾ ಇದು ಎಂದು ಅನೇಕರು ಟೀಕಿಸಿದ್ದರು. ಯುವಕರು ಹಾಗೂ ಪ್ರೌಢ ವಯಸ್ಸಿನವರು ಈ ಸಿನಿಮಾದ ನಾಯಕನ ಪಾತ್ರವನ್ನು ಅತಿಯಾಗಿ ಮೆಚ್ಚಿಕೊಂಡಿದ್ದರು. ರಾಮ್‌ಗೋಪಾಲ್ ವರ್ಮ, ಅನುರಾಗ್ ಕಶ್ಯಪ್ ಅವರಂತಹ ನಿರ್ದೇಶಕರು ಸಿನಿಮಾವನ್ನು ಮೆಚ್ಚಿಕೊಂಡಿದ್ದರು. ಸಂದೀಪ್ ರೆಡ್ಡಿ ವಂಗ ಸಿನಿಮಾದ ದೃಶ್ಯವೊಂದರಲ್ಲಿ ವಿಮರ್ಶಕರನ್ನೇ ಛೇಡಿಸುವ ರೀತಿಯ ಸಂಜ್ಞೆಯೊಂದನ್ನು ನಾಯಕನಿಂದ ಮಾಡಿಸಿದ್ದರು. ಚಿತ್ರಸಾಹಿತಿ ಜಾವೇದ್ ಅಖ್ತರ್ ಇಂತಹ ಚಿತ್ರಗಳು ಹಿಟ್ ಆಗುವುದು ಅಪಾಯ. ಅವನ್ನು ನೋಡುವ ಜನರ ಮನಃಸ್ಥಿತಿಯೇ ದಂಗುಬಡಿಸುತ್ತದೆ ಎಂದು ವಿಶ್ಲೇಷಿಸಿದ್ದರು.

ಸಿನಿಮಾದಲ್ಲಿ ತೃಪ್ತಿ ದಿಮ್ರಿ ಗ್ಲಾಮರಸ್ ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಅವರ ಪಾತ್ರಕ್ಕೆ ಬೂಟು ನೆಕ್ಕುವಂತೆ ನಾಯಕನು ಹೇಳುವ ಸನ್ನಿವೇಶ ಇದೆ. ಇದು ವ್ಯಾಪಕ ಟೀಕೆಗೆ ಗುರಿಯಾಗಿತ್ತು. ❖

ಅನಿಮಲ್ ಸಿನಿಮಾದಲ್ಲಿ ರಶ್ಮಿಕಾ, ರಣಬೀರ್

‘ಕಂಗುವ’ದಲ್ಲಿ ಹಿಂದಿ ನಟ–ನಟಿ

ಸೂರ್ಯ ಅಭಿನಯದ ‘ಕಂಗುವ’ ತಮಿಳು ಸಿನಿಮಾ ಚಿತ್ರೀಕರಣ ನಡೆಯುತ್ತಿದೆ. ಶಿವ ನಿರ್ದೇಶನದ ಈ ಚಿತ್ರದಲ್ಲಿ ಹಲವು ಮನುಷ್ಯಭಾವಗಳು ಮೂಡಲಿವೆ ಎನ್ನಲಾಗುತ್ತಿದೆ. ಹಿಂದಿ ಚಿತ್ರನಟ ಕಾರ್ತಿಕ್ ಆರ್ಯನ್ ಈ ಸಿನಿಮಾದಲ್ಲಿ ಸಣ್ಣ ಪಾತ್ರದಲ್ಲಿ ಅಭಿನಯಿಸಲು ಒಪ್ಪಿದ್ದಾರೆ. ಕ್ಲೈಮ್ಯಾಕ್ಸ್‌ನ ದೃಶ್ಯದಲ್ಲಿ ಅವರು ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ.

ಹಿಂದಿ ನಟಿ ದಿಶಾ ಪಟಾನಿ ಕೂಡ ಈ ಚಿತ್ರದ ಮೂಲಕ ತಮಿಳು ಚಿತ್ರರಂಗ ಪ್ರವೇಶಿಸಿದ್ದಾರೆ. ದೊಡ್ಡ ಭಿತ್ತಿಯಲ್ಲಿ ಈ ಸಿನಿಮಾವನ್ನು ಶಿವ ನಿರ್ದೇಶಿಸುತ್ತಿದ್ದು. ಸ್ಟುಡಿಯೊ ಗ್ರೀನ್ ನಿರ್ಮಾಣ ಮಾಡಿದೆ. ಯುವಿ ಕ್ರಿಯೇಷನ್ಸ್ ಸಹ ನಿರ್ಮಾಣಕ್ಕೆ ಕೈಜೋಡಿಸಿದೆ.

ಬಾಬಿ ಡಿಯೋಲ್ ಅವರೂ ಈ ಸಿನಿಮಾದಲ್ಲಿ ಅಭಿನಯಿಸಲಿದ್ದಾರೆ ಎನ್ನುವ ಸುದ್ದಿ ಇತ್ತು. ಅವರು ನಟಿಸುವ ಸಂಗತಿ ಇನ್ನೂ ಸ್ಪಷ್ಟವಾಗಿಲ್ಲ. ಜಗಪತಿ ಬಾಬು, ಯೋಗಿ ಬಾಬು ಮೊದಲಾದವರು ಅಭಿನಯಿಸಿರುವ ಈ ಸಿನಿಮಾದ ಹಾಡುಗಳಿಗೆ ದೇವಿ ಶ್ರೀ ಪ್ರಸಾದ್ ಸ್ವರ ಸಂಯೋಜನೆ ಮಾಡಿದ್ದಾರೆ. 350 ಕೋಟಿ ರೂಪಾಯಿಗೂ ಹೆಚ್ಚು ಬಜೆಟ್‌ನಲ್ಲಿ ಈ ಸಿನಿಮಾ ತಯಾರಾಗುತ್ತಿರುವುದು ವಿಶೇಷ. ❖

‘ಕಂಗುವ’ ಸಿನಿಮಾದಲ್ಲಿ ಸೂರ್ಯ